ಗುರುವಾರ, ಜುಲೈ 4, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾರಾ ದಂಪತಿ
ಬಾಲಿವುಡ್ ನಟ ರಣವೀರ್ ಸಿಂಗ್ ಮತ್ತು ಅವರ ಪತ್ನಿ ದೀಪಿಕಾ ಪಡುಕೋಣೆ ಮುಂಬೈನಲ್ಲಿ ಕಾಣಿಸಿಕೊಂಡಿದ್ದು ಹೀಗೆ...

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಿರ್ಬಂಧಿತ ನೇರ ಸಂದೇಶಗಳ,
ಮೂಲಕ, Instagram ನಲ್ಲಿರುವ ಹರೆಯದವರು
ಅವರು ಫಾಲೋ ಮಾಡುವ
ಅಥವಾ ಕನೆಕ್ಟ್ ಆಗಿರುವವರಿಂದ ಮಾತ್ರ ಸಂದೇಶಗಳನ್ನು
ಸ್ವೀಕರಿಸಬಹುದು.

instagram.com/familytools ಇಲ್ಲಿ ನಮ್ಮ 50+ ಟೂಲ್‌ಗಳೊಂದಿಗೆ ಪ್ರಾರಂಭಿಸಿ



ರಸ್ತೆ ವಿಸ್ತರಣೆಗೆ 15 ಎಕರೆ 15.5 ಗುಂಟೆ ಜಮೀನಿನ ಅಭಿವೃದ್ಧಿ ಹಕ್ಕು ವರ್ಗಾವಣೆ

ಅರಮನೆ ಜಮೀನು ಬಿಬಿಎಂಪಿಗೆ

• ನವೀನ್ ಮಿನೇಜಸ್

ಬೆಂಗಳೂರು: ಜಯಮಹಲ್ ರಸ್ತೆ ಮತ್ತು ಬಳ್ಳಾರಿ ರಸ್ತೆಗಳಿಗೆ ಹೊಂದಿಕೊಂಡಂತಿರುವ 15 ಎಕರೆ 15.5 ಗುಂಟೆ ಜಮೀನನ್ನು ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಪಾವತಿಸುವ ಮೂಲಕ ಬಿಬಿಎಂಪಿ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ.

ಅರಮನೆ ಮೈದಾನದ ವ್ಯಾಪ್ತಿಯ ಈ ಜಮೀನಿಗೆ ₹1 ಕೋಟಿ ಟಿಡಿಆರ್ ಪಾವತಿಸಲಾಗಿದೆ. ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಕಡಿಮೆ ಇರುವ ಪರಿಹಾರ ಮೊತ್ತವನ್ನು ಸುಪ್ರೀಂ ಕೋರ್ಟ್‌ನಲ್ಲಿ ಮೈಸೂರು ರಾಜಮನೆತನದವರು ಪ್ರಶ್ನಿಸಬಹುದು ಎನ್ನಲಾಗಿದೆ.

ಮುಖ್ಯಾಂಶಗಳು
- ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಕಡಿಮೆ ಪರಿಹಾರ ಮೊತ್ತ
- ರಾಜಮನೆತನದವರಿಂದ ನೋಟಿಸ್‌ಗಳಿಗೆ ಬಾರದ ಪ್ರತಿಕ್ರಿಯೆ
- ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ: ರಾಜಮನೆತನದವರ ಆಪ್ತರು

'ರಸ್ತೆಗಳನ್ನು ವಿಸ್ತರಿಸುವ ಹಿನ್ನೆಲೆಯಲ್ಲಿ ಪಾಲಿಕೆ ಜಮೀನನ್ನು ವಶಕ್ಕೆ ತೆಗೆದುಕೊಂಡಿದೆ. ಆಸ್ತಿ ಮಾಲೀಕರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರವನ್ನು (ಡಿಆರ್‌ಸಿ) ನೀಡಬೇಕಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಜಂಟಿ ಸಮೀಕ್ಷೆ ನಡೆಸಲು ಪಾಲಿಕೆ ಮೈಸೂರು ರಾಜ ಮನೆತನದವರಿಗೆ ಜೂನ್ 18ರಂದು ನೋಟಿಸ್ ನೀಡಿತ್ತು. ಅದಕ್ಕೆ ಉತ್ತರ ಬಾರದ್ದರಿಂದ ಜೂನ್ 26ರಂದು ಮತ್ತೊಂದು ನೋಟಿಸ್ ನೀಡಿ, ಜುಲೈ 1ರಂದು ಜಂಟಿ ಪರಿಶೀಲನೆಗೆ ಬಾರದಿದ್ದರೆ ಜಮೀನನ್ನು ಸ್ವಾಧೀನಕ್ಕೆ ಪಡೆಯುವುದಾಗಿ ಹೇಳಿತ್ತು. ಎರಡನೇ ನೋಟಿಸ್‌ಗೂ ಉತ್ತರ ಬಾರದ್ದರಿಂದ ಬಿಬಿಎಂಪಿ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಮೇನಲ್ಲಿ ನೀಡಿದ್ದ ಆದೇಶದಂತೆ ಬಿಬಿಎಂಪಿ ಪರಿಹಾರವನ್ನು ಪ್ರಕಟಿಸಿದೆ. ಅರಮನೆ ಜಮೀನಿನ ಒಟ್ಟು 472 ಎಕರೆಗೆ ₹11 ಕೋಟಿ ಮೌಲ್ಯ ನಿಗದಿಪಡಿಸಲಾಗಿತ್ತು. ಇದನ್ನು 15 ಎಕರೆ 17.5 ಗುಂಟೆಗೆ ಅನ್ವಯಿಸಿದಾಗ ₹1 ಕೋಟಿಯಷ್ಟಾಗುತ್ತದೆ. ಬಡ್ಡಿಯನ್ನೂ ಸೇರಿಸಿದರೆ ₹1.5 ಕೋಟಿಯಾಗುತ್ತದೆ.

'ಪರಿಹಾರ ನೀಡಿರುವುದನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ. ನ್ಯಾಯಾಲಯದ ಆದೇಶಕ್ಕೆ ಇದು ತದ್ವಿರುದ್ಧವಾಗಿದೆ. ಡಿಆರ್‌ಸಿ ಮಾರುಕಟ್ಟೆ ದರದಂತಿರುತ್ತದೆ. ಆದರೆ ಇದನ್ನು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿಲ್ಲ' ಎಂದು ರಾಜಮನೆತನದವರ ಆಪ್ತರು ತಿಳಿಸಿದ್ದಾರೆ.

'ಡಿಆರ್‌ಸಿಯಲ್ಲಿ ನಮೂದಿಸಲಾಗಿರುವ ಪರಿಹಾರ ಮೊತ್ತವು 2016ರ ಟಿಡಿಆರ್ ನಿಯಮಗಳಂತೆಯೇ ಇದೆ' ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಒಟಿಎಸ್ ಬಳಸಿಕೊಳ್ಳಲೂ ನಿರಾಸಕ್ತಿ; ನೋಟಿಸ್ ಜಾರಿ

3.24 ಲಕ್ಷ ಆಸ್ತಿಗಳಿಂದ ₹624 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದ 3.24 ಲಕ್ಷ ಆಸ್ತಿ ಮಾಲೀಕರಿಂದ ಬಾಕಿ ಮೊತ್ತ ವಸೂಲಿ ಮಾಡಲು 'ವಸೂಲಿ ಅಭಿಯಾನ' ಆರಂಭಿಸಲು ಬಿಬಿಎಂಪಿ ನಿರ್ಧರಿಸಿದೆ. ಹಲವು ಬಾರಿ ನೋಟಿಸ್ ನೀಡಿದರೂ ತೆರಿಗೆ ಸುಸ್ಥಿದಾರರು ತೆರಿಗೆ ಪಾವತಿಸದೇ ಇರುವುದರಿಂದ ಪಾಲಿಕೆ ಈ ನಿರ್ಧಾರಕ್ಕೆ ಬಂದಿದೆ.

ನಗರ ವ್ಯಾಪ್ತಿಯಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಆಸ್ತಿದಾರರ ತೆರಿಗೆಯನ್ನು ಪುನರ್ ನಿಗದಿ ಮಾಡಿ ಮಾರ್ಚ್‌ನಲ್ಲೇ ಬೇಡಿಕೆ ಪತ್ರ ನೀಡಲಾಗಿತ್ತು. ಬಡ್ಡಿ ಹಾಗೂ ದಂಡಕ್ಕೆ ವಿನಾಯಿತಿ ನೀಡಿ ಒಂದು ಬಾರಿ ತೀರುವಳಿಗೆ (ಒಟಿಎಸ್) ಅವಕಾಶ ನೀಡಿದ್ದರೂ 3.24 ಲಕ್ಷ ಆಸ್ತಿದಾರರು ಕೆಲವು ವರ್ಷಗಳ ತೆರಿಗೆಯನ್ನು ಇನ್ನೂ ಪಾವತಿಸಿಲ್ಲ. ಈ ಮೊತ್ತ ₹624.88 ಕೋಟಿಯಷ್ಟಿದೆ.

ಕಟ್ಟಡದ ವಾಸ್ತವ ವಿಸ್ತೀರ್ಣ ಅಥವಾ ವಲಯದ ಆಯ್ಕೆಯಲ್ಲಿ ತಪ್ಪಾಗಿ, ಆಸ್ತಿ ತೆರಿಗೆಯನ್ನು ಕಡಿಮೆ ಪಾವತಿಸುತ್ತಿದ್ದ ನಾಲ್ಕು ಲಕ್ಷಕ್ಕೂ ಅಧಿಕ ಆಸ್ತಿದಾರರಿಗೆ, ತೆರಿಗೆಯನ್ನು ಪುನರ್‌ನಿಗದಿ ಮಾಡಿ ಪಾಲಿಕೆ ವತಿಯಿಂದ 'ಬೇಡಿಕೆ ಪತ್ರ' ನೀಡಲಾಗಿತ್ತು. ಹಿಂದಿನ ವರ್ಷಗಳ ತೆರಿಗೆಗೆ ಬಡ್ಡಿ ಹಾಗೂ ದಂಡವನ್ನು ಪಾವತಿಸಲು ಹೊರೆಯಾಗುತ್ತದೆ ಎಂದು ಸರ್ಕಾರ ಅದನ್ನೆಲ್ಲ ಮನ್ನಾ ಮಾಡಿ, ಆಸ್ತಿ ತೆರಿಗೆಯನ್ನು ಮಾತ್ರ ಪಾವತಿಸಲು ಒಟಿಎಸ್ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಜುಲೈ 31ರವರೆಗೆ ಈ ವ್ಯವಸ್ಥೆ ಜಾರಿಯಲ್ಲಿದ್ದು, ನಂತರ ಎಲ್ಲ ರೀತಿ ಬಡ್ಡಿ ಹಾಗೂ ದಂಡ ಪಾವತಿಸಬೇಕಾಗುತ್ತದೆ.

ಏಪ್ರಿಲ್ 1ರಂತೆ 3.95 ಲಕ್ಷ ಆಸ್ತಿಗಳಿಗೆ ಬೇಡಿಕೆ ಪತ್ರ ನೀಡಲಾಗಿತ್ತು. ಇದರ ಮೊತ್ತ ₹733.71 ಕೋಟಿಯಾಗಿತ್ತು. ಜುಲೈ 1ರವರೆಗೆ ಸುಮಾರು 70 ಸಾವಿರ ಆಸ್ತಿಗಳ ಮಾಲೀಕರು ಮಾತ್ರ ಬೇಡಿಕೆ ಪತ್ರಕ್ಕೆ ಅನುಗುಣವಾಗಿ ತೆರಿಗೆಯನ್ನು ಪಾವತಿಸಿದ್ದಾರೆ.

ಆಸ್ತಿ ತೆರಿಗೆಯನ್ನು ತಪ್ಪಾಗಿ ಪಾವತಿಸುತ್ತಿರುವ ಇನ್ನೂ 16,790 ಆಸ್ತಿಗಳಿಗೆ ತೆರಿಗೆ ಪುನರ್‌ನಿಗದಿ ಮಾಡಿ ಏಪ್ರಿಲ್‌ನಿಂದ ಜುಲೈ ಅವಧಿಯಲ್ಲಿ ಪಾಲಿಕೆ ಸಿಬ್ಬಂದಿ 'ಬೇಡಿಕೆ ಪತ್ರ' ನೀಡಿದ್ದಾರೆ. ಈ ಆಸ್ತಿಗಳಿಂದ ₹239.94 ಕೋಟಿ ಬಾಕಿ ಉಳಿದಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ಆಸ್ತಿ ಜಪ್ತಿಗೆ ಕ್ರಮ: ಮುನೀಶ್

'ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲೀಕರಿಗೆ ಒಟಿಎಸ್ ವ್ಯವಸ್ಥೆಯಡಿ ಸಾಕಷ್ಟು ಸಮಯ ನೀಡಲಾಗಿದ್ದರೂ ಪಾವತಿ ಮಾಡಿಲ್ಲ. ಹೀಗಾಗಿ, ಆಸ್ತಿ ತೆರಿಗೆ ಸುಸ್ತಿದಾರರಿಗೆ ಜಪ್ತಿ ನೋಟಿಸ್ ಜಾರಿ ಮಾಡಲಾಗುತ್ತಿದೆ. ಜುಲೈ 31ರೊಳಗೆ ಪಾವತಿ ಮಾಡದಿದ್ದರೆ, ಆಸ್ತಿಯನ್ನು ವಶಕ್ಕೆ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ. ಇಂತಹ ಆಸ್ತಿಗಳ ಮಾಹಿತಿಯನ್ನು ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಕಳುಹಿಸಿ 'ಅಟ್ಯಾಚ್' (ಋಣಭಾರ) ಮಾಡಿಕೊಳ್ಳುವ ಪ್ರಕ್ರಿಯೆಯನ್ನೂ ನಡೆಸಲಾಗುವುದು' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಪುನರ್‌ನಿಗದಿ ಆಸ್ತಿ ತೆರಿಗೆ ಬಾಕಿ ಎಲ್ಲೆಲ್ಲಿ, ಎಷ್ಟು? (2024ರ ಜುಲೈ 1ರಂತೆ)

ವಲಯ	ಆಸ್ತಿಗಳು	ಬಾಕಿ (₹ಕೋಟಿಗಳಲ್ಲಿ)
ಮಹದೇವಪುರ	67,696	140.04
ಪಶ್ಚಿಮ	31,324	97.18
ದಕ್ಷಿಣ	31,243	96.63
ಪೂರ್ವ	44,366	87.14
ಬೊಮ್ಮನಹಳ್ಳಿ	51,124	82.77
ರಾಜರಾಜೇಶ್ವರಿನಗರ	49,876	49.74
ಯಲಹಂಕ	33,912	49.16
ದಾಸರಹಳ್ಳಿ	15,307	22.21
ಒಟ್ಟು	3,24,848	624.88

'ಸಿದ್ದರಾಮಯ್ಯರನ್ನು ಇಳಿಸಲು ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಕಳಕಳಿ ಇರುವ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಮಾಡುತ್ತಿರುವ ಹುನ್ನಾರ ಖಂಡನೀಯ ಎಂದು ಅಹಿಂದ ಚಳವಳಿ ರಾಜ್ಯ ಜಂಟಿ ಮುಖ್ಯ ಸಂಚಾಲಕ ಎನ್. ವೆಂಕಟೇಶ್ ಗೌಡ ಆರೋಪಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವ ಬದ್ಧತೆಯನ್ನು ಹೊಂದಿರುವ ರಾಜಕಾರಣಿ. ಪೆರಿಯಾರ್, ಕುವೆಂಪು ಅವರಂತೆ ಮೌಢ್ಯಗಳನ್ನು ವಿರೋಧಿಸುವ ಗುಣವಿದೆ. 2013ರಿಂದ 18ರವರೆಗೆ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಅವರು ತಂದ 'ಭಾಗ್ಯ'ಗಳು ಬಡವರು ನೆಮ್ಮದಿಯಿಂದ ಬದುಕುವಂತೆ ಮಾಡಿವೆ. ಅಂಥವರನ್ನು ಪದವಿ ಬಿಟ್ಟುಕೊಡಿ ಎಂದು ಕೇಳುತ್ತಿರುವವರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು' ಎಂದು ಆಗ್ರಹಿಸಿದರು.

ಅಡ್ವಾಣಿ ಆಸ್ಪತ್ರೆಗೆ



ಎಲ್‌.ಕೆ. ಅಡ್ವಾಣಿ

ನವದೆಹಲಿ (ಪಿಟಿಐ): ಬಿಜೆಪಿ ನಾಯಕ ಎಲ್‌.ಕೆ. ಅಡ್ವಾಣಿ ಅವರನ್ನು ಬುಧವಾರ ರಾತ್ರಿ 9ರ ಸುಮಾರಿಗೆ ಅಪೋಲೊ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ನರರೋಗ ತಜ್ಞ ಡಾ. ವಿನಿತ್ ಸೂರಿ ಚಿಕಿತ್ಸೆ ನೀಡುತ್ತಿದ್ದಾರೆ' ಎಂದು ಹೇಳಿವೆ.

ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಸುರಿದ ಮಳೆಗೆ ಛತ್ರಿ ಹಿಡಿದು ಸಾಗಿದ ಜನ (ಎಡಚಿತ್ರ) ಬ್ರಿಗೇಡ್ ರಸ್ತೆಯಲ್ಲಿ ಛತ್ರಿ ಹಿಡಿದು ಸೈಕಲ್ ಸವಾರಿ ಮಾಡಿದ ಯುವಕ
–ಪ್ರಜಾವಾಣಿ ಚಿತ್ರಗಳು– ಕಿಶೋರ್ ಕುಮಾರ್ ಬೋಳಾರ್

ನಗರದ ಹಲವು ಪ್ರದೇಶಗಳಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ಪ್ರದೇಶಗಳಲ್ಲಿ ಬುಧವಾರ ಸಂಜೆ ಉತ್ತಮವಾಗಿ ಮಳೆಯಾಗಿದೆ.

ಕೆಲವು ದಿನಗಳಿಂದ ಮೋಡ ಕವಿದ ವಾತಾವರಣವಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುತ್ತಿತ್ತು. ಬುಧವಾರ ಉಷ್ಣಾಂಶದಲ್ಲಿ ಸಾಕಷ್ಟು ಏರಿಕೆಯಾಗಿತ್ತು. ಸಂಜೆ ವೇಳೆಗೆ ಬಿರುಗಾಳಿಯೊಂದಿಗೆ ಹಲವೆಡೆ ಉತ್ತಮವಾಗಿ ಮಳೆ ಸುರಿಯಿತು.

ಹೆಬ್ಬಾಳ ಜಂಕ್ಷನ್‌ನಲ್ಲಿ ಮಳೆ ನೀರು ನಿಂತು ಸುತ್ತಮುತ್ತಲಿನ ಎಲ್ಲ ರಸ್ತೆಗಳಲ್ಲೂ ವಾಹನ ಸಂಚಾರಕ್ಕೆ ಹೆಚ್ಚು ತೊಂದರೆಯಾಯಿತು. ವಿಂಡ್ಸರ್ ಮ್ಯಾನರ್ ಅಂಡರ್ ಪಾಸ್, ಪ್ಯಾಲೆಸ್ ಗುಟ್ಟಹಳ್ಳಿ, ರಾಜೀವ್‌ಗಾಂಧಿ ವೃತ್ತ, ಕಸ್ತೂರಿನಗರದಿಂದ ರಾಮಮೂರ್ತಿ ನಗರ, ಸಂಜಯನಗರ ಕ್ರಾಸ್‌ನಲ್ಲಿ ಮಳೆ ನೀರು ರಸ್ತೆಯಲ್ಲಿ ನಿಂತಿದ್ದರಿಂದ ಸಂಚಾರ ನಿಧಾನಗತಿಯಲ್ಲಿತ್ತು.

ಬಳ್ಳಾರಿ ರಸ್ತೆ ಕಾವೇರಿ ಚಿತ್ರಮಂದಿರ ಬಳಿ ಮರ ಬಿದ್ದು, ಸಂಚಾರಕ್ಕೆ ತೊಂದರೆಯಾಯಿತು. ಪೂರ್ವ ವಲಯದ ವಿಶ್ವನಾಥ ನಾಗೇನಹಳ್ಳಿಯಲ್ಲಿ ಅತಿಹೆಚ್ಚು ಮಳೆಯಾಯಿತು.

ಹೇರೋಹಳ್ಳಿ, ಚೌಡೇಶ್ವರಿ ವಾರ್ಡ್, ಯಲಹಂಕ, ಮಾರುತಿ ಮಂದಿರ, ಹಂಪಿನಗರ, ಬಾಗಲಗುಂಟೆ, ಕೆಂಗೇರಿ, ನಾಯಂಡಹಳ್ಳಿ, ಆರ್.ಆರ್. ನಗರ, ಯಶವಂತಪುರ, ಹೆಬ್ಬಾಳ, ವನ್ನಾರ್‌ಪೇಟೆ, ಬಿಟಿಎಂ ಲೇಔಟ್, ಮಾರತ್‌ಹಳ್ಳಿ, ಮಹದೇವಪುರ, ವಿಜ್ಞಾನನಗರ, ಹೂಡಿ, ಪುಲಕೇಶಿನಗರ, ಸಂಪಂಗಿರಾಮನಗರ, ಕಾಟನ್‌ಪೇಟೆ, ರಾಜಮಹಲ್ ಗುಟ್ಟಹಳ್ಳಿ ಸೇರಿದಂತೆ ವಿವಿಧೆಡೆ ಉತ್ತಮ ಮಳೆ ಸುರಿಯಿತು.

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀ.ಗಳಲ್ಲಿ)	
ವಿಶ್ವನಾಥ ನಾಗೇನಹಳ್ಳಿ	2
ಪೀಣ್ಯಕೈಗಾರಿಕೆ ಪ್ರದೇಶ	1.7
ಕೊಡಿಗೇಹಳ್ಳಿ	1.5
ಹೊರಮಾವು	1.4
ಶೆಟ್ಟಿಹಳ್ಳಿ	1.3
ಯಲಹಂಕ	1.25
ದೊಡ್ಡಬಿದರಕಲ್ಲು	1.1
ವಿದ್ಯಾರಣ್ಯಪುರ	1
ಬಾಣಸವಾಡಿ	1
ನಂದಿನಿಲೇಔಟ್	1
ಜಕ್ಕೂರು	1

ಹೊರಗಿನವರಿಗೆ ನಿವೇಶನ ಮೇಡಹಳ್ಳಿ ನಿವಾಸಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸ್ಥಳೀಯರಿಗೆ ನಿವೇಶನಗಳನ್ನು ಮಂಜೂರು ಮಾಡದೆ ಹೊರಗಿನವರಿಗೆ ನೀಡಲಾಗಿದೆ ಎಂದು ಮೇಡಹಳ್ಳಿಯ ಗ್ರಾಮಸ್ಥರು ಕೊಳೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು.

ಮೇಡಹಳ್ಳಿಯ ಜ್ಯೋತಿ ನಗರಕ್ಕೆ ಅಧಿಕಾರಿಗಳು ಜಮೀನು ಸರ್ವೆ ಮಾಡಲು ಬುಧವಾರ ಬಂದಾಗ ಈ ಆಕ್ರೋಶ ವ್ಯಕ್ತವಾಯಿತು.

ಬಿದರಹಳ್ಳಿ ಹೋಬಳಿಯ ಮೇಡಹಳ್ಳಿ ಗ್ರಾಮದ ಸರ್ವೆ ನಂಬರ್ 89ರಲ್ಲಿ 4 ಎಕರೆ 15 ಗುಂಟೆ ಜಮೀನನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸಲಾಗಿತ್ತು. ಆದರೆ, ನಿವೇಶನ ಹಂಚುವಾಗ ಸ್ಥಳೀಯರಿಗೆ ಆದ್ಯತೆ ನೀಡದೆ ತಾರತಮ್ಯ ನೀತಿಯನ್ನು ಅಧಿಕಾರಿಗಳು ಅನುಸರಿಸುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದರು.

ಮೇಡಹಳ್ಳಿಯ ಜ್ಯೋತಿನಗರದ ನಿವಾಸಿಗಳು ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು

'ಹಿಂದೆ ಇಲ್ಲಿ 150 ಅಡಿ ಆಳದ ಕಲ್ಲು ಕ್ವಾರಿ ಇತ್ತು. ಮೇಡಹಳ್ಳಿ ಹಾಗೂ ಜ್ಯೋತಿನಗರ ಗ್ರಾಮಸ್ಥರು ಸೇರಿ ಮಣ್ಣು ಮುಚ್ಚಿ ಸಮತಟ್ಟು ಮಾಡಿ ಜಮೀನು ಕಾಪಾಡಿಕೊಂಡು ಬಂದಿದ್ದರು. ಕೊಳೇರಿ ಮಂಡಳಿಗೆ ಹಸ್ತಾಂತರವಾದ ಮೇಲೆ ಇಲ್ಲಿನವರಿಗೆ ನಿವೇಶನ ನೀಡದೇ ದೇವಸಂದ್ರದ ನಿವಾಸಿಗಳಿಗೆ ನೀಡಲಾಗಿದೆ' ಎಂದು ಮೇಡಹಳ್ಳಿಯ ಮಲ್ಲೇಶ್ ದೂರಿದರು.

ಸ್ಥಳೀಯರಿಗೆ ನಿವೇಶನ ನೀಡಬೇಕು. ಜೊತೆಗೆ ಆಟದ ಮೈದಾನ, ಉದ್ಯಾನ ಸೇರಿದಂತೆ ಸಾರ್ವಜನಿಕರಿಗೆ ಉಪಯುಕ್ತವಾಗುವ ಉದ್ದೇಶಗಳಿಗೆ ಬಳಸಲು ಮೀಸಲಿಡಬೇಕು ಎಂದು ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

'ಸ್ಥಳೀಯರಿಗೆ ನಿವೇಶನ ನೀಡಬೇಕು. ಒತ್ತುವರಿ ಆಗಿರುವ ಇನ್ನುಳಿದ ಜಮೀನನ್ನು ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸಿ ಸ್ಥಳೀಯರಿಗೆ ನೀಡಬೇಕು' ಎಂದು ರಾಕೇಶ್ ಒತ್ತಾಯಿಸಿದರು.

ಸುಶೀಲಾಗೆ 'ಹನಿಗವನ ಸಾಹಿತ್ಯ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಸುಶೀಲಾ

ಬೆಂಗಳೂರು: ಕರ್ನಾಟಕ ವಿಕಾಸ ರಂಗ ನೀಡುವ 'ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ'ಗೆ ಲೇಖಕಿ ಸುಶೀಲಾ ಸೋಮಶೇಖರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಗೆ ಬಂದಿದ್ದ 2023ನೇ ಸಾಲಿನ ಹನಿಗವನ ಕೃತಿಗಳನ್ನು ಸಾಹಿತಿ ಹಿ.ಚಿ. ಬೋರಲಿಂಗಯ್ಯ ಅವರು ಪರಾಮರ್ಶೆ ಮಾಡಿದ್ದರು. ಅಂತಿಮವಾಗಿ ಸುಶೀಲಾ ಅವರ 'ಒಳಗೊಂದು ತಣ್ಣನೆಯ ನದಿ' ಕೃತಿಯನ್ನು ಆಯ್ಕೆ ಮಾಡಲಾಗಿದೆ.

ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SRI SEETHARAGHAVA SOUHARDA SAHAKARA BANK NIYAMITHA, HOSADURGA

BALANCE SHEET AS ON MARCH 31st, 2024

FORM A - FORM OF BALANCE SHEET

As on 31.03.2023 (Previous year)	Sch No	CAPITAL AND LIABILITIES	As on 31.03.2024 (Current year)
55,350,000	1	CAPITAL:	65,073,500
96,131,429	2	RESERVE FUND AND OTHER RESERVES:	152,227,781
-	3	PRINCIPAL/SUBSIDIARY STATE PARTNERSHIP FUND ACCOUNT:	-
1,603,443,026	4	DEPOSITS AND OTHER ACCOUNTS	1,671,843,959
-	5	BORROWINGS	-
-	6	BILLS FOR COLLECTION BEING BILLS RECEIVABLE(As per contra)	-
-	7	BRANCH ADJUSTMENTS	-
22,561,113	8	OVERDUE INTEREST RESERVE	26,032,411
13,235,200	9	INTEREST PAYABLE	11,907,160
20,731,464	10	OTHER LIABILITIES	19,328,362
14,680,941	11	PROFIT AND LOSS	15,469,138
1,826,133,172		**Total ....**	**1,961,882,311**
		CONTINGENT LIABILITIES	
		(i) Outstanding liabilities for guarantees issued	-
770,346		(ii) Others	770,346
770,346		**Total ....**	**770,346**
As on 31.03.2023 (Previous year)	Sch No	PROPERTY AND ASSETS	As on 31.03.2024 (Current year)
43,686,615	12	CASH:In Hand & with Reserve Bank 1[National Bank] State Bank of India, State Co-operative Bank and Central Co-operative Bank	30,131,195
163,336,177	13	BALANCES WITH OTHER BANKS	158,381,867
-	14	MONEY AT CALL AND SHORT NOTICE	-
341,599,701	15	INVESTMENTS	379,182,441
-	16	INVESTMENT OUT OF THE PRINCIPAL/SUBSIDIARY STATE PARTNERSHIP FUNDS:	-
1,116,132,507	17	ADVANCES:	1,184,444,684
22,561,113	18	INTEREST RECEIVABLE:	26,032,411
-	19	BILLS RECEIVABLE BEING BILLS FOR COLLECTION	-
-	20	BRANCH ADJUSTMENTS	-
121,439,356	21	FIXED ASSETS LESS DEPRECIATION	162,149,711
17,377,703	22	OTHER ASSETS (to be specified)	21,560,002
-		NON-BANKING ACQUIRED IN SATISFACTION OF CLAIMS	-
-		PROFIT AND LOSS	-
1,826,133,172		**Total ....**	**1,961,882,311**

PROFIT AND LOSS ACCOUNT FOR THE YEAR ENDED MARCH 31, 2024

Sl. No.	Particulars	Year ended on 31.03.2024 (Current year)	Year ended on 31.3.2023 (Previous year)
	I. Income		
1	Interest and discount	175,746,805	168,096,182
2	Commission, exchange and brokerage	4,634,074	4,739,802
3	Subsidies and donations	-	-
4	Income from non-banking assets and profit from sale of or dealing with such assets	-	-
5	Other receipts	1,818,097	2,230,164
6	Loss (if any)	-	
	Total	**182,198,976**	**175,066,148**
	II. Expenditure		
1	Interest on deposits, borrowings, etc	104,685,308	92,897,174
2	Salaries and allowances and provident fund	26,404,629	27,069,578
3	Directors' and local committee members' fees and allowances	569,500	614,060
4	Rent, taxes, insurance, lighting, etc	1,594,904	1,291,408
5	Law charges	-	31,000
6	Postage, telegrams and telephone Charges	632,246	772,537
7	Auditor's fees	547,822	490,000
8	Depreciation on and repairs to property	7,153,767	7,836,052
9	Stationery, printing and advertisement, etc	3,377,065	2,808,134
10	Loss from sale of or dealing with non-banking assets	-	-
11	Other expenditure	15,113,124	10,623,662
12	Balance of profit		
	Total	**160,078,365**	**144,433,606**
	III. Net Profit for the year before Tax	**22,120,611**	**30,632,542**
	IV. Provisions and Contingencies		
1	Provision for Ammortisation	1,048,010	1,035,510
2	Provision for Standard Assets and NPA	300,000	6,250,235
3	Provision towards Investments Depreciation	-	-
4	Provision for Income-tax (FY 22-23)	5,303,463	8,665,856
a	Current Tax	5,003,802	7,000,000
b	Add: Less provision in previous year(FY 22-23)		929,730
c	Net Income Current Tax provision	5,003,802	7,929,730
d	Add/Less : (Deffered Tax Asset)/Deffered Tax Liability	299,661	736,126
	Total	6,651,473	15,951,601
	V. Balance Carried over to Balance Sheet (III - IV)	**15,469,138**	**14,680,941**

Notes on Accounts of balance Sheet as on 31.03.2024

Sr. No.	Particulars	As on 31.03.2024 Amount	As on 31.03.2023 Amount
1	Interest Income as a percentage to Working Funds	9.30%	9.30%
2	Non-Interest Income as a Percentage to Working Funds	0.34%	0.64%
3	Cost of Funds	6.26%	6.06%
4	Net Interest Margin	4.13%	5.78%
5	Operating Profit as a percentage to working Fund	0.82%	1.64%
6	Return on Assets	9.30%	11.35%
7	Gross NPA	6.88%	5.67%
8	Net NPA	3.19%	1.76%
9	BDDR provision Coverage Ratio	55.41%	68.88%
10	CRAR (Capital to Risk Asset Ratio)	14.06%	9.41%
11	Working Capital	188.91 Crores	175.49 Crores
12	Business Per Employee	10.99 Crores	10.91 Crores
13	Profit per Employee	0.06 Crores	0.05 Crores
14	Payments to Deposit Insurance Premium (DICGC - RBI)	19.58 Lakhs	17.79 Lakhs
15	Investments in Govt Securities	37.91 Crores	33.64 Crores
16	Total Risk Weighted Assets	123.14 Crores	114.60 Crores
17	Investment Fluctuation Reserve	0.43 Crores	0.24 Crores
18	Commercial Real Estate Exposure and Housing	20.25 Crores	23.90 Crores
19	Total Unsecured Advances	9.80 Crore	11.18 Crores
20	Closing Balance in DEA Fund	0.08 Lakhs	0.08 Lakhs
21	Total Deposits to Top Twenty Depositors	7.28 Crores	8.68 Crores
22	Total Advances to Top 20 Borrowers	29.34 Crores	27.99 Crores
23	Complaints Received by the Bank from its Customers	NIL	NIL
25	Restricted Accounts	NIL	NIL
26	Penalty Imposed by RBI	NIL	NIL
27	Advances to its Bank Board of Directors	NIL	NIL

Sd/-
HANJI SHIVASWAMY
PRESIDENT

Sd/-
D ADIRAJAIAH
VICE PRESIDENT

Sd/-
O NAGENDRAIAH
DIRECTOR

Sd/-
B V KUSHA KUMAR
DIRECTOR

Sd/-
N MANJUNATH
GENERAL MANAGER

CERTIFICATE

Certified that we have audited the accounts of SRI SEETHARAGHAVA SOUHARDA SAHAKARA BANK NIYAMITHA, HOSADURGA - 577 527 for the year ended March 31, 2024 as produced for Audit by the Chief Executive Officer and other staff of the Co-operative Bank and obtained information and clarification during the course of the audit. In our opinion and to the best of our knowledge, the above Balance Sheet exhibits a true and fair view of the financial position of the Bank subject to remarks narrated in the Audit Report.

Place: HOSADURGA
Date: 16.06.2024

Sd/-
FOR JADED SIDDAPPA & CO.,
CHARTERED ACCOUNTANTS FRN : 001191S
CA. JADED SIDDAPPA, PARTNER
MEM No : 024285 (STATUTORY AUDITOR)

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಎಸ್ಸೆಸ್ಸೆಲ್ಸಿ ಪಾಸಾದವರಿಗೆ ಇಲ್ಲಿದೆ ಅವಕಾಶ.

ಆಳ-ಅಗಲ
ಹೊಸ ಕ್ರಿಮಿನಲ್ ಕಾನೂನುಗಳು ರಾಜ್ಯದ ಆಕ್ಷೇಪಗಳೇನು?
ವಿವಿಧೆಡೆ ಭರ್ಜರಿ ಮಳೆ: ಮೈದುಂಬಿದ ಜಲಪಾತಗಳು 8
ಜಾರ್ಖಂಡ್ ಸಿ.ಎಂ ಚಂಪೈ ರಾಜೀನಾಮೆ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,986	24,286	₹74,100 (ಬೆಂಗಳೂರು)	₹91,400 (ಬೆಂಗಳೂರು)	83.49

ಬೆಂಕಿಗೆ ತುಪ್ಪ ಸುರಿಯುವ ಕೆಲಸ ಬೇಡ: ಪ್ರಧಾನಿ • ವಿಪಕ್ಷ ಸದಸ್ಯರಿಂದ ಘೋಷಣೆ, ಸಭಾತ್ಯಾಗ

ಮಣಿಪುರ: ಮೌನ ಮುರಿದ ಮೋದಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ವಿರುದ್ಧ ರಾಜ್ಯಸಭೆಯಲ್ಲಿ ಬುಧವಾರ ಟೀಕಾಪ್ರಹಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ, 'ಕೆಲವು ಶಕ್ತಿಗಳು ಬೆಂಕಿಗೆ ತುಪ್ಪ ಸುರಿಯುತ್ತಿವೆ. ಮಣಿಪುರ ವಿಷಯವನ್ನು ರಾಜಕೀಯಕರಣ ಮಾಡುವುದನ್ನು ಬಿಡಿ. ಒಂದು ದಿನ ಮಣಿಪುರದ ಜನರೇ ನಿಮ್ಮನ್ನು ತಿರಸ್ಕರಿಸಲಿದ್ದಾರೆ' ಎಂದು ಎಚ್ಚರಿಸಿದರು. ಆ ಮೂಲಕ ಮಣಿಪುರ ಗಲಭೆಯ ವಿಷಯದಲ್ಲಿ ಪ್ರಧಾನಿ ಅವರು ಮೌನ ಮುರಿದರು.

ಮಣಿಪುರದ ವಿಷಯಕ್ಕೆ ಬಂದಾಗ ಎಲ್ಲ ಪಕ್ಷಗಳೂ ಪಕ್ಷಾತೀತವಾಗಿ ವರ್ತಿಸಬೇಕು ಹಾಗೂ ಸಂಕಷ್ಟ ಪೀಡಿತ ಜನರಿಗೆ ನೆರವಾಗಬೇಕು ಎಂದ ಅವರು, 'ಮಣಿಪುರದಲ್ಲಿ ಹಿಂಸಾಚಾರ ನಿರಂತರವಾಗಿ ಇಳಿಮುಖವಾಗುತ್ತಿದ್ದು, ರಾಜ್ಯದ ಬಹುತೇಕ ಭಾಗಗಳಲ್ಲಿ ಉದ್ಯಮಗಳು ಹಾಗೂ ಶಿಕ್ಷಣ ಸಂಸ್ಥೆಗಳು ತೆರೆದಿವೆ. ರಾಜ್ಯದಲ್ಲಿ ಸಂಪೂರ್ಣ ಶಾಂತಿ ನೆಲಸುವಂತಾಗಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ' ಎಂದರು.

ರಾಜ್ಯಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯಕ್ಕೆ ಸಂಬಂಧಿಸಿದ ಚರ್ಚೆಗೆ ಬುಧವಾರ ಉತ್ತರ ನೀಡುವಾಗ ವಿಪಕ್ಷ ಸದಸ್ಯರು ಸಭಾತ್ಯಾಗ ಮಾಡಿದರು —ಪಿಟಿಐ ಚಿತ್ರ

ಕಳೆದ ಒಂದು ವರ್ಷದಲ್ಲಿ ಮಣಿಪುರಕ್ಕೆ ಒಂದು ಸಲವೂ ಭೇಟಿ ನೀಡದ ಪ್ರಧಾನಿ ಅವರನ್ನು ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವು ಸದಸ್ಯರು ಟೀಕಿಸಿದ್ದರು. ಪ್ರಧಾನಿ ಭಾಷಣದ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸದಸ್ಯರು ಘೋಷಣೆ ಕೂಗಿದರು. ಭಾಷಣದ ಮಧ್ಯದಲ್ಲೇ ಸಭಾತ್ಯಾಗ ಮಾಡಿದರು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಪ್ರಧಾನಿ, 'ಮಣಿಪುರದಲ್ಲಿ 500ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ. 11 ಸಾವಿರಕ್ಕೂ ಹೆಚ್ಚು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ರಾಜ್ಯದಲ್ಲಿ ಗಲಭೆಯನ್ನು ನಿಯಂತ್ರಿಸಿ, ಸಹಜಸ್ಥಿತಿಗೆ ಮರಳುವಂತೆ ಮಾಡಲು ಕೇಂದ್ರವು ರಾಜ್ಯ ಸರ್ಕಾರದೊಂದಿಗೆ ಕೆಲಸ ಮಾಡುತ್ತಿದೆ' ಎಂದು ಅವರು ಹೇಳಿದರು.

13ನೇ ಪುಟ ನೋಡಿ

ಈಶಾನ್ಯ ರಾಜ್ಯದಲ್ಲಿ ಹಿಂಸಾಚಾರದ ಘಟನೆಗಳು ನಿರಂತರವಾಗಿ ಕೆಳಮುಖದ ಹಾದಿಯಲ್ಲಿವೆ ಎಂಬ ಅಂಶವನ್ನು ನಾವು ಒಪ್ಪಿಕೊಳ್ಳಬೇಕು. ಇದರರ್ಥ ಮಣಿಪುರದಲ್ಲಿ ನಿಸ್ಸಂಶಯವಾಗಿ ಶಾಂತಿ ನೆಲಸಲಿದೆ

ನರೇಂದ್ರ ಮೋದಿ, ಪ್ರಧಾನಿ

'ದಿಗ್ಭ್ರಮೆ ಮೂಡಿಸುವ ಹೇಳಿಕೆ'



ಮೊದಲ ಬಾರಿಗೆ ಮಣಿಪುರದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಸಭೆಯಲ್ಲಿ ಮಾತನಾಡಿರುವ ಕುರಿತು ಕಾಂಗ್ರೆಸ್ ಬುಧವಾರ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

'ತಿಂಗಳುಗಟ್ಟಲೇ ಮೌನದ ನಂತರ 'ಮನುಷ್ಯಾತೀತರಾದ ಪ್ರಧಾನಿ' ರಾಜ್ಯಸಭೆಯಲ್ಲಿ 'ಮಣಿಪುರ ಸಹಜ ಸ್ಥಿತಿಗೆ ಮರಳಿದೆ' ಎಂಬ 'ದಿಗ್ಭ್ರಮೆ ಮೂಡಿಸುವಂಥ ಹೇಳಿಕೆ' ನೀಡಿದ್ದಾರೆ. ಆದರೆ, ವಾಸ್ತವವಾಗಿ ಮಣಿಪುರದಲ್ಲಿ ಇಂದಿಗೂ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿದೆ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯಸಭೆ ಸದಸ್ಯ ಜೈರಾಮ್ ರಮೇಶ್ ಹೇಳಿದ್ದಾರೆ.

'ಮಣಿಪುರದ ಸ್ಥಿತಿಗತಿಗಳ ಕುರಿತು ಜುಲೈ 1ರಂದು 'ಇನ್ನರ್ ಮಣಿಪುರ' ಕ್ಷೇತ್ರದ ಸಂಸದ, ಲೋಕಸಭೆಯಲ್ಲಿ ವಿವರಿಸಿದ್ದಾರೆ. ಆದರೆ, ಮೋದಿ ಅವರು ಮಣಿಪುರವು ಸಹಜ ಸ್ಥಿತಿಗೆ ಮರಳಿದೆ ಎನ್ನುತ್ತಿದ್ದಾರೆ. 'ಮನುಷ್ಯಾತೀತರಾದ ಪ್ರಧಾನಿ' ಮಾತ್ರ ಇದುವರೆಗೂ ಮಣಿಪುರಕ್ಕೆ ಭೇಟಿ ನೀಡಿಲ್ಲ. ಅಲ್ಲಿನ ನಾಯಕರನ್ನೂ ಭೇಟಿ ಮಾಡಿಲ್ಲ. ರಾಷ್ಟ್ರಪತಿ ಅವರ ಭಾಷಣದಲ್ಲಿಯೂ ಮಣಿಪುರದ ಕುರಿತು ಯಾವುದೇ ಪ್ರಸ್ತಾಪ ಇರಲಿಲ್ಲ' ಎಂದಿದ್ದಾರೆ.

ಮುತ್ತಿಗೆ ಯತ್ನ

ವಾಲ್ಮೀಕಿ ಅಭಿವೃದ್ಧಿ ನಿಗಮ, ಮೈಸೂರಿನ 'ಮುಡಾ'ದಲ್ಲಿ ನಡೆದಿದೆ ಎನ್ನಲಾದ ಹಗರಣ ಖಂಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆಗೆ ಬುಧವಾರ ಮುತ್ತಿಗೆ ಹಾಕಲು ಬಿಜೆಪಿ ಮುಖಂಡರು ಯತ್ನಿಸಿದರು. ಆಗ ಶಾಸಕರಾದ ಸುನಿಲ್ ಕುಮಾರ್ ಹಾಗೂ ಸಿ.ಟಿ. ರವಿ ಅವರನ್ನು ಪೊಲೀಸರು ವಶಕ್ಕೆ ಪಡೆದರು —ಪ್ರಜಾವಾಣಿ ಚಿತ್ರ

ಸುದ್ದಿ 8

ಹಾಥರಸ್ ಕಾಲ್ತುಳಿತಕ್ಕೆ ಪಿತೂರಿ ಕಾರಣ: ಯೋಗಿ ಶಂಕೆ

ನ್ಯಾಯಾಂಗ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ/ಪಿಟಿಐ

ಹಾಥರಸ್ (ಉತ್ತರ ಪ್ರದೇಶ): ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ನಡೆದ ಸತ್ಸಂಗದ ವೇಳೆ ಕಾಲ್ತುಳಿತದಿಂದ ಸಂಭವಿಸಿದ ದುರಂತ ಘಟನೆ ಕುರಿತಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ.

ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯ ನಿವೃತ್ತ ಅಧಿಕಾರಿಗಳು ಸಹ ನ್ಯಾಯಾಂಗ ತನಿಖೆ ನಡೆಸುವ ಸಮಿತಿಯಲ್ಲಿ ಇರುವರು. ಈ ದುರ್ಘಟನೆಗೆ ಯಾರು ಕಾರಣ ಎಂಬ ಬಗ್ಗೆ ಸಮಿತಿ ಸಮಗ್ರವಾಗಿ ತನಿಖೆ ನಡೆಸಲಿದೆ ಎಂದು ಯೋಗಿ ಆದಿತ್ಯನಾಥ ಹೇಳಿದ್ದಾರೆ.

'ಮೃತರ ಪೈಕಿ 6 ಮಂದಿ ಹೊರ ರಾಜ್ಯದವರು. ನಾಲ್ವರು ಹರಿಯಾಣ, ತಲಾ ಒಬ್ಬರು ಮಧ್ಯಪ್ರದೇಶ ಮತ್ತು ರಾಜಸ್ಥಾನದವರು' ಎಂದಿದ್ದಾರೆ.

'ಭವಿಷ್ಯದಲ್ಲಿ ಇಂತಹ ಘಟನೆಗಳು ನಡೆಯದಂತೆ ಖಾತ್ರಿಪಡಿಸುತ್ತೇವೆ. ಇಂತಹ ಕಾರ್ಯಕ್ರಮಗಳ ಆಯೋಜನೆಗೆ ಸಂಬಂಧಿಸಿ ಪ್ರಮಾಣಿತ ಕಾರ್ಯವಿಧಾನಗಳನ್ನು (ಎಸ್‌ಒಪಿ) ರೂಪಿಸಲಾಗುತ್ತದೆ' ಎಂದು ಹೇಳಿದ್ದಾರೆ.

ಪಿತೂರಿ ಶಂಕೆ: ಫೂಲರಾಯ್ ಗ್ರಾಮದಲ್ಲಿ ಸಂಭವಿಸಿದ ಕಾಲ್ತುಳಿತದ ಹಿಂದೆ ಪಿತೂರಿ ಇರುವ ಬಗ್ಗೆ ಅವರು ಶಂಕೆ ವ್ಯಕ್ತಪಡಿಸಿದ್ದಾರೆ.

13ನೇ ಪುಟ ನೋಡಿ

ಎಫ್‌ಐಆರ್‌ನಲ್ಲಿ ಬಾಬಾ ಹೆಸರಿಲ್ಲ

'ಸತ್ಸಂಗ' ಆಯೋಜಕರ ವಿರುದ್ಧ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ 'ಕಥಾವಾಚಕ' ಭೋಲೆ ಬಾಬಾ (ಸಾಕಾರ ವಿಶ್ವಹರಿ ಭೋಲೆ ಬಾಬಾ) ಹೆಸರನ್ನು ಉಲ್ಲೇಖಿಸಲಾಗಿಲ್ಲ. ಆದರೆ, ಘಟನೆ ಕುರಿತು ನೀಡಿರುವ ದೂರಿನಲ್ಲಿ ಬಾಬಾ ಹೆಸರು ಇದೆ.

ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 105 (ಉದ್ದೇಶಪೂರ್ವಕವಲ್ಲದ ನರಹತ್ಯೆ), 110 (ಉದ್ದೇಶಪೂರ್ವಕ ನರಹತ್ಯೆಗೆ ಯತ್ನ), 126(2) (ಅಕ್ರಮವಾಗಿ ಬಂಧನದಲ್ಲಿಡುವುದು), 223 (ಅಧಿಕಾರಿಗಳು ಹೊರಡಿಸಿದ ಆದೇಶದ ಉಲ್ಲಂಘನೆ) ಹಾಗೂ 238ರಡಿ (ಸಾಕ್ಷ್ಯ ನಾಶ) ಎಫ್‌ಐಆರ್ ದಾಖಲಿಸಲಾಗಿದೆ.

13ನೇ ಪುಟ ನೋಡಿ

ಮೃತರ ಸಂಖ್ಯೆ 121ಕ್ಕೆ ಏರಿಕೆ

ಕಾಲ್ತುಳಿತದಲ್ಲಿ ಮೃತರ ಸಂಖ್ಯೆ ಬುಧವಾರ 121ಕ್ಕೆ ಏರಿಕೆಯಾಗಿದೆ. ಈ ದುರ್ಘಟನೆಯಲ್ಲಿ 28 ಜನರು ಗಾಯಗೊಂಡಿದ್ದಾರೆ. ಮೃತಪಟ್ಟಿರುವ 121 ಮಂದಿ ಪೈಕಿ ಬಹುತೇಕರ ಗುರುತು ಪತ್ತೆ ಹಚ್ಚಲಾಗಿದೆ ಎಂದು ಪರಿಹಾರ ಕಾರ್ಯ ಆಯುಕ್ತರ ಕಚೇರಿ ತಿಳಿಸಿದೆ.

ಅಗ್ನಿ ಶಾಮಕ ಸಿಬ್ಬಂದಿ ಬುಧವಾರ ಶೋಧ ನಡೆಸಿದರು —ಪ್ರಜಾವಾಣಿ ಚಿತ್ರ

ತೆಪ್ಪ ದುರಂತ

ಮೂವರ ಶವ ಪತ್ತೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಕೊಲ್ಹಾರದಲ್ಲಿ ಮಂಗಳವಾರ ಸಂಜೆ ಪೊಲೀಸರ ಕಾರ್ಯಾಚರಣೆಯಿಂದ ಭಯಪಟ್ಟು ಕೃಷ್ಣಾನದಿಯಲ್ಲಿ ತೆಪ್ಪದ ಮೂಲಕ ತಪ್ಪಿಸಿಕೊಳ್ಳಲು ಯತ್ನಿಸಿ ನೀರುಪಾಲಾದ ಐವರ ಪೈಕಿ ಮೂವರ ಶವ ಪತ್ತೆಯಾಗಿವೆ. ಇನ್ನೂ ಇಬ್ಬರಿಗಾಗಿ ಶೋಧ ಮುಂದುವರೆದಿದೆ.

'ಕೊಲ್ಹಾರದ ನಿವಾಸಿಗಳಾದ ಪುಂಡಲೀಕ ಯಂಕಂಚಿ (36), ತಯ್ಯಬ್ ಚೌಧರಿ (35) ಮತ್ತು ದಶರಥ ಗೌಡರ (58) ಎಂಬುವವರ ಶವ ಪತ್ತೆಯಾಗಿವೆ. ಮೆಹಬೂಬ್ ವಾಲಿಕಾರ (40) ಮತ್ತು ರಫೀಕ್ ಬಾಂಬೆ (45) ಎಂಬುವರು ಪತ್ತೆ ಆಗಬೇಕಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದರು.

7ನೇ ಪುಟ ನೋಡಿ

80,000 ಗಡಿ ದಾಟಿದ ಸೆನ್ಸೆಕ್ಸ್ ದಾಖಲೆ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಬುಧವಾರದ ವಹಿವಾಟಿನಲ್ಲಿ ಇದೇ ಮೊದಲ ಬಾರಿಗೆ 80,000ದ ಗಡಿ ದಾಟಿ ದಾಖಲೆ ಬರೆದಿದೆ.

ಒಂದು ಹಂತದಲ್ಲಿ 632 ಅಂಶ ಏರಿಕೆ ದಾಖಲಿಸಿದ ಸೆನ್ಸೆಕ್ಸ್ 80,074ಕ್ಕೆ ಏರಿತ್ತು. ವಹಿವಾಟು ಮುಕ್ತಾಯದ ಹೊತ್ತಿಗೆ 545 ಅಂಶಗಳಷ್ಟು ಏರಿಕೆ ದಾಖಲಿಸಿತ್ತು. ಸೂಚ್ಯಂಕವು 79,986ರಲ್ಲಿ ಇತ್ತು.

ಇತ್ತೀಚಿನ ದಿನಗಳಲ್ಲಿ ಸೆನ್ಸೆಕ್ಸ್ ಏರಿಕೆ ಹಾದಿಯಲ್ಲಿಯೇ ಇದ್ದು, ಜೂನ್ 25ರಂದು 78,000 ಮತ್ತು ಜೂನ್ 27ರಂದು 79,000ದ ಗಡಿ ದಾಟಿತ್ತು.

ಸೆನ್ಸೆಕ್ಸ್ ಏರಿಕೆಯಲ್ಲಿ ಅತಿ ಹೆಚ್ಚು ಲಾಭ ಆಗಿರುವುದು ಅದಾನಿ ಪೋರ್ಟ್ಸ್‌ಗೆ. ಈ ಕಂಪನಿಯ ಷೇರು ಶೇ 2.49ರಷ್ಟು ಏರಿಕೆ ಕಂಡಿದೆ.

ಮುಖ್ಯಾಂಶಗಳು
- ನಿಫ್ಟಿ ಕೂಡ ದಾಖಲೆ ಏರಿಕೆ, ಸೂಚ್ಯಂಕ 24,286ಕ್ಕೆ
- ಬ್ಯಾಂಕಿಂಗ್ ವಲಯಕ್ಕೆ ಭಾರಿ ಲಾಭ



ಕೋಟಕ್ ಮಹೀಂದ್ರಾ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್ ಗ್ರಿಡ್, ಜೆಎಸ್‌ಡಬ್ಲ್ಯು ಸ್ಟೀಲ್, ಬಜಾಜ್ ಫೈನಾನ್ಸ್ ಮತ್ತು ಟಾಟಾ ಸ್ಟೀಲ್ ಅತಿ ಹೆಚ್ಚು ಲಾಭ ಗಳಿಸಿದ ಕಂಪನಿಗಳ ಪಟ್ಟಿಯಲ್ಲಿವೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಟೈಟನ್, ರಿಲಯನ್ಸ್ ಇಂಡಸ್ಟ್ರೀಸ್, ಟಾಟಾ ಮೋಟರ್ಸ್, ಎಲ್ ಆ್ಯಂಡ್ ಟಿ ಕಂಪನಿಗಳು ನಷ್ಟದ ಹಾದಿ ಹಿಡಿದವು.

ನಿಫ್ಟಿ ಕೂಡ ದಾಖಲೆ ಮಟ್ಟಕ್ಕೆ ಏರಿದೆ. 162 ಅಂಶ ಏರಿಕೆ ಕಂಡು ಸೂಚ್ಯಂಕವು 24,286 ತಲುಪಿದೆ. ದಿನದ ವಹಿವಾಟಿನ ಒಂದು ಹಂತದಲ್ಲಿ 183 ಅಂಶ ಏರಿಕೆಯಾಗಿ 24,307 ಅಂಶಕ್ಕೆ ತಲುಪಿತ್ತು.

ಏರಿಕೆಯ ಕಾರಣ: ಬ್ಯಾಂಕಿಂಗ್ ವಲಯದ ಷೇರು ಮೌಲ್ಯದಲ್ಲಿ ಆದ ಭಾರಿ ಏರಿಕೆಯು ಷೇರುಪೇಟೆಯಲ್ಲಿ ಗೂಳಿ ಓಟಕ್ಕೆ ಕಾರಣವಾಯಿತು. ಬ್ಯಾಂಕ್‌ಗಳ ವಸೂಲಾಗದ ಸಾಲದ ಪ್ರಮಾಣವು 12 ವರ್ಷಗಳ ಕನಿಷ್ಠ ಮಟ್ಟಕ್ಕೆ ಬಂದಿದೆ. ಅದು ಇನ್ನಷ್ಟು ಕಡಿಮೆಯಾಗುವ ಸಾಧ್ಯತೆಯೂ ಇದೆ. ಹಾಗಾಗಿ, ಮಾರುಕಟ್ಟೆ ಮುನ್ನುಗ್ಗುತ್ತಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಡೆಂಗಿ: ಪರೀಕ್ಷೆಗೆ ತಲಾ ₹ 300 ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ಡೆಂಗಿ ಪರೀಕ್ಷೆಗೆ ಸಂಬಂಧಿಸಿದಂತೆ ಖಾಸಗಿ ಆಸ್ಪತ್ರೆಗಳು ಹಾಗೂ ಪ್ರಯೋಗಾಲಯಗಳಿಗೆ ದರ ನಿಗದಿಪಡಿಸಿ ಬುಧವಾರ ಆದೇಶ ಹೊರಡಿಸಿದೆ.

ಎಲಿಸಾ ಎನ್‌ಎಸ್ 1 ಪರೀಕ್ಷೆಗೆ ₹300, ಎಲಿಸಾ ಐಜಿಎಂ ಪರೀಕ್ಷೆಗೆ ₹300 ನಿಗದಿಪಡಿಸಲಾಗಿದೆ. 'ರ್‍ಯಾಪಿಡ್ ಕಾರ್ಡ್' ಪರೀಕ್ಷೆಗೆ ₹250 ಗೊತ್ತುಪಡಿಸಲಾಗಿದೆ. ಇದಕ್ಕಿಂತ ಅಧಿಕ ಹಣ ಪಡೆದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಡೆಂಗಿ ಪ್ರಕರಣಗಳನ್ನು ನಿರ್ವಹಿಸಲು ಖಾಸಗಿ ಆಸ್ಪತ್ರೆಗಳು ಜವಾಬ್ದಾರಿಯಿಂದ ವರ್ತಿಸಬೇಕು. ಈ ಸಂದರ್ಭವನ್ನು ಲಾಭಗಳಿಸುವ ಅವಕಾಶವನ್ನಾಗಿ ಮಾಡಿಕೊಳ್ಳಬಾರದು

ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ಡೆಂಗಿ ಉಲ್ಬಣದ ಬೆನ್ನಲ್ಲೇ ಖಾಸಗಿ ಆಸ್ಪತ್ರೆಗಳು ಪರೀಕ್ಷೆಗಳಿಗೆ ಅಧಿಕ ಹಣ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಡೆಂಗಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆಗೆ ಮಂಗಳವಾರ ಸಭೆ ನಡೆಸಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಖಾಸಗಿ ಆಸ್ಪತ್ರೆಗಳಲ್ಲಿ ಪರೀಕ್ಷೆಗೆ ದರ ನಿಗದಿಪಡಿಸಿ ಆದೇಶ ಹೊರಡಿಸಲು ಸೂಚಿಸಿದ್ದರು.

ರಾಜ್ಯದಲ್ಲಿ ಬುಧವಾರ 13 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಒಟ್ಟು ಪ್ರಕರಣಗಳ ಸಂಖ್ಯೆ 6,390ಕ್ಕೆ ಏರಿಕೆಯಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಣ್ಣು ಕುಸಿತ: ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿಯ ಬಲ್ಮಠದಲ್ಲಿ ನಿರ್ಮಾಣ ಹಂತದ ಕಟ್ಟಡದ ತಳಪಾಯಕ್ಕೆ ತೆಗೆದ ಗುಂಡಿಯ ಪಕ್ಕದ ಮಣ್ಣು ಕುಸಿದು ಅದರಲ್ಲಿ ಸಿಲುಕಿದ್ದ ಇಬ್ಬರು ಕಾರ್ಮಿಕರಲ್ಲಿ ಒಬ್ಬಾತನನ್ನು ರಕ್ಷಿಸಲಾಗಿದ್ದು, ಇನ್ನೊಬ್ಬ ಮೃತಪಟ್ಟಿದ್ದಾನೆ.

ಉತ್ತರ ಪ್ರದೇಶದ ಆಜಂಗಡ ಜಿಲ್ಲೆಯ ಪರಾಸಿ ಗ್ರಾಮದ ಚಂದನ್ ಕುಮಾರ್ (30) ಮೃತ ಕಾರ್ಮಿಕ. ಬಿಹಾರದ ರೋಹ್ತಾಸ್ ಜಿಲ್ಲೆಯ ಅಕ್ಬೊರಾ ಗ್ರಾಮದ ಧವನಿಯಾದ ರಾಜ್ ಕುಮಾರ್ (18) ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ರೋಹನ್ ಸ್ಕ್ವೇರ್ ಕಮರ್ಷಿಯಲ್ ಆ್ಯಂಡ್ ಫುಲ್ಲಿ ಫರ್ನಿಷ್ಡ್ ಸ್ಟುಡಿಯೊ' ಕಟ್ಟಡ ಸಂಕೀರ್ಣದ ತಳಪಾಯದ ತಡೆಗೋಡೆಯಲ್ಲಿ ನೀರು ಸೋರಿಕೆ ತಡೆಯುವ (ವಾಟರ್‌ಪ್ರೂಫಿಂಗ್) ಕೆಲಸವನ್ನು ನಿರ್ವಹಿಸುತ್ತಿದ್ದರು. ನೆಲಮಟ್ಟದಿಂದ ಸುಮಾರು 20 ಅಡಿ ಆಳದಲ್ಲಿದ್ದ ಅವರ ಮೇಲೆ ಮಣ್ಣು ಕುಸಿದಿತ್ತು.

ಮಣ್ಣಿನಡಿ ಸಿಲುಕಿದ್ದ ರಾಜ್‌ಕುಮಾರ್ ಅವರನ್ನು ಘಟನೆ ನಡೆದ ಎರಡೂವರೆ ಗಂಟೆಯಲ್ಲಿ ರಕ್ಷಿಸಲಾಯಿತು. ಆದರೆ ಚಂದನ್ ಕುಮಾರ್ ದೇಹವು ಮಣ್ಣಿನಲ್ಲಿ ಹೂತುಹೋಗಿತ್ತು. ಮಣ್ಣಿನಡಿ ಕಬ್ಬಿಣದ ಸಲಾಖೆಗಳು ಅಡ್ಡ ಇದ್ದುದರಿಂದ ಅವರ ದೇಹವನ್ನು ಹೊರ ತೆಗೆಯಲು ರಕ್ಷಣಾ ಸಿಬ್ಬಂದಿ ಹರಸಾಹಸಪಟ್ಟರು.

8ನೇ ಪುಟ ನೋಡಿ

153 ವರ್ಷದ ಸರ್ಕಾರಿ ಪ್ರೌಢಶಾಲೆಗೆ ಸಿಗದ ಅನುದಾನ

ಕಾಂಪೌಂಡ್ ನಿರ್ಮಿಸಿದ ಶಿಕ್ಷಕಿಯರು

• ಗಣಪತಿ ಹೆಗಡೆ

ಕಾರವಾರ: ಇಲ್ಲಿನ 153 ವರ್ಷಗಳ ಇತಿಹಾಸವುಳ್ಳ ಜಿಲ್ಲೆಯ ಮೊದಲ ಸರ್ಕಾರಿ ಪ್ರೌಢಶಾಲೆಯ ಕಾಂಪೌಂಡ್ ಅನ್ನು 2015ರಲ್ಲಿ ರಸ್ತೆ ವಿಸ್ತರಣೆಗಾಗಿ ಕೆಡವಲಾಗಿತ್ತು. ಅನುದಾನ ಸಿಗದ ಕಾರಣ ಮತ್ತೆ ನಿರ್ಮಿಸಿರಲಿಲ್ಲ. ಆದರೆ, ವಿದ್ಯಾರ್ಥಿಗಳು ಮತ್ತು ಶಾಲೆಯ ಹಿತದೃಷ್ಟಿಯಿಂದ ಐವರು ಶಿಕ್ಷಕಿಯರೇ ಸ್ವಂತ ಖರ್ಚಿನಲ್ಲಿ ಅದನ್ನು ನಿರ್ಮಿಸಿದ್ದಾರೆ.

ಕಾರವಾರ–ಕೋಡಿಬಾಗ ಮುಖ್ಯರಸ್ತೆಯ ವಿಸ್ತರಣೆಗಾಗಿ 9 ವರ್ಷಗಳ ಹಿಂದೆ ಕಾಂಪೌಂಡ್ ತೆರವುಗೊಳಿಸಿದ್ದರಿಂದ ತಕ್ಷಣಕ್ಕೆ ಪರ್ಯಾಯ ಕ್ರಮ ಕೈಗೊಂಡಿರಲಿಲ್ಲ. ಆಗಲೂ ಶಿಕ್ಷಕಿಯರೇ, ದಪ್ಪನೆಯ ಮೆಶ್ ಅಳವಡಿಸಿ ಬಟ್ಟೆಯ ಆವರಣಗೋಡೆ ನಿರ್ಮಿಸಿದ್ದರು. ಆದರೆ, ಅದು ಹೆಚ್ಚು ಸುರಕ್ಷಿತವಲ್ಲದ ಕಾರಣ ಮತ್ತೆ ಶಿಕ್ಷಕಿಯರೇ ₹60 ಸಾವಿರದವರೆಗೆ ಖರ್ಚು ಮಾಡಿ ಕಾಂಕ್ರೀಟ್ ಕಂಬ, ಹಲಗೆ ಮತ್ತು ಕಬ್ಬಿಣದ ಗೇಟ್ ಅಳವಡಿಸಿ ಸುಸಜ್ಜಿತ ಕಾಂಪೌಂಡ್ ನಿರ್ಮಿಸಿದ್ದಾರೆ.

ಒಳ್ಳೆ ಸುದ್ದಿ

ಕಾರವಾರದ ಸರ್ಕಾರಿ ಪ್ರೌಢಶಾಲೆಗೆ ಶಿಕ್ಷಕಿಯರ ಹಣದಲ್ಲಿ ನಿರ್ಮಿಸಲಾಗಿರುವ ಕಾಂಪೌಂಡ್

'ಕಾಂಪೌಂಡ್ ನಿರ್ಮಾಣಕ್ಕೆ ಶಿಕ್ಷಣ ಇಲಾಖೆಗೆ ಶಾಲಾಭಿವೃದ್ಧಿ ಸಮಿತಿಯಿಂದ ಹಲವು ಬಾರಿ ಕೋರಿದರೂ ಸ್ಪಂದನ ಸಿಗಲಿಲ್ಲ. ಸಮೀಪದಲ್ಲೇ ಶಾಸಕರ ಮಾದರಿ ಶಾಲೆಯ ಕಟ್ಟಡ ನಿರ್ಮಿಸಲಾಗುತ್ತಿರುವ ಕಾರಣ ಅಲ್ಲಿನ 1ರಿಂದ 7ನೇ ತರಗತಿಯವರೆಗಿನ 80 ವಿದ್ಯಾರ್ಥಿಗಳು ಇಲ್ಲಿನ ಪ್ರೌಢಶಾಲೆ ಕಟ್ಟಡದಲ್ಲಿ ಓದುತ್ತಿದ್ದಾರೆ. ಸದ್ಯಕ್ಕೆ ಎಲ್ಲರೂ ಸೇರಿ ಒಟ್ಟು 200 ವಿದ್ಯಾರ್ಥಿಗಳು ಇದ್ದಾರೆ. ಹೀಗಾಗಿ ಎಲ್ಲರ ಸುರಕ್ಷತೆ ಹಿತದೃಷ್ಟಿಯಿಂದ ಕಾಂಪೌಂಡ್ ನಿರ್ಮಿಸುವುದು ಅಗತ್ಯವಿತ್ತು' ಎಂದು ಶಾಲಾಭಿವೃದ್ಧಿ ಸಮಿತಿ ಸದಸ್ಯ ಗುರುನಾಥ ಮಾಹೇಕರ 'ಪ್ರಜಾವಾಣಿ'ಗೆ ತಿಳಿಸಿದರು.

'ಆಡುವಾಗ ಅಥವಾ ಬೇರೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಅಪಘಾತಕ್ಕೀಡಾಗುವ ಸಾಧ್ಯತೆ ಹೆಚ್ಚಿತ್ತು' ಎಂದರು.

'ಪ್ರಭಾರ ಮುಖ್ಯ ಶಿಕ್ಷಕಿ ಮೀನಾಕ್ಷಿ ನಾಯಕ, ಶಿಕ್ಷಕಿಯರಾದ ಮಮತಾ ಕವರಿ, ಮಂಗಲಾ ಹೆಗಡೆ, ಸವಿತಾ ಗೌಡ ಮತ್ತು ಶಿಲ್ಪಾ ಕಾಕರಮಠ ಅವರು ಈ ಸೌಲಭ್ಯಕ್ಕಾಗಿ ಖರ್ಚು ಮಾಡಿದ್ದಾರೆ. ಗಾರೆ ಕೆಲಸ ಮಾಡುವ ಕೆಲ ವಿದ್ಯಾರ್ಥಿಗಳ ಪಾಲಕರು ನಿರ್ಮಾಣ ಕಾರ್ಯಕ್ಕೆ ಸಹಕರಿಸಿದ್ದಾರೆ' ಎಂದರು.

ಕಾಂಪೌಂಡ್ ನಿರ್ಮಾಣಕ್ಕೆ ಇಲಾಖೆಯಿಂದ ಪ್ರತ್ಯೇಕ ಅನುದಾನ ಇಲ್ಲ. ಅದಕ್ಕೆ ನಗರಸಭೆಗೆ ಅನುದಾನ ಕೋರಲಾಗಿತ್ತು. ಅಲ್ಲಿಂದಲೂ ನೆರವು ಸಿಗಲಿಲ್ಲ

ಅಧಿಕಾರಿ, ಶಿಕ್ಷಣ ಇಲಾಖೆ

ವಿದ್ಯಾರ್ಥಿಗಳ ಸುರಕ್ಷತೆಗಾಗಿ ಶಾಲೆಯ ಕಾಂಪೌಂಡ್ ನಿರ್ಮಿಸಲಾಗಿದೆ. ಈ ಒಟ್ಟಾರೆ ಕಾರ್ಯಕ್ಕೆ ತಗುಲಿದ ವೆಚ್ಚವನ್ನು ನಾವು ಶಿಕ್ಷಕಿಯರೇ ಭರಿಸಿದ್ದೇವೆ

ಮೀನಾಕ್ಷಿ ನಾಯಕ, ಮುಖ್ಯ ಶಿಕ್ಷಕಿ

MIT Art, Design & Technology University, Loni Kalbhor, Pune

MIT-ADT UNIVERSITY
PUNE, INDIA
A Leap Towards World Class Education

The New Age University for INNOVATION & ENTREPRENEURSHIP

ADMISSION OPEN 2024 – 25

QS WORLD UNIVERSITY RANKINGS 20 YEARS
Band #151-200 by Subject 2024: Art & Design

International Collaboration with Top USA & European Universities for Credit Transfer & Semester Abroad Program International Immersion Program

SPECIALIZED UG ENGINEERING PROGRAMS
Comp. Science & Engg. (7 Specialization) | Aerospace Engg.
Information Technology (3 Specialization) | Bio Engg.
Mechanical Engg.(5 Specialization) | Electronics & Comm. Engg.
Marine Engg. | Civil Engg. | Food Technology | Nautical Science

MANAGEMENT PROGRAMS
MBA - General | Agri & Food Business / Project & Construction Mgmt.
Supply Chain Mgmt. | Healthcare Mgmt. | Port & Shipping Mgmt.
Digital Marketing | Data Science | Cloud Computing
BBA-General | International Business | Computer Application
Digital Marketing | Finance Technology |Business Analytics
Real Estate Mgmt. | Finance & Accountancy *(ACCA, UK)
MCA | **BCA** | **M.Tech –** | Construction Mgmt.

LAW & HUMANITIES COURSES
BBA LLB | LLB | LLM | Phd
B.Ed | M.A. Education | B.A (Hons.)English
M.A. English | M.A. | M.Sc. E-Learning

DIVERSIFIED OTHER COURSES
Performing Arts & Fine Arts
BPA I MPA - Music | Dance | Instruments
BFA I MFA | Applied Arts | Fine Arts | Painting | Sculpture | Art Therapy
Film & Theatre - B.Sc. | M.Sc.
Vedic Sciences
B.Sc. - Hons Psychology | M.Sc. - Clinical Psychology
M.Sc. - Vedic Sciences | M.A. - Sanskrit
UPSC / Civil Services - B.A. I M.A. - Administration
MBA - Innovation & Entrepreneurship
PG Diploma in Automotive Sculpting

SCIENCE PROGRAMS
B.Sc(Hons) - Computer Science | AI-ML | Blockchain
Data Science | Cloud Computing
M.Sc. - Computer Science
Chemistry (Advanced Organic & Medicinal)

In Collaboration with
intel AATCE tcs iON Xebia aws

Drexel University Direct Pathway Program for MS in AI-ML

Work integrated M.Tech IT - Cyber security program in partnership with Hacker Central

nirf IN TOP 51 TO 100 RANK BAND IN INNOVATION

School of Holistic Development

CRIEYA for Innovation & Product Development

Atal Incubation Centre for Startup & Entrepreneurship

mituniversity.ac.in/
admissions@mituniversity.edu.in
Vishwarajbaug, Solapur-Pune Highway, Loni Kalbhor, Pune : 412 201, India

Comp /IT: 9021080155 | Mech /ECE /Aero /Civil: 9021080109 | Management: 9021080157
Bio-Engg.: 9021080112
Architecture: 9021080154
B.Sc. & M.Sc.: 7066995599
Performing Arts: 8669610571
Applied & Fine Arts: 7888014828
Education: 8657124234
Food Tech.: 9021080141
Merchant Navy: 9595996611
Vedic Sciences: 9920506300
Films & Theatre: 9021080127
Civil Services: 7618771921
Law: 7391095193
Humanities: 7888051261
General Enquiry: 9595124234
Enquire Now

'ಮಯೂರ' ಓದಿ

Dr.AMBEDKAR INSTITUTE OF TECHNOLOGY
(An Autonomous Institution, affiliated to VTU Belagavi and Aided by GoK)
Outer Ring Road, Mallathahalli, Bengaluru – 560 056
Phone No: 9986003865, Mail Id: principal@drait.edu.in

Dr.AIT/EST/516/2024-25 Date:03.07.2024

WALK IN INTERVIEW

Dr. Ambedkar Institute of Technology Invites eligible candidates to attend the **WALK IN INTERVIEW** on 18.07.2024 for the following posts:

Professor - Aeronautical/Computer Science & Business Systems (CSBS)
Associate Professor - Civil/CSBS
Assistant Professor - Civil/CSE/CSBS/Maths
Medical Practitioner, Social Counsellor, Physical Education Instructor, Library Assistant and Internal Auditor.
Qualification & Experience: As per AICTE and State Government norms.
For more details visit institute's website: www.drait.edu.in
Venue and Time: Interview is scheduled at 10.00 AM on 18-07-2024 at the Board Room of Dr. Ambedkar Institute of Technology, Bangalore-560 056.
Interested candidates should submit application form in plain paper along with resume, two sets of self- attested copies of testimonials and recent passport size photograph at the time of interview.

Sd/- Principal Sd/- Secretary/Managing Trustee

'ತುರ್ತುಪರಿಸ್ಥಿತಿ: ಸಂವಿಧಾನದತ್ತ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯ ಹೇರಿಕೆಗೆ ಕಾರಣವಾದ ಸಂದರ್ಭ ಸಾರ್ವಜನಿಕ ವಲಯದಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಲೇ ಇಲ್ಲ. ಹೀಗಾಗಿ ಈ ಬಗ್ಗೆ ತಪ್ಪು ಕಲ್ಪನೆಗಳು, ಬೇಕಾಬಿಟ್ಟಿಯಾದ ವಿಶ್ಲೇಷಣೆಗಳು ನಡೆಯುತ್ತಿವೆ' ಎಂದು ಕಾಂಗ್ರೆಸ್ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯ ಬಿ.ಕೆ. ಹರಿಪ್ರಸಾದ್ ಅಭಿಪ್ರಾಯಪಟ್ಟರು

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ತುರ್ತು ಪರಿಸ್ಥಿತಿ ಎಂಬುದು ಸಂವಿಧಾನೇತರ ವಿಷಯವಾಗಿರಲಿಲ್ಲ. ತುರ್ತು ಪರಿಸ್ಥಿತಿ ಹೇರುವುದು ಸಂವಿಧಾನವೇ ಕೊಟ್ಟ ನಿಬಂಧನೆ ಅಥವಾ ಅವಕಾಶ' ಎಂದು ಪ್ರತಿಪಾದಿಸಿದರು.

'ತುರ್ತುಪರಿಸ್ಥಿತಿಗೆ 50 ವರ್ಷಗಳಾಗಿದ್ದು ಈ ಸಂದರ್ಭದಲ್ಲಿ ಅಸಾಂವಿಧಾನಿಕ ಪದಗಳನ್ನು ಬಳಸಲಾಗಿದೆ. ದೇಶದ ಮೇಲೆ ಬಾಹ್ಯ ದಾಳಿ ಹಾಗೂ ಆಂತರಿಕ ಗದ್ದಲ ಇದ್ದಾಗ ತುರ್ತುಪರಿಸ್ಥಿತಿ ಹೇರಬಹುದು ಎಂದು ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ದೇಶದಲ್ಲಿ ರಾಷ್ಟ್ರ ವಿರೋಧಿ ಶಕ್ತಿಗಳನ್ನು ಹತ್ತಿಕ್ಕಿ, ಪರಿಸ್ಥಿತಿ ನಿಭಾಯಿಸಲು ಇಂದಿರಾ ಗಾಂಧಿ ಸಂವಿಧಾನಬದ್ಧವಾಗಿ ತುರ್ತು ಪರಿಸ್ಥಿತಿ ಹೇರಿದ್ದರು. ಇಂದಿರಾ ಗಾಂಧಿ ಎಂದಿಗೂ ತಮ್ಮ ಎದುರಾಳಿಗಳ ಮನೆ ಮುಂದೆ ಬುಲ್ಡೋಜರ್ ಕಳುಹಿಸಲಿಲ್ಲ' ಎಂದರು.

ನಗರದಲ್ಲಿ ಇಂದು

ಭಾರತ-ಟಿಬೆಟ್ ಸಂಬಂಧಗಳ ಬಗ್ಗೆ ಉಪನ್ಯಾಸ: ಆನಂದ್ ಕುಮಾರ್, ಸೌಮ್ಯದೀಪ್ ದತ್ತ, ಆಯೋಜನೆ ಹಾಗೂ ಸ್ಥಳ: ಡಿಜೆಬಿ ಸಭಾಂಗಣ, ಮೌಂಟ್ ಕಾರ್ಮೆಲ್ ಕಾಲೇಜು, ಮಧ್ಯಾಹ್ನ 2

ಕಮಲಾ ಹಂಪನಾ, ಖಲೀಲ್ ಉರ್ ರೆಹಮಾನ್ ಹಾಗೂ ಲಕ್ಕೂರು ಆನಂದ ಅವರಿಗೆ ನುಡಿ ನಮನ: ನೆನಪು ಹಂಚಿಕೊಳ್ಳುವವರು: ಜಿ.ಎನ್. ಮೋಹನ್, ಮೊಹಮ್ಮದ್ ಆಜಂ ಶಾಹೀದ್, ಸುಬ್ಬು ಹೊಲೆಯಾರ್, ಮುಖ್ಯ ಅತಿಥಿಗಳು: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ನೂತನ ಶಾಖೆ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ವೈ.ಕೆ. ಪುಟ್ಟಸೋಮೇಗೌಡ, ಮುಖ್ಯ ಅತಿಥಿಗಳು: ಪ್ರಿಯಕೃಷ್ಣ, ಜಿ.ಬಿ. ವಿನಯ್ ಕುಮಾರ್, ಆಯೋಜನೆ: ಕೃಷಿಕ್ ಸರ್ವೋದಯ ಫೌಂಡೇಶನ್, ಸ್ಥಳ: ಚಂದ್ರಗಿರಿ ಪ್ಯಾಲೆಸ್, ಬಿಎಂಟಿಸಿ ಬಸ್ ನಿಲ್ದಾಣದ ಎದುರು, ಚಂದ್ರಾ ಲೇಔಟ್, ಸಂಜೆ 5.30

ಕೃಷ್ಣ ಆಲನಹಳ್ಳಿಯವರ ಸಾಹಿತ್ಯ ರಂಗ ಪ್ರಯೋಗ: 'ಪರಸಂಗದ ಗೆಂಡೆತಿಮ್ಮ' ನಾಟಕ ಕೃತಿ ಬಿಡುಗಡೆ: ಕೃಷ್ಣ ಮಾಸಡಿ, ಉಪಸ್ಥಿತಿ: ಶ್ರೀನಿವಾಸ ಜಿ. ಕಪ್ಪಣ್ಣ, ಪ್ರದ್ಯುಮ್ನ ಕೃಷ್ಣ ಆಲನಹಳ್ಳಿ, ಎಂ. ಬೈರೇಗೌಡ, ವಿ.ಗಂಗಾಧರ್, ಕನಕರಾಜ್, ನಾಟಕ ಪ್ರದರ್ಶನ: ಪರಸಂಗದ ಗೆಂಡೆತಿಮ್ಮ, ಆಯೋಜನೆ: ರೂಪಾಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

'ಶ್ರೀನಿವಾಸ ಕಲ್ಯಾಣ' ಪ್ರವಚನ ಮಾಲಿಕೆ: ಬಿ.ಆರ್. ವೆಂಕಟೇಶ ಆಚಾರ್ಯ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 7ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ತ್ಯಾಗರಾಜನಗರ ಮೂರನೇ ಬ್ಲಾಕ್, ಸಂಜೆ 7

ವೀಣಾ ವಾದನ: ಶೃತಿ ಕುಲಕರ್ಣಿ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ ಐದನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಗಡ್ಕರಿಗೆ ಮನವಿ

ನವದೆಹಲಿ: ಇಳಕಲ್– ಕಾರವಾರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರಿಗೆ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2024–25 ದಿನಾಂಕ: 29.06.2024

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–I,II & III ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಏಕ & ದ್ವಿ ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್: **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 15.07.2024 ರ 16:30 ರವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 16.07.2024 ರಂದು 16:35 ನಂತರ.** (3) ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: (ಕ್ರ.ಸಂ 13): ದಿನಾಂಕ: 18.07.2024 ರಂದು ಬೆಳಿಗ್ಗೆ: 11:30** ನಂತರ (ಸಾಧ್ಯವಾದಲ್ಲಿ). (4) ಅರ್ಜಿ ಶುಲ್ಕ: ಹಿಂದಿರುಗಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:67/ಕೆಎಸ್‌ಎಂಸಿಎ/2024–25

ಪುರಸಭಾ ಕಾರ್ಯಾಲಯ, ಚಿಕ್ಕಬಾಣಾವರ

ಸಂತೆಬೀದಿ ರಸ್ತೆ, ಚಿಕ್ಕಬಾಣಾವರ, ಬೆಂಗಳೂರು ಉತ್ತರ ತಾಲ್ಲೂಕು.
Email: ka.chikkabanavara.tmc@gmail.com Website: https://chikkabanavaratown.mrc.gov.in

ಸಂಖ್ಯೆ: ಪು.ಕಾ.ಚಿ./ಕ.ಶಾ/ಸಿ.ಆರ್./01/2024–25 ದಿನಾಂಕ: 03.07.2024

ಸಾರ್ವಜನಿಕ ಪ್ರಕಟಣೆ

ಚಿಕ್ಕಬಾಣಾವರ ಪುರಸಭೆಯ 2024–25ನೇ ಸಾಲಿಗೆ ಎಸ್.ಎಫ್.ಸಿ. ಮುಕ್ತನಿಧಿ ಹಾಗೂ ಪುರಸಭಾ ನಿಧಿ ಅನುದಾನದಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಗಳಡಿ ವೈಯಕ್ತಿಕ ಸೌಲಭ್ಯಗಳನ್ನು ನೀಡಲು ಶೇ. 17.15 (ಪರಿಶಿಷ್ಟ ಜಾತಿ), ಶೇ. 6.95 (ಪರಿಶಿಷ್ಟ ಪಂಗಡ) ಹಾಗೂ ಶೇ. 7.25 (ಹಿಂದುಳಿದವರಿಗೆ) ಈ ವರ್ಗಗಳ ಫಲಾನುಭವಿಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಅರ್ಹ ಅಭ್ಯರ್ಥಿ / ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಸ್.ಎಫ್.ಸಿ. ಮುಕ್ತ ನಿಧಿ

ಶೇ 17.15ರ ಯೋಜನೆ (ಪರಿಶಿಷ್ಟ ಜಾತಿ) ಹಾಗೂ ಶೇ. 6.95ರ ಯೋಜನೆ (ಪರಿಶಿಷ್ಟ ಪಂಗಡ)
ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿವಾಸಿಗಳಿಗೆ ಭಾರತೀಯ ಜೀವ ವಿಮಾ ಸಂಸ್ಥೆಯಿಂದ ಏಕ ಕಂತು ವಿಮಾ ಸೌಲಭ್ಯ ಒದಗಿಸುವುದು.

ಶೇ. 7.25 ಯೋಜನೆ (ಹಿಂದುಳಿದವರಿಗೆ)
ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಹಿಂದುಳಿದ ವರ್ಗದ ಜನಾಂಗದವರ 2021–22ನೇ ಮತ್ತು 2023–24ನೇ ಸಾಲಿನಲ್ಲಿ ಆರ್.ಜಿ.ಹೆಚ್.ಸಿ.ಎಲ್. ಬೆಂಗಳೂರು ರವರಿಂದ ಆಯ್ಕೆಗೊಂಡ ಫಲಾನುಭವಿಗಳ ಮನೆ ನಿರ್ಮಾಣಕ್ಕಾಗಿ ಸಹಾಯಧನ ಒದಗಿಸುವುದು.

ಪುರಸಭಾ ನಿಧಿ

ಶೇ. 17.15ರ ಯೋಜನೆ (ಪರಿಶಿಷ್ಟ ಜಾತಿ) ಹಾಗೂ ಶೇ. 6.95ರ ಯೋಜನೆ (ಪರಿಶಿಷ್ಟ ಪಂಗಡ)
ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿವಾಸಿಗಳಿಗೆ ಭಾರತೀಯ ಜೀವ ವಿಮಾ ಸಂಸ್ಥೆಯಿಂದ ಏಕ ಕಂತು ವಿಮಾ ಸೌಲಭ್ಯ ಒದಗಿಸುವುದು.

ಶೇ. 7.25 ಯೋಜನೆ (ಹಿಂದುಳಿದವರಿಗೆ)
ಚಿಕ್ಕಬಾಣಾವರ ಪುರಸಭಾ ವ್ಯಾಪ್ತಿಯ ಹಿಂದುಳಿದ ವರ್ಗದ ಜನಾಂಗದವರ 2021–22ನೇ ಮತ್ತು 2023–24ನೇ ಸಾಲಿನಲ್ಲಿ ಆರ್.ಜಿ.ಹೆಚ್.ಸಿ.ಎಲ್. ಬೆಂಗಳೂರು ರವರಿಂದ ಆಯ್ಕೆಗೊಂಡ ಫಲಾನುಭವಿಗಳ ಮನೆ ನಿರ್ಮಾಣಕ್ಕಾಗಿ ಸಹಾಯಧನ ಒದಗಿಸುವುದು.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಅರ್ಹ ಪ.ಜಾ./ಪ.ಪಂ. ವರ್ಗದವರು ಹಾಗೂ ಹಿಂದುಳಿದ ಬಡ ಜನಾಂಗದವರು ಅರ್ಜಿಗಳನ್ನು **ದಿನಾಂಕ: 10.08.2024 ರೊಳಗಾಗಿ** ಈ ಕಛೇರಿಗೆ ಸಲ್ಲಿಸತಕ್ಕದ್ದು. ತಡವಾಗಿ ಬಂದ ಅರ್ಜಿಗಳನ್ನು ಅಥವಾ ಮಾಹಿತಿಯುಳ್ಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ಸಮಯದಲ್ಲಿ ಈ ಕಛೇರಿಯ ಕಲ್ಯಾಣ ಶಾಖೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಆಡಳಿತಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳು ಪುರಸಭೆ, ಚಿಕ್ಕಬಾಣಾವರ

ಸಹಿ/– ಮುಖ್ಯಾಧಿಕಾರಿ ಪುರಸಭೆ, ಚಿಕ್ಕಬಾಣಾವರ

DIPR/CP/YC/741/2024-25

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ 28/2024, ದಿನಾಂಕ 26.06.2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ನಂ	ಕಾಮಗಾರಿಯ ಹೆಸರು	ಪ್ರಮಾಣ
L8245811	ಬೆಂಗಳೂರು ವಿಭಾಗದ ರೈಲು ನಿಲ್ದಾಣದಲ್ಲಿ ಪ್ರತಿ 100ಲೀಟರ್ ಸಾಮರ್ಥ್ಯದ ಸ್ಟೇನ್‌ಲೆಸ್ ಸ್ಟೀಲ್ ಡಸ್ಟ್ ಬಿನ್ (ಒಣ/ಆರ್ದ್ರ) ಸಂಗ್ರಹ/ಪೂರೈಕೆ/ಅಳವಡಿಕೆ.	765 ಜೋಡಿಗಳು
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22/07/2024 ರಂದು 10:30 ಗಂಟೆಯವರೆಗೆ		

ಹೆಚ್ಚಿನ ಮಾಹಿತಿಗಳಿಗಾಗಿ **www.ireps.gov.in** ಗೆ ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವ್ಯವಸ್ಥಾಪಕರು(ಸಾಮಗ್ರಿ) ಬೆಂಗಳೂರು

ಪಿಯುಬಿ/210/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್ /2024–25

South Western Railway-SWR | SWRRLY | southwesternrailway | SWRRLY

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ. ಬಿಇ–29–2024–25–OT–08
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಒಟಿ ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
08	ಎಲೆಕ್ಟ್ರಿಕಲ್	ರೂ: 65,34,418/–
ಬೆಂಗಳೂರು ವಿಭಾಗದ ಮೇಲೆ ಟ್ರ್ಯಾಕ್ ಮೆಷಿನ್ ವಿಶ್ರಾಂತಿ ಕೊಠಡಿಗಳ ವ್ಯವಸ್ಥೆ ಮತ್ತು ಗೋಲ್ಲಳ್ಳಿ ನಿಲ್ದಾಣದಲ್ಲಿ ಎಚ್‌ಎಲ್ ಪ್ಲಾಟ್‌ಫಾರ್ಮ್ ವಿಸ್ತರಣೆ– ಎಲೆಕ್ಟ್ರಿಕಲ್ ವ್ಯವಸ್ಥೆಗಳು.		
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 18.07.2024 ರಂದು 15:00 ಗಂಟೆಗಳವರೆಗೆ		

ಹೆಚ್ಚಿನ ಮಾಹಿತಿಗಳಿಗಾಗಿ **www.ireps.gov.in** ಲಾಗಿನ್ ಮಾಡಿ

ಸೀನಿಯರ್ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಬೆಂಗಳೂರು

ಪಿಯುಬಿ/213/ಎಎಡಿ360/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2024–25

South Western Railway-SWR | SWRRLY | SWRRLY

ಕರ್ನಾಟಕ ಸರ್ಕಾರ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

3ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು–09
ದೂ.ಸಂ: 080–29710021, 29710022, 29710023, 29710024, ಫ್ಯಾಕ್ಸ್: 080–29710025
ಇ–ಮೇಲ್ : coo.krrda.karbng@kar.nic.in , ವೆಬ್‌ಸೈಟ್ : http://www.krrda.in

ಸಂಖ್ಯೆ: ಕೆಆರ್‌ಆರ್‌ಡಿಎ/ತಾಂತ್ರಿಕ/02/ಡಿಪಿಆರ್/2024–25/578 ದಿನಾಂಕ: 03.07.2024

ಟೆಂಡರ್ ಪ್ರಕಟಣೆ

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ವತಿಯಿಂದ, ಅಭಿವೃದ್ಧಿ ಪಡಿಸುವ ರಸ್ತೆ ಮತ್ತು ಉದ್ದ ಸೇತುವೆ ಕಾಮಗಾರಿಗಳ ಸರ್ವೆ ಮತ್ತು ವಿಸ್ತೃತ ಯೋಜನಾ ವರದಿ (Detailed Project Report) ಗಳನ್ನು ತಯಾರಿಸಿ ನೀಡಲು ಸಮಾಲೋಚಕರುಗಳನ್ನು ನೇಮಕಾತಿ (Empanelment) ಮಾಡಿಕೊಳ್ಳುವ ಸಲುವಾಗಿ, ಟೆಂಡರ್‌ಗಳನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳನ್ನು **https://www.kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಟೆಂಡರಿಂಗ್ ಅಧಿಕಾರಿ
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.

ವಾಸಾಸಂಇ/ವಾಪ್ರ/733/ಎಸ್‌ಎಸ್‌ಸಿ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್‌ಆರ್(ಜಿ)/718/2023–24 ನಮೂನೆ – I ದಿನಾಂಕ: 27.06.2024

ಪ್ರಕಟಣೆ

ನಮೂನೆ – I [ಸೆಕ್ಷನ್ 14ಬಿ (4) (I)]

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, "ಆರ್‌ಎಂಪಿ 2015ರಂತೆ ಅಂಕಮ್ಮ ಬಡಾವಣೆ ಮುಖ್ಯ ರಸ್ತೆಗಾಗಿ (30.00 ಮೀಟರ್ ಅಗಲದ ಗ್ಯಾಸ್ ಪೈಪ್ ಲೈನ್ ರಸ್ತೆ) ಅಂಭಾಭವಾನಿ ದೇವಸ್ಥಾನದ ರಸ್ತೆಯಿಂದ ಬೃಬೆಂಮಪಾ ಮಿತಿವರೆಗೆ ಎ 30.00 ಮೀಟರ್ ಅಗಲದ ರಸ್ತೆಯ ಅಗಲೀಕರಣ ಮತ್ತು ರಚನೆ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ. ಭೂ ಮಾಲೀಕರು ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಾಗಿ ಬೇಕಾಗಿರುವ ಪ್ರದೇಶಗಳ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ಅಂದರೆ, (1) ಕ್ರಯ/ವಿಭಾಗ/ಇತರೆ ಡೀಡ್‌ಗಳ ಟೈಟಲ್, (2) ತಹಲ್‌ವರೆಗಿನ ಪಹಣಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಸೀದಿಗಳು, (5) ಕೃಷೀಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ ಪ್ರತಿ, (6) ಕಂದಾಯ ರೇಖಾಚಿತ್ರ (7) ಆಕಾರ್ ಬಂದ್ ಇತ್ಯಾದಿಗಳನ್ನು ಖುದ್ದಾಗಿ ಈ ಕೆಳಗೆ ನಮೂದಿಸಿರುವ ವಿಳಾಸದಲ್ಲಿ ಅವರ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕಟಣೆಯ 30 ದಿನಗಳೊಳಗಾಗಿ ಆಸಕ್ತಿಯನ್ನು ತೋರ್ಪಡಿಸತಕ್ಕದ್ದು.

ಭೂ ಮಾಲೀಕರು / ಆಸಕ್ತ ವ್ಯಕ್ತಿಗಳು ಹಾಜರಾಗಿ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್‌ಎಕ್ಯೂ & ಟಿಡಿಆರ್) ಕೊಠಡಿ ಸಂ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು–560002	ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ, ಯಲಹಂಕ ವಿಭಾಗ, ಬೃಬೆಂ.ಮ.ಪಾಲಿಕೆ	ಪ್ರಕಟಣೆಯ ದಿನಾಂಕದಿಂದ 30 ದಿನಗಳು ಸಮಯ: ಬೆಳಿಗ್ಗೆ 10:00 ರಿಂದ ಸಂಜೆ 5.00 ಗಂಟೆಯವರೆಗೆ

ಅನುಸೂಚಿತ ಸ್ವತ್ತುಗಳಂತೆ ಯಾರ ಸ್ವತ್ತುಗಳು ಸ್ವಾಧೀನಕೊಳ್ಳಪಡುತ್ತವೋ ಅಂತಹ ಸ್ವತ್ತಿನ ಮಾಲೀಕರು/ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಒಪ್ಪಿಗೆ ನೀಡತಕ್ಕದ್ದು.

ಸೌಲಭ್ಯ ಹಕ್ಕುಗಳ ಪ್ರಯೋ ನಿಯಮಗಳ ಕಾಯ್ದೆ – 2016ರಂತೆ ಸ್ವಾಧೀನಕ್ಕೊಳಪಡಿವ ಭೂಮಿಗಳ ಷೆಡ್ಯೂಲ್ ಸ್ವತ್ತುಗಳ ಭೂ ಮಾಲೀಕರು / ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಒಂದು ಬಾರಿ ಕಟ್ಟಡ ಪ್ರದೇಶವನ್ನು ಒಪ್ಪಿಸಿದ ಮೇಲೆ ಒಪ್ಪಿಸಲಾದ ಕಟ್ಟಡ ಪ್ರದೇಶದ ಮೌಲ್ಯದ ಅಂದಾಜಿನಂತೆ ಪ್ರದೇಶದ ಮಾರುಕಟ್ಟೆ ಮೌಲ್ಯವನ್ನು ಭಾಗಿಸಿದಾಗ ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಪಡೆಯುತ್ತಾರೆ. ಮೂಲಕ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನ ಮಾಡುವುದರೊಂದಿಗೆ ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾದ ಭೂಮಿಯು ಎಫ್‌ಎಆರ್‌ಗೆ ಅರ್ಹವಾಗಿದ್ದು, ನಿಯಮಗಳಲ್ಲಿ ತಿಳಿಸಿರುವ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಟಪ್ ಪ್ರದೇಶವಾಗಿ ಬಳಸಬಹುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೆ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಡೆಪ್ಯೂಟಿ ಕಮೀಷನರ್‌ರವರ ಕಚೇರಿ (ಎಲ್‌ಎಕ್ಯೂ & ಟಿಡಿಆರ್), ಬೃ.ಬೆಂ.ಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

"ಆರ್‌ಎಂಪಿ 2015ರಂತೆ ಅಂಕಮ್ಮ ಬಡಾವಣೆ ಮುಖ್ಯ ರಸ್ತೆಗಾಗಿ (30.00 ಮೀಟರ್ ಅಗಲದ ಗ್ಯಾಸ್ ಪೈಪ್ ಲೈನ್ ರಸ್ತೆ) ಅಂಭಾಭವಾನಿ ದೇವಸ್ಥಾನದ ರಸ್ತೆಯಿಂದ ಬೃಬೆಂಮಪಾ ಮಿತಿವರೆಗೆ 30.00 ಮೀಟರ್ ಅಗಲದ ರಸ್ತೆಯ ಅಗಲೀಕರಣ ಮತ್ತು ರಚನೆ ಮಾಡುವ ಕಾಮಗಾರಿಗಾಗಿ ಅವಶ್ಯಕವಿರುವ ಭೂಸ್ವಾಧೀನ ಪ್ರಕ್ರಿಯೆ.

ಜಿಲ್ಲೆಯ ಹೆಸರು: ಬೆಂಗಳೂರು ನಗರ | ತಾಲ್ಲೂಕಿನ ಹೆಸರು: ಯಲಹಂಕ | ಗ್ರಾಮದ ಹೆಸರು: ದೊಡ್ಡಬೆಟ್ಟಹಳ್ಳಿ ಗ್ರಾಮ

Sl. No.	Sy. No/ Khatha No.	Type of land		Nature of Land			Dimension of the land / plot & Extent in Sq.m.		Boundaries of the land / plot				Building Details			Present activity on land/Building (Specify Specific activity such as shop, office. factory apartment, individual house etc.	Market (guidelines) value of the land per Sq.m.			Name and address of the owner of the plot / land for which DRC is to be issued
		Vacant	Built up	Agriculture	Converted undeveloped	Approved Layout/ developed Land Building Site	Dimension	Extent	North	South	East	West	Extent in Sq.m	Type of Construction and No. of floors	Floor area Ratio		Agriculture/B-Khatha	Converted Undeloped	A Khatha, Developed Site	
1	ಸರ್ವೆ ಸಂ. 13/10	ಖಾಲಿ ಜಾಗ					1725.91	ಚಮೀ	ಸರ್ವೆ ಸಂ.13/10ರ ಉಳಿದ ಭಾಗ	ಸರ್ವೆ ಸಂ.13/10ರ ಉಳಿದ ಭಾಗ	ರಸ್ತೆ	ಸರ್ವೆ ಸಂ. 13/3					6,523.00/–	30,800.00/–	44,000.00/–	ಬಿ ಎಂ ನಾರಾಯಣಸ್ವಾಮಿ
2	ಸರ್ವೆ ಸಂ. 13/3	ಖಾಲಿ ಜಾಗ					2836.64	ಚಮೀ	ಸರ್ವೆ ಸಂ.13/3 ರ ಉಳಿದ ಭಾಗ	ಸರ್ವೆ ಸಂ. 13/3 & ಸರ್ವೆ ಸಂ. 13/4 ರ ಉಳಿದ ಭಾಗ	ಸರ್ವೆ ಸಂ. 13/10	ಸರ್ವೆ ಸಂ. 13/1, 13/11 & 13/7					6,523.00/–	30,800.00/–	44,000.00/–	ಬಿ ಎಂ ನಾರಾಯಣಸ್ವಾಮಿ
3	ಸರ್ವೆ ಸಂ. 13/4	ಖಾಲಿ ಜಾಗ					189.78	ಚಮೀ	ಸರ್ವೆ ಸಂ. 13/3	ಸರ್ವೆ ಸಂ.13/4 ರ ಉಳಿದ ಭಾಗ	ಸರ್ವೆ ಸಂ. 13/3	ಸರ್ವೆ ಸಂ. 13/7					6,523.00/–	30,800.00/–	44,000.00/–	ಶೇಷರಾವ್ ಇ ಶಿಂಗಾಟ್
4	ಸರ್ವೆ ಸಂ. 13/7	ಖಾಲಿ ಜಾಗ					1573.70	ಚಮೀ	ಸರ್ವೆ ಸಂ. 13/11	ಸರ್ವೆ ಸಂ.13/7 ರ ಉಳಿದ ಭಾಗ	ಸರ್ವೆ ಸಂ. 13/4	ವಡೇರಹಳ್ಳಿ ಗ್ರಾಮದ ಗಡಿ					6,523.00/–	30,800.00/–	44,000.00/–	ತ್ಯಾಗುರ ಸುರೇಶ್‌ರೆಡ್ಡಿ ಮತ್ತು ಇತರರು
5	ಸರ್ವೆ ಸಂ. 13/1	ಖಾಲಿ ಜಾಗ					1177.53	ಚಮೀ	ಸರ್ವೆ ಸಂ. 13/1 & ಸರ್ವೆ ಸಂ. 13/2 ರ ಉಳಿದ ಭಾಗ	ಸರ್ವೆ ಸಂ. 13/11 & ಸರ್ವೆ ಸಂ. 13/10	ಸರ್ವೆ ಸಂ. 13/3 & ರಸ್ತೆ	ವಡೇರಹಳ್ಳಿ ಗ್ರಾಮದ ಗಡಿ & ಸರ್ವೆ ಸಂ. 13/1 ರ ಉಳಿದ ಭಾಗ					6,523.00/–	30,800.00/–	44,000.00/–	ಎನ್ ಎ ನಾಗರಾಜು ಮತ್ತು ಇತರರು
6	ಸರ್ವೆ ಸಂ. 13/11	ಖಾಲಿ ಜಾಗ					1416.38	ಚಮೀ	ಸರ್ವೆ ಸಂ. 13/1	ಸರ್ವೆ ಸಂ. 13/7	ಸರ್ವೆ ಸಂ. 13/3	ವಡೇರಹಳ್ಳಿ ಗ್ರಾಮದ ಗಡಿ					6,523.00/–	30,800.00/–	44,000.00/–	ಬಿ ಎಂ ನಾರಾಯಣಸ್ವಾಮಿ
ಒಟ್ಟಾರೆ ಸ್ವಾಧೀನ ಪಡಿಸಿಕೊಳ್ಳಬೇಕಾದ ವಿಸ್ತೀರ್ಣ (ಚ.ಮೀಗಳಲ್ಲಿ)							8,919.94													

ಮಾರುಕಟ್ಟೆ ಮೌಲ್ಯವು ಸ್ವತ್ತಿನ ಪರಿವರ್ತನೆ ಮತ್ತು ಅಭಿವೃದ್ಧಿಯ ಸ್ಥಿತ್ಯಂತರದ ಮೇಲೆ ನಮೂನೆ–3 ರ ಆಧಾರದಲ್ಲಿ ಸ್ವತ್ತಿನ ಮಾಲೀಕರು ಹಾಜರು ಪಡಿಸುವ ದಸ್ತಾವೇಜುಗಳ ಮೇಲೆ ನಿರ್ಧರಿಸಲಾಗುವುದು.

- ಕಟ್ಟಡದ ವಿಸ್ತೀರ್ಣವನ್ನು ಅಭಿವೃದ್ಧಿ ಹಕ್ಕುಗಳ ನಿಯಮಗಳು 2016ರ ನಗರ ಮತ್ತು ಪಟ್ಟಣ ಯೋಜನೆ, ಸೌಲಭ್ಯಗಳ ಆಧಾರದಲ್ಲಿ ನಮೂನೆ–3 ಸಾರ್ವಜನಿಕ ನೋಟೀಸ್ ಹಂತದಲ್ಲಿ ಪರಿವೀಕ್ಷಿಸಲಾಗುವುದು.

ಸಹಿ/– ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದಾಗ ದುಷ್ಕರ್ಮಿಗಳಿಂದ ನಡೆದ ಕೃತ್ಯ

ಐಟಿಸಿ ಕಾರ್ಖಾನೆ ಉದ್ಯೋಗಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿರುವ ಘಟನೆ ಪುಲಕೇಶಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡಗುಂಟೆಯಲ್ಲಿ ಬುಧವಾರ ನಡೆದಿದೆ.

ಬಾಣಸವಾಡಿ ನಿವಾಸಿ ಅಜಿತ್ (35) ಕೊಲೆಯಾದವರು.

'ಅಜಿತ್ ಅವರು ಐಟಿಸಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ಬೆಳಿಗ್ಗೆ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ನಾಲ್ಕೈದು ಜನರಿದ್ದ ದುಷ್ಕರ್ಮಿಗಳ ತಂಡ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಿದೆ' ಎಂದು ಪೊಲೀಸರು ತಿಳಿಸಿದರು.

'ಅಜಿತ್ ಅವರು ಬಹಳಷ್ಟು ಜನರ ಬಳಿ ಬಡ್ಡಿಗೆ ಹಣ ಪಡೆದು ವಾಪಸ್ ಕೊಡದೇ ಸತಾಯಿಸುತ್ತಿದ್ದರು. ಇದೇ ಕಾರಣಕ್ಕೆ ಕೊಲೆಯಾಗಿರುವ ಶಂಕೆ ವ್ಯಕ್ತವಾಗಿದೆ' ಎಂದು ಹೇಳಿದರು.

ಘಟನಾ ಸ್ಥಳಕ್ಕೆ ಪುಲಕೇಶಿನಗರ ಠಾಣೆಯ ಪೊಲೀಸರು ಭೇಟಿ ನೀಡಿದ್ದು, 'ಕೊಲೆಯಾಗಿರುವ ಸ್ಥಳದ ಅಕ್ಕಪಕ್ಕದ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಬಗ್ಗೆ ಕೊಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಶೋಧ ಕಾರ್ಯ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಯುವತಿ ಸಾವು: ಪ್ರಕರಣ ದಾಖಲು

ಅಪರಾಧ ಸುದ್ದಿ

ಬೆಂಗಳೂರು: ಯುವತಿಯೊಬ್ಬಳು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ಬಾಗಲಗುಂಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಮೃತ ಯುವತಿಯನ್ನು ದಾಸರಹಳ್ಳಿಯ ನಿವಾಸಿ ಶ್ರಾವಣಿ (23) ಎಂದು ಗುರುತಿಸಲಾಗಿದೆ. ಶ್ರಾವಣಿ ಅವರು ದಾವಣಗೆರೆ ಜಿಲ್ಲೆಯವರಾಗಿದ್ದಾರೆ. ಎರಡು ದಿನಗಳ ಹಿಂದೆ ಘಟನೆ ನಡೆದಿದ್ದು, ಈ ಬಗ್ಗೆ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾಗಲಗುಂಟೆ ಪೊಲೀಸ್ ಠಾಣೆ ವ್ಯಾಪ್ತಿಯ 8ನೇ ಮೈಲಿಯಲ್ಲಿರುವ ಗೋಲ್ಡನ್ ಜಿಮ್‌ನಲ್ಲಿ ಶ್ರಾವಣಿ ಅವರು ಸ್ವಾಗತಿಕಾರಣಿಯಾಗಿ ಕೆಲಸ ಮಾಡುತ್ತಿದ್ದರು. ಸೋಮವಾರ ಬೆಳಿಗ್ಗೆ ಎಂದಿನಂತೆ ಕೆಲಸಕ್ಕೆ ತೆರಳಿದ್ದ ಅವರು, ಜಿಮ್‌ಗೆ ಬಂದ ಸ್ವಲ್ಪ ಸಮಯದಲ್ಲಿ ಅಸ್ವಸ್ಥರಾಗಿ ವಾಂತಿ ಮಾಡಿಕೊಳ್ಳಲು ಪ್ರಾರಂಭಿಸಿದರು. ಜಿಮ್‌ನಲ್ಲಿದ್ದ ಸಿಬ್ಬಂದಿ ಶ್ರಾವಣಿ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದರು. ಆದರೆ, ಅವರು ಆಸ್ಪತ್ರೆಯಲ್ಲಿಯೇ ಮೃತಪಟ್ಟರು' ಎಂದರು.

'ಇತ್ತೀಚೆಗೆ ಶ್ರಾವಣಿ ಅವರಿಗೆ ಮದುವೆ ಮಾಡಲು ಪೋಷಕರು ಸಿದ್ಧತೆ ನಡೆಸುತ್ತಿದ್ದರು. ಆದರೆ, ಅವರಿಗೆ ಮದುವೆ ಮಾಡಿಕೊಳ್ಳಲು ಇಷ್ಟವಿಲ್ಲದ ಕಾರಣ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪ್ರಾಥಮಿಕ ತನಿಖೆ ತಿಳಿದುಬಂದಿದೆ. ಈ ಬಗ್ಗೆ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಕಳಿಸಲಾಗಿದೆ' ಎಂದು ಹೇಳಿದರು.

ಸೆಕ್ಯೂರಿಟಿ ಗಾರ್ಡ್ ಹತ್ಯೆ: ಕಾಲೇಜು ವಿದ್ಯಾರ್ಥಿ ಬಂಧನ

ಜೈ ಕಿಶೋರ್ ರಾಯ್

ಭಾರ್ಗವ್

ಬೆಂಗಳೂರು: ಕಾಲೇಜಿನೊಳಗೆ ಪ್ರವೇಶಿಸುವ ವಿಚಾರದಲ್ಲಿ ವಿದ್ಯಾರ್ಥಿ ಮತ್ತು ಸೆಕ್ಯೂರಿಟಿ ಗಾರ್ಡ್ ಮಧ್ಯೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ. ಈ ಬಗ್ಗೆ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಅಮೃತಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕೆಂಪಾಪುರ ಸಿಂಧಿ ಕಾಲೇಜಿನ ಸೆಕ್ಯೂರಿಟಿ ಗಾರ್ಡ್ ಜೈ ಕಿಶೋರ್ ರಾಯ್ (52) ಕೊಲೆಯಾದವರು. ಆರೋಪಿ ಭಾರ್ಗವ್ (22) ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಭಾರ್ಗವ್ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದ. ಭಾರ್ಗವ್ ಕಾಲೇಜಿಗೆ ಮದ್ಯ ಸೇವಿಸಿ ಬಂದಿದ್ದ. ಆತ ಕಾಲೇಜಿನೊಳಕ್ಕೆ ಪ್ರವೇಶಿಸಲು ಜೈ ಕಿಶೋರ್ ರಾಯ್ ಅವಕಾಶ ನಿರಾಕರಿಸಿದ್ದರು. ಇದರಿಂದಾಗಿ ಇಬ್ಬರ ಮಧ್ಯೆ ಜಗಳ ಪ್ರಾರಂಭವಾಗಿತ್ತು. ಭಾರ್ಗವ್ ಪೇಯಿಂಗ್ ಗೆಸ್ಟ್‌ನಲ್ಲಿ (ಪಿಜಿ) ವಾಸವಾಗಿದ್ದ. ಕಾಲೇಜಿನೊಳಗೆ ಬಿಡದಿದ್ದಾಗ ಸಿಟ್ಟಿಗೆದ್ದ ಭಾರ್ಗವ್ ಅಂಗಡಿಗೆ ಹೋಗಿ ಚಾಕು ತಂದು ಜೈ ಕಿಶೋರ್ ರಾಯ್ ಅವರಿಗೆ ಇರಿದು ಕೊಲೆ ಮಾಡಿದ್ದಾನೆ' ಎಂದು ಹೇಳಿದರು.

'ಭಾರ್ಗವ್‌ನನ್ನು ಬಂಧಿಸಿ ತನಿಖೆ ಮುಂದುವರೆಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಹನಗಳಲ್ಲಿ ಕಣ್ಣು ಕುಕ್ಕುವ ದೀಪ: 266 ಪ್ರಕರಣ ದಾಖಲು

ಬೆಂಗಳೂರು: ವಾಹನಗಳಿಗೆ ಕಣ್ಣು ಕುಕ್ಕುವ ಎಲ್‌ಇಡಿ ದೀಪಗಳನ್ನು ಅಳವಡಿಸಿಕೊಂಡಿದ್ದ 266 ಪ್ರಕರಣಗಳನ್ನು ಮಂಗಳವಾರ ರಾತ್ರಿ ಪೊಲೀಸರು ಪತ್ತೆಹಚ್ಚಿದ್ದಾರೆ.

ಪಶ್ಚಿಮ ಸಂಚಾರ ವಿಭಾಗದ ಪೊಲೀಸರು ಕೇಂದ್ರ ಮೋಟರು ವಾಹನ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎಂದು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಅನಿತಾ ಬಿ. ಹದ್ದಣ್ಣವರ್ ತಿಳಿಸಿದ್ದಾರೆ.

ಅಪಘಾತ ತಡೆಗಟ್ಟಲು ಪಶ್ಚಿಮ ಸಂಚಾರ ವಿಭಾಗದ ಎಲ್ಲ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಜುಲೈ 1ರಿಂದ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

6 ವರ್ಷದ ಬಾಲಕಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಸುಮಾರು 6 ವರ್ಷದ ಹೆಣ್ಣು ಮಗುವಿನ ಮೃತದೇಹ ಬುಧವಾರ ಪತ್ತೆಯಾಗಿದೆ. ಬೇರೆಲ್ಲೋ ಕೊಲೆ ಮಾಡಿ ಇಲ್ಲಿ ಬಿಸಾಡಿರಬೇಕು ಎಂದು ರೈಲ್ವೆ ಎಸ್‌ಪಿ ಶಂಕೆ ವ್ಯಕ್ತಪಡಿಸಿದ್ದಾರೆ.

ರೈಲ್ವೆ ಸಿಬ್ಬಂದಿ ನೀಡಿದ ಮಾಹಿತಿಯಂತೆ ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೇರೆ ಯಾವುದೋ ಸ್ಥಳದಲ್ಲಿ ಹತ್ಯೆಗೈದು ಮೃತದೇಹವನ್ನು ತಂದು ಎಸೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸ್ಥಳಕ್ಕೆ ಎಫ್‌ಎಸ್‌ಎಲ್ ತಂಡ ಭೇಟಿ ನೀಡಿದೆ.

'ಭಿಕ್ಷಾಟನೆ ಮಾಡುವ ಕುಟುಂಬವೊಂದು ಈ ಪ್ರದೇಶದಲ್ಲಿದ್ದಿದ್ದನ್ನು ನೋಡಿದವರಿದ್ದಾರೆ. ಹಾಗಾಗಿ ಅವರನ್ನು ಕೂಡ ವಿಚಾರಣೆ ಮಾಡಲಾಗುವುದು. ಬಾಲಕಿ ಯಾರು? ಯಾಕೆ ಕೊಲೆ ಮಾಡಲಾಗಿದೆ ಎಂಬುದು ತನಿಖೆಯ ಬಳಿಕ ತಿಳಿಯಲಿದೆ. ಮೈಮೇಲೆ ಗಾಯಗಳಿವೆ. ಲೈಂಗಿಕ ದೌರ್ಜನ್ಯ ಎಸಗಲಾಗಿದೆಯೇ ಎಂಬುದು ಮರಣೋತ್ತರ ಪರೀಕ್ಷೆಯ ವರದಿ ಬಂದ ಮೇಲೆ ಗೊತ್ತಾಗಲಿದೆ. ಬೆಂಗಳೂರು ಕೇಂದ್ರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದೇವೆ' ಎಂದು ರೈಲ್ವೆ ಎಸ್‌ಪಿ ಡಾ. ಸೌಮ್ಯಲತಾ ಎಸ್.ಕೆ. ಮಾಹಿತಿ ನೀಡಿದರು.

'ಪಾರ್ಕಿಂಗ್ ಪ್ರದೇಶ, ಪ್ಲಾಟ್‌ಫಾರ್ಮ್, ರೈಲು ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆಗಳಲ್ಲಿ ಇರುವ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದೇವೆ' ಎಂದು ತಿಳಿಸಿದರು.

ಯುವತಿ, ವಿವಾಹಿತ ಪುರುಷ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೇಮಿಗಳಾಗಿದ್ದ ಯುವತಿ ಮತ್ತು ವಿವಾಹಿತ ಪುರುಷ ನೈಸ್ ರಸ್ತೆಯ ಅಂಜನಾಪುರದ ತುಳಸಿಪುರ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶ್ರೀಕಾಂತ್ (25), ಅಂಜನಾ (20) ಆತ್ಮಹತ್ಯೆ ಮಾಡಿಕೊಂಡವರು.

ಪ್ರೇಮ ಪ್ರಸಂಗ

'ಮಂಗಳವಾರ ಸಂಜೆ ಕೆರೆಯಲ್ಲಿ ಇವರ ಮೃತದೇಹಗಳು ಪತ್ತೆಯಾಗಿವೆ. ಶ್ರೀಕಾಂತ್ ಬಿ.ಕಾಂ ವ್ಯಾಸಂಗ ಮಾಡುತ್ತಿದ್ದರು, ಅಂಜನಾ ಬಿಬಿಎ ಕಲಿಯುತ್ತಿದ್ದರು. ಶ್ರೀಕಾಂತ್ ಅವರಿಗೆ ಈಗಾಗಲೇ ಮದುವೆ ಆಗಿದೆ. ಆದರೂ ಅವರು ಅಂಜನಾಳನ್ನು ಪ್ರೀತಿಸುತ್ತಿದ್ದರು. ಇಬ್ಬರೂ ಒಟ್ಟಿಗೆ ಜೀವನ ನಡೆಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಂಜನಾ ಹಾಗೂ ಶ್ರೀಕಾಂತ್ ಆಟೊದಲ್ಲಿ ಅಂಜನಾಪುರದ ಕೆರೆ ಬಳಿಗೆ ಬಂದು, 'ನಮ್ಮ ಸಾವಿಗೆ ಯಾರೂ ಕಾರಣರಲ್ಲ, ನಾವು ಒಟ್ಟಿಗೆ ಬದುಕಲು ಆಗದೆ ಸಾಯುತ್ತಿದ್ದೇವೆ' ಎಂದು ಮೊಬೈಲ್‌ನಲ್ಲಿ ವಿಡಿಯೊ ಮಾಡಿ ಅದನ್ನು ಆಟೊದಲ್ಲಿಯೇ ಇರಿಸಿದ್ದರು.

ನಂತರ ಇಬ್ಬರೂ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶ್ರೀಕಾಂತ್ ಹಾಗೂ ಅಂಜನಾ ಕಾಣೆಯಾಗಿರುವ ಬಗ್ಗೆ ಎರಡು ದಿನಗಳ ಹಿಂದೆಯೇ ಕೋಣನಕುಂಟೆ ಹಾಗೂ ತಲಘಟ್ಟಪುರ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಾಗಿತ್ತು. ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಕಿಮ್ಸ್ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರೇಮಿಗಳಿಗಾಗಿ ವಿಚ್ಛೇದನಕ್ಕೆ ಒಪ್ಪಿದ್ದ ಪತ್ನಿ: ಶ್ರೀಕಾಂತ್ ಎರಡು ವರ್ಷಗಳ ಹಿಂದೆ ಮದುವೆ ಆಗಿದ್ದರು. ಮದುವೆಯ ನಂತರವೂ ಕಾಲೇಜು ಓದನ್ನು ಮುಂದುವರಿಸಿದ್ದರು. ಅಲ್ಲಿಯೇ ಅಧ್ಯಯನ ಮಾಡುತ್ತಿದ್ದ ಅಂಜನಾರನ್ನು ಪ್ರೀತಿಸುತ್ತಿರುವ ಬಗ್ಗೆ ಮನೆಯಲ್ಲಿ ಪ್ರಸ್ತಾಪಿಸಿದ್ದರು. 'ಅಂಜನಾ ಇಲ್ಲದಿದ್ದರೆ ಬದುಕುವುದಿಲ್ಲ' ಎಂದು ಹೇಳಿದ್ದರು. ಇದಕ್ಕೆ ಅವರ ಪತ್ನಿ, 'ನೀವು ಸಾಯುವುದು ಬೇಡ, ನಾನೇ ವಿಚ್ಛೇದನ ನೀಡುತ್ತೇನೆ. ನೀವಿಬ್ಬರೂ ಮದುವೆಯಾಗಬಹುದು' ಎಂದು ಪ್ರತಿಕ್ರಿಯಿಸಿದ್ದರು. ಆದರೂ ಶ್ರೀಕಾಂತ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಅಂಜನಾಪುರ ಕೆರೆಯಲ್ಲಿ ಇಬ್ಬರ ಮೃತದೇಹಗಳು ಪತ್ತೆಯಾಗಿವೆ. ಕುಟುಂಬಸ್ಥರ ದೂರಿನ ಮೇರೆಗೆ ಎರಡು ಪ್ರತ್ಯೇಕ ಅಸಹಜ ಸಾವು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಇಬ್ಬರೂ ಸ್ನೇಹಿತರಾಗಿದ್ದು, ಒಟ್ಟಿಗೆ ಓಡಾಡಿಕೊಂಡಿದ್ದರು. ಇಬ್ಬರಲ್ಲಿ ಒಬ್ಬರಿಗೆ ಮದುವೆಯಾಗಿರುವುದರಿಂದ ಮುಂದೆ ಒಟ್ಟಿಗೆ ಇರಲು ಸಾಧ್ಯವಿಲ್ಲವೆಂದು ಬೇಸತ್ತು ಜೀವ ಕಳೆದುಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಬೆಂಗಳೂರು ದಕ್ಷಿಣ ವಿಭಾಗ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದ್ದಾರೆ.

ವೆಂಕಟಮ್ಮನಹಳ್ಳಿ ಪೊಲೀಸ್ ಹತ್ಯಾಕಾಂಡ: ಮಾಜಿ ನಕ್ಸಲ್ ಬಂಧನ

ಪ್ರಜಾವಾಣಿ ವಾರ್ತೆ

ಚಂದ್ರ

ಪಾವಗಡ (ತುಮಕೂರು): ತಾಲ್ಲೂಕಿನ ನಾಗಲಮಡಿಕೆ ಹೋಬಳಿ ವೆಂಕಟಮ್ಮನಹಳ್ಳಿಯಲ್ಲಿ 2005ರಲ್ಲಿ ನಡೆದ ಏಳು ಪೊಲೀಸರ ಹತ್ಯಾಕಾಂಡದ ಆರೋಪಿ, ಮಾಜಿ ನಕ್ಸಲ್ ಚಂದ್ರ ಅಲಿಯಾಸ್ ಬಿ.ಮುತ್ಯಾಲು (36) ಎಂಬುವವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

2005ರ ಫೆಬ್ರುವರಿ 10ರಂದು ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲರು ದಾಳಿ ನಡೆಸಿ ಏಳು ಪೊಲೀಸರನ್ನು ಹತ್ಯೆ ಮಾಡಿದ್ದು ದೊಡ್ಡ ಸುದ್ದಿಯಾಗಿತ್ತು. ಘಟನೆ ನಡೆದ ನಂತರ ತಲೆ ಮರೆಸಿಕೊಂಡಿದ್ದ ಆರೋಪಿ ವಿರುದ್ಧಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಹೊರಡಿಸಿತ್ತು.

ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಆರೋಪಿಯನ್ನು ಘಟನೆ ನಡೆದು ಒಂದೂವರೆ ದಶಕದ ಬಳಿಕ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಆರೋಪಿಯು ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆಯ ಗಾರಲದಿನ್ನೆ ಮಂಡಲಂ ಕೇಶವಾಪುರಂ ಗ್ರಾಮದ ನಿವಾಸಿ.

ಹಿನ್ನೆಲೆ: ವೆಂಕಟಮ್ಮನಹಳ್ಳಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಭದ್ರತಾ ದೃಷ್ಟಿಯಿಂದ ನಿಯೋಜಿಸಿದ್ದ ಕೆಎಸ್‌ಆರ್‌ಪಿ 9ನೇ ಕ್ಯಾಂಪ್‌ನ ಮೇಲೆ ಸುಮಾರು 300ಕ್ಕೂ ಹೆಚ್ಚು ನಕ್ಸಲರ ತಂಡ ಏಕಾಏಕಿ ದಾಳಿ ನಡೆಸಿತ್ತು.

ಲಾರಿಗಳಲ್ಲಿ ಬಂದಿದ್ದ ನಕ್ಸಲರು ಒಮ್ಮೆಲೆ ದಾಳಿ ನಡೆಸಿ ಪೊಲೀಸರ ಬಳಿ ಇದ್ದ ಬಂದೂಕು, ಮದ್ದು ಗುಂಡುಗಳನ್ನು ದೋಚಿದ್ದರು. ನಂತರ ಮನ ಬಂದಂತೆ ಗುಂಡು ಹಾರಿಸಿದ್ದರು. ಇದರಲ್ಲಿ ಒಬ್ಬ ಸಾರ್ವಜನಿಕ ಹಾಗೂ ಏಳು ಪೊಲೀಸರು ಮೃತಪಟ್ಟಿದ್ದರು. ತಿರುಮಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸಾಣೇಹಳ್ಳಿ ಶ್ರೀ ಸೇರಿದಂತೆ ಮೂವರಿಗೆ ಗೌರವ

ಫ.ಗು.ಹಳಕಟ್ಟಿ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಪ್ರಭಾಕರ ಕೋರೆ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮತ್ತು ತೇಜಸ್ವಿನಿ ಅನಂತಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಡಾ. ಮನುಬಳಿಗಾರ್, ಕಾನೂನು ಸಚಿವ ಎಚ್‌.ಕೆ ಪಾಟೀಲ, ಫೌಂಡೇಶನ್ ಸ್ಥಾಪಕ ಟ್ರಸ್ಟಿ ಪವಿತ್ರಾ ಹಳಕಟ್ಟಿ ಮತ್ತು ಟ್ರಸ್ಟಿ ಶೀಲಾ ಹಳಕಟ್ಟಿ ಇದ್ದರು
—ಪ್ರಜಾವಾಣಿ ಚಿತ್ರ

ಬೆಂಗಳೂರು: 'ಫ.ಗು.ಹಳಕಟ್ಟಿ ಅವರನ್ನು ಒಬ್ಬ ಶ್ರೇಷ್ಠ ಸಾಹಿತಿ, ವಚನ ಪಿತಾಮಹ ಎಂದು ಇವತ್ತು ಗುರುತಿಸುತ್ತಿದ್ದೇವೆ. ಆದರೆ ಆಗ ಅವರು ಅನುಭವಿಸಿದ್ದಂತಹ ಯಾತನೆಗಳನ್ನು ಗಮನಿಸಿದವರು ಕಡಿಮೆ' ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಫ.ಗು.ಹಳಕಟ್ಟಿ ಪ್ರತಿಷ್ಠಾನವು ಬೆಂಗಳೂರಿನ ಗಾಂಧಿ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವಚನ ಪಿತಾಮಹ ಫ.ಗು. ಹಳಕಟ್ಟಿ ರಾಷ್ಟ್ರೀಯ ಪ್ರಶಸ್ತಿ'ಯನ್ನು ಸ್ವೀಕರಿಸಿ ಅವರು ಮಾತನಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ಕೆಎಲ್‌ಇ ಸಂಸ್ಥೆಗಳ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಅದಮ್ಯ ಚೇತನ ಸಂಸ್ಥೆಯ ಮೂಲಕ ನಡೆಸುತ್ತಿರುವ ಅನ್ನದಾಸೋಹ ಕಾರ್ಯಕ್ರಮಕ್ಕಾಗಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಈ ಸಾಲಿನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ ₹1 ಲಕ್ಷ ಒಳಗೊಂಡಿದೆ.

'ವಕೀಲರಾಗಿದ್ದ ಹಳಕಟ್ಟಿ ಅವರು ವಚನಗಳ ಸಂಗ್ರಹ ಮತ್ತು ಪರಿಷ್ಕರಣೆಗೆ ತಮ್ಮ ಕುಟುಂಬ, ವೈಯಕ್ತಿಕ ಜೀವನವನ್ನು ಮುಡಿಪಾಗಿಟ್ಟರು. ವಚನಗಳ ಸಂಗ್ರಹವನ್ನು ಪ್ರಕಟಿಸಲು ಮನೆಯನ್ನು ಮಾರಿ, ಮುದ್ರಣಾಲಯ ಆರಂಭಿಸಿದರು. ಹೀಗೆ ಬಡತನವನ್ನು ಅವರೇ ಆಹ್ವಾನಿಸಿಕೊಂಡಿದ್ದರು. ಅವರ ಕೆಲಸವನ್ನು ಮೆಚ್ಚಿ ಗೌರವಿಸುವವರು ಹಲವರಿದ್ದರು. ಆದರೆ ಅವರ ನೋವುಗಳನ್ನು ನಿವಾರಣೆ ಮಾಡುವಂತಹ ವ್ಯಕ್ತಿಗಳು ತುಂಬಾ ಕಡಿಮೆ ಇದ್ದರು' ಎಂದು ಅವರು ನೆನಪಿಸಿಕೊಂಡರು.

ಪ್ರಭಾಕರ ಕೋರೆ ಅವರು ಮಾತನಾಡಿ, 'ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕದಲ್ಲಿ ಒಂದೆಡೆ ಬಿಜಾಪುರದ ಆದಿಲ್‌ಶಾಹಿಯ ಒತ್ತಡ, ಮತ್ತೊಂದೆಡೆ ಮರಾಠಿ ಪೇಶ್ವೆಗಳ ಒತ್ತಡದ ಕಾರಣದಿಂದ ಕನ್ನಡಕ್ಕೆ ಜಾಗ ಇಲ್ಲದಂತೆ ಮಾಡಿದ್ದವು. ಅಂತಹ ಸಂದರ್ಭದಲ್ಲಿ ಫ.ಗು.ಹಳಕಟ್ಟಿ ಅವರು ವಚನ ಸಾಹಿತ್ಯ ಕ್ಷೇತ್ರ ಮಾತ್ರವಲ್ಲದೇ, ಕನ್ನಡ ಶಾಲೆಗಳನ್ನು ಆರಂಭಿಸಿದರು. ಸಹಕಾರ ತತ್ವದಲ್ಲಿ ಬ್ಯಾಂಕ್ ಆರಂಭಿಸಿದರು. ಇಂದು ಅವರ ಹೆಸರಿನ ಪ್ರಶಸ್ತಿ ಸ್ವೀಕರಿಸಲು ಹೆಮ್ಮೆಯಾಗುತ್ತಿದೆ' ಎಂದರು.

ಪ್ರಬುದ್ಧಾ ಕೊಲೆ: ಸಿಐಡಿ ತನಿಖೆ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ದ್ವಿತೀಯ ಬಿಬಿಎ ವಿದ್ಯಾರ್ಥಿನಿ ಆರ್. ಪ್ರಬುದ್ಧಾ (20) ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿ ಅಧಿಕಾರಿಗಳು ಪ್ರಾರಂಭಿಸಿದ್ದಾರೆ. ಮಂಗಳವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ.

'ಸಿಐಡಿ ಎಸ್‌ಪಿ ವೆಂಕಟೇಶ್ ಅವರ ನೇತೃತ್ವದಲ್ಲಿ ಅಧಿಕಾರಿಗಳು ಬೃಂದಾವನ ಲೇಔಟ್‌ನ ಪ್ರಬುದ್ಧಾ ನಿವಾಸಕ್ಕೆ ತೆರಳಿ ಪರಿಶೀಲನೆ ನಡೆಸಿದರು. ಪ್ರಬುದ್ಧಾ ತಾಯಿ ಸಾಮಾಜಿಕ ಕಾರ್ಯಕರ್ತೆ ಕೆ.ಆರ್. ಸೌಮ್ಯಾ ಸೇರಿ ಹಲವರಿಂದ ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಸಾಮಾಜಿಕ ಕಾರ್ಯಕರ್ತೆ ಕೆ.ಆರ್.ಸೌಮ್ಯಾ ಅವರು ತಮ್ಮ ಮಗಳ ಸಾವಿನ ಪ್ರಕರಣವನ್ನು ಸಿಐಡಿಗೆ ಒಪ್ಪಿಸಲು ಕೋರಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದ್ದರು.

ಸಿದ್ದರಾಮಯ್ಯ ಅವರು ಈ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿದ್ದರು. ಅದರಂತೆ ಸಿಐಡಿ ಅಧಿಕಾರಿಗಳು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರಿಂದ ಪ್ರಕರಣದ ವರ್ಗಾವಣೆ ಪಡೆದು ತನಿಖೆ ಕೈಗೊಂಡಿದ್ದಾರೆ.

ಸುಧಾ ಓದಿ

ಅಗಲಿದ ಲೇಖಕಿಯ ಕೊಡುಗೆ ಸ್ಮರಿಸಿದ ಬರಗೂರು

ಕಮಲಾ ಹಂಪನಾ ನೆನಪಿನ ರಂಗವಲ್ಲಿ

ಪ್ರಜಾವಾಣಿ ವಾರ್ತೆ

ನುಡಿ ಗೌರವ

ಬೆಂಗಳೂರಿನಲ್ಲಿ ಬುಧವಾರ ನಡೆದ 'ಕಮಲಾ ಹಂಪನಾ ಗೌರವ ನುಡಿ ನಮನ' ಕಾರ್ಯಕ್ರಮದಲ್ಲಿ ಕಮಲಾ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಸಹಕಾರ ಸಚಿವ ಕೆ.ಎನ್‌. ರಾಜಣ್ಣ, ಕಮಲಾ ಅವರ ಪತಿ ಹಂಪ ನಾಗರಾಜಯ್ಯ, ಪುತ್ರಿಯರಾದ ಎಚ್‌.ಎನ್‌.ರಾಜ್ಯಶ್ರೀ ,ಎಚ್‌.ಎನ್‌.ಆರತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಸಾಹಿತಿ ಬರಗೂರು ರಾಮಚಂದ್ರಪ್ಪ ಭಾಗವಹಿಸಿದ್ದರು
– ಪ್ರಜಾವಾಣಿ ಚಿತ್ರ

ಬೆಂಗಳೂರು: 'ಕಮಲಾ ಹಂಪನಾ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಬಹುದೊಡ್ಡ ಕೊಡುಗೆ ನೀಡಿದ ಲೇಖಕಿ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಬಂಡಾಯ ಸಾಹಿತ್ಯ ಸಂಘಟನೆಯು ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಕಮಲಾ ಹಂಪನಾ ನುಡಿ ಗೌರವ' ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

'ಕಮಲಾ ಅವರು ಮಹಿಳೆಯರು, ತಳ ಸಮುದಾಯದವರಿಗೆ ಅನ್ಯಾಯವಾದಾಗ, ಅವರ ಪರ ದನಿ ಎತ್ತುತ್ತಿದ್ದರು. ಅವರ ಒತ್ತಾಯದಿಂದಲೇ ಸರ್ಕಾರ ದಾನಚಿಂತಾಮಣಿ ಅತ್ತಿಮಬ್ಬೆ ಹೆಸರಲ್ಲಿ ಲೇಖಕಿಯರಿಗಾಗಿ ಪ್ರಶಸ್ತಿ ಸ್ಥಾಪಿಸಿತು. ನಮ್ಮ ಕಾಲದಲ್ಲಿಯೂ ಪ್ರಸ್ತುತವಾಗುವಂತಹ ಆದರ್ಶವನ್ನು ಕಮಲಾ ಹಂಪನಾ ಕಟ್ಟಿಕೊಟ್ಟಿದ್ದರು. ಈ ದಂಪತಿ ಧರ್ಮ, ಜಾತಿಯ ಸಂಕೋಲೆಗಳನ್ನು ದಾಟಿ ಅನ್ಯೋನ್ಯವಾಗಿ ಬದುಕಿ ತೋರಿಸಿದರು' ಎಂದು ಬರಗೂರು ರಾಮಚಂದ್ರಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಮಾತನಾಡಿ, 'ಕಮಲಮ್ಮ ನಮ್ಮೂರಿನ ಮೊದಲ ಪದವೀಧರೆ. ಕಮಲಾ–ಹಂಪನಾ ಅವರದ್ದು ಆದರ್ಶದ ದಾಂಪತ್ಯ. ಅವರ ಸಂಸಾರದಲ್ಲಿ ಸಾಮರಸ್ಯ ಇತ್ತು' ಎಂದು ನೆನಪಿಸಿಕೊಂಡರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಮಾತನಾಡಿ, 'ಕಮಲಾ ಹಂಪನಾ ಅವರು, ಅಧ್ಯಾಪನ, ಅಧ್ಯಯನ ಮತ್ತು ಬರವಣಿಗೆಗಳ ತ್ರಿವೇಣಿ ಸಂಗಮವಾಗಿದ್ದರು. ಕನ್ನಡ ಮೇಷ್ಟ್ರುಗಳಿಗೆ ಸ್ಫೂರ್ತಿಯಾಗಿದ್ದ ಅವರು, ಬಹುದೊಡ್ಡ ಶಿಷ್ಯ ಬಳಗವನ್ನೇ ಹೊಂದಿದ್ದರು' ಎಂದು ಸ್ಮರಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಮಾತನಾಡಿ, 'ಅಧ್ಯಾಪನ, ಲೇಖನ, ಸಂಶೋಧನೆ ಸೇರಿ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ಕಮಲಾ ಅವರು, ಸೌಲಭ್ಯಗಳಿಲ್ಲದ ಕಾಲದಲ್ಲಿ ಶಾಸನ, ಇತಿಹಾಸ ಕುರಿತು ಗ್ರಂಥ ಸಂಪಾದನೆ ಮಾಡಿದ್ದರು' ಎಂದು ಹೇಳಿದರು.

ಶುದ್ಧ ಕುಡಿವ ನೀರು ಪೂರೈಸಿ: ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಾಗರಿಕರಿಗೆ ಶುದ್ಧ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಾಸವಾದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಅರಣ್ಯ ಇಲಾಖೆ ಆಯೋಜಿಸಿದ್ದ 'ಭೂ ಪರಿವರ್ತನೆ ಮತ್ತು ಒಣಭೂಮಿ ನಿರ್ವಹಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರೋಗ್ಯಕ್ಕೂ ನೈರ್ಮಲ್ಯಕ್ಕೂ ನೇರ ಸಂಬಂಧವಿದೆ. ಸ್ವಚ್ಛತೆ ಇದ್ದರೆ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯ. ರಾಜ್ಯದಲ್ಲಿ ಇತ್ತೀಚೆಗೆ ಕಲುಷಿತ ನೀರಿನಿಂದ ಅನಾಹುತಗಳಾಗುತ್ತಿವೆ. ಶುದ್ಧ ಕುಡಿಯುವ ನೀರಿನ ಪೂರೈಕೆ ಸರ್ಕಾರದ ಕರ್ತವ್ಯ ಎಂದರು.

ಡೆಂಗಿ ಪ್ರಕರಣಗಳೂ ಹೆಚ್ಚಾಗುತ್ತಿದ್ದು, ರೋಗ ನಿಯಂತ್ರಣಕ್ಕೆ ನಗರಪಾಲಿಕೆ, ಆರೋಗ್ಯ ಇಲಾಖೆ, ಪೌರಾಡಳಿತ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರೂ ಕೈಜೋಡಿಸಿ, ಸ್ವಚ್ಛತೆ ಕಾಪಾಡಿಕೊಂಡರೆ ರೋಗ ನಿರ್ಮೂಲನೆಯಾಗುತ್ತದೆ ಎಂದು ಹೇಳಿದರು.

'ನಿಸರ್ಗವನ್ನು ಪ್ರೀತಿಸುವ ಮನಸನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ನಿಸರ್ಗ ಕಾಪಾಡುವುದು ಕಷ್ಟವೇನಿಲ್ಲ. ಅದನ್ನು ಪ್ರೀತಿಸುವ ಪ್ರವೃತ್ತಿ ಅಗತ್ಯ. ಕಳೆದ 20 ವರ್ಷಗಳಲ್ಲಿ ಪ್ರವಾಹ ಹಾಗೂ ಬರಗಾಲವನ್ನು ನಾವು ಎದುರಿಸುತ್ತಿದ್ದು ಇದರ ಕಾರಣಗಳ ಬಗ್ಗೆ ಸಂಶೋಧನೆಗಳು ಅಗತ್ಯ. ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲು ಅರಣ್ಯ ಇಲಾಖೆ ಗಮನಹರಿಸಬೇಕು' ಎಂದು ಸೂಚಿಸಿದರು.

ಗುರಿ ಮೀರಿದ ಸಾಧನೆ: 'ರಾಜ್ಯದ ಹಸಿರು ವ್ಯಾಪ್ತಿ ಹೆಚ್ಚಿಸಲು ಕಳೆದ ವರ್ಷ 5 ಕೋಟಿ ಸಸಿ ನೆಡುವುದಾಗಿ ಘೋಷಣೆ ಮಾಡಲಾಗಿತ್ತು. ಅರಣ್ಯ ಇಲಾಖೆ 5.43 ಕೋಟಿ ಸಸಿ ನೆಟ್ಟು ಗುರಿ ಮೀರಿದ ಸಾಧನೆ ಮಾಡಿದೆ. ಆದರೆ, 'ಹೀಗೆ ನೆಟ್ಟ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ' ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ಈ ಬಗ್ಗೆ 'ಆಡಿಟ್ ರಿಪೋರ್ಟ್' ಅನ್ನು ಆಗಸ್ಟ್ ಅಂತ್ಯದೊಳಗೆ ತಯಾರಿಸಲಾಗುತ್ತದೆ. ಅಗತ್ಯ ಬಿದ್ದರೆ 'ಹೊರಗಿನವರಿಂದ ಪರಿಶೀಲನೆ'ಯನ್ನೂ ಮಾಡಿಸಲಾಗುವುದು' ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.

ಪ್ರತಿ ವರ್ಷ 5 ಕೋಟಿ ಸಸಿಯನ್ನು ನೆಟ್ಟು, ಮುಂದಿನ ಮೂರು ವರ್ಷದಲ್ಲಿ 15 ಕೋಟಿ ಸಸಿಗಳನ್ನು ನೆಡುವ ಮೂಲಕ ಶೇ 32ರಷ್ಟು ಹಸಿರು ಹೊದಿಕೆಯ ಗುರಿಯನ್ನು ಸಾಧಿಸಲಾಗುತ್ತದೆ ಎಂದರು.

'ವಿಶ್ವ ಪರಿಸರ ದಿನಾಚರಣೆ' ಕಾರ್ಯಕ್ರಮದಲ್ಲಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ರಮೇಶ್ ವೈ,ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ಸುಧೀರ ದೇವಣ್ಣ ನಾಯಕ, ರಾಯಚೂರು ಜಿಲ್ಲೆ ನೇತಾಜಿನಗರದ ಈರಣ್ಣ ಕೋಸಗಿ ಅವರಿಗೆ 2023–24ನೇ ಸಾಲಿನ ₹1 ಲಕ್ಷ ನಗದು ಒಳಗೊಂಡ 'ರಾಜ್ಯ ಪರಿಸರ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್, ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಮ್ ಖಾನ್ ಇದ್ದರು ಪ್ರಜಾವಾಣಿ ಚಿತ್ರ

ರಾಮನಗರ ಜಿಲ್ಲೆಯಲ್ಲಿ ನಿರ್ಮಾಣಕ್ಕೆ ಭೂಮಿ ಲಭ್ಯತೆ ಪರಿಶೀಲನೆ

ಮತ್ತೊಂದು ವಿಮಾನ ನಿಲ್ದಾಣ: ಚಿಂತನೆ

ಪ್ರಜಾವಾಣಿ ವಾರ್ತೆ

ರಾಮನಗರ: ರಾಜಧಾನಿ ಬೆಂಗಳೂರು ಹೊರವಲಯದ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ (ಕೆಐಎ) ಪರ್ಯಾಯವಾಗಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಮುಂದಾಗಿದೆ.

ತಮಿಳುನಾಡು ಸರ್ಕಾರ ಬೆಂಗಳೂರಿಗೆ ಹೊಂದಿಕೊಂಡಂತಿರುವ ಹೊಸೂರಿನಲ್ಲಿ ಹೊಸದಾಗಿ ವಿಮಾನ ನಿಲ್ದಾಣ ಸ್ಥಾಪಿಸುವ ನಿರ್ಧಾರ ಘೋಷಿಸಿದ ಬೆನ್ನಲ್ಲೇ ರಾಜ್ಯ ಇಂತಹದ್ದೊಂದು ಹೆಜ್ಜೆ ಇಟ್ಟಿದೆ. ಉನ್ನತ ಅಧಿಕಾರಿಗಳ ಸಭೆ ನಡೆಸಿರುವ ರಾಜ್ಯ ಕೈಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಬೆಂಗಳೂರು ಹೊರವಲಯದಲ್ಲಿ ನಿಲ್ದಾಣಕ್ಕೆ ಭೂಮಿ ಲಭ್ಯತೆ ಪರಿಶೀಲಿಸಿ ಕಾರ್ಯಸಾಧ್ಯತೆ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಹಾಗಾಗಿ, ರಾಜಧಾನಿಗೆ ಹೊಂದಿಕೊಂಡಂತಿರುವ ರಾಮನಗರ ಜಿಲ್ಲೆಯಲ್ಲಿ ಮತ್ತೊಂದು ನಿಲ್ದಾಣ ತಲೆ ಎತ್ತುವ ಸಾಧ್ಯತೆ ಹೆಚ್ಚಾಗಿದೆ.

ದಟ್ಟಣೆಗೆ ಪರಿಹಾರ: ದೇವನಹಳ್ಳಿಯಲ್ಲಿ 2008ರಲ್ಲಿ ಕಾರ್ಯಾರಂಭ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪ್ರತಿ ವರ್ಷ ಪ್ರಯಾಣಿಕರ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗುತ್ತಿದೆ. 4,700 ಎಕರೆಯಲ್ಲಿರುವ ನಿಲ್ದಾಣದಲ್ಲಿ ಸದ್ಯ ಎರಡು ಟರ್ಮಿನಲ್‌ಗಳಿದ್ದು, ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಲೇ ಹೋದರೆ ಮುಂದೆ ದಟ್ಟಣೆ ನಿರ್ವಹಣೆ ಸವಾಲಾಗಲಿದೆ. ಅದಕ್ಕಾಗಿ ಪರ್ಯಾಯವಾಗಿ ಮತ್ತೊಂದು ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಸೇರಿದಂತೆ ರಾಜಧಾನಿಯನ್ನು ತ್ವರಿತವಾಗಿ ತಲುಪಬಲ್ಲ ಸಂಪರ್ಕ ವ್ಯವಸ್ಥೆ ಇರುವ ಸ್ಥಳಗಳಲ್ಲಿ ಹೊಸ ನಿಲ್ದಾಣಕ್ಕಾಗಿ ಜಾಗ ಹುಡುಕಲಾಗುತ್ತಿದೆ. ಭೂಮಿ ಲಭ್ಯತೆ ಪರಿಶೀಲಿಸಿ ನಿಲ್ದಾಣದ ಕಾರ್ಯಸಾಧ್ಯತೆ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಸದ್ಯ ಬೆಂಗಳೂರಿಗೆ ಹೊಂದಿಕೊಂಡಂತಿರುವ ರಾಮನಗರ ಜಿಲ್ಲೆ ಹೊಸ ವಿಮಾನ ನಿಲ್ದಾಣಕ್ಕೆ ಪ್ರಶಸ್ತ ಜಾಗ ಎಂದು ಗುರುತಿಸಲಾಗಿದೆ. ಬೆಂಗಳೂರು–ಮೈಸೂರು ಮತ್ತು ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಗಳು ಜಿಲ್ಲೆಯ ವ್ಯಾಪ್ತಿಯಲ್ಲಿ ಹಾದು ಹೋಗುತ್ತವೆ.

ರಾಜಧಾನಿಗೆ ತ್ವರಿತ ರಸ್ತೆ ಸಂಪರ್ಕ ವ್ಯವಸ್ಥೆ ಹೊಂದಿರುವ ಮಾಗಡಿ ತಾಲ್ಲೂಕಿನ ಸೋಲೂರು ಸುತ್ತಮುತ್ತ, ಇಲ್ಲವೇ ರಾಮನಗರ ಅಥವಾ ಚನ್ನಪಟ್ಟಣದ ಆಚೆಗಿನ ಜಾಗವನ್ನು ಸಹ ನಿಲ್ದಾಣಕ್ಕೆ ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿಗೆ ಪರ್ಯಾಯವಾಗಿ ಮತ್ತೊಂದು ವಿಮಾನ ನಿಲ್ದಾಣವನ್ನು ಎಲ್ಲಿ ನಿರ್ಮಿಸಬಹುದು ಎಂಬುದರ ಕಾರ್ಯಸಾಧ್ಯತೆಯ ವರದಿಯನ್ನು ನೀಡುವಂತೆ ಸಚಿವರು ಸೂಚಿಸಿದ್ದಾರೆ. ನಿರ್ದಿಷ್ಟವಾಗಿ ತುಮಕೂರು ಮತ್ತು ರಾಮನಗರ ಎಂದು ಹೇಳಿಲ್ಲ

ಡಾ. ಎನ್. ಮಂಜುಳಾ, ಕಾರ್ಯದರ್ಶಿ, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ

2033ಕ್ಕೆ ಕಾಮಗಾರಿ ಪೂರ್ಣಕ್ಕೆ ಯೋಜನೆ

ನಿಲ್ದಾಣಗಳ ನಡುವಣ ಅಂತರವನ್ನು ಕಾರ್ಯಾಚರಣೆಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. 150 ಕಿ.ಮೀ. ಇರಲೇಬೇಕು ಎಂಬ ನಿಯಮವೇನಿಲ್ಲ. ಸದ್ಯ ರಾಜ್ಯದಲ್ಲಿರುವ ಕೆಲ ನಿಲ್ದಾಣಗಳು ಅಷ್ಟು ಅಂತರವಿಲ್ಲದೆ ಕಾರ್ಯಾಚರಣೆ ನಡೆಸುತ್ತಿವೆ.

ಪಿಪಿಪಿ (ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ) ಮಾದರಿಯ ಕೆಐಎ ನಿರ್ವಹಣೆ ಹೊಣೆ ಹೊತ್ತಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಬಿಐಎಎಲ್) ಒಪ್ಪಂದದ ಅವಧಿ 2033ಕ್ಕೆ ಅಂತ್ಯಗೊಳ್ಳಲಿದೆ. ಒಪ್ಪಂದದ ಅವಧಿ ಮುಗಿಯುವ ಹೊತ್ತಿಗೆ ರೂಪುರೇಷೆ ಸಿದ್ಧಪಡಿಸಿ ಹೊಸ ನಿಲ್ದಾಣ ನಿರ್ಮಿಸುವ ಆಲೋಚನೆ ಸರ್ಕಾರದ್ದಾಗಿದೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

3 ಸಾವಿರ ಎಕರೆ ಜಮೀನು ಗುರುತು

ತುಮಕೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತುಮಕೂರು ಜಿಲ್ಲೆಯಲ್ಲಿ ಮೂರು ಸಾವಿರ ಎಕರೆ ಜಮೀನು ಗುರುತಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ಕೊರಟಗೆರೆ, ಮಧುಗಿರಿ, ಶಿರಾ ತಾಲ್ಲೂಕಿನ ಮಧ್ಯ ಭಾಗದಲ್ಲಿ ಈ ಜಮೀನು ಗುರುತಿಸಲಾಗಿದೆ. ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಜಿಲ್ಲಾ ಮಟ್ಟದಲ್ಲಿ ನಿರ್ಧರಿಸಿದ ನಂತರ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಅಲ್ಲಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಕೊನೆಗೆ ನಾಗರಿಕ ವಿಮಾನಯಾನ ಸಚಿವಾಲಯ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಅವರು ತಿಳಿಸಿದ್ದಾರೆ.

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ,
ಡಿ.ದೇವರಾಜ ಅರಸು ಬಡಾವಣೆ, ಟಮಕ ಕೋಲಾರ –563103. ದೂರವಾಣಿ ಸಂಖ್ಯೆ:08152–243142,
ಇಮೇಲ್:kudakolar@gmail.com.

ಸಂಖ್ಯೆ: ಕೋನಪ್ರಾಕೋ:ಭೂಉಬ:ಪ:ಪ್ರಕಟಣೆ:18:2024–25 ದಿನಾಂಕ:29.06.2024

"ಸಾರ್ವಜನಿಕ ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ–1961ರ ಕಲಂ–14(ಎ) ರನ್ವಯ ಈ ಕೆಳಕಂಡ ಭೂಮಾಲೀಕರು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ (ಪ–1) (ಅಂತಿಮ) ಕಾಯ್ದಿರಿಸಿರುವ ಭೂ ಉಪಯೋಗ ಮಾಡುವ ಸಂಬಂಧ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. **ಹಾಗೂ** ಸದರಿ ಜಮೀನುಗಳಲ್ಲಿ **ವಾಣಿಜ್ಯ (ಹೋಟೇಲ್/ರೂಂಗಳು/ಮಳಿಗೆಗಳು)** ಉದ್ದೇಶಕ್ಕೆ ಅಭಿವೃದ್ಧಿಪಡಿಸಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ. ಆದುದರಿಂದ, ಅರ್ಜಿದಾರರ ಮನವಿಯಂತೆ, ಭೂ ಉಪಯೋಗ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಸಲಹೆ/ಆಕ್ಷೇಪಣೆಗಳಿದಲ್ಲಿ ಈ ಪ್ರತಿಕಾ ಪ್ರಕಟಣೆಯಾದ 15 (ಹದಿನೈದು) ದಿನದೊಳಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ ಇವರಿಗೆ "ಲಿಖಿತ ರೂಪದಲ್ಲಿ ಖುದ್ದಾಗಿ, ಅಥವಾ ನೋಂದಾಯಿತ ಸ್ವೀಕೃತ ಅಂಚೆ" ಮೂಲಕ ಸಲ್ಲಿಸಲು ಕೋರಲಾಗಿದೆ. ನಿಗಧಿತ ದಿನಾಂಕದ ನಂತರ ಬಂದ ಆಕ್ಷೇಪಣಾ ಅರ್ಜಿಗಳನ್ನು ಈ ಕಛೇರಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ–ಗುಂಟೆ	ಚೆಕ್ಕುಬಂಧಿ				ಮಹಾ ಯೋಜನೆಯಲ್ಲಿ ಕಾಯ್ದಿರಿಸಿರುವ ಭೂ ಉಪ ಯೋಗ	ಭೂ ಉಪ ಯೋಗ ಕೋರಿರುವ ಉದ್ದೇಶ
						ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ		
1	ಶ್ರೀ ಎ.ರಾಮಪ್ಪ	ವಕ್ಕಲೇರಿ	ಚೌಡದೇನ ಹಳ್ಳಿ	31/4 31/5	0–19.08	ಸ.ನಂ: 31ರ ಉಳಿಕೆ ಜಮೀನು	ರಾಷ್ಟ್ರೀಯ ಹೆದ್ದಾರಿ–75	ಸ.ನಂ: 31ರ ಉಳಿಕೆ ಜಮೀನು	ಮಡೇರ ಹಳ್ಳಿ ಗಡಿ	ಕೃಷಿ 14(ಎ)	ವಾಣಿಜ್ಯ (ಹೋಟೇಲ್/ ರೂಂಗಳು/ ಮಳಿಗೆಗಳು)

ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:64/ಕೆಎಸ್‌ಎಂಸಿಎ/2024–25

ಹಾಲು, ರಾಗಿ ಮಾಲ್ಟ್ ಕುಡಿದ ವಿದ್ಯಾರ್ಥಿಗಳಿಗೆ ಅಲರ್ಜಿ

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ತಾಲ್ಲೂಕಿನ ಅಂಗೊಂಡಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ಹಾಲು ಹಾಗೂ ರಾಗಿ ಮಾಲ್ಟ್ ಕುಡಿದ 19 ವಿದ್ಯಾರ್ಥಿಗಳ ಮೈ ಹಾಗೂ ಕೈ ಮೇಲೆ ಗುಳ್ಳೆ ಕಾಣಿಸಿಕೊಂಡಿವೆ.

ಕ್ಷೀರಭಾಗ್ಯ ಯೋಜನೆ ಅಡಿ ಉಚಿತವಾಗಿ ನೀಡುವ ಹಾಲು ಮತ್ತು ಅದರ ಜೊತೆ ರಾಗಿ ಮಾಲ್ಟ್ ಕುಡಿದ 19 ವಿದ್ಯಾರ್ಥಿಗಳಿಗೆ ಅರ್ಧ ತಾಸಿನಲ್ಲಿ ಮೈ, ಕೈ ಮೇಲೆ ಬೊಬ್ಬೆ, ಗುಳ್ಳೆಗಳು ಕಾಣಿಸಿಕೊಂಡವು.

ತೀವ್ರ ನಿತ್ರಾಣಗೊಂಡಿದ್ದ 9ನೇ ತರಗತಿ ವಿದ್ಯಾರ್ಥಿನಿ ಕೆ.ಟಿ. ಕೀರ್ತನಾಳನ್ನು ಮುಳಬಾಗಿಲು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. 'ಆಕೆಗೆ ಮೂರು ತಿಂಗಳಿನಿಂದಲೂ ಉಸಿರಾಟದ ಸಮಸ್ಯೆ ಇತ್ತು. ಇದರಿಂದ ಆಯಾಸಗೊಂಡಿದ್ದಾಳೆ' ಎಂದು ವೈದ್ಯರು ತಿಳಿಸಿದರು.

ಶಾಲೆಯ 90 ವಿದ್ಯಾರ್ಥಿಗಳು ಹಾಲು ಕುಡಿದಿದ್ದಾರೆ. ಎಲ್ಲ 19 ವಿದ್ಯಾರ್ಥಿಗಳಿಗೆ ವೈದ್ಯರು ಚಿಕಿತ್ಸೆ ನೀಡಿದ್ದು, ಆ ಪೈಕಿ ಕೀರ್ತನಾ ಹೊರತುಪಡಿಸಿ 18 ವಿದ್ಯಾರ್ಥಿಗಳು ಚೇತರಿಸಿಕೊಂಡು ಪುನಃ ಶಾಲೆಗೆ ಹಾಜರಾಗಿದ್ದಾರೆ.

ಮಧ್ಯಾಹ್ನ ಬಿಸಿಯೂಟದ ತಾಲ್ಲೂಕು ನಿರ್ದೇಶಕ ಆನಂದ್, ವೈದ್ಯಾಧಿಕಾರಿ ಡಾ.ಇಂದು, ಆರೋಗ್ಯ ನಿರೀಕ್ಷಕಿ ಅಖಿಲಾ ಶಾಲೆ ಭೇಟಿ ನೀಡಿ ಪರಿಶೀಲಿಸಿದರು.

ಕಲಾ ದರ್ಪಣ

ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಬುಧವಾರ ಆರಂಭಗೊಂಡ ಹೇಮಾ ವಿನಾಯಕ್ ಪಾಟೀಲ್ ಅವರ 'ಕಲಾ ದರ್ಪಣ' ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನವನ್ನು ನಿವೃತ್ತ ಐಎಎಸ್ ಅಧಿಕಾರಿ ವಿಶ್ವನಾಥ ಹಾಗೂ ಜನಪದ ಗಾಯಕ ಗೋನಾ ಸ್ವಾಮಿ ವೀಕ್ಷಿಸಿದರು
–ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT
And Finance Available On Low Interest Against Properties,Land &Building,Sites,Flats, Converted &Agriculture Lands Call:7204995189

CONNECT ಕ್ಲಾಸಿಫೈಡ್ಸ್

PERSONAL

Change of Name

I, SIMON S KUNTAM S/o.John Festus Reznold Das Kuntam R/o#4, 2nd A cross Rajanna Layout Horamavu Agara Bangalore- 560063 Have Changed my name to SIMON SUVARNACHAND KUNTAM, for all my future Purpose. Vide affidavit Dated:1.7.2024 Before Notary Y.R.Chandrasekar Bangalore

I, PRAKASHA Babu H residing at Therinabeedi, Thyamagondanhalli, Thyamagondlu, Bangalore Rural, Karnataka- 562132 have changed my name to PRAKASH BABU H vide affidavit dated 26/06/2024 before notary S Chandrashekar, Doddaballapura.

I, HANUMANTHA.H No.214, St.Thomas Town post, Hennur Main Road, 12th Cross, Kacharakanahalli, Bangalore-560084 have changed my minor son's name from KISHORE.H to YATHIRAJ.H vide affidavit dated 01/07/2024 sworn before notary C.Sharada, Bangalore

ASTRO YATRA

DH Classifieds ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
9845114560 | 9901641752
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಸಾರಿಗೆ ಇಲಾಖೆ
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ದೇವನಹಳ್ಳಿ, ಬೆಂಗಳೂರು (ಗ್ರಾ) ಜಿಲ್ಲೆ–562110

ಸಂಖ್ಯೆ: ಸಪ್ರಾಸಾಅ/ದೇ/ಹರಾಜು/2024–25 ದಿನಾಂಕ: 02–07–2024

ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಮೋಟಾರು ವಾಹನಗಳನ್ನು ತನಿಖಾ ಸಿಬ್ಬಂದಿಯವರು ತನಿಖೆಗೆ ಒಳಪಡಿಸಿರುವಾಗ ತೆರಿಗೆ ಪಾವತಿಸದ ಪುರಾವೆಗಳನ್ನು ಹಾಗೂ ಇನ್ನಿತರ ಮೂಲ ದಾಖಲಾತಿಗಳನ್ನು ಹಾಜರುಪಡಿಸದೇ ಇರುವ ಕಾರಣ ಸದರಿ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ಸುರಕ್ಷತೆಗಾಗಿ ಕಛೇರಿ ಆವರಣ ಹಾಗೂ ಪೊಲೀಸ್ ಠಾಣೆಯ ಆವರಣಗಳಲ್ಲಿ ನಿಲುಗಡೆ ಮಾಡಲಾಗಿದೆ. ತೆರಿಗೆ ಪಾವತಿಸಿದ ದಾಖಲೆಗಳೊಂದಿಗೆ ವಾಹನ ಚಾಲಕರಾಗಲೀ ಇಲ್ಲವೇ ಮಾಲೀಕರಾಗಲೀ ಅಥವಾ ಹಣಕಾಸು ನೆರವುದಾರರಾಗಲೀ (HPA) ಈ ಕಛೇರಿಗೆ ಹಾಜರಾಗಿ ವಾಹನಗಳನ್ನು ಬಿಡುಗಡೆ ಮಾಡಿಕೊಳ್ಳಲು ಮುಂದೆ ಬಂದಿರುವುದಿಲ್ಲ. ದೀರ್ಘಕಾಲದಿಂದ ವಾಹನಗಳನ್ನು ಬಿಡುಗಡೆ ಮಾಡಿಸಿಕೊಂಡು ಹೋಗದೇ ಇರುವುದರಿಂದ ಈ ಕೆಳಕಂಡ ವಾಹನಗಳನ್ನು ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ಸೆಕ್ಷನ್–11(ಎ) (2) ರ ಅನ್ವಯ ಕ್ರಮ ಸಂಖ್ಯೆ 1 ರಿಂದ 19 ರವರೆಗಿನ ವಾಹನಗಳನ್ನು ಬಹಿರಂಗ ಹರಾಜು ಮಾಡಿ ಬಾಕಿ ಇರುವ ತೆರಿಗೆ ಹಾಗೂ ದಂಡವನ್ನು ಸರ್ಕಾರಕ್ಕೆ ಜಮಾ ಮಾಡಬೇಕಾಗಿರುವುದರಿಂದ ಈ ಕೆಳಕಂಡ ವಾಹನಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಈ ಪ್ರಕಟಣೆ ನೀಡಲಾಗಿದೆ.

ಹರಾಜು ನಡೆಯುವ ಸ್ಥಳ: ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ದೇವನಹಳ್ಳಿಯ ಆವರಣದಲ್ಲಿ
ದಿನಾಂಕ: 26–07–2024 ರಂದು ಪೂರ್ವಾಹ್ನ 11.00 ಘಂಟೆಗೆ

ಕ್ರ.ಸಂ.	ವಾಹನ ಸಂಖ್ಯೆ	ವಾಹನ ವರ್ಗ	ವಾಹನ ನಿಲುಗಡೆಯ ಸ್ಥಳ	ಬಾಕಿ ದಂಡ/ತೆರಿಗೆ ಮೊತ್ತ	ಷರಾ
1.	KA10A9909	HPV	ದೊಡ್ಡಬೆಳವಂಗಲ ಪೊಲೀಸ್ ಠಾಣೆ	242370/–	ನಿಷ್ಕ್ರಿಯೆಗೊಳಿಸಲು
2.	KA07 9597	HPV	ಚನ್ನರಾಯಪಟ್ಟಣ ಪೊಲೀಸ್ ಠಾಣೆ	1264752/–	ನಿಷ್ಕ್ರಿಯೆಗೊಳಿಸಲು
3.	KA168736	HPV	ಕಛೇರಿ ಆವರಣ	244170/–	ನಿಷ್ಕ್ರಿಯೆಗೊಳಿಸಲು
4.	KA06C5577	HPV	ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ	1414602/–	ನಿಷ್ಕ್ರಿಯೆಗೊಳಿಸಲು
5.	KA517090	HPV	ಕಛೇರಿ ಆವರಣ	377255/–	ನಿಷ್ಕ್ರಿಯೆಗೊಳಿಸಲು
6.	KA20C6699	HPV	ಹೊಸಹಳ್ಳಿ ಪೊಲೀಸ್ ಠಾಣೆ	1087940/–	ನಿಷ್ಕ್ರಿಯೆಗೊಳಿಸಲು
7.	KA03B1627	HPV	ಕಛೇರಿ ಆವರಣ	296712/–	ನಿಷ್ಕ್ರಿಯೆಗೊಳಿಸಲು
8.	KA51A8833	HPV	ಕಛೇರಿ ಆವರಣ	433497/–	ನಿಷ್ಕ್ರಿಯೆಗೊಳಿಸಲು
9.	KA20B7607	HPV	ಕಛೇರಿ ಆವರಣ	1322253/–	ಚಾಲನಾ ಸ್ಥಿತಿ
10.	KA529328	Maxi Cab	ಕಛೇರಿ ಆವರಣ	44322/–	ನಿಷ್ಕ್ರಿಯೆಗೊಳಿಸಲು
11.	KA01AD3283	Motor Cab	ಕಛೇರಿ ಆವರಣ	91936/–	ನಿಷ್ಕ್ರಿಯೆಗೊಳಿಸಲು
12.	KA05D2401	Maxi Cab	ಕಛೇರಿ ಆವರಣ	102928/–	ನಿಷ್ಕ್ರಿಯೆಗೊಳಿಸಲು
13.	KA074720	Maxi Cab	ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ	148850/–	ನಿಷ್ಕ್ರಿಯೆಗೊಳಿಸಲು
14.	KA09A3812	Motor Cab	ವಿಶ್ವನಾಥಪುರ ಪೊಲೀಸ್ ಠಾಣೆ	13168/–	ನಿಷ್ಕ್ರಿಯೆಗೊಳಿಸಲು
15.	MAT445117DVN79322	Maxi Cab	ಕಛೇರಿ ಆವರಣ	21000/–	ನಿಷ್ಕ್ರಿಯೆಗೊಳಿಸಲು
16.	12338	Fork lift	ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪೊಲೀಸ್ ಠಾಣೆ	434674/–	ನಿಷ್ಕ್ರಿಯೆಗೊಳಿಸಲು
17.	KA01AF4844	HGV	ಕಛೇರಿ ಆವರಣ	253250/–	ಚಾಲನಾ ಸ್ಥಿತಿ
18.	KA05AB7202	HGV	ಕಛೇರಿ ಆವರಣ	269631/–	ಚಾಲನಾ ಸ್ಥಿತಿ
19.	KA19AB8122	L Taxi	ಕಛೇರಿ ಆವರಣ	38718/–	ಚಾಲನಾ ಸ್ಥಿತಿ

ಮೇಲ್ಕಂಡ ವಾಹನಗಳು ಎಲ್ಲಿದೆಯೋ, ಹೇಗಿದೆಯೋ ಅದೇ ಸ್ಥಿತಿಯಲ್ಲಿ ದಿನಾಂಕ: **26–07–2024** ರಂದು ಈ ಕಛೇರಿಯಲ್ಲಿ **ಪೂರ್ವಾಹ್ನ 11.00 ಗಂಟೆಗೆ** ಹರಾಜು ಮಾಡಲಾಗುವುದು. ಈ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಉಳ್ಳವರು ವಾಹನ ಇರುವ ಸ್ಥಳದಲ್ಲಿಯೇ ಪರಿಶೀಲಿಸಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.

ಹರಾಜಿನ ಷರತ್ತುಗಳು ಮತ್ತು ನಿಬಂಧನೆಗಳು: (1) ದಿನಾಂಕ: **26–07–2024 ರಂದು ಪೂರ್ವಾಹ್ನ 11.00 ಗಂಟೆಗೆ** ಪ್ರಾರಂಭವಾಗುವ ಬಹಿರಂಗ ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ದಿನಾಂಕ: **25–07–2024 ರಂದು ಅಪರಾಹ್ನ 3.00 ರಿಂದ 5.30 ರೊಳಗೆ** ತಮ್ಮ ಹೆಸರುಗಳನ್ನು ರೂ. 25,000/– ರಂತೆ ಪ್ರತ್ಯೇಕವಾಗಿ ಮುಂಗಡ ಇಎಂಡಿ ಮೊತ್ತವನ್ನು **"ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದೇವನಹಳ್ಳಿ"** ಇವರಿಗೆ ಡಿಡಿ ಮೂಲಕ ಪಾವತಿ ಮಾಡಿ ತಮ್ಮ ಹೆಸರು ಮತ್ತು TIN ನಲ್ಲಿ ಇರುವ ವಿವರಗಳನ್ನು ನೋಂದಾಯಿಸಿ ಹರಾಜಿನಲ್ಲಿ ಭಾಗವಹಿಸಬಹುದು. (2) ಬಿಡ್ಡುದಾರರು ಕಡ್ಡಾಯವಾಗಿ ತಮ್ಮ ಭಾವಚಿತ್ರ ಇರುವ ಗುರುತಿನ ಚೀಟಿ, ಮೊಬೈಲ್ ಸಂಖ್ಯೆ ಹಾಗೂ ವಿಳಾಸ ಪುರಾವೆಯನ್ನು ಹಾಜರುಪಡಿಸುವುದು. (3) ಯಶಸ್ವಿ ಬಿಡುದಾರರು ಹರಾಜು ಮೌಲ್ಯದ ಶೇಕಡ 50% ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು ಮತ್ತು ಉಳಿದ ಹಣವನ್ನು ಹರಾಜು ದಿನಾಂಕದಿಂದ 07 ದಿನಗಳ ಒಳಗಾಗಿ ಸಂದಾಯ ಮಾಡಿ ಹಾಗೂ GST ಅನ್ನು ತಮ್ಮ TIN ನಂಬರಿಗೆ ಕಟ್ಟಿ, ತಮ್ಮ ಸ್ವಂತ ಖರ್ಚಿನಿಂದ ವಾಹನವನ್ನು ಸುಪರ್ದಿಗೆ ಪಡೆಯುವುದು, ತಪ್ಪಿದಲ್ಲಿ ಪಾವತಿಸಿದ ಶೇಕಡ 50 ರಷ್ಟು ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (4) ವಾಹನಗಳನ್ನು ಮೇಲ್ಕಾಣಿಸಿದ ಜಾಗದಲ್ಲಿ ನಿಲುಗಡೆ ಮಾಡಲಾಗಿದ್ದು ಕಛೇರಿಯ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು. (5) ಖರೀದಿಸಿದ ವಾಹನದ ದಾಖಲಾತಿಗಳ ಶುಲ್ಕ, ತೆರಿಗೆ ಇತ್ಯಾದಿಗಳನ್ನು ಬಿಡ್‌ದಾರರೇ ಭರಿಸತಕ್ಕದ್ದು. (6) ಬಿಡ್‌ದಾರರು ವಾಹನ ಖರೀದಿಸಿದ ಮೌಲ್ಯಕ್ಕೆ ನಿಯಮಾನುಸಾರ GST ಮತ್ತಿತರ ಯಾವುದೇ ತೆರಿಗೆ ಶುಲ್ಕ ಭರಿಸತಕ್ಕದ್ದು. (7) ವಿಲೇವಾರಿ ಮಾಡುವ ವಾಹನಗಳು ಎಲ್ಲಿವೆಯೋ. ಹೇಗಿವೆಯೋ, ಹಾಗೇ ಅದೇ ಯಾಂತ್ರಿಕ ಸ್ಥಿತಿಯಲ್ಲಿ ಹರಾಜು ಮಾಡಲಾಗುವುದು. (8) ನೋಂದಣಿಯಾಗದೇ/ವರ್ಗಾವಣೆಗಾಗಿ ಇರುವ ವಾಹನದ ಬಿಡ್ಡುದಾರರು ಬಿಡ್ಡು ಮೊತ್ತವನ್ನು ಪಾವತಿಸಿದ ನಂತರ ನಿಯಮಾನುಸಾರ ಮೂಲ ಇನ್ವಾಯ್ಸ್ ನಂತೆ ತೆರಿಗೆ, ಸೆಸ್, ದಂಡ ಪಾವತಿಸುವುದರೊಂದಿಗೆ ಹರಾಜಿನ ಬಿಡ್ ಮೊತ್ತವನ್ನು ಸಹ ಭರಿಸಿ ನೋಂದಾಯಿಸಿಕೊಳ್ಳಬೇಕಾಗುತ್ತದೆ/ವರ್ಗಾವಣೆ ಮಾಡಿಕೊಳ್ಳಬೇಕಾಗಿರುತ್ತದೆ. (9) ಹರಾಜು ಪ್ರಕ್ರಿಯೆ ನಡೆಯುವ ಸಮಯದಲ್ಲಿ ಸಂಬಂಧಪಟ್ಟ ವಾಹನಗಳ ಮಾಲೀಕರು ಅಥವಾ ಆರ್ಥಿಕ ನೆರವುದಾರರು ತೆರಿಗೆ ಮತ್ತು ದಂಡ ಪಾವತಿಸಿದರೆ ಅಂತಹ ವಾಹನಗಳನ್ನು ಹರಾಜಿನಿಂದ ಕೈಬಿಡಲಾಗುವುದು. (10) ಹರಾಜಿನಲ್ಲಿ ಯಾವುದೇ ಸವಾಲನ್ನು ಅಂಗೀಕರಿಸುವ / ಮುಂದೂಡುವ / ರದ್ದು ಪಡಿಸುವ / ತಿರಸ್ಕರಿಸುವ ತೀರ್ಮಾನ ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ದೇವನಹಳ್ಳಿ ಬೆಂಗಳೂರು (ಗ್ರಾ) ಜಿಲ್ಲೆ–562110 ರವರು ಅಧಿಕಾರ ಹೊಂದಿರುತ್ತಾರೆ. **ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080–25264043, 9449864043.**

ಸಹಿ/–
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ
ದೇವನಹಳ್ಳಿ, ಬೆಂಗಳೂರು (ಗ್ರಾ) ಜಿಲ್ಲೆ–562110

DIPR/CP/738/2024-25

ಸಹಕಾರ ಸಂಘದ ಅಧ್ಯಕ್ಷರಾಗಿ ಎಲ್. ಜೀವನ್

ಬೆಂಗಳೂರು: ದಿನಪತ್ರಿಕೆ ವಿತರಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಲ್. ಜೀವನ್ ಆಯ್ಕೆಯಾದರು.

ಎಲ್. ಜೀವನ್

ಸಂಘದ 2024ರಿಂದ 2029ರ ಅವಧಿಯ ಪದಾಧಿಕಾರಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಪದಾಧಿಕಾರಿಗಳಾಗಿ ಎಲ್. ಜೀವನ್, ಮಹೇಶ್, ನರಸಿಂಹ ರೆಡ್ಡಿ ಕೆ.ಎಲ್., ಶ್ರೀನಿವಾಸ್ ಟಿ., ಮೋಹನ್ ಕುಮಾರ್ ಆರ್., ಹೇಮಂತ್ ಕುಮಾರ್ ಎಸ್., ಚಂದ್ರ ಕುಮಾರ್ ಯು., ಜಗದೀಶ್ ಆರ್., ಶ್ವೇತಾ ಬಿ.ಕೆ. ಅವಿರೋಧವಾಗಿ ಆಯ್ಕೆಯಾದರು. ಬಳಿಕ ಎಲ್. ಜೀವನ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಜೀವನ್ 23 ವರ್ಷಗಳಿಂದ ನಗರದ ಬ್ಯಾಂಕ್ ಕಾಲೊನಿಯಲ್ಲಿ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಹಣ ಮರಳಿಸಲು ಮುಂದಾದ ಲ್ಯಾಂಬೋರ್ಗಿನಿ ಮಾಲೀಕ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣದ ಅಕ್ರಮ ವರ್ಗಾವಣೆ ಹಗರಣದ ಆರೋಪಿ ಸತ್ಯನಾರಾಯಣ ವರ್ಮಾಗೆ ಮಾರಿದ್ದ ಲ್ಯಾಂಬೋರ್ಗಿನಿ ಕಾರನ್ನು ಹಿಂಪಡೆದು, ₹3.32 ಕೋಟಿಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಒಪ್ಪಿಸಲು ಹೈದರಾಬಾದ್‌ನ ಉದ್ಯಮಿ ಮುಂದೆ ಬಂದಿದ್ದಾರೆ.

ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ವರ್ಮಾ, ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಲಪಟಾಯಿಸಿದ್ದ ಹಣ ಬಳಸಿ ಸೆಕೆಂಡ್ ಹ್ಯಾಂಡ್ ಲ್ಯಾಂಬೋರ್ಗಿನಿ ಕಾರು ಖರೀದಿಸಿದ್ದರು. ಅದಕ್ಕೆ ₹3.32 ಕೋಟಿ ಪಾವತಿಸಿದ್ದರು. ಕಾರನ್ನು ವಶಕ್ಕೆ ಪಡೆದಿರುವ ಎಸ್‌ಐಟಿ, ಮಾರಾಟ ಮಾಡಿದ್ದ ಕಾರು ಮಳಿಗೆ ಮಾಲೀಕರಿಗೆ ನೋಟಿಸ್ ನೀಡಿದ್ದರು.

'ವರ್ಮಾ ಅವರಿಗೆ ಮಾರಿದ್ದ ಕಾರನ್ನು ವಾಪಸ್ ಪಡೆದು ₹3.32 ಕೋಟಿಯನ್ನು ತನಿಖಾ ತಂಡಕ್ಕೆ ಒಪ್ಪಿಸುವುದಾಗಿ ಕಾರು ಮಾರಾಟ ಮಳಿಗೆ ಮಾಲೀಕ ಪತ್ರ ಸಲ್ಲಿಸಿದ್ದಾರೆ. ಕಾರನ್ನು ಮಾಲೀಕರಿಗೆ ಮರಳಿಸಿ, ನಿಗಮದ ಹಣ ಪಡೆಯಲು ನ್ಯಾಯಾಲಯದ ಅನುಮತಿ ಅಗತ್ಯ. ಮಳಿಗೆಯ ಮಾಲೀಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರೆ ಹಣ ಮರಳಿಸಿದರೆ ಕಾರನ್ನು ವಾಪಸ್ ಕೊಡುವುದಾಗಿ ನಿರಾಕ್ಷೇಪಣಾ ಪತ್ರ ಸಲ್ಲಿಸುತ್ತೇವೆ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವಸತಿ ಇಲಾಖೆಯ ಪ್ರಗತಿ ಪರಿಶೀಲನೆ • ಹಂತ– ಹಂತವಾಗಿ ಪೂರ್ಣಗೊಳಿಸಲು ಸಿ.ಎಂ ಸೂಚನೆ

1.29 ಲಕ್ಷ ಮನೆ: ಆರ್ಥಿಕ ನೆರವಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಳೆಗೇರಿ ಅಭಿವೃದ್ಧಿ ಮಂಡಳಿ ಮತ್ತು ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ‘ಸರ್ವರಿಗೂ ಸೂರು’ ಯೋಜನೆಯಡಿ ಬಡ ಕುಟುಂಬಗಳಿಗೆ ನಿರ್ಮಿಸುತ್ತಿರುವ 1,29,457 ಮನೆಗಳಿಗೆ ಫಲಾನುಭವಿಗಳ ವಂತಿಗೆ ಸರ್ಕಾರವೇ ಭರಿಸಿ ಹಂತ– ಹಂತವಾಗಿ ಪೂರ್ಣಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಬುಧವಾರ ನಡೆಯಿತು.

ನಿರ್ಮಾಣದ ವಿವಿಧ ಹಂತದಲ್ಲಿರುವ 1,29,457 ಮನೆಗಳಿಗೆ ಎಷ್ಟು ಹಣ ಬೇಕಾಗಬಹುದು. ಈ ವರ್ಷ ಗರಿಷ್ಠ ಎಷ್ಟು ಹಣ, ಮುಂದಿನ ವರ್ಷ ಎಷ್ಟು ಹಣ ಕೊಡಲು ಸಾಧ್ಯವಿದೆ ಎಂದು ಪರಿಶೀಲಿಸುವಂತೆ ಆರ್ಥಿಕ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು. ಅಲ್ಲದೆ, ಫಲಾನುಭವಿಗಳಿಂದ ₹1 ಲಕ್ಷ ಕಡ್ಡಾಯವಾಗಿ ಪಡೆಯಬೇಕು ಎಂದೂ ನಿರ್ದೇಶನ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ವಸತಿ ಇಲಾಖೆಯ ಪ್ರಗತಿ ಪರಿಶೀಲನೆ ಬುಧವಾರ ನಡೆಯಿತು. ವಸತಿ ಸಚಿವ ಜಮೀರ್ ಅಹಮದ್ ಖಾನ್, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ ಸಭೆಯಲ್ಲಿ ಇದ್ದರು

ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಎರಡನೇ ಹಂತದಲ್ಲಿ 39,966 ಮನೆ ಹಂಚಿಕೆಗೆ ಸಿದ್ಧವಿದೆ. ಅದಕ್ಕೆ ₹862 ಕೋಟಿ ಅಗತ್ಯವಿದೆ. ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಮೊದಲ ಹಂತದಲ್ಲಿ ಹಂಚಿಕೆಗೆ 11,406 ಮನೆ ಸಿದ್ಧವಿದ್ದು, ಅದಕ್ಕೆ ₹1,879 ಕೋಟಿ ಅಗತ್ಯವಿದೆ. ಈ ಮನೆಗಳ ಹಂಚಿಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಮುಖ್ಯಾಂಶಗಳು

- ಫಲಾನುಭವಿಗಳಿಂದ ₹1 ಲಕ್ಷ ಕಡ್ಡಾಯವಾಗಿ ಪಡೆಯಲು ಅಧಿಕಾರಿಗಳಿಗೆ ಸೂಚನೆ
- ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 39,966 ಮನೆ ಹಂಚಿಕೆಗೆ ಸಿದ್ಧ
- ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಹಂಚಿಕೆಗೆ 11,406 ಮನೆ ಸಿದ್ಧ

ಏನಿದು ಯೋಜನೆ: ‘ಸರ್ವರಿಗೂ ಸೂರು’ ಯೋಜನೆಯಡಿಯಲ್ಲಿ 2013ರಿಂದ 2023ರವರೆಗೆ ಮಂಜೂರು ಮಾಡಿದ್ದ ವಸತಿ ಯೋಜನೆಯಡಿ ಫಲಾನುಭವಿಗಳು ತಮ್ಮ ಪಾಲಿನ ವಂತಿಗೆ ಪಾವತಿಸಲು ಸಾಧ್ಯವಾಗದೆ 2.32 ಲಕ್ಷ ಮನೆಗಳ ನಿರ್ಮಾಣ ನನೆಗುದಿಗೆ ಬಿದ್ದಿದೆ. ಈ ವಿಷಯವನ್ನು ಮುಖ್ಯಮಂತ್ರಿಗೆ ಮನವರಿಕೆ ಮಾಡಿಕೊಟ್ಟ ಸಚಿವರು, ಪ್ರತಿ ಕುಟುಂಬದ ಫಲಾನುಭವಿಯ ವಂತಿಗೆ ₹4 ಲಕ್ಷವನ್ನು ಸರ್ಕಾರವೇ ಭರಿಸುವ ತೀರ್ಮಾನ ಕೈಗೊಳ್ಳುವಂತೆ ಮನವಿ ಮಾಡಿದರು.

ಈ ಹಿಂದೆಯೇ ಕೊಳೆಗೇರಿ ಅಭಿವೃದ್ಧಿ ಮಂಡಳಿ ಯೋಜನೆಯಲ್ಲಿ ಫಲಾನುಭವಿಯ ವಂತಿಗೆ ಸರ್ಕಾರದಿಂದಲೇ ಭರಿಸಲು ಅನುಮತಿ ಸಿಕ್ಕಿತ್ತು. ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಗೂ ಇದನ್ನು ಅನ್ವಯಿಸಲು ಮುಖ್ಯಮಂತ್ರಿ ತಾತ್ವಿಕ ಒಪ್ಪಿಗೆ ನೀಡಿದರು.

ಸಭೆಯಲ್ಲಿ ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ಇಲಾಖೆ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕವಿತಾ ಮಣ್ಣಿಕೇರಿ, ಸುಶೀಲಮ್ಮ ಇದ್ದರು.

ವಿರೋಧದ ಮಧ್ಯೆಯೂ ‘ಡ್ರಿಲ್ಲಿಂಗ್’

‘ಟ್ರಯಲ್ ಬ್ಲಾಸ್ಟ್’ ಖಂಡಿಸಿ ರೈತಸಂಘದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಡ್ಯ/ಪಾಂಡವಪುರ: ರೈತರ ತೀವ್ರ ವಿರೋಧದ ನಡುವೆಯೂ ಜಿಲ್ಲಾಡಳಿತ ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟದ ಗಣಿ ಪ್ರದೇಶದಲ್ಲಿ ಪೊಲೀಸ್ ಭದ್ರತೆಯೊಂದಿಗೆ ‘ಪರೀಕ್ಷಾರ್ಥ ಸ್ಫೋಟ’ದ ಸಿದ್ಧತೆಗೆ ಕುಳಿ ಕೊರೆಯುವ (ಡ್ರಿಲ್ಲಿಂಗ್) ಕಾರ್ಯವನ್ನು ಬುಧವಾರ ಆರಂಭಿಸಿತು.

‘ನ್ಯಾಯಾಲಯದ ಆದೇಶ ಬರುವವರೆಗೆ ‘ಟ್ರಯಲ್ ಬ್ಲಾಸ್ಟ್’ ನಡೆಸುವುದಿಲ್ಲ’ ಎಂದು ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್ ಮಂಗಳವಾರ ಪ್ರತಿಭಟನಾನಿರತ ರೈತರಿಗೆ ಭರವಸೆ ನೀಡಿದ್ದರು. ಆದರೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ಸದ್ದಿಲ್ಲದೆ ಬೇಬಿಬೆಟ್ಟದಲ್ಲಿ ಯಂತ್ರದ ಮೂಲಕ ‘ಡ್ರಿಲ್ಲಿಂಗ್’ ಕಾರ್ಯ ನಡೆಸಿದರು.

ವಿಷಯ ತಿಳಿಯುತ್ತಿದ್ದಂತೆ, ಬುಧವಾರ ರೈತ ಸಂಘದ ನೂರಾರು ಕಾರ್ಯಕರ್ತರು ಬಡಗಲಪುರ ನಾಗೇಂದ್ರ ಮತ್ತು ಎ.ಎಲ್. ಕೆಂಪೂಗೌಡ ನೇತೃತ್ವದಲ್ಲಿ ಕೆ.ಆರ್.ಎಸ್. ಬೃಂದಾವನ ಗೇಟ್ ಸಮೀಪ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಇನ್ನೊಂದೆಡೆ ಸತ್ಯಾಂಶ ತಿಳಿಯಲು ‘ಪರೀಕ್ಷಾರ್ಥ ಸ್ಫೋಟ’ ನಡೆಸಬೇಕು ಎಂದು ಮತ್ತೊಂದು ರೈತ ಬಣದವರು ಆಗ್ರಹಿಸಿದರು. ಇದಕ್ಕೆ ಕಲ್ಲುಗಣಿ ಮಾಲೀಕರು ಬೆಂಬಲ ಸೂಚಿಸಿದರು. ಪರ–ವಿರೋಧದ ಅಲೆಯಿಂದ ಗೊಂದಲಮಯ ವಾತಾವರಣ ಸೃಷ್ಟಿಯಾಯಿತು.

‘ಹೈಕೋರ್ಟ್ ಆದೇಶದಂತೆ ಬೇಬಿ ಬೆಟ್ಟದ ಗಣಿಗಾರಿಕೆ ಪ್ರದೇಶದಲ್ಲಿ ಸರಾಸರಿ 60 ಅಡಿ ಆಳದಲ್ಲಿ 5 ಕಡೆ ಕುಳಿ ಕೊರೆಯುತ್ತಿದ್ದೇವೆ. ಈ ಕಾರ್ಯ ಮುಗಿದ ಮೇಲೆ ಪುಣೆ ಮತ್ತು ಜಾರ್ಖಂಡ್ ಮೂಲಕ ಗಣಿ ತಜ್ಞರು ‘ಪರೀಕ್ಷಾರ್ಥ ಸ್ಫೋಟ’ ನಡೆಸಲಿದ್ದಾರೆ’ ಎಂದು ಹಿರಿಯ ಭೂವಿಜ್ಞಾನಿ ರೇಷ್ಮಾ ತಿಳಿಸಿದರು.

ಜೈಲಿಗೆ ಹೋಗಲು ಸಿದ್ಧ: ಬೃಂದಾವನದ ಬಳಿ ಪ್ರತಿಭಟನೆ ನಡೆಸಿದ ನಂತರ, ರೈತರು ಮಂಡ್ಯ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಕುಮಾರ ಅವರನ್ನು ಭೇಟಿ ಮಾಡಿದರು. ‘ಟ್ರಯಲ್ ಬ್ಲಾಸ್ಟ್ ಕೂಡಲೇ ನಿಲ್ಲಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಭೆ ಕರೆದು ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ ಜು.5ರಂದು ಪ್ರತಿಭಟನೆ ನಡೆಸುತ್ತೇವೆ. ಜೈಲಿಗೆ ಹೋಗಲೂ ಸಿದ್ಧರಿದ್ದೇವೆ’ ಎಂದು ರೈತ ಮುಖಂಡರು ಗುಡುಗಿದರು.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಬೇಬಿಬೆಟ್ಟದ ಗಣಿಗಾರಿಕೆ ಪ್ರದೇಶದಲ್ಲಿ ‘ಪರೀಕ್ಷಾರ್ಥ ಸ್ಫೋಟ’ ನಡೆಸಲು ಬುಧವಾರ ಯಂತ್ರದಿಂದ ಕುಳಿ ಕೊರೆಯಲಾಯಿತು

> **‘ಟ್ರಯಲ್ ಬ್ಲಾಸ್ಟ್’ ನಡೆಸುವ ಉದ್ದೇಶ ನಮಗೆ ಅಥವಾ ಸರ್ಕಾರಕ್ಕೆ ಇಲ್ಲ. ಈ ಸಂಬಂಧ ನ್ಯಾಯಾಲಯ ಆದೇಶ ನೀಡಿರುವುದರಿಂದ ಪಾಲಿಸಲೇಬೇಕಿದೆ**
>
> **ಕುಮಾರ,** ಜಿಲ್ಲಾಧಿಕಾರಿ, ಮಂಡ್ಯ

> **‘ಟ್ರಯಲ್ ಬ್ಲಾಸ್ಟ್’ಗೆ ಮುಂದಾಗಿರುವುದರ ಹಿಂದೆ ಪ್ರಭಾವಿಗಳ ಕೈವಾಡ ಮತ್ತು ಕಲ್ಲು ಗಣಿಗಾರಿಕೆ ನಡೆಸುವ ಹುನ್ನಾರವಿದೆ**
>
> **ಬಡಗಲಪುರ ನಾಗೇಂದ್ರ,** ರಾಜ್ಯ ಘಟಕದ ಅಧ್ಯಕ್ಷ, ರೈತ ಸಂಘ

ಸೂರಜ್ ರೇವಣ್ಣಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ಯುವಕನ ಮೇಲೆ ಅಸಹಜ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಹೊತ್ತಿರುವ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಪೊಲೀಸ್ ಕಸ್ಟಡಿ ಬುಧವಾರಕ್ಕೆ ಅಂತ್ಯಗೊಂಡ ಕಾರಣ ಸೂರಜ್ ರೇವಣ್ಣ ಅವರನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು.

ವಿಚಾರಣೆ ವೇಳೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ನಾಯಕ್, ‘ಆರೋಪಿ ಸೂರಜ್ ರೇವಣ್ಣ ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಸಮಯಾವಕಾಶ ಬೇಕು’ ಎಂದು ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಅವರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಇದೇ 18ಕ್ಕೆ ವಿಚಾರಣೆ ಮುಂದೂಡಿದರು. ಸೂರಜ್ ಪರ ವಕೀಲ ನಿಖಿಲ್ ಡಿ.ಕಾಮತ್ ಹಾಜರಿದ್ದರು.

ಪ್ರಸಾರ ಸ್ಥಗಿತ: ಆದೇಶ ತೆರವಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರವಾನಗಿ ನವೀಕರಿಸದ ಆರೋಪದ ಕಾರಣ ಪವರ್ ಟಿ.ವಿ ಚಾನಲ್ ಕಾರ್ಯಕ್ರಮಗಳ ಪ್ರಸಾರ ಸ್ಥಗಿತಗೊಳಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ನಿರ್ದೇಶನ ತೆರವುಗೊಳಿಸಲು ವಿಭಾಗೀಯ ನ್ಯಾಯಪೀಠ ನಿರಾಕರಿಸಿದೆ.

ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಿ, ‘ಮೆಸರ್ಸ್ ಪವರ್ ಸ್ಮಾರ್ಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ’ ನಿರ್ದೇಶಕ ಬೆಂಗಳೂರಿನ ದಬ್ಬೇಗಟ್ಟ ಮಧು ಲಕ್ಷ್ಮಣ, ‘ಮೆಸರ್ಸ್ ಮಿಟ್‌ಕಾನ್ ಇನ್‌ಫ್ರಾ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ ನಿರ್ದೇಶಕ ಮುಂಬೈನ ಶ್ರೀಕಾಂತ್ ಮಿಥೇಶ್ ಬಾಂಗ್ಡಿಯಾ ಮತ್ತು ‘ಪವರ್ ಸ್ಮಾರ್ಟ್ ಮೀಡಿಯಾ’ದ ಬೆಂಗಳೂರಿನ ಹೆಚ್ಚುವರಿ ನಿರ್ದೇಶಕ ರಾಕೇಶ್ ಸಂಜೀವ ಶೆಟ್ಟಿ ಅಲಿಯಾಸ್ ರಾಕೇಶ್ ಶೆಟ್ಟಿ ಸಲ್ಲಿಸಿದ್ದ ಮೇಲ್ಮನವಿ ಮೇಲಿನ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಪ್ರಕಟಿಸಿತು.

‘ಕೇಂದ್ರದ ವಾರ್ತಾ ಮತ್ತು ಪ್ರಸಾರ ಇಲಾಖೆಯು 2024ರ ಫೆಬ್ರುವರಿ 9ರಂದು ಜಾರಿ ಮಾಡಿರುವ ಷೋಕಾಸ್ ನೋಟಿಸ್ ಮತ್ತು ಪವರ್ ಟಿವಿಯು ಪ್ರಸಾರ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಆರು ವಾರಗಳಲ್ಲಿ ನಿರ್ಧರಿಸಬೇಕು ಮತ್ತು ಸುದ್ದಿ ವಾಹಿನಿ ತನ್ನ ಪ್ರಸಾರ ಆರಂಭಿಸಬೇಕೇ ಬೇಡವೇ ಎಂಬುದನ್ನು ಕೇಂದ್ರ ಸರ್ಕಾರ ತುರ್ತಾಗಿ ತೀರ್ಮಾನಿಸಬೇಕು’ ಎಂದು ಆದೇಶಿಸಿದೆ.

ಮೇಲ್ಮನವಿದಾರ ಕಂಪನಿ ಪರ ಹಿರಿಯ ವಕೀಲರಾದ ಎಸ್.ಎಸ್.ನಾಗಾನಂದ ಹಾಗೂ ರಿಟ್ ಅರ್ಜಿದಾರರ ಪರ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದರು.

ಪ್ರಕರಣವೇನು?: ‘ನಮ್ಮ ವಿರುದ್ಧ ಪವರ್ ಟಿ.ವಿ ಮಾನಹಾನಿಕರ ಸುದ್ದಿಗಳನ್ನು ಪ್ರಸಾರ ಮಾಡುತ್ತಿದೆ’ ಎಂದು ಆರೋಪಿಸಿ ಜೆಡಿಎಸ್‌ನ ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಅವರ ಪತ್ನಿ ಡಾ.ಎ.ರಮ್ಯಾ ರಮೇಶ್ ಹಾಗೂ ಐಪಿಎಸ್ ಅಧಿಕಾರಿ ಬಿ.ಆರ್.ರವಿಕಾಂತೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತ್ತು.

‘ಪವರ್ ಟಿ.ವಿ.ಚಾನಲ್, ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ನಿಯಂತ್ರಣ) ಕಾಯ್ದೆ–1995ರ ಆದೇಶವನ್ನು ಉಲ್ಲಂಘಿಸಿರುವ ಕಾರಣ ತಕ್ಷಣದಿಂದಲೇ ಸುದ್ದಿಗಳೂ ಸೇರಿದಂತೆ ಯಾವುದೇ ಕಾರ್ಯಕ್ರಮಗಳನ್ನು ಜುಲೈ 8ರವರೆಗೆ ಪ್ರಸಾರ ಮಾಡಬಾರದು’ ಎಂದು ಕಳೆದ ತಿಂಗಳ 25ರಂದು ಆದೇಶಿಸಿತ್ತು.

ಹೈ–ಕ ವ್ಯಾಪ್ತಿ ವರ್ಗಾವಣೆಗೆ ನಿರ್ಬಂಧವಿಲ್ಲ: ಹೈಕೋರ್ಟ್

ಬೆಂಗಳೂರು: ‘ಹೈದರಾಬಾದ್–ಕರ್ನಾಟಕ (ಹೈ–ಕ) ಪ್ರದೇಶದಲ್ಲಿ ಸ್ಥಳೀಯ ಮೀಸಲಾತಿ ಅಡಿ ನೇಮಕಗೊಂಡ ಸರ್ಕಾರಿ ನೌಕರನನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹೈ–ಕ ಪ್ರದೇಶದಿಂದ ಹೊರ ಭಾಗಗಳಿಗೆ ವರ್ಗಾವಣೆ ಮಾಡಲು ಯಾವುದೇ ನಿರ್ಬಂಧ ಇರುವುದಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಹೈ–ಕ ಪ್ರದೇಶದ ಮೀಸಲಾತಿ ಅಡಿಯಲ್ಲಿ ನೇಮಕವಾಗಿದ್ದ ಸಬ್ ರಿಜಿಸ್ಟ್ರಾರ್ ಎನ್.ಶ್ರೀಕಾಂತ್ ಅವರನ್ನು ಹೊರ ಪ್ರದೇಶಕ್ಕೆ ವರ್ಗಾವಣೆ ಮಾಡಿದ್ದ ಸರ್ಕಾರದ ಕ್ರಮವನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಎತ್ತಿ ಹಿಡಿದಿತ್ತು. ಈ ಆದೇಶವನ್ನು ಪ್ರಶ್ನಿಸಿ ಮತ್ತೊಬ್ಬ ಸಬ್ ರಿಜಿಸ್ಟ್ರಾರ್ ಎಸ್.ನಂದೀಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಮೂರ್ತಿ ಅನು ಶಿವರಾಮನ್ ಹಾಗೂ ನ್ಯಾಯಾಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



‘ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾ ದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲು) ಆದೇಶ 2013ರಲ್ಲಿ ಹೈ–ಕ ಮೀಸಲು ಅಡಿಯಲ್ಲಿ ನೇಮಕವಾದವರನ್ನು ಹೊರ ಭಾಗಗಳಿಗೆ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧ ಇರುವುದಿಲ್ಲ. ಆದ್ದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಹೊರ ಪ್ರದೇಶಕ್ಕೆ ವರ್ಗಾವಣೆ ಮಾಡಬಹುದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಎನ್.ಶ್ರೀಕಾಂತ್ ಅವರು ಹೈ–ಕ ವೃಂದದಲ್ಲಿ ಸಬ್ ರಿಜಿಸ್ಟ್ರಾರ್ ಆಗಿ ನೇಮಕವಾಗಿದ್ದರು. ತರಬೇತಿ ಬಳಿಕ ಅವರನ್ನು ಚಿಕ್ಕಮಗಳೂರು ನಂತರ ಮೈಸೂರು ಪಶ್ಚಿಮದ ಸಬ್ ರಿಜಿಸ್ಟ್ರಾರ್ ಆಗಿ ನೇಮಕ ಮಾಡಲಾಗಿತ್ತು. ಏತನ್ಮಧ್ಯೆ, ನಂದೀಶ್ ಅವರನ್ನು ಶ್ರೀಕಾಂತ್ ಅವರ ಹುದ್ದೆಗೆ ನಿಯೋಜಿಸಿದ್ದು, ಶ್ರೀಕಾಂತ್ ಅವರಿಗೆ ಯಾವುದೇ ಹುದ್ದೆ ತೋರಿಸದೆ ವರ್ಗಾವಣೆ ಮಾಡಲಾಗಿತ್ತು. ಈ ವರ್ಗಾವಣೆ ಆದೇಶವನ್ನು ಪ್ರಶ್ನಿಸಿ ಶ್ರೀಕಾಂತ್; ಅವಧಿ ಪೂರ್ವ ವರ್ಗಾವಣೆ ಎಂದು ಆರೋಪಿಸಿ ಕೆಎಟಿ ಮೆಟ್ಟಿಲೇರಿದ್ದರು.

ಬಿಟ್ ಕಾಯಿನ್: ಆರೋಪಿಗಳ ವಿರುದ್ಧದ ಕೋಕಾ ಕಾಯ್ದೆ ರದ್ದು

ಬೆಂಗಳೂರು: ಬಹುಕೋಟಿ ಬಿಟ್ ಕಾಯಿನ್ ಹಗರಣದ ಪ್ರಮುಖ ಆರೋಪಿ ಶ್ರೀಕಿ ಮತ್ತು ರಾಬಿನ್ ವಿರುದ್ಧ ಕೋಕಾ (ಕರ್ನಾಟಕ ಸಂಘಟಿತ ಅಪರಾಧ ತಡೆ ಕಾಯ್ದೆ–2000) ಅಡಿಯಲ್ಲಿ ದಾಖಲಿಸಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಕೋಕಾ ಅನ್ವಯಗೊಳಿಸಿದ್ದನ್ನು ಪ್ರಶ್ನಿಸಿ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಹಾಗೂ ಪಶ್ಚಿಮ ಬಂಗಾಳದ ರಾಬಿನ್ ಖಂಡೇಲ್‌ವಾಲಾ ಸಲ್ಲಿಸಿದ್ದ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಕೋಕಾ ಕಾಯ್ದೆ ಅಡಿ ದಾಖಲಿಸಿರುವ ಪ್ರಕರಣವನ್ನು ರದ್ದುಗೊಳಿಸಿತು.

ಅರ್ಜಿದಾರರ ಪರ ಹಿರಿಯ ವಕೀಲರಾದ ಸಂದೇಶ್ ಜೆ.ಚೌಟ ಹಾಗೂ ಎಂ.ಅರುಣ್ ಶ್ಯಾಮ್, ‘ಆರೋಪಿಗಳಿಗೆ ಜಾಮೀನು ದೊರೆಯಬಾರದು ಎಂಬ ದುರುದ್ದೇಶದಿಂದ ಕೋಕಾ ಕಾಯ್ದೆಯನ್ನು ಕಾನೂನುಬಾಹಿರವಾಗಿ ಅನ್ವಯಿಸಲಾಗಿದೆ. ಪ್ರಕರಣದಲ್ಲಿ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದ್ದು, ಈ ಪ್ರಕರಣದಲ್ಲಿ ಗಂಭೀರ ಅಪರಾಧ ದಾಖಲಿಸುವ ಮುನ್ನ ಪಾಲಿಸಬೇಕಾದ ಕಾನೂನು ಪಾಲನೆ ಆಗಿಲ್ಲ. ಆದ್ದರಿಂದ ಕೋಕಾ ಕಾಯ್ದೆ ರದ್ದುಪಡಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಇಬ್ಬರೂ ಆರೋಪಿಗಳ ವಿರುದ್ಧದ ಕೋಕಾ ಕಾಯ್ದೆ ರದ್ದುಗೊಳಿಸಿ ಆದೇಶಿಸಿತು.

ಪ್ರಕರಣವೇನು?: ಬಿಟ್ ಕಾಯಿನ್ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಿಚಿತರ ವಿರುದ್ಧ ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ 2017ರಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಇದರಲ್ಲಿ ಪೊಲೀಸರು ನ್ಯಾಯಾಲಯಕ್ಕೆ; ‘ಅಪರಾಧ ನಡೆದಿರುವುದು ನಿಜ. ಆದರೆ ಯಾರು ಅಪರಾಧಿಗಳು ಎಂಬುದು ಪತ್ತೆಯಾಗಿಲ್ಲ’ ಎಂದು ‘ಸಿ’ ಅಂತಿಮ ವರದಿ ಸಲ್ಲಿಸಿದ್ದರು. ನಂತರ ಇದನ್ನು ಸೈಬರ್ ಅಪರಾಧ ವಿಭಾಗಕ್ಕೆ ವರ್ಗಾಯಿಸಲಾಗಿತ್ತು. 2023ರಲ್ಲಿ ಜುಲೈನಲ್ಲಿ ವಿಶೇಷ ತನಿಖಾ ತಂಡ ರಚಿಸಲಾಗಿತ್ತು.

ಹೆಣ್ಣಾನೆ ಸಾವು: ತಾಯಿ ಬಿಟ್ಟು ಕದಲದ ಮರಿಯಾನೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಕಾವೇರಿ ವನ್ಯಧಾಮದ ಕೊತ್ತನೂರು ವನ್ಯಜೀವಿ ವಲಯದಲ್ಲಿ ಹೆಣ್ಣಾನೆಯೊಂದು ಮೃತಪಟ್ಟಿದೆ.

ಕೊತ್ತನೂರು ವನ್ಯಜೀವಿ ವಲಯದ ಮತ್ತೀಪುರ ಬೀಟ್ ವ್ಯಾಪ್ತಿಯ ‘ಡಿ’ ಲೇನ್‌ನಲ್ಲಿ 30 ವರ್ಷ ವಯಸ್ಸಿನ ಆನೆ ಮೃತಪಟ್ಟಿರುವುದು ಬುಧವಾರ ಗಸ್ತಿನಲ್ಲಿದ್ದ ಸಿಬ್ಬಂದಿಯ ಗಮನಕ್ಕೆ ಬಂದಿದೆ.

ತಾಯಿ ಆನೆ ಮೃತಪಟ್ಟಿರುವುದನ್ನು ಕಂಡು ಮರಿಯಾನೆ ಸ್ಥಳ ಬಿಟ್ಟು ತೆರಳದೆ ಅಲ್ಲಿಯೇ ಬೀಡುಬಿಟ್ಟಿದೆ. ಇದರಿಂದ ಕಳೇಬರ ವಿಲೇವಾರಿ ಸಾಧ್ಯವಾಗುತ್ತಿಲ್ಲ. ಗುರುವಾರ ಮೃತ ಆನೆಯ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು ಕಾವೇರಿ ವನ್ಯಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ ತಿಳಿಸಿದರು.

ಸ್ಪರ್ಧಾ ವಾಣಿ

ಎಸ್ಸೆಸ್ಸೆಲ್ಸಿ ಪಾಸಾದವರಿಗೆ 8,326ಹುದ್ದೆ

ಮಂಜುನಾಥ್ ಭದ್ರಶೆಟ್ಟಿ

ಸಿಬ್ಬಂದಿ ನೇಮಕಾತಿ ಆಯೋಗದ ವತಿಯಿಂದ ಕೇಂದ್ರ ಸಚಿವಾಲಯಗಳಲ್ಲಿ ಖಾಲಿ ಇರುವ 'ನಾನ್ ಟೆಕ್ನಿಕಲ್ ಮಲ್ಟಿ ಟಾಸ್ಕಿಂಗ್ ಸಿಬ್ಬಂದಿ' (ಎಂಟಿಎಸ್) ಮತ್ತು 'ಸಿಬಿಐಸಿ-ಸಿಬಿಎನ್'ನಲ್ಲಿ ಖಾಲಿಯಿರುವ ಹವಾಲ್ದಾರ್ ಒಟ್ಟು 8,326 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಆನ್‌ಲೈನ್ ಅರ್ಜಿ ಮೂಲಕ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಸಚಿವಾಲಯಗಳಲ್ಲಿ ಒಟ್ಟು 4,887 ಎಂಟಿಎಸ್ ಹುದ್ದೆಗಳಿವೆ. ಸಿಬಿಐಸಿ-ಸಿಬಿಎನ್‌ನಲ್ಲಿ ಒಟ್ಟು 3,439 ಹವಾಲ್ದಾರ್ ಹುದ್ದೆಗಳಿವೆ. ಈ ಹುದ್ದೆಗಳು ಗ್ರೂಪ್- 'ಸಿ' ವಿಭಾಗದ ಹುದ್ದೆಗಳಾಗಿವೆ.

ಇದರಲ್ಲಿ ಎಸ್‌ಎಸ್‌ಸಿ ಕರ್ನಾಟಕ-ಕೇರಳ ಸರ್ಕಲ್‌ನ ಒಟ್ಟು 399 ಹುದ್ದೆಗಳೂ ಸೇರಿವೆ.

ಕೇಂದ್ರ ಹಣಕಾಸು ಸಚಿವಾಲಯದಡಿ ಕಾರ್ಯನಿರ್ವಹಿಸುವ ಕಂದಾಯ ಇಲಾಖೆಯ ಕೇಂದ್ರೀಯ ಪರೋಕ್ಷ ತೆರಿಗೆ ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಹಾಗೂ ಸೆಂಟ್ರಲ್ ಬ್ಯೂರೋ ಆಫ್ ನಾರ್ಕೋಟಿಕ್ಸ್ (ಸಿಬಿಎನ್) ವಿಭಾಗಕ್ಕೆ ಹವಾಲ್ದಾರ್ ಹುದ್ದೆಗಳು ಸಂಬಂಧಿಸಿವೆ.

ಅರ್ಜಿ ಸಲ್ಲಿಸಲು ಇದೇ ಜುಲೈ 31 ಕಡೆಯ ದಿನ. ಅರ್ಜಿ ಶುಲ್ಕ ₹100 ಇರಲಿದೆ. (ಎಸ್.ಎಸಿ, ಎಸ್.ಟಿ, ಮಾಜಿ ಸೈನಿಕರಿಗೆ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ).

ಎಂಟಿಎಸ್ ಹುದ್ದೆಗಳಿಗೆ ವಯೋಮಿತಿ ಕನಿಷ್ಠ 18 ರಿಂದ ಗರಿಷ್ಠ 25 ಇದ್ದು, ಹವಾಲ್ದಾರ್ ಹುದ್ದೆಗಳಿಗೆ ಕನಿಷ್ಠ 18 ರಿಂದ ಗರಿಷ್ಠ 27 ಇದೆ. ಮೀಸಲು ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಎರಡೂ ಹುದ್ದೆಗಳಿಗೂ ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ 10 ನೇ ತರಗತಿ ಪಾಸಾಗಿರಬೇಕು.

ಪರೀಕ್ಷೆ ಹೇಗಿದೆ?

ಈ ಎರಡೂ ವಿಭಾಗದ ಹುದ್ದೆಗಳಿಗೆ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಕಂಪ್ಯೂಟರ್ ಆಧರಿತ ಪರೀಕ್ಷೆ (ಸಿಬಿಟಿ) ನಡೆಯಲಿವೆ. ಎಂಟಿಎಸ್ ಹುದ್ದೆಗಳಿಗೆ ಸಿಬಿಟಿ ಮಾತ್ರ ಇರುತ್ತದೆ. ಹವಾಲ್ದಾರ್ ಹುದ್ದೆಗಳಿಗೆ ಸಿಬಿಟಿ ಜೊತೆಗೆ ದೈಹಿಕ ಸಹಿಷ್ಣುತೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆ ಇರಲಿದೆ.

ಮೊದಲು ನಡೆಯುವ ಸಿಬಿಟಿಯಲ್ಲಿ ಎರಡು ಪಶ್ನೆ ಪತ್ರಿಕೆಗಳಿರುತ್ತವೆ. ಸೆಷನ್ 1ರ ಪತ್ರಿಕೆಯಲ್ಲಿ ಎರಡು ವಿಭಾಗಗಳಿರುತ್ತವೆ (ನ್ಯೂಮೆರಿಕಲ್ ಆ್ಯಂಡ್ ಮ್ಯಾಥಮೆಟಿಕ್ ಎಬಿಲಿಟಿ, ರಿಸನಿಂಗ್ ಎಬಿಲಿಟಿ ಆ್ಯಂಡ್ ಪ್ರಾಬ್ಲಮ್ ಸಾಲ್ವಿಂಗ್) ಇದಕ್ಕೆ 120 ಅಂಕಗಳಿರುತ್ತವೆ. 45 ನಿಮಿಷ ಅವಧಿ. ಎರಡೂ ಭಾಗಗಳಲ್ಲಿ ತಲಾ 20 ಪ್ರಶ್ನೆಗಳಿರುತ್ತವೆ.

ಸೆಷನ್ 2ನೇ ಪತ್ರಿಕೆಯ ಎರಡು ವಿಭಾಗಗಳಿಗೆ (ಸಾಮಾನ್ಯ ಜ್ಞಾನ, ಇಂಗ್ಲಿಷ್ ಭಾಷಾ ಸಾಮರ್ಥ್ಯ) 150 ಅಂಕಗಳಿದ್ದು, ಇದರಲ್ಲಿ ತಲಾ 25 ಪ್ರಶ್ನೆಗಳಿರುತ್ತವೆ. 45 ನಿಮಿಷ ಅವಧಿ.

ಮುಂದಿನ ಹಂತಕ್ಕೆ ಪ್ರವೇಶಿಸಬೇಕಾದರೆ ಎರಡರಲ್ಲೂ ಕನಿಷ್ಠ ಶೇ 30 ರಷ್ಟು ಅಂಕಗಳನ್ನು ಗಳಿಸಲೇಬೇಕು. ಸೆಷನ್ 1ರ ಪತ್ರಿಕೆಗೆ ನಕಾರಾತ್ಮಕ ಅಂಕಗಳಿರುವುದಿಲ್ಲ. ಸೆಷನ್ 2ನೇ ಪತ್ರಿಕೆಗೆ ನಕಾರಾತ್ಮಕ ಅಂಕಗಳು ಇರುತ್ತವೆ. ಅಂದರೆ ಪ್ರತಿ ನಾಲ್ಕು ತಪ್ಪು ಉತ್ತರಗಳಿಗೆ ಒಂದು ಅಂಕ ಕಳೆಯಲಾಗುತ್ತದೆ.

ಎಂಟಿಎಸ್ ಹುದ್ದೆ ಆಯ್ಕೆ ಮಾಡಿಕೊಳ್ಳುವವರಿಗೆ ಸಿಬಿಟಿ ಪರೀಕ್ಷೆಯ ಮೆರಿಟ್ ಆಧಾರದ ಮೇಲೆ ಮೂಲ ದಾಖಲಾತಿ ಪರಿಶೀಲನೆ ನಡೆಸಿ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ. ಹವಾಲ್ದಾರ್ ಹುದ್ದೆಗಳಿಗೆ ಸಿಬಿಟಿ ಮೆರಿಟ್ ಹಾಗೂ ದೈಹಿಕ ಪರೀಕ್ಷೆಯ ಫಲಿತಾಂಶವನ್ನು ಅನುಸರಿಸಿ ಆಯ್ಕೆ ಪಟ್ಟಿ ಪ್ರಕಟಿಸಲಾಗುತ್ತದೆ.

ಇಂಗ್ಲಿಷ್, ಹಿಂದಿ ಜೊತೆಗೆ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ. ಕರ್ನಾಟಕದ ಅಭ್ಯರ್ಥಿಗಳಿಗೆ ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು, ಉಡುಪಿ ಹಾಗೂ ಶಿವಮೊಗ್ಗ ಪರೀಕ್ಷಾ ಕೇಂದ್ರಗಳಾಗಿವೆ.

ಹುದ್ದೆಗಳ ವಿಂಗಡಣೆ, ಹವಾಲ್ದಾರ್ ಹುದ್ದೆಗಳ ದೈಹಿಕ ಸಹಿಷ್ಣುತೆ, ಸಾಮರ್ಥ್ಯ ಪರೀಕ್ಷೆಯ ಮಾನದಂಡಗಳು, ಅರ್ಜಿ ಸಲ್ಲಿಸಲು ಹಾಗೂ ಇತರೆ ಹೆಚ್ಚಿನ ಮಾಹಿತಿಗೆ ಆಸಕ್ತರು ಆಯೋಗದ ಅಧಿಕೃತ ವೆಬ್‌ಸೈಟ್ https://ssc.gov.in/ ವೀಕ್ಷಿಸಬೇಕು.

❖

ಎಂಟಿಎಸ್ ಹುದ್ದೆಗಳು ಯಾವವು?

ಕೇಂದ್ರ ಸರ್ಕಾರದ ಸಚಿವಾಲಯಗಳಲ್ಲಿ ಗ್ರೂಪ್ ಸಿ ಅಡಿಯಿರುವ ನಾನ್ ಟೆಕ್ನಿಕಲ್ ಮಲ್ಟಿ ಟಾಸ್ಕಿಂಗ್ ಹುದ್ದೆಗಳಿಗೆ ಎಂಟಿಎಸ್ ಹುದ್ದೆಗಳು ಎನ್ನುತ್ತಾರೆ. ಪಿಓನ್, ಡ್ರಾಫ್ಟಿ, ಚೌಕಿದಾರ್, ಸಫಾಯಿವಾಲಾ ಇತರೆ ಹುದ್ದೆಗಳು ಇದರ ಅಡಿ ಬರುತ್ತವೆ.

ಪದವಿ ಪಾಸಾದವರಿಗೆ 17,727 ಹುದ್ದೆಗಳು

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯ ಹಾಗೂ ಸಂಸ್ಥೆಗಳಲ್ಲಿನ ಗ್ರೂಪ್ ಎ, ಬಿ ಹಂತದ ಮತ್ತು ಇನ್‌ಸ್ಪೆಕ್ಟರ್, ಹಿರಿಯ ಸಹಾಯಕ ಹಂತದ ಒಟ್ಟು 17,727 ಹುದ್ದೆಗಳ ಭರ್ತಿಗೆ ಎಸ್‌ಎಸ್‌ಸಿ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ. ಜುಲೈ 24 ಅರ್ಜಿ ಸಲ್ಲಿಸಲು ಕಡೆಯ ದಿನ. ಯಾವುದೇ ಪದವಿ ತೇರ್ಗಡೆ ಹೊಂದಿದವರು ಅರ್ಜಿ ಸಲ್ಲಿಸಬಹುದು. ಸಂಯೋಜಿತ ಪದವಿ ಮಟ್ಟದ ಪರೀಕ್ಷೆ ಮೂಲಕ ನೇಮಕಾತಿ ನಡೆಯುತ್ತದೆ. ವಿವರವಾದ ಅಧಿಸೂಚನೆಗೆ https://ssc.gov.in/ ವೆಬ್‌ಸೈಟ್ ಪರಿಶೀಲಿಸಬಹುದು.

ಹವಾಲ್ದಾರ್ ಹುದ್ದೆಗಳು ಎಲ್ಲೆಲ್ಲಿ?

ಸಿಬಿಐಸಿ ಹಾಗೂ ಸಿಬಿಎನ್ ಕೇಂದ್ರ ಹಣಕಾಸು ಸಚಿವಾಲಯದ ರೆವಿನ್ಯೂ ಡಿಪಾರ್ಟ್‌ಮೆಂಟ್ ಅಡಿ ಬರುವ ಸಂಸ್ಥೆಗಳಾಗಿವೆ. ಇದರಲ್ಲಿ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ರೀತಿ ಕೆಲಸ ಮಾಡುವ ಹುದ್ದೆಗಳಿಗೆ ಹವಾಲ್ದಾರ್ ಹುದ್ದೆಗಳು ಎನ್ನುತ್ತಾರೆ.

ಬಹುಆಯ್ಕೆಯ ಪ್ರಶ್ನೆಗಳು

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ...

1. ಭಾರತದಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಹೇರಿಕೆಗೆ ಸಂಬಂಧಿಸಿದಂತೆ ಸರಿ ಹೇಳಿಕೆಗಳನ್ನು ಗುರುತಿಸಿ?

1. ಮೊಟ್ಟಮೊದಲ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ಬಾಹ್ಯ ಆಕ್ರಮಣದ ಕಾರಣದಿಂದ ಘೋಷಿಸಲಾಯಿತು.
2. ಅರುಣಾಚಲ ಪ್ರದೇಶದ ಮೇಲೆ ಚೀನಿಯರು ದಾಳಿ ಮಾಡಿದ ಸಂದರ್ಭದಲ್ಲಿ ಮೊದಲ ತುರ್ತುಪರಿಸ್ಥಿತಿಯನ್ನು ಹೇರಲಾಯಿತು.
3. ಮೊದಲ ತುರ್ತು ಪರಿಸ್ಥಿತಿ ಮೂರು ವರ್ಷಗಳ ಅವಧಿಗೆ ಅಸ್ತಿತ್ವದಲ್ಲಿತ್ತು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 3 ಮಾತ್ರ ಡಿ. 1, 2 ಮತ್ತು 3

ಉತ್ತರ : ಡಿ

2. 39ನೇ ಸಂವಿಧಾನಾತ್ಮಕ ತಿದ್ದುಪಡಿ ಕೆಳಗಿನ ಯಾವ ಸಂವಿಧಾನಾತ್ಮಕ ಹುದ್ದೆಗಳ ಬಿಕ್ಕಟ್ಟುಗಳನ್ನು ನ್ಯಾಯಾಂಗದ ಪರಾಮರ್ಶೆಯಿಂದ ಹೊರಗಿಡಲಾಯಿತು?

1. ರಾಷ್ಟ್ರಪತಿಗಳ ಹುದ್ದೆ ಸಂಬಂಧಿತ ಬಿಕ್ಕಟ್ಟು.
2. ಉಪರಾಷ್ಟ್ರಪತಿ ಹುದ್ದೆ ಸಂಬಂಧಿತ ಬಿಕ್ಕಟ್ಟು.
3. ಪ್ರಧಾನ ಮಂತ್ರಿಗಳ ಹುದ್ದೆ ಸಂಬಂಧಿತ ಬಿಕ್ಕಟ್ಟು.
4. ಮುಖ್ಯಮಂತ್ರಿಗಳ ಹುದ್ದೆ ಸಂಬಂಧಿತ ಬಿಕ್ಕಟ್ಟು.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 1 ಮತ್ತು 3 ಡಿ. 2 ಮತ್ತು 3

ಉತ್ತರ : ಎ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಪತಂಜಲಿಯನ್ನು ಯೋಗ ತತ್ತ್ವಶಾಸ್ತ್ರದ ಸ್ಥಾಪಕರೆಂದು ಕರೆಯುತ್ತಾರೆ.
ಬಿ. ಪತಂಜಲಿ ಋಷಿಯು ಯೋಗ ಸೂತ್ರ ಎಂಬ ಗ್ರಂಥವನ್ನು ಬರೆದಿದ್ದಾರೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4 ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಪ್ರಾಚೀನ ವೈದ್ಯಕೀಯ ಪದ್ಧತಿಗಳ ಆಳವಾದ ಜ್ಞಾನವನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ 1995ರಲ್ಲಿ ಭಾರತೀಯ ಔಷಧ ಮತ್ತು ಹೋಮಿಯೋಪಥಿ ಇಲಾಖೆಯನ್ನು ರಚಿಸಲಾಯಿತು.
ಬಿ. ಭಾರತ ಸರ್ಕಾರ 2020ರಲ್ಲಿ ಆಯುಷ್ ಸಚಿವಾಲಯವನ್ನು ರಚಿಸಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಎ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಔಷಧೀಯ ಸಸ್ಯಗಳ ವಲಯವನ್ನು ಉತ್ತೇಜಿಸಲು, ಭಾರತ ಸರ್ಕಾರವು 24 ನವೆಂಬರ್ 2000 ರಂದು ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯನ್ನು ಸ್ಥಾಪಿಸಿದೆ.
ಬಿ. ಪ್ರಸ್ತುತ, ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯು ಆಯುಷ್ (ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ) ಸಚಿವಾಲಯದಲ್ಲಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಜೂನ್ 19ರ, ವಿಶ್ವ ಸಿಕಲ್ ಸೆಲ್ ಜಾಗೃತಿ ದಿನವನ್ನು ಅಧಿಕೃತವಾಗಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಅಂಗೀಕರಿಸಿದೆ.
ಬಿ. 2024 ರ ವಿಶ್ವ ಸಿಕಲ್ ಸೆಲ್ ದಿನದ ಥೀಮ್, 'Hope Through Progress: Advancing Global Sickle Cell Care & Treatment'. ಆಗಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

7. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಜೂನ್ 20 ರಂದು ಪ್ರಪಂಚದಾದ್ಯಂತ ನಿರಾಶ್ರಿತರು ಎದುರಿಸುತ್ತಿರುವ ಹೋರಾಟಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ನಿರಾಶ್ರಿತರ ದಿನವನ್ನು ಆಚರಿಸಲಾಗುತ್ತದೆ.
ಬಿ. 2024ರ ವಿಶ್ವ ನಿರಾಶ್ರಿತರ ದಿನದ ಥೀಮ್,'For a World Where Refugees Are Welcomed.' ಆಗಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

8.ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತೀಯ ನೇವಲ್ ಹೈಡ್ರೋಗ್ರಾಫಿಕ್ ಇಲಾಖೆಯು ಭಾರತದಲ್ಲಿ ಹೈಡ್ರೋಗ್ರಾಫಿಕ್ ಸಮೀಕ್ಷೆಗಳು ಅಥವಾ ಹೈಡ್ರೋಗ್ರಾಫಿಕ್ ಚಾರ್ಟ್ ಅಥವಾ ನಾಟಿಕಲ್ ಚಾರ್ಟ್(Nautical Charting) ಗಳನ್ನು ಪ್ರಕಟಿಸುವ ನೋಡಲ್ ಏಜೆನ್ಸಿಯಾಗಿದೆ.
ಬಿ. ಕೇರಳದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈಡ್ರೋಗ್ರಫಿ ಸಂಸ್ಥೆಯು ಭಾರತದಲ್ಲಿ ಹೈಡ್ರೋಗ್ರಫಿಯಲ್ಲಿ ತರಬೇತಿ ನೀಡುವ ಕೇಂದ್ರವಾಗಿದೆ.

ಕೆಳಗಿನವುಗಳಲ್ಲಿ ಸರಿ ಉತ್ತರವನ್ನು ಆರಿಸಿ.

ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಎ

9 ಕೆಳಗಿನ ಯಾವ ಕಾರಣಗಳಿಂದ ಜರ್ಮನಿಯಲ್ಲಿ ನಾಜಿ ಸರ್ಕಾರ ಅಧಿಕಾರಕ್ಕೆ ಬರುವಂತಾಯಿತು?

1. ವರ್ಸೈಲ್ಸ್ ಒಪ್ಪಂದದಲ್ಲಿ ಜರ್ಮನಿಯ ಮೇಲೆ ವಿಧಿಸಿದ ನಿರ್ಬಂಧಗಳು.
2. 1930 ರ ಆರ್ಥಿಕ ಮುಗ್ಗಟ್ಟು.
3. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ನಿರಂಕುಶ ನಾಯಕತ್ವಗಳು ಅಧಿಕಾರದ ಗದ್ದುಗೆಯನ್ನು ಏರಿದವು.

ಕೋಡ್ ಬಳಸಿ ಸರಿ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 1 ಮತ್ತು 3 ಡಿ. 2 ಮತ್ತು 3

ಉತ್ತರ : ಎ

10. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಸುದ್ದಿಯಲ್ಲಿದ್ದ 'Auschwitz' ಪ್ರದೇಶ ಕೆಳಗಿನ ಯಾವ ರಾಷ್ಟ್ರದಲ್ಲಿ ಕಂಡುಬರುತ್ತದೆ?

ಎ. ಜರ್ಮನಿ ಬಿ. ಹಂಗರಿ.
ಸಿ. ಪೋಲೆಂಡ್ ಡಿ. ಇಟಲಿ.

ಉತ್ತರ : ಸಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Unit-2 PROSE

There's a Girl by the Tracks!

2."Behenji, aap theek hai?" But there was no response and no help in sight. Why was it so? Read paragraph 6 and answer

Ans: The fall had resulted in gash behind Ms Roma's head and blood oozing out of it, as a result she had lost her consciousness. Hence there was no response to Mr Baleshwar's words. Mr Baleswar and Ms Roma were alone somewhere between two stations five kilometers apart in Thane district, hence no help was insight.

3. Fill in the table with appropriate details.

Name	Age	Education	State they belong to	Profession	Reason for boarding the train
Roma					
Baleshawar Mishra					

Ans:-

Name	Age	Education	State they belong to	Profession	Reason for boarding the train
Roma	*21*	*B Com*	*Pune, Maharashtra*	*Executive in a call centre*	*Returning home*
Baleshawar Mishra	*20*	*High School dropout*	*Mirzapur, Uttar Pradesh*	*Unemployed*	*Returning home, after spending day with a friend having lunch and watching movies*

Check your understanding

1. Who volunteered to help Baleshwar?

Ans: A middle aged Gujarati speaking driver of a tempo truck, volunteered to help Mr Baleshwar.

2. **"Roma stirred and her eyes fluttered open." What could have made her react so?**

Ans: Ms Roma was woken up by jerks given by lurching of the vehicle in which she was being carried to the hospital

3. **Some details of Roma's brother are given paragraph 14. Read and fill in the columns appropriately**

Name	Job	Place	Vehicle

Ans:-

Name	Job	Place	Vehicle
Dinesh Talreja	*Marketing*	*Retail outlet, Ulhasnagar*	*Motor cycle*

Share your responses

1)``Oh, I couldn't thank him," Baleshwar thought. Who do you think he couldn't?

Ans: Mr Baleshwar meant the Gujarati speaking middle aged driver of tempo truck who helped all he could, had gone away quietly.

2) Why did Baleshwar revisit the spot where Roma had fallen?

Ans: Mr Baleshwar revisited the spot where Ms Roma had fallen, to look for her belongings as her brother Dinesh Talreja had told him that her cell phone and hand bag are missing.

3) Baleshwar got some assurance from a railway employee. What was that?

Ans: Railway employee assured Mr. Baleshwar that some of the belongings of Ms Roma have been found.

4) Roma said. "I think it's astonishing". What was astonishing?

Ans: It is astonishing that a stranger would jump off a train running in an opposite direction on parallel tracks and risk his life to save Ms Roma lying by side of tracks unconscious and bleeding after fall from her train.

Think about the Text

1. Some incidents relating to Roma Talreja are given below. Put them in the right order.

a. Roma lost her foothold
b. The train hurtled ahead.
c. Roma was thrown out of the coach.
d. Roma was jammed between two women.
e. Roma panicked

Ans: d, b, a, e, c.

2. Baleshwar jumped into action to save the girl. His actions in doing so are given in a jumbled manner. Set them in the right sequence, as in the text.

a. Baleshwar crossed the track.
b. He carried the girl.
c. He saw the girl bleeding.
d. He requested motorists to help him
e. he prayed silently

Ans: c, e, b, a, d.

3. Write briefly about the personal details such as qualification and Profession of Roma Talreja and Baleshwar Mishra after discussion with your classmates.

Ans: Roma Talreja is a B Com graduate from Pune, had been working in a call centre in Mumbai since last two years. She loved her job of talking and connecting to customers and making new customers there. She used to have long phone chat with her fiancé Vijay.

Baleshwar Mishra is an unemployed high school dropout, who had recently come to Mumbai in search of a job. He lived with his two older brothers. His job hunt has proved fruitless and he had resigned to this fact that he was running out of options. He spent his day with a friend, had lunch and watched a movie. *(Contd.......)*

ಎಸ್ಸೆಸ್ಸೆಲ್ಸಿ ಗಣಿತವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY

60. In the dry cell

(a) Which substance acts as anode and which as cathode?
(b) Which electrolyte is used in the cell?
(c) What is the cell potential of the cell?
(d) Why does the cell voltage not change during operation?

Ans:- (a) Zinc container acts as anode while carbon rod behaves as cathode.

(b) A paste of HgO and KOH acts as the electrolyte.

(c) The cell potential is 1.35 V

(d) The cell voltage does not change because the overall redox reaction taking place in the cell does not involve any ions and there is no change in concentration. $Zn(s) + HgO(s) \rightarrow ZnO(s) + Hg(l)$

61. Two platinum electrodes are dipped in an aqueous solution of copper sulphate blue in colour. A current is passed through it –

(a) What will happen on the two electrodes?
(b) What will happen to the colour of the solution?
(c) What is the nature of the solution left in the electrolytic cell.

Ans:- (a) Copper will be deposited on the cathode i.e., the electrode connected to the negative terminal. Oxygen gas (O_2) will evolve at the anode.

(b) The blue of the solution will slowly disappear and it will become colourless.

(c) The solution left in the electrolytic cell will be acidic (aqueous solution of H_2SO_4).

62. Can you store copper sulphate solution in a zinc pot?

Ans:- No, it is not possible. The E° values of the copper and zinc electrodes are as follows:

$$Zn^{2+}(aq) + 2e^- \rightarrow Zn(s)\ ;\ E^\circ = -0.76\ V$$
$$Cu^{2+}(aq) + 2e^- \rightarrow Cu(s)\ ;\ E^0 = +0.34\ V$$

This shows that zinc is a stronger reducing agent than copper. It will lose electrons to Cu^{2+} ions and redox reaction will immediately set in.

$$Zn(s) + Cu^{2+}(aq) \rightarrow Zn^{2}(aq) + Cu(s)$$

Thus, copper sulphate solution cannot be stored in zinc pot.

63. Calculate the potential of hydrogen electrode in contact with a solution with pH equal to 10.

Ans:- For hydrogen electrode, $H^+ + e^- \rightarrow 1/2H_2$

Applying Nernst equation,

$$E_{(H^+/1/2H_2)} = E^0_{(H^+/1/2H_2)} - \frac{0.0591}{n}\log\frac{1}{[H^+]}$$
$$= 0 - \frac{0.0591}{1}\log\frac{1}{(10^{-10})}$$
$$[pH = 10;\ [H^+] = 10^{-10} M]$$
$$= 0 - \frac{0.0591}{1} \times (10 \log 10)$$
$$= -0.591 V$$

64. The cell in which the following reaction occurs $2Fe^{3+}(aq) + 2I^-(aq) \rightarrow 2Fe^{2+}(aq) + I_2(S)$ has E°_{cell} = 0.236 V at 298 K.

Calculate standard Gibbs energy and equilibrium constant for the reaction.

Ans:- The two half reactions are:

$$2Fe^{3+} + 2e^- \rightarrow 2Fe^{2+} \text{ and } 2I^- \rightarrow I_2 + 2e^-$$

For the above reaction, $n = 2$

$$\Delta G^\circ = -nFE^\circ_{cell}$$
$$= (-2mol) \times (96500\ C mol^{-1}) \times (0.236V)$$
$$= -455480 CV = -455480\ J = -45.55 kJ$$
$$\log K_c = \frac{\Delta G^\circ}{2.303RT}$$
$$= -\frac{(-45.55kJ)}{2.303 \times (8.314 \times 10^{-3}\ kJ K^{-1}) \times (298K)}$$
$$= 7.983$$
$$K_c = \text{Anti}\log(7.983) = 9.616 \times 10^7$$

65. Why does the conductivity of a solution decrease with dilution?

Ans:- The conductivity of a solution is linked with the number of ions present per unit volume. With dilution, these decrease and the corresponding conductivity or specific conductance of the solution decreases.

66. If a current of 0.5 ampere flows through a metallic wire for hours, then how many electrons flow through the wire?

Ans:- Quantity of charge (Q) passed =

Current in amperes x Time in seconds

= (0.5 A) x (2 x 60 x 60 s)

= 3600 As

= 3600 C

Number of electrons flowing through the wire by passing a charge of one faraday (96500 C)

$= 6.022 \times 10^{23}$

Number of electrons flowing through the wire by passing a charge of 3600 C

$$= 6.022 \times 10^{23} \times \frac{(3600 C)}{(96500\ C)}$$
$$= 2.246 \times 10^{22}$$

67. The conductivity of 0.20 M solution of KCl at 298 K is 0.0248 S cm^{-1}. Calculate its molar conductivity.

Ans:- Conductivity (κ) = 0.0248 S cm^{-1}

= 0.0248 $0hm^{-1}\ cm^{-1}$

Molar concentration (C) = 0.20 M = 0.2 mol L^{-1}

$$= \frac{(0.2\,mol)}{(1000\,cm^3)}$$
$$= 2.0 \times 10^{-4}\ mol\,cm^{-3}$$
$$\text{Molar conductivity } (L_m) = \frac{\kappa}{C} = \frac{(0.0248\,ohm^{-1}cm^{-1})}{(2.0 \times 10^{-4}\,mol\,cm^{-3})}$$
$$= 124\,ohm^{-1}mol^{-1}cm^2$$
$$= 124\ S mol^{-1}cm^2$$

68. The resistance of a conductivity cell containing 0.001M KCl solution at K is 1500 Ω. What is the cell constant if the conductivity of 0.001 M KCl solution at 298 K is $0.146 \times 10^{-3} S\ cm^2$?

(Contd.....)

ಕ್ಷುದ್ರಗ್ರಹಗಳು ಭೂಮಿಯತ್ತ ಹೊರಟರೆ ಅಪಾಯ: ಎಸ್‌. ಸೋಮನಾಥ್

‘ಭೂಮಿ ರಕ್ಷಣೆಗೆ ಸಂಶೋಧನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಷುದ್ರಗ್ರಹಗಳು ಭೂಮಿಗೆ ಅಪ್ಪಳಿಸುವಂತಹ ಅಪಾಯ ಮುಂದಿನ ನೂರು ವರ್ಷಗಳವರೆಗೆ ಇಲ್ಲ’ ಎಂದು ಇಸ್ರೊ ಅಧ್ಯಕ್ಷ ಎಸ್‌.ಸೋಮನಾಥ್ ಅವರು ಹೇಳಿದರು.

ಅಂತರರಾಷ್ಟ್ರೀಯ ಕ್ಷುದ್ರಗ್ರಹ ದಿನಾಚರಣೆ ಅಂಗವಾಗಿ ಇಸ್ರೊ ಕೇಂದ್ರ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ‘ಕ್ಷುದ್ರಗ್ರಹ ರಕ್ಷಣಾ ಕಾರ್ಯಾಗಾರ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ‘ನಮ್ಮ ಸೌರಮಂಡಲದಲ್ಲಿ ಲಕ್ಷಾಂತರ ಕ್ಷುದ್ರಗ್ರಹಗಳು ಸುತ್ತುತ್ತಿವೆ. ಅವು ಭೂಮಿಯತ್ತ ಹೊರಟರಷ್ಟೇ ಅಪಾಯ. ಕ್ಷುದ್ರಗ್ರಹವು ಭೂಮಿಗೆ ಅಪ್ಪಳಿಸಿದ್ದ ಕಾರಣದಿಂದಲೇ ಡೈನಸಾರ್‌ಗಳು ವಿನಾಶವಾದವು’ ಎಂದು ಅವರು ವಿವರಿಸಿದರು.

‘ಇನ್ನು ಮುಂದಿನ 100 ವರ್ಷಗಳವರೆಗೆ ಅಂತಹ ಅಪಾಯ ಇಲ್ಲ ಎಂದು ವೈಜ್ಞಾನಿಕ ಸಂಶೋಧನೆಗಳು ಹೇಳುತ್ತವೆ. ಆದರೆ ಅಂತಹ ಅಪಾಯ ಎದುರಾದರೆ ಮನುಷ್ಯ ಸಂತತಿಯೂ ಡೈನಸಾರ್‌ಗಳಂತೆ ವಿನಾಶವಾಗಬಹುದು. ಕ್ಷುದ್ರಗ್ರಹಗಳು ಭೂಮಿಗೆ ಅಪ್ಪಳಿಸುವುದನ್ನು ತಡೆಯುವುದು ಹೇಗೆ ಎಂಬುದನ್ನು ಅರ್ಥಮಾಡಿಕೊಳ್ಳಲು ವಿಜ್ಞಾನಿಗಳು ಯತ್ನಿಸುತ್ತಿದ್ದಾರೆ. ಆ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ’ ಎಂದು ಅವರು ವಿವರಿಸಿದರು.

ಭೂಮಿಯತ್ತ ನುಗ್ಗುತ್ತಿರುವ ಕ್ಷುದ್ರಗ್ರಹಗಳನ್ನು ತಡೆಯುವುದು ಹೇಗೆ ಎಂಬುದರ ಬಗ್ಗೆ ಜಪಾನ್ ಬಾಹ್ಯಾಕಾಶ ಸಂಶೋಧನಾ ಏಜೆನ್ಸಿಯು (ಜಾಕ್ಸಾ) ಕೈಗೊಂಡಿರುವ ‘ಹಯಾಬುಸಾ–2’ ಕಾರ್ಯಾಚರಣೆಯನ್ನು ಅವರು ಸಂಸ್ಥೆಯ ವಿಜ್ಞಾನಿ ಮಕೊಟ ಯೊಶಿಕಾವಾ ವಿವರಿಸಿದರು. ‘ಹಯಾಬುಸಾ–2 ನೌಕೆ ರ್‍ಯುಗೂ ಎಂಬ ಕ್ಷುದ್ರಗ್ರಹದ ಮಾದರಿಯನ್ನು ಸಂಗ್ರಹಿಸಿ ಭೂಮಿಗೆ ಈಗಾಗಲೇ ಕಳುಹಿಸಿದೆ. ವಿಸ್ತರಿತ ಕಾರ್ಯಾಚರಣೆಯಲ್ಲಿ ಆ ನೌಕೆಯು 2026ರಲ್ಲಿ ‘2021 ಸಿಸಿ21’ ಎಂಬ ಕ್ಷುದ್ರಗ್ರಹಕ್ಕೆ ತೀರಾ ಸಮೀಪದಲ್ಲಿ ಹಾದುಹೋಗಲಿದೆ. ಭೂಮಿಯತ್ತ ನುಗ್ಗುತ್ತಿರುವ ಕ್ಷುದ್ರಗ್ರಹಗಳ ಕಕ್ಷೆಯ ದಿಕ್ಕನ್ನು ಬದಲಿಸಲು ಸಾಧ್ಯವೇ ಎಂಬುದನ್ನು ಆಗ ಪರಿಶೀಲಿಸಲಾಗುತ್ತದೆ’ ಎಂದು ಅವರು ವಿವರಿಸಿದರು.

ಇಸ್ರೊ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ಸಂಸ್ಥೆಯ ವೈಜ್ಞಾನಿಕ ಕಾರ್ಯದರ್ಶಿ ಶಂತನು ಭಟವಾಡೇಕರ್, ಇಸ್ರೊ ಅಧ್ಯಕ್ಷ ಎಸ್‌.ಸೋಮನಾಥ್ ಮತ್ತು ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿಯ ನಿರ್ದೇಶಕ ಅನಿಲ್ ಭಾರಧ್ವಾಜ್ ಇದ್ದರು –ಪ್ರಜಾವಾಣಿ ಚಿತ್ರ

‘ಗಗನಯಾನ ನೌಕೆ ಸುರಕ್ಷಿತ’

ಕ್ಷುದ್ರಗ್ರಹಗಳಿಂದ ಭೂಮಿಯನ್ನು ರಕ್ಷಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಐರೋಪ್ಯ ದೇಶಗಳು, ಜಪಾನ್ ಮತ್ತು ಅಮೆರಿಕ ಸಂಶೋಧನೆ ನಡೆಸುತ್ತಿವೆ. ಇಸ್ರೊ ಸಹ ಇದರ ಭಾಗಿಯಾಗಲು ಬಯಸುತ್ತದೆ

ಎಸ್‌.ಸೋಮನಾಥ್, ಇಸ್ರೊ ಅಧ್ಯಕ್ಷ

‘ಗಗನಯಾನ ನೌಕೆ ಸುರಕ್ಷಿತವಾಗಿದೆ. ಈ ವರ್ಷದ ಅಂತ್ಯದ ವೇಳೆಗೆ ಮಾನವರಹಿತ ಗಗನನೌಕೆಯನ್ನು ಉಡ್ಡಯನ ಮಾಡಲಾಗುತ್ತದೆ’ ಎಂದು ಎಸ್‌.ಸೋಮನಾಥ್ ಅವರು ಹೇಳಿದರು.

‘ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಸಿಲುಕಿರುವ ಸುನಿತಾ ವಿಲಿಯಮ್ಸ್ ಸುರಕ್ಷಿತವಾಗಿದ್ದಾರೆ. ಈ ಅವಘಡ ಮತ್ತು ರಕ್ಷಣಾ ಕಾರ್ಯಾಚರಣೆಯು ನಮಗೊಂದು ಪಾಠವಾಗಲಿದೆ. ಅದರಿಂದ ಕಲಿಯಲು ಸಾಕಷ್ಟಿದೆ’ ಎಂದು ಅವರು ಹೇಳಿದರು.

ಚಂದ್ರಯಾನ–4 ಸೇರಿ ಹಲವು ಪ್ರಸ್ತಾವಗಳು ಇಸ್ರೊ ಮುಂದೆ ಇವೆ ಎಂದು ಅವರು ಮಾಹಿತಿ ನೀಡಿದರು.

ಒಂದು ಸುತ್ತು ಪೂರೈಸಿದ ಆದಿತ್ಯ–ಎಲ್1

ಇಸ್ರೊವಿನ ಆದಿತ್ಯ–ಎಲ್1 ನೌಕೆಯು ಲಗ್ರಾಂಜಿಯನ್ ಹ್ಯಾಲೊ ಕ್ಷಕೆಯಲ್ಲಿ ಒಂದು ಸುತ್ತು ಬಂದಿದೆ. ಇದೇ ಜನವರಿ 6ರಂದು ನೌಕೆಯನ್ನು ಲಗ್ರಾಂಜಿಯನ್ ಕಕ್ಷೆಗೆ ಸೇರಿಸಲಾಗಿತ್ತು. 178 ದಿನಗಳಲ್ಲಿ ನೌಕೆಯು ಕ್ಷಕೆಯಲ್ಲಿ ಒಂದು ಸುತ್ತು ಬಂದಿದೆ. ಈಗ ಎರಡನೇ ಸುತ್ತನ್ನು ಆರಂಭಿಸಿದೆ.

178 ದಿನಗಳ ಈ ಪಯಣದಲ್ಲಿ ನೌಕೆಯ ದಿಕ್ಕನ್ನು ಬದಲಿಸುವ ಎರಡು ಕಾರ್ಯಾಚರಣೆಗಳನ್ನು ನಡೆಸಲಾಗಿತ್ತು. ನೌಕೆಯು ಕಕ್ಷೆಯಿಂದ ಸ್ವಲ್ಪ ದೂರ ಸರಿದಿದ್ದ ಕಾರಣದಿಂದ ಫೆಬ್ರುವರಿ 22 ಮತ್ತು ಜೂನ್ 7ರಂದು ಕಾರ್ಯಾಚರಣೆ ನಡೆಸಲಾಗಿತ್ತು. ಬುಧವಾರ ಮತ್ತೊಮ್ಮೆ ಇಂತಹ ಕಾರ್ಯಾಚರಣೆ ನಡೆಸಿ, ನೌಕೆಯು ಅದೇ ಕ್ಷಕೆಯಲ್ಲಿ ಮುಂದುವರಿಯುವಂತೆ ಮಾಡಲಾಗಿದೆ ಎಂದು ಇಸ್ರೊ ಮಾಹಿತಿ ನೀಡಿದೆ.

ಚನ್ನಪಟ್ಟಣ: ದೇವೇಗೌಡ ಪುತ್ರಿ ಕಣಕ್ಕೆ?

ಅನಸೂಯ ಅವರಿಗೆ ಟಿಕೆಟ್ ನೀಡಲು ಪಕ್ಷದ ಯೋಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರ ಮಗಳು ಅನಸೂಯ ಮಂಜುನಾಥ್ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಜೆಡಿಎಸ್ ರಾಜ್ಯಾಧ್ಯಕ್ಷ– ಕೇಂದ್ರ ಸಚಿವಎಚ್ .ಡಿ. ಕುಮಾರಸ್ವಾಮಿ ಮತ್ತು ಪಕ್ಷದ ಹಿರಿಯ ನಾಯಕರು ಇದೇ ಶನಿವಾರ ಸಭೆ ನಡೆಸಲಿದ್ದಾರೆ. ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಯಲಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಆಗಿ ಹೃದ್ರೋಗ ತಜ್ಞ ಡಾ.ಸಿ.ಎನ್‌. ಮಂಜುನಾಥ್ ಕಣಕ್ಕೆ ಇಳಿದಿದ್ದರು. ಮಂಜುನಾಥ್ ಪರವಾಗಿ ಪತ್ನಿ ಅನಸೂಯ ರಾಮನಗರ, ಕನಕಪುರ ಮತ್ತು ಚನ್ನಪಟ್ಟಣಗಳಲ್ಲಿ ಮನೆ–ಮನೆಗೆ ತೆರಳಿ ಪ್ರಚಾರ ನಡೆಸಿದ್ದರು. ಪ್ರಚಾರದ ವೇಳೆ ಅವರು ರೂಪಿಸಿದ್ದ ತಂತ್ರ ಮತ್ತು ಅವರ ಪ್ರಚಾರದ ವೈಖರಿಯನ್ನು ಪರಿಗಣಿಸಿ, ಉಪಚುನಾವಣೆಗೆ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ಪಕ್ಷವು ಯೋಚಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಅನಸೂಯ

ಚನ್ನಪಟ್ಟಣದಿಂದ ಕಣಕ್ಕೆ ಇಳಿಯಲು ಆಸಕ್ತಿ ಇಲ್ಲ ಎಂದು ನಿಖಿಲ್ ಕುಮಾರಸ್ವಾಮಿ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಬಿಜೆಪಿ ಮೂಲಕ ವಿಧಾನ ಪರಿಷತ್ತಿಗೆ ಆಯ್ಕೆಯಾಗಿರುವ ಸಿ.ಪಿ.ಯೋಗೇಶ್ವರ್ ಅವರನ್ನು ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸುವ ಸಾಧ್ಯತೆ ಕಡಿಮೆ. ಅವರು ವಿಧಾನಸಭೆಗೆ ಚುನಾಯಿತರಾದರೆ, ವಿಧಾನಪರಿಷತ್ತಿನಲ್ಲಿ ಬಿಜೆಪಿಗೆ ಒಂದು ಸ್ಥಾನ ನಷ್ಟವಾಗಲಿದೆ ಎಂದು ಮೂಲಗಳು ತಿಳಿಸಿವೆ. ಅನಸೂಯ ಅವರನ್ನು ಜೆಡಿಎಸ್ ಕಣಕ್ಕೆ ಇಳಿಸಿದರೆ, ಕಾಂಗ್ರೆಸ್ ಎಚ್‌.ಕುಸುಮ ಅವರನ್ನು ಕಣಕ್ಕೆ ಇಳಿಸುವ ಸಾಧ್ಯತೆ ಇದೆ ಎಂಬ ಮಾತೂ ಚಾಲ್ತಿಗೆ ಬಂದಿದೆ.

ಶಿಕ್ಷಕನ ವಿರುದ್ಧ ಪ್ರಕರಣ

ಹುಮನಾಬಾದ್ (ಬೀದರ್ ಜಿಲ್ಲೆ): ಏಳನೇ ತರಗತಿಯ ವಿದ್ಯಾರ್ಥಿ ಹಾಗೂ ಅವರ ಕುಟುಂಬದ ಸದಸ್ಯರನ್ನು ಮನ ಬಂದಂತೆ ಥಳಿಸಿದ ಶಾಲಾ ಶಿಕ್ಷಕ ಸಾಹೇಬ್ ಗೌಡ ಅವರ ವಿರುದ್ಧ ತಾಲ್ಲೂಕಿನ ಹಳ್ಳಿಖೇಡ್ (ಬಿ) ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳ್ಳಿಖೇಡ್ ಗ್ರಾಮದ ‘ಎಕ್ಸಲೆಂಟ್’ ರೆಸಿಡೆನ್ಶಿಯಲ್ ಶಾಲೆಯ ವಿದ್ಯಾರ್ಥಿ ಪವನ್ ಜೂನ್ 30ರಂದು ಶಿಕ್ಷಕ ಸಾಹೇಬ್ ಅವರಿಗೆ ಹಾಲು ಕೊಡಲು ಅವರ ಮನೆಯ ಮಹಡಿಯೊಳಗೆ ಹೋಗಿದ್ದ. ಇದರಿಂದ ಕೋಪ ಗೊಂಡ ಸಾಹೇಬ್, ಪವನ್‌ಗೆ ಥಳಿಸಿದ್ದರು. ಇದನ್ನು ಪ್ರಶ್ನಿಸಲು ಸಾಹೇಬ್ ಗೌಡ ಬಳಿ ಪವನ್ ತಂದೆ ಮಲ್ಲಿಕಾರ್ಜುನ, ಅಜ್ಜಿ ಹಾಗೂ ಸಹೋದರಿ ಹೋಗಿದ್ದರು. ಸಾಹೇಬ್ ಕೆಲವು ಜನರನ್ನು ಸ್ಥಳಕ್ಕೆ ಕರೆಸಿಕೊಂಡು ಮೂವರಿಗೆ ಬಡಿಗೆಗಳಿಂದ ಹೊಡೆದು ಗಾಯಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತೆಪ್ಪ ದುರಂತ: ಮೂವರ ಶವ ಪತ್ತೆ

ಒಂದನೇ ಪುಟದಿಂದ...

‘ಜೂಜಾಟದ ಬಗ್ಗೆ ಸುಳಿವು ಸಿಕ್ಕ ಹಿನ್ನೆಲೆಯಲ್ಲಿ ಪೊಲೀಸರು ಕಾರ್ಯಾಚರಣೆ ನಡೆಸಿದಾಗ, ಕೆಲ ಗ್ರಾಮಸ್ಥರು ಓಡಿ ಹೋದರು. ಇನ್ನೂ ಕೆಲವರು ತೆಪ್ಪದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ, ತೆಪ್ಪ ಮಗುಚಿದ್ದರಿಂದ ಎಲ್ಲರೂ ನೀರಿಗೆ ಬಿದ್ದರು. ತೆಪ್ಪದಲ್ಲಿದ್ದ ಬಶೀರ್ ಹೊನವಾಡ, ಫಾರುಕ್ ಫತೇಹ್ ಅಹಮದ್ ಹಾಗೂ ಸಚಿನ್ ಕಟಬರ ಎಂಬವರು ಈಜಿ ದಡ ಸೇರಿದರು. ಉಳಿದ ಐವರು ನೀರು ಪಾಲಾದರು’ ಎಂದು ಅವರು ತಿಳಿಸಿದರು.

ಅಗ್ನಿಶಾಮಕ ಸಿಬ್ಬಂದಿ, ಮೀನುಗಾರರು ಮತ್ತು ಪೊಲೀಸರು ಎಂಟು ತಂಡಗಳನ್ನು ರಚಿಸಿಕೊಂಡು ದೋಣಿ, ತೆಪ್ಪಗಳಲ್ಲಿ ಬುಧವಾರ ಶೋಧ ಕಾರ್ಯಾಚರಣೆ ನಡೆಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಶವಗಳ ಮರಣೋತ್ತರ ಪರೀಕ್ಷೆ ನಡೆಯಿತು.

ಸಚಿವರಿಂದ ವೈಯಕ್ತಿಕ ಪರಿಹಾರ: ಬಸವನಬಾಗೇವಾಡಿ ಕ್ಷೇತ್ರದ ಶಾಸಕರೂ ಆದ ಸಚಿವ ಶಿವಾನಂದ ಪಾಟೀಲ ಅವರು ಬುಧವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ನಂತರ ಮೂವರ ಕುಟುಂಬದವರಿಗೆ ವೈಯಕ್ತಿಕವಾಗಿ ತಲಾ ₹3 ಲಕ್ಷ ಪರಿಹಾರ ನೀಡಿದರು.

‘ಸಾವಿಗೀಡಾದವರ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ, ತೀರ್ಮಾನಿಸಲಾಗುವುದು’ ಎಂದು ಅವರು ತಿಳಿಸಿದರು.

ವಿಜಯಪುರ ಜಿಲ್ಲೆಯ ಕೊಲ್ಹಾರ ಸಮೀಪ ಕೃಷ್ಣಾ ನದಿಯಲ್ಲಿ ತೆಪ್ಪ ಮುಳುಗಿ ನಾಪತ್ತೆಯಾದವರಿಗಾಗಿ ಮೀನುಗಾರರು ಬುಧವಾರ ಶೋಧ ನಡೆಸಿದರು –ಪ್ರಜಾವಾಣಿ ಚಿತ್ರ

371ಜೆ ಅಡಿ ಮೀಸಲಾತಿ ಮಾರ್ಗಸೂಚಿ ಸಿದ್ಧಪಡಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ 371ಜೆ ಅಡಿ ಹುದ್ದೆಗಳಿಗೆ ನೇಮಕಾತಿ ಹಾಗೂ ಬಡ್ತಿ ಮೀಸಲಾತಿ ನೀಡುವ ಸಂದರ್ಭದಲ್ಲಿ ಉಂಟಾಗುವ ಗೊಂದಲಗಳನ್ನು ನಿವಾರಿಸಲು ಸೂಕ್ತ ಮಾರ್ಗಸೂಚಿಗಳನ್ನು ಸಿದ್ಧಪಡಿಸುವಂತೆ ಡಿಪಿಎಆರ್, ಕೆಪಿಎಸ್‌ಸಿ ಮತ್ತು ಕೆಇಎ ಅಧಿಕಾರಿಗಳಿಗೆ 371 ಜೆ ಸಚಿವ ಸಂಪುಟ ಉಪ ಸಮಿತಿ ಅಧ್ಯಕ್ಷರೂ ಆಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ಸಮಿತಿಯ ಸಭೆ ಬುಧವಾರ ನಡೆಯಿತು. ಹುದ್ದೆಗಳಿಗೆ ನೇಮಕಾತಿಗೆ ಸಂಬಂಧಪಟ್ಟಂತೆ ಅರ್ಜಿ ಆಹ್ವಾನ, ಆಯ್ಕೆ ಪಟ್ಟಿ ಪ್ರಕಟಣೆ ಸಂದರ್ಭದಲ್ಲಿ ಪದೇ ಪದೇ ಗೊಂದಲಗಳು ಉಂಟಾಗುತ್ತಿವೆ. ಅದನ್ನು ತಪ್ಪಿಸಲು ಸೂಕ್ತ ಮಾರ್ಗಸೂಚಿ ಸಿದ್ಧಪಡಿಸಿ ಸಮಿತಿಯ ಮುಂದಿನ ಸಭೆಗೆ ಮಂಡಿಸುವಂತೆ ಅವರು ತಿಳಿಸಿದರು.

ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ, ಡಿಪಿಎಆರ್ ಕಾರ್ಯದರ್ಶಿ ಡಿ. ರಂದೀಪ್, ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್, ಕೆಇಎ ಮತ್ತು ಯೋಜನೆ ಹಾಗೂ ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ಇದ್ದರು.

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ–577501

E-mail: dcpocta@gmail.com Ph: 08194-295822



ಪೋಷಕರ ಪತ್ತೆಗಾಗಿ ಮನವಿ

15 ದಿನದ ನವಜಾತ ಹೆಣ್ಣು ಶಿಶು (ಇಂಪನ) ಬಾಲಕಿಯ ಪೋಷಕರ ಪತ್ತೆಗಾಗಿ ಭಾವಚಿತ್ರದೊಂದಿಗೆ ಪ್ರಕಟಣೆ ಹೊರಡಿಸಲಾಗಿದೆ. (1) ಮಗುವಿನ ಹೆಸರು:– ಇಂಪನ. (2) ವಯಸ್ಸು: 27 ದಿನದ ನವಜಾತ ಹೆಣ್ಣು ಶಿಶು. (3) ಮಗು ಸಿಕ್ಕಿದ ಸ್ಥಳ: 5ನೇ ವಾರ್ಡ್ ದುಗ್ಗಮ್ಮ ಎಂಬುವವರ ಮನೆ ಪಕ್ಕ, ಕೋರ್ಟ್ ರಸ್ತೆ, ಹಿರಿಯೂರು ನಗರ. (4) ದಾಖಲಾತಿ ದಿನಾಂಕ: 04.06.2024 (5) ಮೈಬಣ್ಣ:– ಎಣ್ಣೆ ಗೆಂಪು (6) ತೂಕ: 2 ಕೆ.ಜಿ. 600 ಗ್ರಾಂ. (7) ಮಗುವಿನ ಎತ್ತರ:– 45 ಸೆ.ಮೀ (8) ಮಗುವಿನ ಆರೋಗ್ಯ ಸ್ಥಿತಿ:– ಸಾಧಾರಣ.

(9) ಪೋಷಕರು ಪತ್ತೆಯಾದರೆ ಸಂಪರ್ಕಿಸುವ ವಿಳಾಸ:– ಬಾಲಕಿಯರ ಸರ್ಕಾರಿ ಬಾಲಮಂದಿರ, ಚಿತ್ರದುರ್ಗ, ಸರ್ಕಾರಿ ಕಲಾ ಕಾಲೇಜು ಎದುರು, ಜಿಲ್ಲಾ ಪಂಚಾಯತ್ ರಸ್ತೆ, ಚಿತ್ರದುರ್ಗ ದೂರವಾಣಿ ಸಂಖ್ಯೆ:08194– 295986 ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾ ಬಾಲಭವನ ಆವರಣ, ಬುದ್ಧ ನಗರ, ಸ್ಟೇಡಿಯಂ ಹತ್ತಿರ, ಚಿತ್ರದುರ್ಗ ದೂ. ಸಂಖ್ಯೆ: 08194–295822

DIPR/CTA/KSMCA/89/2024-25

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು. ಜಿಲ್ಲಾ ಸಮಗ್ರ ಮಕ್ಕಳ ರಕ್ಷಣಾ ಘಟಕ ಚಿತ್ರದುರ್ಗ.

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)

ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in

ಸಂಖ್ಯೆ. ಬಿಎಂಆರ್‌ಸಿಎಲ್/ಇಎಲ್‌ಇ/178/2024/ವಿಇಎಲ್–II ದಿನಾಂಕ: 04.07.2024

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು, "**ಹಂತ–2ಎ ಮತ್ತು ಹಂತ–2ಬಿ ಮೆಟ್ರೋ ನಿಲ್ದಾಣಗಳಿಗೆ ಎಸ್ಕಲೇಟರುಗಳು ಮತ್ತು ಟ್ರಾವೆಲೇಟರ್‌ಗಳ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷೆ ಮಾಡುವುದು ಮತ್ತು ಕಾರ್ಯಾರಂಭ ಮಾಡುವುದು ಹಾಗೂ 02 ವರ್ಷಗಳ ಡಿಎಲ್‌ಪಿ ಪೂರ್ಣಗೊಂಡ ಮೇಲೆ 10 ವರ್ಷಗಳ ಸಿಎಎಂಸಿ ಸೇರಿದಂತೆ ಕಾಮಗಾರಿಗಾಗಿ**" ಸೂಕ್ತ ಅರ್ಹತೆ ಹೊಂದಿರುವ ಅರ್ಹ, ಹೆಸರಾಂತ ಮತ್ತು ಅನುಭವ ಹೊಂದಿರುವ ಟೆಂಡರ್‌ದಾರರಿಂದ ಏಕ ಹಂತ, ದ್ವಿ ಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್‌ಗಳನ್ನು ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್ (ಎಲ್‌ಸಿಬಿ) ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ದಸ್ತಾವೇಜುಗಳ ಬೆಲೆ (ಹಿಂತಿರುಗಿಸಲಾಗದು) ರೂ. **1,18,000/–** (1,00,000+18000 (ಜಿಎಸ್‌ಟಿ@18%). ದಸ್ತಾವೇಜುಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಅವಧಿ: **04.07.2024 ರಿಂದ 17.08.2024ರ ಮಧ್ಯರಾತ್ರಿವರೆಗೆ.** ಟೆಂಡರ್ ಸಲ್ಲಿಸುವ **ದಿನಾಂಕ: 23.08.2024 ರಂದು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ **ದಿನಾಂಕ: 23.08.2024 ರಂದು ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ **ದಿನಾಂಕ: 04.07.2024 ರಿಂದ** ನಮ್ಮ ವೆಬ್‌ಸೈಟ್ **www.bmrc.co.in** ಗೆ ಭೇಟಿನೀಡಿ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್)

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

‘ವಿಜ್ಞಾನ ಭವನ’, ನಂ. 24/2, 3ನೇ ಮಹಡಿ, 2ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು– 560070.

ಸಂಖ್ಯೆ: KSTePS/Vehicle-Tender/2024-25 ದಿನಾಂಕ: 03.07.2024

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಸಂಖ್ಯೆ : ITBTST/2024-25/SE0009

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು (ಕೆಸ್ಟೆಪ್ಸ್) ಕರ್ನಾಟಕ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಸ್ಥಾಪನೆಯಾಗಿರುವ ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಕೆಸ್ಟೆಪ್ಸ್ ಸಂಸ್ಥೆ ಮತ್ತು ಇಲಾಖೆಯ ಸಚಿವಾಲಯ ಹಾಗೂ ಮಾನ್ಯ ಇಲಾಖಾ ಸಚಿವರ ಕಛೇರಿಗಳ ಕೆಲಸ ಕಾರ್ಯಗಳಿಗಾಗಿ ವಿವಿಧ ಮಾದರಿಯ ವಾಹನಗಳ ಸೇವೆಯನ್ನು ಹೊರಗುತ್ತಿಗೆಯ ಮೂಲಕ ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ದಿನದ ಬಾಡಿಗೆ ಆಧಾರದ ಮೇಲೆ ಒದಗಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಮಾಹಿತಿಯನ್ನು ದಿನಾಂಕ 03.07.2024 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದಾಗಿದ್ದು, ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ **23.07.2024 ಸಂಜೆ 05.30 ಗಂಟೆಯವರೆಗೆ** ಕಾಲಾವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ **https://eproc.karnataka.gov.in** ಪೋರ್ಟಲ್ ಅನ್ನು ಸಂಪರ್ಕಿಸಬಹುದು.

ಸಹಿ/ ವ್ಯವಸ್ಥಾಪಕ ನಿರ್ದೇಶಕರು ಕೆಸ್ಟೆಪ್ಸ್

ವಾಸಾಸಂಇ/ವಾಪ್ರ/ಜಿಎ/735/2024–25

KSSIDC ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010. ದೂರವಾಣಿ ಸಂಖ್ಯೆ: 080–23407011–25

ಇ–ಮೇಲ್: kssidcho@gmail.com / chiefengineerkssidc@gmail.com

No: ENGG:SE ep-85:Balance Upgradation:DPRConsultancy:2024-25 Date: 02.07.2024

ಟೆಂಡರ್ ಪ್ರಕಟಣೆ

(ದ್ವಿ ಟೆಂಡರ್ ದಾಖಲೆ ಪದ್ಧತಿ)

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡಂತೆ ವಿಸ್ತೃತ ಯೋಜನಾ ವರದಿಯನ್ನು ಸಿದ್ದಪಡಿಸಲು (DPR) ನುರಿತ ಸಲಹೆಗಾರರನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದ್ದು ಹಾಗೂ ಕೈಗಾರಿಕಾ ವಸಾಹತು ಸಿಂದಗಿ, ವಿಜಯಪುರದಲ್ಲಿ ಉಳಿಕೆ ಉನ್ನತೀಕರಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಕರ್ನಾಟಕ PWD, CPWD ಯಿಂದ ನೊಂದಾಯಿಸಲ್ಪಟ್ಟ ಪರವಾನಗಿಯುಳ್ಳ, ಸೂಚಿಸಿದ ಆರ್ಥಿಕ ಸಾಮರ್ಥ್ಯ ಹಾಗೂ ತಾಂತ್ರಿಕ ಮಾನವಸಂಪನ್ಮೂಲವುಳ್ಳ ಮತ್ತು ಕಾಮಗಾರಿ ಕೆಲಸಗಳ ಅನುಭವವಿರುವ ಅರ್ಹ ಗುತ್ತಿಗೆದಾರರು (ಸಿವಿಲ್) ಇವರಿಂದ ಐಟಂವಾರು ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಟೆಂಡರ್ ದಾಖಲೆ ಪದ್ಧತಿ (TWO TENDER DOCUMENT SYSTEM) ಪ್ರಕಾರ ಟೆಂಡರ್ ಕರೆಯಲಾಗಿದೆ. ಈ ಬಗ್ಗೆ ಟೆಂಡರ್ ಪ್ರಕಟಣೆಯನ್ನು No: ENGG:SE ep-85:Balance Upgradation:DPR Consultancy:2024-25 Dated 02-07-2024 ರಂತೆ ಹೊರಡಿಸಲಾಗಿರುತ್ತದೆ.

Sl. No.	Name of the Project	Apprx. Project Cost in Lakhs	E.M.D in Lakhs.
1	Balance Upgradation of infrastructure works by construction RCC Drain, Asphalting to existing road, formation of new road and allied works at Industrial Estate Sindagi, Vijayapura Dist.	260.00	3.90
2	Selection of consultancy services for preparation of DPR's including surveys, designs, drawings, estimates and reports for various works in KSSIDC for a period of 1 year	5000.00	1.00

ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ **https://kppp.Karnataka.gov.in** (Karnataka State Small Industries Development Corporation Limited) ಮುಖಾಂತರ ದಿನಾಂಕ: **03–07–2024 ಮಧ್ಯಾಹ್ನ 16.00 ಗಂಟೆಯಿಂದ** ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದು.

ಭರ್ತಿ ಮಾಡಲಾದ (On-line submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** (Karnataka State Small Industries Development Corporation Limited) ಇ–ಪೋರ್ಟಲ್ ಮೂಲಕ ದಿನಾಂಕ: **05–08–2024, 16.00 ಗಂಟೆಯೊಳಗೆ** ಸಲ್ಲಿಸಲು ಕೋರಿದೆ.

ಟೆಂಡರ್ ನ ಕಾಲಮಿತಿ ವಿವರಗಳು: (1) ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ ದಿನಾಂಕ: **09–07–2024, ಮಧ್ಯಾಹ್ನ 12.00 ಗಂಟೆಗೆ.** (2) ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **05–08–2024, 16.00 ಗಂಟೆಯು ವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **07–08–2024, 16.00 ಗಂಟೆಗೆ.** (4) ತಾಂತ್ರಿಕ ಬಿಡ್‌ಗಳ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಯನ್ನು ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಕಛೇರಿ ಅವಧಿಯಲ್ಲಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸೆಲ್ / ಹೆಲ್ಪ್‌ಡೆಸ್ಕ್ (ದೂರವಾಣಿ ಸಂಖ್ಯೆ. 080–25501227/25501216) ಮುಖಾಂತರ ಪಡೆಯಲು ಕೋರಿದೆ.

ಸಹಿ/– ಅಧೀಕ್ಷಕ ಅಭಿಯಂತರರು

DIPR/CP/751/2024-25

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667

ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕವಿನಿಆ/ಎಫ್–34/ವಿಎಲ್–15/279 ದಿನಾಂಕ: 02–07–2024

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಲಭ್ಯವಿರುವ ಡಿಜಿಟಲ್ ಮತ್ತು ಸ್ಟಾಟಿಕ್ ಮೀಟರ್‌ಗಳಿಗೆ ಸ್ಮಾರ್ಟ್ ಮೋಡ್ಯುಲ್ ಅಳವಡಿಕೆ) ಮಾರ್ಗಸೂಚಿಗಳು, 2024 – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಕರಡು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಸೋಮವಾರ ದಿನಾಂಕ: 08–07–2024 ರಂದು ಬೆಳಿಗ್ಗೆ 11.00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ವಾಸಾಸಂಇ/ವಾ.ಪ್ರ/731/2024–25

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

3ನೇ ಮಹಡಿ, ಟಿ.ಟಿ.ಎಂ.ಸಿ ‘ಬಿ’ ಬ್ಲಾಕ್, ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560027. ದೂರವಾಣಿ ಸಂಖ್ಯೆ: 080–22223753/58

ಸಂಖ್ಯೆ: ಡಿಡಿಯುಟಿಟಿಎಲ್/ತಾಂ.ವಿ/ಟೆಂಡರ್/2024–25/435 ದಿನಾಂಕ: 03–07–2024

ಇ–ಹರಾಜು ಪ್ರಕಟಣೆ

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ ವ್ಯಾಪ್ತಿಯಲ್ಲಿ ಬರುವ

1) ಬೆಂಗಳೂರು ಉತ್ತರ ತಾಲ್ಲೂಕು, ನೆಲಮಂಗಲ ಹೋಬಳಿ, ದಾಸನಪುರದ ಟ್ರಕ್ ಟರ್ಮಿನಲ್ ಆವರಣದಲ್ಲಿ ಮೀಸಲಿಡಲಾಗಿರುವ ಒಟ್ಟು 36 ಏಜೆಂಟ್ ಕಛೇರಿ ಕೊಠಡಿಗಳು.

2) ಉತ್ತರ ಕನ್ನಡ ಜಿಲ್ಲೆ, ಹಳಿಯಾಳ ತಾಲ್ಲೂಕು, ದಾಂಡೇಲಿಯಲ್ಲಿನ ಟ್ರಕ್ ಟರ್ಮಿನಲ್ ಆವರಣದಲ್ಲಿ ಗುರುತಿಸಲಾಗಿರುವ ಬಾಕಿ ನಿವೇಶನಗಳು.

3) ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕು, ಅಮರಾವತಿ ಹೋಬಳಿ, ಅಮರಾವತಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ–50 ಕ್ಕೆ ಹೊಂದಿಕೊಂಡಂತೆ ಇರುವ 37.82 ಎಕರೆ ಟ್ರಕ್ ಟರ್ಮಿನಲ್‌ನ ಜಾಗದಲ್ಲಿ ಗುರುತಿಸಲಾಗಿರುವ ಒಟ್ಟು 100 ನಿವೇಶನಗಳು ಮತ್ತು

4) ಮೈಸೂರಿನ ಟ್ರಕ್ ಟರ್ಮಿನಲ್ ಆವರಣದಲ್ಲಿ ಗುರುತಿಸಲಾಗಿರುವ ಸಾರಿಗೆ ಚಟುವಟಿಕೆಗಳಲ್ಲಿ ನಿರತರಾಗಿರುವವರಿಗೆ ಮೀಸಲಿಡಲಾಗಿರುವ ಬಾಕಿ ನಿವೇಶನಗಳು ಹಾಗೂ ರಿಂಗ್ ರಸ್ತೆಗೆ ಹೊಂದಿಕೊಂಡಿರುವ ವಾಣಿಜ್ಯ ನಿವೇಶನಗಳು.

ವಿಲೇ ಮಾಡಲು ಉದ್ದೇಶಿಸಿರುವ ನಿವೇಶನಗಳನ್ನು ಆಸಕ್ತ ಅರ್ಹ ಅಭ್ಯರ್ಥಿಗಳು ಅವರಿಚ್ಛೆಯಂತೆ ವಾಣಿಜ್ಯ ನಿವೇಶನ ಸಂಖ್ಯೆಗಳನ್ನು ಆಯ್ಕೆ ಮಾಡಿಕೊಂಡು ಇ–ಜಾಲತಾಣದಲ್ಲಿ ಪಾರದರ್ಶಕವಾಗಿ ಬಿಡ್ ಮಾಡಿ ಸದರಿ ನಿವೇಶನಗಳನ್ನು ತಮ್ಮದಾಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

1) ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕು, ಅಮರಾವತಿ ಹೋಬಳಿ, ಅಮರಾವತಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ–50 ಕ್ಕೆ ಹೊಂದಿಕೊಂಡಂತೆ ಇರುವ 37.82 ಎಕರೆ ಜಮೀನಿನಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಟ್ರಕ್ ಟರ್ಮಿನಲ್‌ನಲ್ಲಿ ಟ್ರಕ್‌ಗಳ ನಿಲುಗಡೆಗೆ ಮೀಸಲಿಡಲಾಗಿರುವ ಸಿಮೆಂಟ್ ಕಾಂಕ್ರೀಟ್ ಸ್ಥಿರ ನಿಲುಗಡೆ ಜಾಗವನ್ನು ಒಂದು / ಎರಡು / ಐದು ವರ್ಷದ ಅವಧಿಗೆ ಟ್ರಕ್ / ಸರಕು ಸಾಗಾಣಿಕೆ ವಾಹನಗಳಿಂದ ನಿಲುಗಡೆ ಶುಲ್ಕ ವಸೂಲಾತಿ ಮತ್ತು ಟರ್ಮಿನಲ್ ನಿರ್ವಹಣೆ ಕಾರ್ಯ.

2) ಬೆಂಗಳೂರು ಉತ್ತರ ತಾಲ್ಲೂಕು, ನೆಲಮಂಗಲ ಹೋಬಳಿ, ದಾಸನಪುರ ಗ್ರಾಮದಲ್ಲಿ ನಿರ್ಮಿಸಲಾಗಿರುವ ಟ್ರಕ್ ಟರ್ಮಿನಲ್‌ನಲ್ಲಿ ಟ್ರಕ್‌ಗಳ ನಿಲುಗಡೆಗೆ ಮೀಸಲಿಡಲಾಗಿರುವ ಸ್ಥಿರ ನಿಲುಗಡೆ ಜಾಗವನ್ನು ಒಂದು / ಎರಡು / ಐದು ವರ್ಷದ ಅವಧಿಗೆ ಟ್ರಕ್ / ಸರಕು ಸಾಗಾಣಿಕೆ ವಾಹನಗಳಿಂದ ನಿಲುಗಡೆ ಶುಲ್ಕ ವಸೂಲಾತಿ ಮತ್ತು ಟರ್ಮಿನಲ್ ನಿರ್ವಹಣೆ ಕಾರ್ಯ.

ಟ್ರಕ್ ಟರ್ಮಿನಲ್‌ನ ಸ್ಥಿರ ನಿಲುಗಡೆ ಜಾಗದ ಶುಲ್ಕ ವಸೂಲಾತಿ ಪರವಾನಿಗೆ ನೀಡುವ ಕಾರ್ಯಗಳಿಗೆ ಸಂಬಂಧಿಸಿದಂತೆ ನೋಂದಾಯಿತ ಗುತ್ತಿಗೆದಾರರಿಂದ / ಅರ್ಹ ಅಭ್ಯರ್ಥಿಗಳಿಂದ ನೂತನ ಇ–ತಂತ್ರಾಂಶದಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್: **https://www.kppp.karnataka.gov.in** ಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲು ಕೋರಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಗಳನ್ನು ಪ್ರತ್ಯೇಕವಾಗಿ ಪ್ರತಿ ಕಾರ್ಯಗಳಿಗೆ ನಿಗಧಿಪಡಿಸಲಾಗಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು

ವಾಸಾಸಂಇ/ವಾ.ಪ್ರ/736/ಅಡ್ವರ್ಟೋರ್/2024–25

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560100.

ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪುಸ:ಕೋ:ತಾಂ:ಶಾ:08:2024–25 ದಿನಾಂಕ: 03–07–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳಾದ ಕೊಳವೆಬಾವಿ ಕೊರೆದು ಪಂಪ್ ಮೋಟಾರ್ ಅಳವಡಿಸುವುದು ಹಾಗೂ ಪುರಸಭಾ ಕಛೇರಿ ಎದುರು ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ನಿರ್ಮಾಣ ಮಾಡುವ ಕಾಮಗಾರಿಯನ್ನು ನಿರ್ವಹಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್‌ಗಳನ್ನು **https://kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ ಈ ಕೆಳಕಂಡಂತೆ ಇದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in** ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ತಾಂತ್ರಿಕ ಶಾಖೆಯ ಅಭಿಯಂತರರಿಂದ ಪಡೆಯತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	DMA/2024-25/WS/WORK_INDENT19911	32.70
2	DMA/2024-25/RD/WORK_INDENT19905	43.60

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: ಕ್ರ.ಸಂ. 1 ಮತ್ತು 2 ಕ್ಕೆ 09–07–2024 ರಂದು ಸಂಜೆ 5.30 ಗಂಟೆಯವರೆಗೆ.

ಸಹಿ/– ಮುಖ್ಯಾಧಿಕಾರಿಗಳು ಪುರಸಭೆ, ಕೋನಪ್ಪನ ಅಗ್ರಹಾರ.

ಸಹಿ/– ಆಡಳಿತಾಧಿಕಾರಿಗಳು ಪುರಸಭೆ, ಕೋನಪ್ಪನ ಅಗ್ರಹಾರ.

ವಾಸಾಸಂಇ/ವಾ.ಪ್ರ/734/ಅಡ್ವರ್ಟೋರ್/2024–25

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ಇರ್ವಿನ್ ರಸ್ತೆ, ಮೈಸೂರು–570 001. ದೂರವಾಣಿ: +91–0821–2520512

ಇಮೇಲ್: mmcrimysore@yahoo.com, ವೆಬ್‌ಸೈಟ್: www.mmcri.karnataka.gov.in

ಸಂಖ್ಯೆ: ಸರಬ/ವಿವ/388/2023–24 ದಿನಾಂಕ: 04.06.2024

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವಿಷಯ : **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ವಿವಿಧ ವಿಭಾಗಗಳು ಮತ್ತು ಸಹ ಆಸ್ಪತ್ರೆಗಳಿಗೆ ಅಗತ್ಯವಿರುವ ಸ್ಟೇಷನರಿ ಹಾಗೂ ಇತರೆ ಪದಾರ್ಥಗಳನ್ನು ಸರಬರಾಜು** ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ **ವಿವಿಧ ವಿಭಾಗಗಳು ಮತ್ತು ಸಹ ಆಸ್ಪತ್ರೆಗಳಾದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ. ಮತ್ತು ಸಿ.ಡಿ. ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಒಂದು ವರ್ಷದ ಅವಧಿಗೆ ಅಗತ್ಯವಿರುವ ಸ್ಟೇಷನರಿ ಹಾಗೂ ಇತರೆ ಪದಾರ್ಥಗಳನ್ನು ಸರಬರಾಜು ಮಾಡಲು** ವಿದ್ಯುನ್ಮಾನ ವೇದಿಕೆ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪೋಕ್ಯೂರ್‌ಮೆಂಟ್ ವೆಬ್‌ಸೈಟ್ **http://kppp.karnataka.gov.in** ಮೂಲಕ **ದಿನಾಂಕ 24.06.2024** ರಿಂದ ಪಡೆಯಬಹುದಾಗಿದ್ದು, **ದಿನಾಂಕ 24.07.2024 ರಂದು ಅಪರಾಹ್ನ 5.00** ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

DIPR/MYS/KAVITA/214/2024-25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ–11/252/2024–25 ದಿನಾಂಕ : 02.07.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕ್ಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳ ಹೆಸರು : 1) ಬೆಂಗಳೂರು ಜಿಲ್ಲೆ ಇಪಿಐಪಿ ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶದಲ್ಲಿ ರಸ್ತೆ ಸಂಖ್ಯೆ 7 ರಿಂದ ಸೊನ್ನೇನಹಳ್ಳಿ ಗ್ರಾಮ ಜೊತೆಗೆ ನಿವೇಷಣ ಸಂಖ್ಯೆ. 140–ಪಿ ಮತ್ತು 141 ರಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡುವ ಕಾಮಗಾರಿ. 2) ಕೋಲಾರ ಜಿಲ್ಲೆ ನರಸಾಪುರ, ಜಕ್ಕಸಂದ್ರ, ಮಿಂಡಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಗ್ಯಾಂಟ್ರಿ ಪ್ರತಿ ಫಲಕ ಮಾರ್ಗ ಫಲಕಗಳು ಲೈನ್ ಗುರುತು ಮತ್ತು ಇತರೆ ರಸ್ತೆ ಸುರಕ್ಷತಾ ಐಟಂಗಳನ್ನು ಒದಗಿಸುವ ಮತ್ತು ಅಳವಡಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18.07.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/728/Zen/2024-25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2024–25/1082 ದಿನಾಂಕ: 02.07.2024

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಮಂಜೂರಾದ (ಒಟ್ಟು 09) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: ಸಾಮಾನ್ಯ (08) 11200. 11045. 10985. 10990. 10991, 10992. 10878. 11250. (1. ಎಸ್ ಸಿ. ಮಿಸಲು. 11002), 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 20.00 ಲಕ್ಷಗಳು ಗರಿಷ್ಠ ರೂ. 150.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೆ ದರ್ಜೆ, ಮೂರನೆ ದರ್ಜೆ, ಎರಡನೆ ದರ್ಜೆ ಹಾಗೂ ಒಂದನೆ ದರ್ಜೆ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು 4) ಇ ಎಮ್ ಡಿ ಮೊತ್ತ: ಕನಿಷ್ಠ ರೂ. 42500.00 ಗರಿಷ್ಠ ರೂ. 200000.00, 5) ಪ್ರೀ ಬಿಡ್ ಮೀಟಿಂಗ್: **06.07.2024 (11.00 ಗಂಟೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **09.07.2024 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **10.07.2024 (16.00 ಗಂಟೆ),** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **11.07.2024 (16.30 ಗಂಟೆ),** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.07.2024 (11.30 ಗಂಟೆ),** 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 12) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 13) ಅಂತರ್ಜಾಲ ತಾಣದ ವಿಳಾಸ: WWW.kppp.Karnatak.gov.in, 14) ಗಮನಿಸಬೇಕಾದ ಅಂಶಗಳು: ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು."

ಸಹಿ/– ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/155/ಕೆ.ಎಸ್.ಎಂ.ಸಿ.&ಎ/2024–25

ಖಾನಾಪುರ ತಾಲ್ಲೂಕು ಕಣಕುಂಬಿ ಅರಣ್ಯದಲ್ಲಿ ಧಾರಾಕಾರ ಮಳೆಯಿಂದ ಕಣಕುಂಬಿ– ಚಿಗುಳೆ ಮಾರ್ಗಮಧ್ಯದ ಬೆಟ್ಟಗಳ ಮಧ್ಯೆ ನೀರು ಧುಮುಕಿದ್ದು ಹೀಗೆ ಪ್ರಜಾವಾಣಿ ಚಿತ್ರ: ಪ್ರಸನ್ನ ಕುಲಕರ್ಣಿ

ಶಿವಮೊಗ್ಗದ ಹೃದಯಭಾಗದಲ್ಲಿ ತುಂಗೆಯ ಒಡಲು ನಿಧಾನವಾಗಿ ತುಂಬುತ್ತಿದೆ. ಬುಧವಾರ ಕಂಡುಬಂದ ನದಿಯ ನೋಟ

ಯಲ್ಲಾಪುರ ತಾಲ್ಲೂಕಿನ ಪಣಸಗುಳಿ ಸಮೀಪ ಗಂಗಾವಳಿ ನದಿಗೆ ತಾತ್ಕಾಲಿಕವಾಗಿ ನಿರ್ಮಿಸಿರುವ ಸೇತುವೆಯು ನೀರಿನಲ್ಲಿ ಮುಳುಗಿದೆ

ನದಿಗಳಲ್ಲಿ ನೀರಿನ ಹರಿವೂ ಹೆಚ್ಚಳ • ತುಂಗಾ ಜಲಾಶಯದ 14 ಕ್ರಸ್ಟ್‌ಗೇಟ್‌ಗಳ ಮೂಲಕ ನದಿಗೆ ನೀರು

ವಿವಿಧೆಡೆ ಭರ್ಜರಿ ಮಳೆ: ಮೈದುಂಬಿದ ಜಲಪಾತಗಳು

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ)/ ಶಿವಮೊಗ್ಗ: ರಾಜ್ಯದ ಹಲವೆಡೆ ಬುಧವಾರವೂ ಧಾರಾಕಾರ ಮಳೆಯಾಗಿದ್ದು ಜಲಪಾತಗಳು ಮೈದುಂಬಿ ಧುಮ್ಮಿಕ್ಕುತ್ತಿವೆ. ಜಲಾಶಯಗಳಿಗೆ ಒಳಹರಿವಿನ ಪ್ರಮಾಣ ಹೆಚ್ಚಾಗಿದೆ.

ಖಾನಾಪುರ ತಾಲ್ಲೂಕಿನಲ್ಲಿ ಧಾರಾಕಾರ ಮಳೆ ಮುಂದುವರೆಯಿತು. ಕಣಕುಂಬಿ, ಜಾಂಬೋಟಿ, ನಾಗರಗಾಳಿ, ಭೀಮಗಡ ಮತ್ತು ಲೋಂಡಾ ಅರಣ್ಯ ಪ್ರದೇಶದಲ್ಲಿ ಮಂಗಳವಾರ ರಾತ್ರಿ ಪ್ರಾರಂಭಗೊಂಡ ಮಳೆ ಬುಧವಾರ ದಿನವಿಡೀ ಸುರಿಯಿತು. ಇದರಿಂದ ಕಾಡಿನ ಜಲಪಾತಗಳೆಲ್ಲ ಧುಮ್ಮಿಕ್ಕುತ್ತಿವೆ.

ಮಲಪ್ರಭಾ, ಮಹಾದಾಯಿ ಮತ್ತು ಪಾಂಡರಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಭೀಮಗಡ ಅರಣ್ಯದಲ್ಲಿ ಕಳೆದ ವಾರದಿಂದ ಹೆಚ್ಚಿನ ಮಳೆಯಾಗುತ್ತಿದ್ದು, ಮಹದಾಯಿ ನದಿ ಮತ್ತು ಅದನ್ನು ಸಂಗಮಿಸುವ ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಕಣಕುಂಬಿ ಸೇರಿ ಮಲಪ್ರಭಾ ನದಿಯ ಅಚ್ಚುಕಟ್ಟು ಪ್ರದೇಶದಲ್ಲೂ ಭಾರೀ ಮಳೆ ಆಗುತ್ತಿದ್ದು ಮಲಪ್ರಭಾ ನದಿಯಲ್ಲೂ ನೀರಿನ ಹರಿವು ಹೆಚ್ಚಿದೆ. ಹಬ್ಬನಹಟ್ಟಿ ಗ್ರಾಮದ ಆಂಜನೇಯ ದೇವಾಲಯ ಕಟ್ಟಡದ ಬಹುಭಾಗ ಜಲಾವೃತಗೊಂಡಿದೆ.

ತಾಲ್ಲೂಕಿನ ಎಂಟು ಗ್ರಾಮಗಳ ಸಂಪರ್ಕ ರಸ್ತೆ, ಸೇತುವೆ ಮೇಲೆ ನೀರು ಹರಿಯಲಾರಂಭಿಸಿದೆ. ಕೆಲವೆಡೆ ಗ್ರಾಮಗಳ ನಡುವಿನ ಸಂಪರ್ಕ ಕಡಿತವಾಗಿದೆ.

ಚಿಕ್ಕೋಡಿ ವರದಿ: ಮಹಾರಾಷ್ಟ್ರದ ಕೃಷ್ಣಾ ಹಾಗೂ ಉಪನದಿಗಳ ಜಲಾನಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದ್ದು, ಮಹಾರಾಷ್ಟ್ರ ರಾಜ್ಯದ ಸಾತಾರಾ ಜಿಲ್ಲೆಯ ಕೊಯ್ನಾ ಅಣೆಕಟ್ಟೆಗೆ 24 ಗಂಟೆಗಳ ಅವಧಿಯಲ್ಲಿ 2 ಟಿಎಂಸಿ ಅಡಿ ನೀರು ಹರಿದು ಬಂದಿದೆ. 105 ಟಿಎಂಸಿ ಅಡಿ ಸಾಮರ್ಥ್ಯದ ಈ ಅಣೆಕಟ್ಟೆಗೆ ಬುಧವಾರ 23 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಆರಿದ್ರಾ ಮಳೆ: ಮಲೆನಾಡಿನಲ್ಲಿ ಆರಿದ್ರಾ ಮಳೆ ಮುಂದುವರಿದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬುಧವಾರ ಸರಾಸರಿ 19.64 ಸೆಂ.ಮೀ ಮಳೆ ಸುರಿದಿದೆ. ಹೀಗಾಗಿ ತುಂಗಾ, ಭದ್ರಾ ಜಲಾಶಯಗಳಿಗೆ ಒಳಹರಿವು ಹೆಚ್ಚಳಗೊಂಡಿದೆ. ಜಲಾನಯನ ಪ್ರದೇಶದಲ್ಲಿ ಕೊಂಚ ಮಳೆ ಪ್ರಮಾಣ ತಗ್ಗಿರುವುದರಿಂದ ಲಿಂಗನಮಕ್ಕಿ ಜಲಾಶಯಕ್ಕೆ ಕಳೆದ 24 ಗಂಟೆಯಲ್ಲಿ ಒಂದು ಸಾವಿರ ಕ್ಯುಸೆಕ್‌ನಷ್ಟು ಒಳಹರಿವು ತಗ್ಗಿದೆ.

14 ಕ್ರಸ್ಟ್‌ಗೇಟ್ ಮೂಲಕ ನೀರು: ಗಾಜನೂರು ಬಳಿಯ ತುಂಗಾ ಜಲಾಶಯ ಈಗಾಗಲೇ ಭರ್ತಿಯಾಗಿದೆ. ತುಂಗಾ ಜಲಾಶಯಕ್ಕೆ ಒಳಹರಿವು ಏರಿಕೆಯಾಗಿದೆ. ಈಗಾಗಲೇ ಜಲಾಶಯ ಭರ್ತಿ ಆಗಿರುವುದರಿಂದ ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದೆ. ಬುಧವಾರದಿಂದ ಜಲಾಶಯದ 22 ಕ್ರಸ್ಟ್‌ಗೇಟ್‌ಗಳ ಪೈಕಿ 14 ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸಲಾಗುತ್ತಿದೆ.

3.24 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ತುಂಗಾ ಜಲಾಶಯದ ಗರಿಷ್ಠ ಮಟ್ಟ 588.24 ಮೀಟರ್. ಈಗ ಜಲಾಶಯ ಭರ್ತಿಯಾಗಿದೆ.

ಭದ್ರಾ ಒಳಹರಿವು ಹೆಚ್ಚಳ: ಭದ್ರಾ ಜಲಾಶಯದಲ್ಲಿ 5,324 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿನ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಹಾಗೂ ಮಡಿಕೇರಿ ತಾಲ್ಲೂಕಿನ ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ ಜೋರು ಮಳೆ ಮುಂದುವರಿದಿದೆ.

ಮಡಿಕೇರಿ ನಗರದಲ್ಲಿ ಮಧ್ಯಾಹ್ನ ಜೋರು ಗಾಳಿಯೊಂದಿಗೆ ಬಿರುಸಿನ ಮಳೆಯಾಯಿತು. ಸೋಮವಾರಪೇಟೆ ಪಟ್ಟಣದಲ್ಲೂ ವರ್ಷಧಾರೆಯಾಗಿದೆ.

ಮೈಸೂರು ನಗರದಲ್ಲಿ ಮಧ್ಯಾಹ್ನ ಸಾಧಾರಣ ಮಳೆ ಸುರಿಯಿತು.

ಕಾರವಾರ ವರದಿ: ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಕಡೆ ಬುಧವಾರ ಬಿರುಸಿನ ಮಳೆ ಸುರಿಯಿತು. ಪ್ರಮುಖ ನದಿ, ಹಳ್ಳಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

ಭಟ್ಕಳ, ಶಿರಸಿ, ಯಲ್ಲಾಪುರ, ದಾಂಡೇಲಿ ತಾಲ್ಲೂಕಿನ ಹಲವೆಡೆ ನಿರಂತರ ಮಳೆ ಸುರಿಯುತ್ತಿದೆ. ಉಳಿದ ತಾಲ್ಲೂಕುಗಳಲ್ಲೂ ಮಳೆಯಾಗಿದೆ.



ಪುಷ್ಪಗಿರಿ ಘಟ್ಟ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿದಿದ್ದರಿಂದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಮಲ್ಲಳ್ಳಿ ಜಲಪಾತ ಮೈದುಂಬಿ ಹರಿಯುತ್ತಿದೆ – ಪ್ರಜಾವಾಣಿ ಚಿತ್ರ:ಡಿ.ಪಿ.ಲೋಕೇಶ್

ಕರಾವಳಿಯಲ್ಲೂ ವರ್ಷಧಾರೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಬೆಳಿಗ್ಗೆ ಧಾರಾಕಾರ ಮಳೆಯಾಗಿತ್ತು. ಮಧ್ಯಾಹ್ನದ ನಂತರ ಮತ್ತೆ ಬಿರುಸಿನ ಮಳೆ ಸುರಿಯಿತು.

ಉಡುಪಿ ಜಿಲ್ಲೆಯ ವಿವಿಧೆಡೆ ಬುಧವಾರ ಬೆಳಿಗ್ಗೆ ಹಾಗೂ ಸಂಜೆ ಗಾಳಿ ಸಹಿತ ಧಾರಾಕಾರ ಮಳೆ ಸುರಿದಿದೆ. ಉಡುಪಿ ನಗರದ ಕಡೇಕಾರ್ ಬಳಿ ಬೃಹತ್ ಮರ ಉರುಳಿ, ಮನೆ ಹಾಗೂ ಅಂಗಡಿಗೆ ಹಾನಿಯುಂಟಾಗಿದೆ. ಪುತ್ತೂರು ಮತ್ತು ಶಿವಳ್ಳಿಯಲ್ಲಿ ಗಾಳಿಗೆ ಮನೆಗಳು ಭಾಗಶಃ ಹಾನಿಗೊಂಡಿವೆ.

ಹೆಬ್ರಿ ತಾಲ್ಲೂಕಿನ ಕಬ್ಬಿನಾಲೆಯಲ್ಲಿ ಬೀಸಿದ ಭಾರಿ ಸುಳಿಗಾಳಿಗೆ ಮನೆ, ತೋಟಗಳಿಗೆ ಹಾನಿಯಾಗಿದೆ. ಲಕ್ಷ್ಮೀ ಸಂಜೀವ ರೈ, ಸದಾನಂದ ಶೆಟ್ಟಿ, ಸುಧಾಕರ ಶೆಟ್ಟಿ, ರಾಜನ್ ಫಿಲಿಪ್ಸ್ ಅವರ ಅಡಿಕೆ, ತೆಂಗಿನ ತೋಟಕ್ಕೆ ಹಾನಿಯಾಗಿದೆ. 600 ಕ್ಕೂ ಹೆಚ್ಚು ಅಡಿಕೆ ಮರ, 25 ಕ್ಕೂ ಹೆಚ್ಚು ತೆಂಗಿನ ಮರಗಳು ನೆಲಕ್ಕುರುಳಿವೆ.

ಮಂಗಳೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿ- 275ರಲ್ಲಿ ಸಂಪಾಜೆಯ ದೇವರಕೊಲ್ಲಿ ಸಮೀಪ ಹಾಗೂ ಮಾಕುಟ್ಟ– ಪೆರಂಮಾಡಿ ರಾಜ್ಯ ಹೆದ್ದಾರಿ- 91ರಲ್ಲಿ ಮರ ಉರುಳಿ ಬಿದ್ದಿತ್ತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಬಿರುಸು ಪಡೆದಿದೆ. ಅಜ್ಜಂಪುರ ಮತ್ತು ಕಡೂರು ತಾಲ್ಲೂಕಿನಲ್ಲಿ ಈಚರುಳ್ಳಿ ಬೆಳೆಗೆ ನೀರಿನ ಕೊರತೆಯಾಗಿತ್ತು. ಮಳೆಯಾಗಿರುವುದು ರೈತರಲ್ಲಿ ಸಂತಸಕ್ಕೆ ಕಾರಣವಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	98.10	14,135	532
ಹಾರಂಗಿ	2,859	2,842.27	1,649	200
ಕಬಿನಿ	2284.00	2,279.88	5,484	1,000
ಹೇಮಾವತಿ	2,922	2,892.24	8,055	250
ಲಿಂಗನಮಕ್ಕಿ	1,819	1,754.95	19,950	2,055.11
ಸೂಪಾ (ಮೀ)	564	526.90	15,627	1,485.64
ಮಾಣಿ	595	573.92	2,441	00
ತುಂಗಭದ್ರಾ	1,633	1,587.11	10,630	296
ಮಲಪ್ರಭಾ	2079.5	2,041.94	1,000	194
ಘಟಪ್ರಭಾ	2175	2,104.60	7,311	105
ಭದ್ರಾ	186	126.3	5,324	347
ಆಲಮಟ್ಟಿ (ಮೀ)	519.6	512.08	27,385	430
ನಾರಾಯಣಪುರ (ಮೀ)	492.25	489.20	217.40	95.40

* ನೆಲಮಟ್ಟದಿಂದ

ಡಿನೋಟಿಫೈ ಆದ ಜಮೀನಿನಲ್ಲಿ ಮತ್ತೆ ಬಡಾವಣೆ ನಿರ್ಮಿಸಿದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ತಪ್ಪೊಪ್ಪಿಗೆ ರೂಪದಲ್ಲಿ ಮುಖ್ಯಮಂತ್ರಿ ಪತ್ನಿಗೆ ನಿವೇಶನ!

• ಆರ್. ಜಿತೇಂದ್ರ

ಮೈಸೂರು: ಬಡಾವಣೆ ನಿರ್ಮಿಸಲು ಉದ್ದೇಶಿಸಿದ್ದ ಜಮೀನನ್ನು ಡಿನೋಟಿಫೈ ಮಾಡಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಮತ್ತೆ ಅದೇ ಜಮೀನಿನಲ್ಲಿ ಬಡಾವಣೆ ನಿರ್ಮಿಸಿದೆ! ನಂತರ, 'ನನ್ನಿಂದ ತಪ್ಪಾಗಿದೆ' ಎಂದು ಒಪ್ಪಿಕೊಂಡು, ಪ್ರತಿಷ್ಠಿತ ಬಡಾವಣೆಯಲ್ಲಿ 'ಪ್ರತಿಷ್ಠಿತರಿಗೆ' ಭಾರಿ ಮೌಲ್ಯದ ನಿವೇಶನಗಳನ್ನು 'ಉಡುಗೊರೆ'ಯಾಗಿ ನೀಡಿದೆ.

ಹೀಗೆ, ಭಾರಿ ಮೌಲ್ಯದ ನಿವೇಶನ ನೀಡಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ. ಬಡಾವಣೆ ನಿರ್ಮಿಸಲು ಉದ್ದೇಶಿಸಿದ್ದ ಜಮೀನನ್ನು ಡಿನೋಟಿಫೈ ಮಾಡಿದ್ದು ಏಕೆ? ಮತ್ತೆ ಅದೇ ಜಮೀನಿನಲ್ಲಿ ಬಡಾವಣೆ ನಿರ್ಮಿಸಿದ್ದೇಕೆ? 2017ರಲ್ಲೇ ಪರಿಹಾರಕ್ಕೆ ನಿರ್ಣಯಿಸಿದ್ದರೂ ನಾಲ್ಕು ವರ್ಷ ಸುಮ್ಮನಿದ್ದದ್ದು ಏಕೆ? ಎಂಬ ಪ್ರಶ್ನೆಗಳು ಈಗ ಕೇಳಿ ಬರುತ್ತಿವೆ.

ಮುಡಾ ವ್ಯಾಪ್ತಿಯಲ್ಲಿ 50:50 ಅನುಪಾತದಲ್ಲಿ ಸುಮಾರು 3 ಸಾವಿರದಿಂದ 5 ಸಾವಿರ ನಿವೇಶನಗಳನ್ನು ಹಂಚಲಾಗಿದೆ. ಅದರಲ್ಲಿ ಸಾಕಷ್ಟು ಮಂದಿಗೆ ಪ್ರತಿಷ್ಠಿತ ಬಡಾವಣೆಗಳಲ್ಲೇ ಬದಲಿ ನಿವೇಶನಗಳು ದೊರಕಿವೆ ಎನ್ನಲಾಗಿದ್ದು, ತನಿಖೆ ಬಳಿಕ ಸತ್ಯ ಹೊರಬರಬೇಕಾಗಿದೆ.

ಹಿನ್ನೆಲೆ ಏನು?: ದೇವನೂರು ಮೂರನೇ ಹಂತದ ಬಡಾವಣೆ ನಿರ್ಮಾಣದ ಸಲುವಾಗಿ ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿರುವ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು 1997ರ ಅಕ್ಟೋಬರ್ 31ರಂದು ಮುಡಾ ಅಂತಿಮ ಅಧಿಸೂಚನೆ ಹೊರಡಿಸಿತ್ತು. ನಂತರ ಆ ಜಮೀನಿಗೆ ₹3,24,700 ವೈಯಕ್ತಿಕ ಪರಿಹಾರವನ್ನೂ ನಿರ್ಣಯಿಸಲಾಯಿತು. ಆದರೆ 1998ರ ಮೇ 18ರ ಅಧಿಸೂಚನೆಯಂತೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲಾಯಿತು.

ಡಿನೋಟಿಫೈ ಆದ ಜಮೀನನ್ನು ಸಿದ್ದರಾಮಯ್ಯ ಭಾಮೈದ ಬಿ.ಎಂ. ಮಲ್ಲಿಕಾರ್ಜುನಸ್ವಾಮಿ 2004ರಲ್ಲಿ ಖರೀದಿಸಿದ್ದು, 2010ರಲ್ಲಿ ಅದನ್ನು ತಮ್ಮ ಸಹೋದರಿ, ಸಿದ್ದರಾಮಯ್ಯರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ದಾನಪತ್ರ ರೂಪದಲ್ಲಿ ನೋಂದಣಿ ಮಾಡಿಕೊಟ್ಟಿದ್ದರು. ಈ ನಡುವೆ ಅದೇ ಜಮೀನಲ್ಲಿ ಮುಡಾ ನಿವೇಶನಗಳನ್ನೂ ಅಭಿವೃದ್ಧಿಪಡಿಸಿ ಹಂಚಿತ್ತು. ಆದರೆ ಮಾಲೀಕರು ಗಮನಿಸಿರಲಿಲ್ಲ.

2014ರ ಜೂನ್ 23ರಂದು ಭೂಮಾಲೀಕರಾದ ಪಾರ್ವತಿ ಮುಡಾಕ್ಕೆ ಪತ್ರ ಬರೆದಿದ್ದು, ಡಿನೋಟಿಫೈ ಆದ ನಂತರವೂ ಮುಡಾ ತಮ್ಮ ಜಮೀನಿನಲ್ಲಿ ಬಡಾವಣೆ ನಿರ್ಮಿಸಿದ್ದು, ಅದಕ್ಕೆ ಬದಲಾಗಿ ಅಷ್ಟೇ ವಿಸ್ತೀರ್ಣದ ಜಮೀನನ್ನು ಸಮನಾಂತರ ಬಡಾವಣೆಯಲ್ಲಿ ನೀಡುವಂತೆ ಕೋರಿದ್ದರು.

2017ರ ಡಿಸೆಂಬರ್ 15 ಹಾಗೂ 30ರಂದು ನಡೆದ ಮುಡಾ ಸಭೆಗಳಲ್ಲಿ ಈ ವಿಷಯ ಚರ್ಚೆಯಾಗಿದ್ದು, 'ಡಿನೋಟಿಫೈ ಆದಾಗ್ಯೂ ಈ ಜಮೀನನ್ನು ಪ್ರಾಧಿಕಾರ ಉಪಯೋಗಿಸಿಕೊಂಡಿದ್ದು ನಮ್ಮಿಂದ ತಪ್ಪಾಗಿದೆ' ಎಂದು ಒಪ್ಪಿಕೊಂಡಿತ್ತು. ಅದಕ್ಕೆ ಪರ್ಯಾಯವಾಗಿ, ಪ್ರಾಧಿಕಾರದ ವಶದಲ್ಲಿದ್ದು ಅಭಿವೃದ್ಧಿ ಪಡಿಸದೇ ಇರುವ ಜಮೀನನ್ನು ಅರ್ಜಿದಾರರಿಗೆ ನೀಡುವುದು ಎಂದು ಸಭೆಯು ನಿರ್ಣಯಿಸಿತ್ತು. ಆದರೂ ಪಾರ್ವತಿ ಅವರಿಗೆ 2021ರವರೆಗೆ ಬದಲಿ ಜಮೀನು ನೀಡಿರಲಿಲ್ಲ.

50–50 ಅನುಪಾತದಲ್ಲಿ ಹಂಚಿಕೆ: 2021ರ ಅಕ್ಟೋಬರ್ 21ರಂದು ಮುಡಾಕ್ಕೆ ಮತ್ತೆ ಅರ್ಜಿ ಸಲ್ಲಿಸಿದ ಪಾರ್ವತಿ, ಬದಲಿ ಜಮೀನು ಇಲ್ಲವೇ ನಿವೇಶನ ಕೊಡುವಂತೆ ಕೋರಿದ್ದರು. ಅದಾದ ನಾಲ್ಕೇ ದಿನಕ್ಕೆ ಆಯುಕ್ತರು ಶೇ 50:50 ಅನುಪಾತದಲ್ಲಿ ಅವರಿಗೆ ಒಟ್ಟು 38,284 ಚ.ಅಡಿ ಅಳತೆಯ ನಿವೇಶನ ಹಂಚಿಕೆ ಮಾಡುವಂತೆ ಆದೇಶಿಸಿದ್ದರು. ನಂತರ, ಮೈಸೂರಿನ ಪ್ರತಿಷ್ಠಿತ ಬಡಾವಣೆಯಾದ ವಿಜಯನಗರದಲ್ಲಿ 38 ಸಾವಿರ ಚದರಡಿ ಅಳತೆಯ ನಿವೇಶನಗಳನ್ನು ಮುಡಾ ನೀಡಿದೆ.

ಮುಡಾ ಕಚೇರಿಯಲ್ಲಿ ಬುಧವಾರ ರಾತ್ರಿ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯದ ಆಯುಕ್ತ ಆರ್. ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿಯು ಸುದೀರ್ಘ ಸಭೆ ನಡೆಸಿ ಹೊರ ಬಂದ ಸಂದರ್ಭ. ಮುಡಾ ಆಯುಕ್ತ ಎ.ಎನ್. ರಘುನಂದನ್ ಜೊತೆಗಿದ್ದರು

ಮುಡಾದಲ್ಲಿ ಶೋಧ ಆರಂಭ

ಮೈಸೂರು: ಮುಡಾ ನಿವೇಶನಗಳ ಅಕ್ರಮ ಹಂಚಿಕೆಯ ತನಿಖೆಗಾಗಿ ಸರ್ಕಾರವು ನೇಮಿಸಿರುವ ಸಮಿತಿಯು ತನ್ನ ಕಾರ್ಯ ಆರಂಭಿಸಿದ್ದು, ಬುಧವಾರ ಇಲ್ಲಿನ ಮುಡಾ ಕಚೇರಿಯಲ್ಲಿ ದಿನವಿಡೀ ದಾಖಲೆಗಳ ಪರಿಶೀಲನೆ ನಡೆಸಿತು.

ಸಮಿತಿಯ ಅಧ್ಯಕ್ಷ ಆರ್. ವೆಂಕಟಾಚಲಪತಿ ಹಾಗೂ ಸದಸ್ಯರಾದ ಎಂ.ಸಿ. ಶಶಿಕುಮಾರ್, ಶಾಂತಲಾ ಹಾಗೂ ಪ್ರಕಾಶ್ ಅವರನ್ನು ಒಳಗೊಂಡ 7–8 ಅಧಿಕಾರಿಗಳ ತಂಡವು ಮಧ್ಯಾಹ್ನ 12ರ ಸುಮಾರಿಗೆ ಕಚೇರಿಗೆ ಧಾವಿಸಿದ್ದು, ರಾತ್ರಿವರೆಗೂ ಸರಣಿ ಸಭೆಗಳನ್ನು ನಡೆಸಿತು. ಮೊದಲಿಗೆ ಮುಡಾ ಎಲ್ಲ ಅಧಿಕಾರಿಗಳ ಜೊತೆ ಸಭೆ ನಡೆಸಿದ ಸಮಿತಿಯು ನಂತರ ಒಂದೊಂದೇ ದಾಖಲೆಗಳನ್ನು ತರಿಸಿಕೊಂಡು ಪರಿಶೀಲನೆ ಆರಂಭಿಸಿತು. ಮುಡಾ ಅಧ್ಯಕ್ಷ ಮರಿಗೌಡ ಸಹ ಈ ಸಂದರ್ಭ ಇದ್ದರು.

2020 ಹಾಗೂ ನಂತರದಲ್ಲಿ ಹಂಚಿಕೆ ಆಗಿರುವ ನಿವೇಶನಗಳ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಮಿತಿಯು ಪರಿಶೀಲಿಸಲಿದೆ. ಮುಡಾ ಕಚೇರಿಯಲ್ಲಿ ಸ್ಥಳಾವಕಾಶ ನೀಡಿದ್ದು, ಇನ್ನೂ ಕೆಲವು ದಿನ ಕಾಲ ಇಲ್ಲಿಯೇ ಉಳಿದು ತನಿಖೆ ಮುಂದುವರಿಸಲಿದೆ ಎಂದು ಮೂಲಗಳು ತಿಳಿಸಿವೆ.

'ನಿಯಮಗಳಲ್ಲಿ ಅವಕಾಶವಿಲ್ಲ'

'ಯಾವುದೇ ಬಡಾವಣೆ ನಿರ್ಮಾಣಕ್ಕೆ ಜಮೀನು ವಶಪಡಿಸಿಕೊಂಡಲ್ಲಿ ಭೂ ಸಂತ್ರಸ್ತರಿಗೆ ಆ ಬಡಾವಣೆಯಲ್ಲಿಯೇ ಆದ್ಯತೆ ಮೇರೆಗೆ ನಿವೇಶನ ನೀಡಬೇಕು. ಅದು ಸಾಧ್ಯವಾಗದಿದ್ದರೆ, ಸಮನಾಂತರ ಇಲ್ಲವೇ ನಂತರ ರಚನೆಯಾಗುವ ಬಡಾವಣೆಗಳಲ್ಲಿ ನಿವೇಶನ ನೀಡಬಹುದು. ದೇವನೂರು ಮೂರನೇ ಹಂತದ ಬಡಾವಣೆಯು 2003ರಲ್ಲಿ ಹಂಚಿಕೆಯಾಗಿದೆ. ಆದರೆ ವಿಜಯನಗರ ಮೂರು ಮತ್ತು ನಾಲ್ಕನೇ ಹಂತ ಬಡಾವಣೆಗಳು 1989ರಿಂದ 1992ರವರೆಗೆ ನಿರ್ಮಾಣವಾಗಿವೆ. ಹೀಗಾಗಿ ಪಾರ್ವತಿ ಅವರಿಗೆ ದೇವನೂರು (ಕೆಸರೆ) ಬದಲಿಗೆ ವಿಜಯನಗರದಲ್ಲಿ ನಿವೇಶನ ನೀಡಿರುವುದು ಕಾನೂನು ಬಾಹಿರ' ಎಂದು ಮುಡಾದ ನಿವೃತ್ತ ಅಧಿಕಾರಿಯೊಬ್ಬರು ಹೇಳುತ್ತಾರೆ.

ಮುಡಾದ ಈಗಿನ ಅಧಿಕಾರಿಗಳು ಇದನ್ನು ಒಪ್ಪುವುದಿಲ್ಲ. 'ನ್ಯಾಯಾಲಯಗಳ ತೀರ್ಪಿನ ಅನ್ವಯ ಭೂಸಂತ್ರಸ್ತರಿಗೆ ಪ್ರಾಧಿಕಾರವು ತನ್ನ ವ್ಯಾಪ್ತಿಯ ಯಾವುದೇ ಬಡಾವಣೆಗಳಲ್ಲಿ ಲಭ್ಯ ಇರುವ ನಿವೇಶನಗಳನ್ನು ನೀಡಲು ಅವಕಾಶ ಇದೆ' ಎಂದು ಸಮರ್ಥಿಸಿಕೊಳ್ಳುತ್ತಾರೆ.

ಸರ್ಕಾರಕ್ಕೆ ನಷ್ಟವಾಗಿಲ್ಲ: ಸಿ.ಎಂ

ಮುಡಾ ನಿವೇಶನಗಳ ಹಂಚಿಕೆ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾದಿಂದ ಹಂಚಿಕೆಯಾಗಿರುವ ಎಲ್ಲ ನಿವೇಶನಗಳನ್ನೂ ಅಮಾನತ್ತಿನಲ್ಲಿಡಲಾಗಿದೆ. ಆದ್ದರಿಂದ ಸರ್ಕಾರಕ್ಕೆ ನಷ್ಟವಾಗಿಲ್ಲ. ಅಲ್ಲದೆ, ಈ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು 'ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿರುವುದಕ್ಕೆ ಮಾಧ್ಯಮಗಳಿಗೆ ಬುಧವಾರ ಪ್ರತಿಕ್ರಿಯೆ ನೀಡಿದ ಅವರು, 'ಮುಡಾ ನಿವೇಶನ ಹಂಚಿಕೆಯಲ್ಲಿ ದುರುಪಯೋಗ ಆಗಿದೆಯೋ ಇಲ್ಲವೋ ಎಂದು ಪತ್ತೆ ಹಚ್ಚಲು ತನಿಖೆ ಮಾಡಲಾಗುತ್ತಿದೆ. ನಿವೇಶನಗಳನ್ನು ಹಂಚಿಕೆ ಮಾಡಿದ್ದವರನ್ನು ವರ್ಗಾವಣೆ ಮಾಡಿ, ಹಿರಿಯ ಐಎಎಸ್ ಅಧಿಕಾರಿಗಳಿಂದ ತನಿಖೆ ಮಾಡಿಸಲಾಗುತ್ತಿದೆ. ವರದಿ ಬಂದ ನಂತರ ತೀರ್ಮಾನ ಈ ಬಗ್ಗೆ ಮಾಡಲಾಗುವುದು' ಎಂದರು.

'ಆರ್. ಅಶೋಕ ಕರ್ತವ್ಯ ಲೋಪವೆಸಗಿದ್ದಾರೆ ಎಂದರೆ ಅವರು ರಾಜೀನಾಮೆ ಕೊಡುತ್ತಾರೆಯೇ? ಅವರ ಕಾಲದಲ್ಲಿ ಅಕ್ರಮ–ಸಕ್ರಮ ಸರಿಯಾದ ರೀತಿಯಲ್ಲಿ ಆಗಿಲ್ಲ ಎಂದು ಆರೋಪ ಕೇಳಿ ಬಂದಾಗ ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ. ಅದಕ್ಕೆ ರಾಜೀನಾಮೆ ಕೊಡಿ ಅಂದರೆ ಕೊಡುತ್ತಾರೆಯೇ' ಎಂದು ಪ್ರಶ್ನಿಸಿದರು.

'ಎಲ್ಲವನ್ನೂ ಸಿಬಿಐಗೆ ಹಸ್ತಾಂತರಿಸಲು ಏಕೆ ಹೇಳುತ್ತಾರೆ? ಬಿಜೆಪಿ ಅಧಿಕಾರದಲ್ಲಿದ್ದಾಗ ಯಾವ ಪ್ರಕರಣವನ್ನು ಸಿಬಿಐಗೆ ಹಸ್ತಾಂತರ ಮಾಡಿದ್ದರು? ಜಮೀನು ಕೊಟ್ಟವರಿಗೆ ಪರ್ಯಾಯವಾಗಿ ನಿವೇಶನ ನೀಡಬೇಕೆಂದು ಬಿಜೆಪಿಯೇ ಕಾನೂನು ಮಾಡಿದೆ' ಎಂದು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮಗಳ ಬಗ್ಗೆಯೂ ಬಿಜೆಪಿ ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನಿಗಮದ ಪ್ರಕರಣವನ್ನು ಎಸ್‌ಐಟಿಗೆ ವಹಿಸಲಾಗಿದ್ದು, ತನಿಖೆ ನಡೆಯುತ್ತಿದೆ. ವರದಿ, ದೋಷಾರೋಪ ಪಟ್ಟಿ ಸಲ್ಲಿಕೆಯಾಗುವ ಮೊದಲೇ ಹೇಗೆ ಕ್ರಮ ಕೈಗೊಳ್ಳುವುದು? 'ಡೆತ್ ನೋಟ್'ನಲ್ಲಿ ಸಚಿವ ನಾಗೇಂದ್ರ ಅವರು ವ್ಯವಸ್ಥಾಪಕ ನಿರ್ದೇಶಕರಿಗೆ ಮೌಖಿಕ ಆದೇಶ ನೀಡಿದ್ದರು ಎಂದು ಬರೆದಿರುವ ಕಾರಣ ಸಚಿವರಿಂದ ರಾಜೀನಾಮೆ ಪಡೆದೆವು. ಬ್ಯಾಂಕ್ ವ್ಯವಹಾರಗಳ ಬಗ್ಗೆ ಸಿಬಿಐ ತನಿಖೆ ಕೈಗೊಂಡಿದೆ' ಎಂದರು.

ಬಿಜೆಪಿ ನಾಯಕರಿಂದ ಸಿ.ಎಂ ನಿವಾಸಕ್ಕೆ ಮುತ್ತಿಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮೈಸೂರಿನ 'ಮುಡಾ' ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಮುಖ್ಯಮಂತ್ರಿ ಸಿದ್ದರಾಮಯ್ಯ ಮನೆಗೆ ಮುತ್ತಿಗೆ ಹಾಕಲು ಬುಧವಾರ ಯತ್ನಿಸಿದರು.

ಕುಮಾರಕೃಪಾ ವಸತಿ ಗೃಹದ ಆವರಣದಿಂದ ಮುಖ್ಯಮಂತ್ರಿ ಮನೆಯತ್ತ ಹೊರಟ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಸೇರಿದಂತೆ ಹಲವರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು. ವಶಕ್ಕೆ ಪಡೆಯುವಾಗ ಬಿಜೆಪಿ ಮುಖಂಡರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ನಂತರ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, ಮೈಸೂರಿನ 'ಮುಡಾ' ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖವಾಡ ಕಳಚಿದೆ. ಆದ್ದರಿಂದ ಸಿ.ಎಂ ರಾಜೀನಾಮೆ ನೀಡಬೇಕು. ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲಾಗಿದೆ. ದಿನಕ್ಕೊಂದು ಹಗರಣ ಹೊರ ಬರುತ್ತಿದೆ. ಮುಖ್ಯಮಂತ್ರಿ ತವರು ಜಿಲ್ಲೆಯ 'ಮುಡಾ'ದಲ್ಲಿ ಅವರ ಗಮನಕ್ಕೆ ಬಾರದೆ ₹4 ಸಾವಿರ ಕೋಟಿಗೂ ಅಧಿಕ ಮೊತ್ತದ ಹಗರಣ ನಡೆಯಲು ಹೇಗೆ ಸಾಧ್ಯ? ಮುಖ್ಯಮಂತ್ರಿ ಪತ್ನಿಗೆ 15 ನಿವೇಶನಗಳನ್ನು ಕೊಟ್ಟಿದ್ದಾರೆ. ಸಚಿವ ಬೈರತಿ ಸುರೇಶ್ ಮೈಸೂರಿಗೆ ಹೋಗಿ ಅಧಿಕಾರಿಗಳ ವರ್ಗಾವಣೆ ಮಾಡಿದ್ದಾರೆ. ಕಡತಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಬಂದಿದ್ದು, ಅವುಗಳನ್ನು ತಿದ್ದುವ ಮೂಲಕ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆ ಎಂದು ಅವರು ಆರೋಪಿಸಿದರು.

ಹಗರಣದಲ್ಲಿ ಭಾಗಿಯಾದ ಅಧಿಕಾರಿಗಳನ್ನು ಅಮಾನತು ಮಾಡುವ ಬದಲು ವರ್ಗಾವಣೆ ಮಾಡಲಾಗಿದೆ. ಹಗರಣ ಕುರಿತು ಜಿಲ್ಲಾಧಿಕಾರಿ ಆರೇಳು ತಿಂಗಳ ಹಿಂದೆ ವರದಿ ನೀಡಿದ್ದರೂ ಸರ್ಕಾರ ಕಣ್ಮುಚ್ಚಿ ಕುಳಿತಿದೆ ಎಂದು ದೂರಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಲೂಟಿಗಾಗಿ ಸುರಂಗ ಕೊರೆಯುವ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿದೆ. ದಲಿತರ ಹಣ ಚಿನ್ನದ ಅಂಗಡಿ, ಕಾರು ಖರೀದಿ, ಬಾರ್‌ಗಳಿಗೆ ಹೋಗಿದೆ ಎಂದರು.

ಮಂಗಳೂರಿನ ಬಲ್ಮಠದಲ್ಲಿ ನಿರ್ಮಾಣ ಹಂತದ ಕಟ್ಟಡದ ಕೆಲಸ ಮಾಡುತ್ತಿದ್ದಾಗ ಮಣ್ಣು ಕುಸಿದು ಸಿಕ್ಕಿಹಾಕಿಕೊಂಡಿದ್ದ ಕಾರ್ಮಿಕರಿಬ್ಬರ ರಕ್ಷಣಾ ಕಾರ್ಯಾಚರಣೆ ನಡೆಯಿತು –ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್

ಮಣ್ಣು ಕುಸಿತ: ಕಾರ್ಮಿಕ ಸಾವು

ಒಂದನೇ ಪುಟದಿಂದ...

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್), ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಏಳು ಗಂಟೆಗಳ ಪ್ರಯತ್ನದ ಬಳಿಕ ಚಂದನ್ ದೇಹವನ್ನು ಮಣ್ಣಿನಡಿಯಿಂದ ರಾತ್ರಿ 7.30ರ ಸುಮಾರಿಗೆ ಹೊರತೆಗೆದರು. ತಕ್ಷಣವೇ ತಜ್ಞವೈದ್ಯರ ತಂಡ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಕಾರ್ಮಿಕನ ಎದೆಬಡಿತ ಮರುಸ್ಥಾಪನೆಗೆ ಪ್ರಯತ್ನಿಸಿತು. ಆದರೆ, ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಮೃತ ಚಂದನ್ ಕುಮಾರ್‌ಗೆ ತಾಯಿ, ಪತ್ನಿ, ಇಬ್ಬರು ಮಕ್ಕಳು ಹಾಗೂ ಸೋದರಿ ಇದ್ದಾರೆ ಎಂದು ಅವರ ಬಂಧುವೊಬ್ಬರು ತಿಳಿಸಿದರು.

ಕೊಪ್ಪಳದಿಂದ ಬೆಂಗಳೂರಿನವರೆಗೂ ಬೆಂಗಾವಲಾದ ಸಿಬ್ಬಂದಿ

'ಹೃದಯ'ಕ್ಕೆ ಮಿಡಿದ ಆಂಬುಲೆನ್ಸ್ ತಂಡ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಅನಾರೋಗ್ಯದಿಂದ ಬಳಲುತ್ತಿದ್ದ ಹೆಣ್ಣು ಶಿಶುವಿನ ಪ್ರಾಣ ಉಳಿಸಲು ಇಲ್ಲಿನ ಜಿಲ್ಲಾ ಆಸ್ಪತ್ರೆಯಿಂದ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ಚಿಕಿತ್ಸೆಗಾಗಿ ರಾಜ್ಯದ ವಿವಿಧ ಜಿಲ್ಲೆಗಳ ಆಂಬುಲೆನ್ಸ್ ಚಾಲಕರು ಒಟ್ಟಾಗಿ ಕೆಲಸ ಮಾಡಿ ಮಗುವಿನ 'ಹೃದಯ' ವೇದನೆಗೆ ಮಿಡಿದಿದ್ದಾರೆ.

ಹೊಸಪೇಟೆ ತಾಲ್ಲೂಕಿನ ಗಾದಿಗನೂರಿನ ಗ್ರಾಮದ ಫಕೀರಸ್ವಾಮಿ, ಹುಲಿಗೆಮ್ಮ ದಂಪತಿಗೆ 22 ದಿನಗಳ ಹಿಂದೆಯಷ್ಟೇ ಜನಿಸಿದ ಮಗುವಿನ ಹೃದಯದಲ್ಲಿ ರಂಧ್ರ ಹಾಗೂ ಉಸಿರಾಟದ ಸಮಸ್ಯೆಯಿದ್ದ ಕಾರಣ ಚಿಕಿತ್ಸೆಗಾಗಿ ಕರೆದುಕೊಂಡು ಹೋಗುವಂತೆ ಇಲ್ಲಿನ ವೈದ್ಯರು ಶಿಫಾರಸು ಮಾಡಿದ್ದರು.

ತುರ್ತಾಗಿ ಬೆಂಗಳೂರು ತಲುಪಬೇಕಾಗಿದ್ದರಿಂದ ಇಲ್ಲಿನ ಗವಿಸಿದ್ದೇಶ್ವರ ಆಂಬುಲೆನ್ಸ್ ಸಂಘದ ಉಪಾಧ್ಯಕ್ಷ ಅಬ್ದುಲ್ ನಬೀದ್ ಹಾಗೂ ಅವರ ಸಹೋದರ ಸದ್ದಾಂ ರಾಜ್ಯದ ವಿವಿಧೆಡೆಯಿರುವ ಆಂಬುಲೆನ್ಸ್ ಸಿಬ್ಬಂದಿಯ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಮಾಹಿತಿ ಹಂಚಿಕೊಂಡು ಸಹಕರಿಸುವಂತೆ ಕೋರಿದ್ದಾರೆ.

ಇದಕ್ಕೆ ಕೊಪ್ಪಳ, ಹೊಸಪೇಟೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಹಾಗೂ ಬೆಂಗಳೂರು ನಗರದ ಆಂಬುಲೆನ್ಸ್ ಸಿಬ್ಬಂದಿ ಸಹಕಾರ ನೀಡಿ ಮಗು ಇದ್ದ ವಾಹನಕ್ಕೆ ಬೆಂಗಾವಲಾಗಿ ತೆರಳಿದ್ದಾರೆ. ಮಗುವನ್ನು ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಯಾ ಜಿಲ್ಲೆಯಿಂದ ಹೊರಟ ಆಂಬುಲೆನ್ಸ್ ಸಿಬ್ಬಂದಿ ಜಿಲ್ಲೆ ವ್ಯಾಪ್ತಿ ಮುಗಿಯುವ ತನಕ ಬೆಂಗಾವಲಾಗಿ ಕೆಲಸ ಮಾಡಿದ್ದಾರೆ.

'ಮಗುವಿನ ಪರಿಸ್ಥಿತಿ ನೋಡಿ ಕರುಳು ಕಿವುಚಿ ಬಂದಂತಾಯಿತು. ಕ್ಷಣವೂ ವ್ಯರ್ಥ ಮಾಡದೆ ಆಂಬುಲೆನ್ಸ್ ಸಿಬ್ಬಂದಿಗೆ ಮಾಹಿತಿ ನೀಡಿದೆ. ಎಲ್ಲರೂ ಕೈ ಜೋಡಿಸಿದ್ದರಿಂದ ಬೆಂಗಳೂರು ತಲುಪಲು ಸಾಧ್ಯವಾಯಿತು. ಮಧ್ಯಾಹ್ನ 1 ಗಂಟೆಗೆ ಕೊಪ್ಪಳದಿಂದ ಹೊರಟು ಸಂಜೆ 5 ಗಂಟೆಗೆ ಬೆಂಗಳೂರು ತಲುಪಿದೆ. ಇದು ನನ್ನ ಬದುಕಿನ ಸಾರ್ಥಕ ಕ್ಷಣ' ಎಂದು ನಬೀದ್ 'ಪ್ರಜಾವಾಣಿ' ಜೊತೆ ಸಂತೋಷ ಹಂಚಿಕೊಂಡರು.

ಮಗುವನ್ನು ಕರೆದುಕೊಂಡು ಜಿಲ್ಲಾ ಆಸ್ಪತ್ರೆಯಿಂದ ಆಂಬುಲೆನ್ಸ್ ಹೊರಟ ಕ್ಷಣ

ಜಾರ್ಖಂಡ್ ಸಿ.ಎಂ ಚಂಪೈ ರಾಜೀನಾಮೆ

ರಾಜ್ಯಪಾಲರನ್ನು ಭೇಟಿ ಮಾಡಿದ ಹೇಮಂತ್ ಸೊರೇನ್ • ಸರ್ಕಾರ ರಚನೆಗೆ ಹಕ್ಕು ಮಂಡನೆ

ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಬುಧವಾರ ಸಲ್ಲಿಸಿದರು —ಪಿಟಿಐ ಚಿತ್ರ

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಬುಧವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಜೆಎಂಎಂ ಕಾರ್ಯಕಾರಿ ಅಧ್ಯಕ್ಷ ಹೇಮಂತ್ ಸೊರೇನ್ ಅವರು ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು.

ಇದಕ್ಕೂ ಮೊದಲು ಚಂಪೈ ಸೊರೇನ್ ನಿವಾಸದಲ್ಲಿ ಆಡಳಿತಾರೂಢ ಮೈತ್ರಿಕೂಟದ ನಾಯಕರು ಮತ್ತು ಶಾಸಕರ ಸಭೆ ನಡೆಯಿತು. ಅಲ್ಲಿ ಹೇಮಂತ್ ಸೊರೇನ್ ಅವರನ್ನು ಜೆಎಂಎಂ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು.

ಕಾಂಗ್ರೆಸ್‌ನ ಜಾರ್ಖಂಡ್ ಉಸ್ತುವಾರಿ ಗುಲಾಮ್ ಅಹ್ಮದ್ ಮಿರ್, ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ಠಾಕೂರ್, ಹೇಮಂತ್ ಅವರ ಸಹೋದರ ಬಸಂತ್, ಪತ್ನಿ ಕಲ್ಪನಾ ಸಭೆಯಲ್ಲಿ ಭಾಗವಹಿಸಿದ್ದರು.

'ಜೆಎಂಎಂ ನೇತೃತ್ವದ ಮೈತ್ರಿಕೂಟದ ನಿರ್ಧಾರದಂತೆ ನಾನು ರಾಜೀನಾಮೆ ನೀಡಿದ್ದೇನೆ. ನಮ್ಮ ಮೈತ್ರಿ ಪ್ರಬಲವಾಗಿದೆ' ಎಂದು ರಾಜಭವನದಿಂದ ಹೊರಬಂದ ಬಳಿಕ ಚಂಪೈ ಸೊರೇನ್ ಸುದ್ದಿಗಾರರಿಗೆ ತಿಳಿಸಿದರು.

'ಹೇಮಂತ್ ಸೊರೇನ್ ಅವರೊಂದಿಗೆ ಏನೆಲ್ಲ ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಆಗ ನನಗೆ ಮೈತ್ರಿಕೂಟದ ಪಾಲುದಾರರು ಜವಾಬ್ದಾರಿ ನೀಡಿದ್ದರು. ಈಗ ಮೈತ್ರಿಕೂಟವು ಹೇಮಂತ್ ಸೊರೇನ್ ಅವರ ಪರವಾಗಿ ನಿರ್ಧಾರ ತೆಗೆದುಕೊಂಡಿದೆ' ಎಂದು ಅವರು ಪ್ರತಿಕ್ರಿಯಿಸಿದರು. ಚಂಪೈ ಸೊರೇನ್ ಅವರು ಈ ವರ್ಷದ ಫೆಬ್ರುವರಿ 2ರಂದು ರಾಜ್ಯದ 12ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ಭೂ ಹಗರಣ ಕುರಿತು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಹೇಮಂತ್ ಅವರು ಜನವರಿ 31ರಂದು ಬಂಧನಕ್ಕೆ ಒಳಗಾಗಿದ್ದರು. ಅದಕ್ಕೂ ಕೆಲ ಕ್ಷಣ ಮುನ್ನ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಪ್ರಕರಣದಲ್ಲಿ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ ಬಳಿಕ ಅವರು ಜೂನ್ 28ರಂದು ಜೈಲಿನಿಂದ ಬಿಡುಗಡೆಯಾದರು.

'ಸಿದ್ಧತೆ ಪೂರ್ಣಗೊಂಡಿದೆ': 'ಸರ್ಕಾರ ರಚನೆಗೆ ಎಲ್ಲ ಸಿದ್ಧತೆ ಬಹುತೇಕ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ಎಲ್ಲವನ್ನೂ ತಿಳಿಸಲಾಗುವುದು' ಎಂದು ಹೇಮಂತ್ ಸೊರೇನ್ ಪ್ರತಿಕ್ರಿಯಿಸಿದರು.

ಪಕ್ಷಗಳ ಬಲಾಬಲ

81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯಲ್ಲಿ ಪ್ರಸ್ತುತ 76 ಸದಸ್ಯರಿದ್ದಾರೆ. ಲೋಕಸಭೆ ಚುನಾವಣೆಯ ಬಳಿಕ ರಾಜ್ಯದಲ್ಲಿ ಜೆಎಂಎಂ ನೇತೃತ್ವದ ಮೈತ್ರಿಕೂಟದ ಬಲ 45ಕ್ಕೆ (ಜೆಎಂಎಂ–27, ಕಾಂಗ್ರೆಸ್– 17, ಆರ್‌ಜೆಡಿ–1) ಇಳಿದಿದೆ.

ಜೆಎಂಎಂನ ಇಬ್ಬರು ಶಾಸಕರಾದ ನಳಿನ್ ಸೊರೇನ್, ಜೋಬಾ ಮಾಝಿ ಅವರು ಸಂಸದರಾಗಿ ಆಯ್ಕೆಯಾಗಿದ್ದಾರೆ. ಜಾಮಾದ ಶಾಸಕಿ ಸೀತಾ ಸೊರೇನ್ ಅವರು ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ರಾಜೀನಾಮೆ ನೀಡಿದ್ದಾರೆ. ಅಲ್ಲದೆ ಬಿಶುನ್‌ಪುರ ಶಾಸಕ ಚಾಮ್ರಾ ಲಿಂಡಾ ಮತ್ತು ಬೋರಿಯಾ ಶಾಸಕ ಲೋಬಿನ್ ಹೆಂಬ್ರೋಮ್ ಅವರನ್ನು ಜೆಎಂಎಂ ಪಕ್ಷದಿಂದ ಹೊರಹಾಕಿದೆ. ವಿಧಾನಸಭೆಯಲ್ಲಿ ಬಿಜೆಪಿ ಬಲ 24ಕ್ಕೆ ಇಳಿದಿದೆ. ಬಿಜೆಪಿ ಶಾಸಕರಾದ ಢುಲು ಮಹ್ತೊ (ಬಗ್ಮಾರಾ), ಮನೀಶ್ ಜೈಸ್ವಾಲ್ (ಹಜಾರಿಬಾಗ್) ಅವರು ಸಂಸದರಾಗಿ ಆಯ್ಕೆಯಾಗಿದ್ದಾರೆ. ಮಂಡು ಶಾಸಕ ಜೈಪ್ರಕಾಶ್ ಭಾಯ್ ಪಟೇಲ್ ಅವರು ಕಾಂಗ್ರೆಸ್ ಸೇರಿದ್ದರಿಂದ ಬಿಜೆಪಿ ಅವರನ್ನು ಉಚ್ಚಾಟಿಸಿದೆ.

ಚಂಪೈ ಯುಗ ಮುಗಿದಿದೆ– ಬಿಜೆಪಿ

'ಜಾರ್ಖಂಡ್‌ನಲ್ಲಿ ಚಂಪೈ ಸೊರೇನ್ ಯುಗ ಮುಗಿದಿದೆ. ಕುಟುಂಬ ಆಧಾರಿತ ಪಕ್ಷದಲ್ಲಿ, ಕುಟುಂಬದ ಹೊರಗಿನ ಜನರಿಗೆ ರಾಜಕೀಯ ಭವಿಷ್ಯವಿಲ್ಲ' ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಶಿಬು ಸೊರೇನ್ ಅವರ ಕುಟುಂಬದ ಹೊರಗಿನ ಆದಿವಾಸಿಗಳು ಜೆಎಂಎಂನಲ್ಲಿ ತಾತ್ಕಾಲಿಕ ಅಷ್ಟೇ. ಆ ಕುಟುಂಬವರು ತಮ್ಮ ಅಗತ್ಯ, ಅವಶ್ಯಕತೆಗಳಿಗೆ ತಕ್ಕಂತೆ ಅವರನ್ನು ಬಳಸಿಕೊಳ್ಳುತ್ತಾರೆ' ಎಂದು ಜಾರ್ಖಂಡ್‌ನ ಬಿಜೆಪಿ ಘಟಕದ ಅಧ್ಯಕ್ಷ ಬಾಬುಲಾಲ್ ಮರಾಂಡಿ ಆರೋಪಿಸಿದ್ದಾರೆ. ಹೇಮಂತ್ ಅವರು ಶಿಬು ಸೊರೇನ್ ಅವರ ಮಗ.

ರಾಜ್ಯಗಳಿಗೆ ಸೂಚನೆ ನೀಡಿದ ಕೇಂದ್ರ ಝೀಕಾ ವೈರಸ್: ನಿಗಾ ವಹಿಸಿ

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಕೆಲ ಭಾಗಗಳಲ್ಲಿ ಝೀಕಾ ವೈರಸ್‌ನ ಕೆಲವು ಪ್ರಕರಣಗಳು ಪತ್ತೆಯಾದ ಬೆನ್ನಲ್ಲೇ ಕೇಂದ್ರ ಆರೋಗ್ಯ ಸಚಿವಾಲಯವು ದೇಶದಾದ್ಯಂತ ಈ ಪರಿಸ್ಥಿತಿಯ ಮೇಲೆ ನಿರಂತರ ನಿಗಾ ವಹಿಸುವ ಅಗತ್ಯವಿದೆ ಎಂದು ಎಲ್ಲ ರಾಜ್ಯಗಳಿಗೆ ಬುಧವಾರ ಸೂಚಿಸಿದೆ.

ಪುಣೆಯಲ್ಲಿ 6, ಕೊಲ್ಹಾಪುರ ಮತ್ತು ಸಂಗಮ್ನೇರ್‌ನಲ್ಲಿ ತಲಾ ಒಬ್ಬರಲ್ಲಿ ಝೀಕಾ ವೈರಸ್ ಇರುವುದು ಮಂಗಳವಾರ ದೃಢಪಟ್ಟಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು, ಕೆಲ ಸಲಹೆ ಮತ್ತು ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ಹೊರಡಿಸಿದೆ.

ಗರ್ಭಿಣಿಯರ ಮೇಲೆ ಹೆಚ್ಚಿನ ನಿಗಾ ಇಡಬೇಕಾದ ಅಗತ್ಯವಿದೆ. ಈ ಸೋಂಕು ದೃಢಪಟ್ಟ ತಾಯಂದಿರ ಭ್ರೂಣದ ಬೆಳವಣಿಗೆ ಬಗ್ಗೆ ಮೇಲ್ವಿಚಾರಣೆ ವಹಿಸುವಂತೆ ಅದು ರಾಜ್ಯ ಸರ್ಕಾರಗಳಿಗೆ ತಿಳಿಸಿದೆ.

ಈಡಿಸ್ ಸೊಳ್ಳೆಗಳ ಹಾವಳಿಯನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಲ್ಲದೆ ಇದರ ಮೇಲ್ವಿಚಾರಣೆಗೆ ನೋಡಲ್ ಅಧಿಕಾರಿಯೊಬ್ಬರನ್ನು ನಿಯೋಜಿಸುವಂತೆ ಹೇಳಿದೆ. ಈಡಿಸ್ ಸೊಳ್ಳೆಯಿಂದ ಡೆಂಗಿ, ಚಿಕೂನ್ ಗುನ್ಯ ಹಾಗೂ ಝೀಕಾ (ಮಿದುಳು ಬೆಳವಣಿಗೆಗೆ ಸಮಸ್ಯೆ) ಸೋಂಕುಗಳು ಹರಡುತ್ತವೆ. ಇದು ಮಾರಣಾಂತಿಕ ಅಲ್ಲದಿದ್ದರೂ, ಗರ್ಭಿಣಿಯರಿಗೆ ಜನಿಸುವ ಶಿಶುಗಳಲ್ಲಿ 'ಮೈಕ್ರೊಸೆಫಾಲಿ' (ತಲೆಯು ನಿರೀಕ್ಷೆಗಿಂತ ಚಿಕ್ಕದಾಗಿರುವ ಸ್ಥಿತಿ) ಬಂದೆರಗಬಹುದು. ಹೀಗಾಗಿ ಹೆಚ್ಚು ಕಾಳಜಿವಹಿಸಬೇಕಿದೆ ಎಂದು ಅದು ತಿಳಿಸಿದೆ.

ವಸತಿ ಪ್ರದೇಶಗಳು, ಶಾಲೆಗಳು, ನಿರ್ಮಾಣ ಸ್ಥಳಗಳು, ಸಂಸ್ಥೆಗಳ ಆವರಣಗಳಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮವಹಿಸು ವಂತೆ ಅದು ಹೇಳಿದೆ.

'ಹುತಾತ್ಮ ಯೋಧನ ಕುಟುಂಬಕ್ಕೆ ಪರಿಹಾರ ಸಂದಿದೆ'

ನವದೆಹಲಿ (ಪಿಟಿಐ): ಕರ್ತವ್ಯ-ನಿರತರಾಗಿದ್ದಾಗ ಹುತಾತ್ಮರಾದ ಅಗ್ನಿವೀರ್ ಅಜಯ್ ಕುಮಾರ್ ಅವರ ಕುಟುಂಬದವರಿಗೆ ಇನ್ನೂ ಪರಿಹಾರ ನೀಡಿಲ್ಲ ಎಂಬ ಸಾಮಾಜಿಕ ಮಾಧ್ಯಮದ ಪೋಸ್ಟ್‌ಗಳ ಮಾಹಿತಿ ಸುಳ್ಳು ಎಂದು ಭಾರತೀಯ ಸೇನೆ ಬುಧವಾರ ಸ್ಪಷ್ಟನೆ ನೀಡಿದೆ.

'ಅಜಯ್ ಕುಮಾರ್ ಅವರ ಕುಟುಂಬದವರಿಗೆ ಈಗಾಗಲೇ ಪರಿಹಾರದ ಮೊತ್ತದಲ್ಲಿ ₹98.39 ಲಕ್ಷವನ್ನು ನೀಡಲಾಗಿದೆ. ಅವರಿಗೆ ಸಂದಾಯವಾಗಲಿರುವ ಒಟ್ಟು ಪರಿಹಾರದ ಮೊತ್ತ ಸುಮಾರು ₹1.65 ಕೋಟಿ' ಎಂದು ಸೇನಾ ಪಡೆಯ ಸಾರ್ವಜನಿಕ ಮಾಹಿತಿ ವಿಭಾಗದ ಅಡಿಷನಲ್ ಡೈರೆಕ್ಟೊರೇಟ್ ಜನರಲ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನೀಟ್ ಅಕ್ರಮ ಮತ್ತೊಬ್ಬನ ಬಂಧನ

ನವದೆಹಲಿ (ಪಿಟಿಐ): ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಮತ್ತೊಬ್ಬ ಸಂಚುಕೋರ ಅಮನ್ ಸಿಂಗ್ ಎಂಬುವವರನ್ನು ಜಾರ್ಖಂಡ್‌ನ ಧನ್‌ಬಾದ್‌ನಲ್ಲಿ ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಈ ಪ್ರಕರಣದಲ್ಲಿ ಹಜಾರೀಬಾಗ್ ಮೂಲದ ಓಯಸಿಸ್ ಶಾಲೆಯ ಪ್ರಾಂಶುಪಾಲ ಮತ್ತು ಉಪ ಪ್ರಾಂಶುಪಾಲರನ್ನು ಹಾಗೂ ಮತ್ತಿಬ್ಬರನ್ನು ಸಂಸ್ಥೆ ಈ ಹಿಂದೆ ಬಂಧಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಇಲ್ಲಿಯವರೆಗೆ ಆರು ಎಫ್‌ಐಆರ್‌ಗಳನ್ನು ದಾಖಲಿಸಿದೆ.

ನೀಟ್ ಪರೀಕ್ಷಾ ಅಕ್ರಮಗಳ ಕುರಿತ ಸಮಗ್ರ ತನಿಖೆಗೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವಾಲಯ ಉಲ್ಲೇಖಿಸಿದ ಬಳಿಕ ಸಿಬಿಐ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದೆ.

ಈ ವರ್ಷದ ಮೇ 5ರಂದು ದೇಶದಾದ್ಯಂತ ನಡೆದಿದ್ದ ನೀಟ್ ಪರೀಕ್ಷೆಯನ್ನು 23 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಬರೆದಿದ್ದರು. ಪ್ರಶ್ನೆ ಪತ್ರಿಕೆ ಸೋರಿಕೆ, ಕೃಪಾಂಕ ಸೇರಿದಂತೆ ವಿವಿಧ ಅಕ್ರಮಗಳ ಕುರಿತ ಆರೋಪಗಳು ವ್ಯಕ್ತವಾಗಿದ್ದವು.

ಬಿಹಾರ: ಬಿದ್ದ ಮತ್ತೊಂದು ಸೇತುವೆ

ಸಿವಾನ್ (ಬಿಹಾರ) (ಪಿಟಿಐ): ಬಿಹಾರದಲ್ಲಿ ಮತ್ತೊಂದು ಸೇತುವೆ ಕುಸಿದಿರುವ ಘಟನೆ ನಡೆದಿದೆ. ಇದು ಕಳೆದ ಹದಿನೈದು ದಿನಗಳಲ್ಲಿ ನಡೆದಿರುವ ಏಳನೇ ಘಟನೆ ಇದಾಗಿದೆ. ಸಿವಾನ್ ಜಿಲ್ಲೆಯ ಗಂಡಕಿ ನದಿಗೆ ನಿರ್ಮಿಸಲಾಗಿದ್ದ ಸೇತುವೆಯ ಒಂದು ಭಾಗವು ಬುಧವಾರ ಬೆಳಿಗ್ಗೆ ಕುಸಿದಿದೆ.

ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಕಳೆದ 11 ದಿನಗಳಲ್ಲಿ ಸಿವಾನ್‌ನಲ್ಲಿ ಸೇತುವೆ ಕುಸಿದ ಎರಡನೇ ಘಟನೆ ಇದಾಗಿದೆ. ಜಿಲ್ಲೆಯ ಡಿಯೋರಿಯಾ ಬ್ಲಾಕ್‌ನಲ್ಲಿರುವ ಈ ಸಣ್ಣ ಸೇತುವೆಯು ಹಲವು ಹಳ್ಳಿಗಳನ್ನು ಮಹಾರಾಜ್‌ಗಂಜ್ ಜೊತೆಗೆ ಸಂಪರ್ಕಿಸಲು ಪ್ರಮುಖ ಕೊಂಡಿಯಾಗಿತ್ತು.

ಬ್ಲಾಕ್‌ನ ಹಿರಿಯ ಅಧಿಕಾರಿಗಳು ಸ್ಥಳ ತಲುಪಿದ್ದಾರೆ. ನಿಖರ ಕಾರಣ ಪತ್ತೆಹಚ್ಚಲು ತನಿಖೆ ಪ್ರಗತಿಯಲ್ಲಿದೆ ಎಂದು ಉಪ ಅಭಿವೃದ್ಧಿ ಆಯುಕ್ತ ಮುಕೇಶ್ ಕುಮಾರ್ ತಿಳಿಸಿದ್ದಾರೆ.

ಘಟನೆಯು ಮುಂಜಾನೆ 5 ಗಂಟೆಯ ಸುಮಾರಿಗೆ ನಡೆದಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಇದು 1982-83ರಲ್ಲಿ ನಿರ್ಮಿಸಲಾದ ಸೇತುವೆಯಾಗಿದೆ. ಕಳೆದ ಕೆಲವು ದಿನಗಳಿಂದ ಸೇತುವೆಯ ದುರಸ್ತಿ ಕಾರ್ಯ ನಡೆಯುತ್ತಿತ್ತು ಎಂದು ಕುಮಾರ್ ಹೇಳಿದರು.

ಈ ಹಿಂದೆ ಸುರಿದ ಭಾರಿ ಮಳೆಯಿಂದಾಗಿ ಗಂಡಕಿ ನದಿ ಉಕ್ಕಿ ಹರಿದಾಗ ಸೇತುವೆಗೆ ಹಾನಿಯಾಗಿತ್ತು. ಶಿಥಿಲಗೊಂಡಿದ್ದ ಈ ಸೇತುವೆ ಕುಸಿಯಬಹುದು ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದರು. 11 ದಿನಗಳ ಹಿಂದೆಯಷ್ಟೇ ಸಿವಾನ್‌ನಲ್ಲಿ ಸೇತುವೆ ಕುಸಿದಿತ್ತು.

ಈ ಘಟನೆಗಳ ತನಿಖೆಗಾಗಿ ಬಿಹಾರ ಸರ್ಕಾರವು ಉನ್ನತ ಮಟ್ಟದ ಸಮಿತಿ ರಚಿಸಿದೆ.

ಅಸ್ಸಾಂನ ಮೊರಿಗಾಂವ್ ಜಿಲ್ಲೆಯಲ್ಲಿ ಬುಧವಾರ ಪ್ರವಾಹದ ನಡುವೆ ದೋಣಿಯಲ್ಲಿ ಜನಿಸಿದ ನವಜಾತ ಶಿಶುವಿನ ಆರೈಕೆ ಮಾಡಿದ ವೈದ್ಯಕೀಯ ಸಿಬ್ಬಂದಿ —ಪಿಟಿಐ ಚಿತ್ರ

ಸಿಸೋಡಿಯಾ, ಕೆ.ಕವಿತಾ ನ್ಯಾಯಾಂಗ ಬಂಧನ ವಿಸ್ತರಣೆ

ಕೇಜ್ರಿವಾಲ್ 12ರವರೆಗೆ ನ್ಯಾಯಾಂಗ ವಶಕ್ಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಇಲ್ಲಿನ ನ್ಯಾಯಾಲಯವು ಜುಲೈ 12ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಕೇಜ್ರಿವಾಲ್ ಅವರು ಬುಧವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಕಲಾಪಕ್ಕೆ ಹಾಜರಾದರು.

ತಮ್ಮ ವೈದ್ಯಕೀಯ ಪರೀಕ್ಷೆ ವೇಳೆ ಪತ್ನಿ ಸುನೀತಾ ಕೇಜ್ರಿವಾಲ್ ಅವರು ಜೊತೆಗಿರಲು ಅವಕಾಶ ನೀಡಬೇಕು ಎಂದು ಕೋರಿ ಕೇಜ್ರಿವಾಲ್ ಅವರು ಜೂನ್ 6ರಂದು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ನ್ಯಾಯಾಲಯ ಕಾಯ್ದಿರಿಸಿದೆ.

'ಕಳೆದ ಹಲವು ವರ್ಷಗಳಿಂದ ನನ್ನ ಆರೋಗ್ಯದ ಜವಾಬ್ದಾರಿಯನ್ನು ಪತ್ನಿಯೇ ನಿರ್ವಹಿಸುತ್ತಿದ್ದಾರೆ. ಇದರಿಂದ ನನ್ನ ಆರೋಗ್ಯದ ಕುರಿತು ಎಲ್ಲಾ ಮಾಹಿತಿಯು ಅವರಿಗೆ ಗೊತ್ತಿದೆ. ಹೀಗಾಗಿ ಪ್ರತಿ ವಾರವೂ ತಮ್ಮ ವೈದ್ಯಕೀಯ ವರದಿಗಳನ್ನು ಪರಿಶೀಲಿಸಲು ನನ್ನ ಪತ್ನಿಗೆ ಅವಕಾಶ ನೀಡುವುದು ಸಮರ್ಥನೀಯ ಮತ್ತು ಅತ್ಯಗತ್ಯ' ಎಂದು ಕೇಜ್ರಿವಾಲ್ ಪರ ವಕೀಲರು ವಾದಿಸಿದರು.

ವಿಚಾರಣೆ ವೇಳೆ ಮಾತನಾಡಲು ಅವಕಾಶ ನೀಡಬೇಕು ಎಂಬ ಕೇಜ್ರಿವಾಲ್ ಅವರ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿತು.

ಮತ್ತೊಂದೆಡೆ ಇದೇ ಪ್ರಕರಣ ಸಂಬಂಧ ಇಲ್ಲಿನ ವಿಶೇಷ ನ್ಯಾಯಾಲಯವು, ಎಎಪಿ ಮುಖಂಡ ಮನೀಷ್ ಸಿಸೋಡಿಯಾ ಮತ್ತು ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಜುಲೈ 25ರವರೆಗೆ ವಿಸ್ತರಿಸಿದೆ.

ಅಸ್ಸಾಂ ಪ್ರವಾಹ: ಎಂಟು ಸಾವು

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಪ್ರವಾಹ ಉಲ್ಬಣಗೊಂಡಿದ್ದು, 8 ಮಂದಿ ಮೃತಪಟ್ಟಿದ್ದಾರೆ. 23 ಜಿಲ್ಲೆಗಳ 11.50 ಲಕ್ಷ ಜನರು ಬಾಧಿತ ರಾಗಿದ್ದಾರೆ. ಬ್ರಹ್ಮಪುತ್ರ ಮತ್ತು ಅದರ ಉಪನದಿಗಳು ಸೇರಿದಂತೆ ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ ಎಂದು ವರದಿಯೊಂದು ತಿಳಿಸಿದೆ.

ಮಣಿಪುರದಲ್ಲಿ ಇಬ್ಬರ ಸಾವು (ಇಂಫಾಲ್ ವರದಿ): ಮಣಿಪುರದ ಪೂರ್ವ ಇಂಫಾಲ ಹಾಗೂ ಪಶ್ಚಿಮ ಇಂಫಾಲ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಸೇನಾಪತಿ ನದಿಯಲ್ಲಿ ಇಬ್ಬರು ಮುಳುಗಿ ಮೃತಪಟ್ಟಿದ್ದಾರೆ. 2000 ಜನರು ಸ್ಥಳಾಂತರ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರು ಮಹಾನಗರಪಾಲಿಕೆ

DMA/2024-25/WORK INDENT NO.17316, 19762, 19803, 19800 ದಿನಾಂಕ: 29.06.2024

ಟೆಂಡರ್ ಪ್ರಕಟಣೆ

E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಮಹಾನಗರಪಾಲಿಕೆ ಅನುದಾನದಲ್ಲಿ DMA/2024-25/WORK INDENT NO.17316, 19762, 19803, 19800 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.07.2024, ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು ಮಹಾನಗರಪಾಲಿಕೆ, ಮಂಗಳೂರು

DIPR / MNG /197/ MPL / 24-25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

ನಂ.1, ಡಾ. ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು – 560079

ದೂರವಾಣಿ: +91–80–29619801, ಇಮೇಲ್: md.ksmscl@gmail.com

No. HFW/KSMSCL/EQPT/NTEP/H-RAY/TND/58/2023-24(IND-0083 Call-2) Dated : 03.07.2024

ಟೆಂಡರ್ ಪ್ರಕಟಣೆ

1. ಟೆಂಡರ್ ಅಧಿಸೂಚನೆ ಸಂಖ್ಯೆ : HFW/KSMSCL/EQPT/NTEP/H-RAY/TND/58/2023-24 (IND-0083 Call-2) ದಿನಾಂಕ : 03/07/2024. ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಈ ಕೆಳಕಂಡ ಟೆಂಡರ್‌ನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ.

1. ಎನ್‌ಟಿಇಪಿ ಕಾರ್ಯಕ್ರಮದಡಿಯಲ್ಲಿ Handheld X-ray ಗಳನ್ನು ಖರೀದಿಸುವ ಬಗ್ಗೆ.

ತಾಂತ್ರಿಕ ವಿವರಣೆ, ಇ.ಎಮ್.ಡಿ. ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಲಾಗಿದ್ದು, ಟೆಂಡರ್‌ಗಳ ದಸ್ತಾವೇಜನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ : 03–07–2024 ರಿಂದ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ & ಸಂಗ್ರಹಣೆ) ಕೆ.ಎಸ್.ಎಮ್.ಎಸ್.ಸಿ.ಎಲ್. ಬೆಂಗಳೂರು.

DIPR/CP/759/Zen/2024-25

ಆಯುಕ್ತರ ಕಛೇರಿ ಮಹಾನಗರಪಾಲಿಕೆ, ಬಳ್ಳಾರಿ

ದೂರವಾಣಿ ಸಂಖ್ಯೆ : 08392–273479 /278168 ಫ್ಯಾಕ್ಸ್ : 08392–273477 ವೆಬ್‌ಸೈಟ್ : www.bellarycity.gov.in ಇ–ಮೇಲ್: bellarycommissioner@yahoo.co.in ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆ.ಶಾ/MRF/ /2024–25 ದಿನಾಂಕ: 03.07.2024

ಪತ್ರಿಕಾ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ಸ್ಯಾನಿಟರಿ ಲ್ಯಾಂಡ್ ಫಿಲ್ ಸೈಟ್ ನಲ್ಲಿ ಹೊಸದಾಗಿ 100TPD ಸಾಮರ್ಥ್ಯದ ಮಟಿರಿಯಲ್ ರಿಕವರಿ ಫೆಸಿಲಿಟಿ (MRF)ನಿರ್ಮಿಸುತ್ತಿದ್ದು ಸದರಿ ಫೆಸಿಲಿಟಿಗೆ ಅವಶ್ಯವಿರುವ ಯಂತ್ರೋಪಕರಣಗಳ ಮಾರುಕಟ್ಟೆ ಧರಗಳನ್ನು ಪಡೆಯಲು ಕೋಟೇಷನ್ ಕರೆಯಲಾಗಿದ್ದು ದಿನಾಂಕ: 04.07.2024 ರಿಂದ 11.07.2024 ಸಂಜೆ 05.00 ಗಂಟೆರೊಳಗಾಗಿ ಕೋಟೇಷನ್ಗಳನ್ನು ಬಳ್ಳಾರಿ ಮಹಾನಗರ ಪಾಲಿಕೆಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು, ಯಂತ್ರೋಪಕರಣಗಳ Technical Specificaitons ಮಾಹಿತಿಗಾಗಿ ಬಳ್ಳಾರಿ ಮಹಾನಗರ ಪಾಲಿಕೆ ವೆಬ್ ಸೈಟ್ ನಲ್ಲಿ ಪಡೆಯಬಹುದು. www.ballaricity.mrc.gov.in ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08392–273479 / 278168 ಫೋನ ನಂ. 9036676999 ಕರೆ ಮಾಡಬಹುದು.

ಆಯುಕ್ತರು ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಜಿಲ್ಲಾ ಪಂಚಾಯತಿ ರಾಮನಗರ

ಆಯುಷ್ ಇಲಾಖೆ

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ರಾಮನಗರ. ಜಿಲ್ಲಾ ಪಂಚಾಯತ್ ಭವನ, ಎರಡನೇ ಮಹಡಿ, ಬಿ.ಎಂ. ರಸ್ತೆ, ರಾಮನಗರ – 562159. ದೂರವಾಣಿ : 080–27272704, ಇಮೇಲ್ : daoramanagara@gmail.com

ಸಂಖ್ಯೆ : ಜಿ.ಆ.ಕ.ರಾ./17/ಹೊ.ಸಿಬ್ಬಂದಿ/2024–25 ದಿನಾಂಕ : 02–07–2024

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಛೇರಿ, ಹಾಗೂ ಅಧೀನ ಆಸ್ಪತ್ರೆ / ಚಿಕಿತ್ಸಾಲಯಗಳಿಗೆ ಅವಶ್ಯವಿರುವ 01 ಡಾಟಾ ಎಂಟ್ರಿ ಆಪರೇಟರ್ ಹಾಗೂ 12 ಗ್ರೂಪ್ ಡಿ ನೌಕರರ ಸೇವೆಯನ್ನು ಹೊರ ಗುತ್ತಿಗೆ ಸಂಸ್ಥೆಯಿಂದ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ಅಪ್‌ಲೋಡ್ ಪ್ರಾರಂಭ ದಿನಾಂಕ : 02–07–2024, ಕೊನೆಯ ದಿನಾಂಕ : 16–07–2024. ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು. ಟೆಂಡರ್ ನಂಬರ್ : AYD/2024-25/SE0086 ದೂರವಾಣಿ ಸಂಖ್ಯೆ : 080–2727 2704, 92421 37366 ಗೆ ಸಂಪರ್ಕಿಸುವುದು.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ರಾಮನಗರ.

ಡಿಐಪಿಆರ್/ರಾಮನಗರ/134/ಮಣಿಪಾಲ್/2024–25

ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ2:ಸಿಆರ್:ಟೆ.ಪ್ರ:2024–25 ದಿನಾಂಕ: 01.07.2024

ಟೆಂಡರು ಪ್ರಕಟಣೆ

2023–24ನೇ ಸಾಲಿನ ನಗರಸಭಾ ನಿಧಿ ಮತ್ತು 2023–24ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಡಿ (ಮರು ಟೆಂಡರು) ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ Standard Bid Document K.W-2 ರ ನಿಯಮ ನಿಬಂಧನೆ ಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 15.07.2024 ಸಂಜೆ 5.00 ಗಂಟೆಗೆ 2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: 16.07.2024 ಸಂಜೆ 5.01 ಗಂಟೆಗೆ. ಒಟ್ಟು 2 ಸಂಖ್ಯೆಯ ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1) DMA/2024-25/OW/WORK_INDENT19546
2) DMA/2023-24/OW/WORK_INDENT15651/CALL-2

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಂಚಾಯತ್ ರಾಜ್ ಆಯುಕ್ತಾಲಯ

ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ: ಕಪಂರಾಆ/ಅಭಿವೃದ್ಧಿ/ಗ್ರಂಥಾಲಯ/559/2023(ಭಾಗ–1) ದಿನಾಂಕ: 03.07.2024

ಸಂಕ್ಷಿಪ್ತ ಪ್ರಕಟಣೆ

2024–25ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿ 'ಅರಿವು ಕೇಂದ್ರ' (ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ) ಗಳಿಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಪುಸ್ತಕ/ ನಿಯತಕಾಲಿಕೆಗಳ ಆಯ್ಕೆಗೆ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ವಿವರವಾದ ಪ್ರಕಟಣೆ ಮತ್ತು ನಿಗದಿತ ಅರ್ಜಿ ನಮೂನೆಯು ಇಲಾಖೆಯ ಅಂತರ್ಜಾಲ https://prcrdpr.karnataka.gov.in ದಲ್ಲಿ ದೊರೆಯುತ್ತದೆ.

ಅರ್ಹ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ದಿನಾಂಕ: 08.07.2024 ರಿಂದ 07.08.2024ರ ಸಂಜೆ 5:30ರ ರೊಳಗಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಗಾಂಧಿನಗರ, ಬೆಂಗಳೂರು–560009 ಇಲ್ಲಿಗೆ ಪೋಸ್ಟ್ ಅಥವಾ ಕೊರಿಯರ್ ಮೂಲಕ ಸಲ್ಲಿಸತಕ್ಕದ್ದು.

ಅರ್ಜಿ ಸಲ್ಲಿಸಲು ನಿಗದಿತ ಕೊನೆಯ ದಿನಾಂಕ ಮತ್ತು ಸಮಯದ ನಂತರ ತಲುಪುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಉಪ ಸಮಿತಿ ಮತ್ತು ನಿರ್ದೇಶಕರು(ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/752/ಆಕಾರ್/2024–25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ. ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ–591116 ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ

ಸಂ; ಕಾ.&ಯಾಂ/ಹಿಬಿ/ದ.ಆ.ಪ್ರ/2024–25/227 ದಿನಾಂಕ:02/07/2024

ದರಗಳ ಆಹ್ವಾನ ಪ್ರಕಟಣೆ

ವಿಷಯ: 2024–25 ನೇ ಸಾಲಿನ ಏತ ನೀರಾವರಿ ಯೋಜನೆಗಳ ಚಾಲನೆ ಮತ್ತು ನಿರ್ವಹಣೆಯ ಸಲುವಾಗಿ ಸಾಮಗ್ರಿಗಳ ಪೂರೈಕೆಗಾಗಿ ಹಾಗೂ ಪಂಪಿಂಗ್ ಮಷಿನರಿಗಳ ದುರಸ್ತಿ, ಟ್ರಾನ್ಸಫಾರ್ಮರ್ ದುರಸ್ತಿ ಹಾಗೂ ರಿವೈಂಡಿಗ್ ಮತ್ತು ಇನ್ನಿತರ ಕೆಲಸಗಳಿಗಾಗಿ ಸ್ಪರ್ಧಾತ್ಮಕ ದರಗಳನ್ನು ಸಲ್ಲಿಸುವ ಕುರಿತು.

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಏತ ನೀರಾವರಿ ಯೋಜನೆಗಳ 2024–25 ನೇ ಸಾಲಿನ ಯಾತ ನೀರಾವರಿ ಯೋಜನೆಗಳ ನಿರ್ವಹಣೆಗಾಗಿ ಸಾಮಗ್ರಿಗಳ ಪೂರೈಕೆಗಾಗಿ, ಪಂಪಿಂಗ್ ಮಷಿನರಿಗಳ ದುರಸ್ತಿ, ಟ್ರಾನ್ಸಫಾರ್ಮರ್ ದುರಸ್ತಿ ಹಾಗೂ ರಿವೈಂಡಿಗ್ ಟ್ರಾನ್ಸಫಾರ್ಮರಗಳನ್ನು ಅಳವಡಿಸಲು ಮತ್ತು ಹೊಸ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸುವ ಕೆಲಸಗಳಿಗಾಗಿ ಮೊಹರು ಬಂದ್ ಮಾಡಿದ ಲಕೋಟೆಯಲ್ಲಿ ಸ್ಪರ್ಧಾತ್ಮಕ ದರಗಳನ್ನು ಅರ್ಹತೆ ಹೊಂದಿದ ನೋಂದಾಯಿತ ಏಜೆನ್ಸಿ/ ಗುತ್ತಿಗೆದಾರರಿಂದ ಅಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಎಜೆನ್ಸಿ/ಗುತ್ತಿಗೆದಾರರು ತಮ್ಮ ಕನಿಷ್ಠ ದರಗಳನ್ನು ಏತ ನೀರಾವರಿ ಯೋಜನೆಗಳನ್ನು ಖುದ್ದಾಗಿ ಪರಿಶೀಲಿಸಿ ದಿನಾಂಕ:15–07–2024 ಸಂಜೆ 4 ಘಂಟೆಯೊಳಗಾಗಿ ಖುದ್ದಾಗಿ /ಅಂಚೆ ಮೂಲಕ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ಕ.ನೀ.ನಿ.ನಿ. ವಿದ್ಯುತ್ ಉಪ ವಿಭಾಗ ಸವದತ್ತಿ/ಕಾರ್ಯಗಾರ ಮತ್ತು ಯಾಂತ್ರಿಕ ಉಪ ವಿಭಾಗ ನವಿಲುತೀರ್ಥ ಕಛೇರಿಗಳಿಗೆ ತಲುಪುವಂತೆ ಕಳುಹಿಸಲು ಈ ಮೂಲಕ ಕೋರಲಾಗಿದೆ. ಪಂಪಿಂಗ್ ಮಷಿನರಿಗಳ ದುರಸ್ತಿ ಕೆಲಸಗಳ ವಿವರಗಳನ್ನು ಉಪ ವಿಭಾಗ ಕಛೇರಿಗಳಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ. ಕಾರ್ಯಗಾರ ಮತ್ತು ಯಾಂತ್ರಿಕ ವಿಭಾಗ ನವಿಲುತೀರ್ಥ

DIPR/BGM/RO-NO-276/KSMCA/2024-25

ಜಂಟಿ ಕೃಷಿ ನಿರ್ದೇಶಕರ ಕಛೇರಿ, ಕೃಷಿ ಇಲಾಖೆ, ದಾವಣಗೆರೆ.

ಎ.ಪಿ.ಎಂ.ಸಿ. ರಸ್ತೆ, ಬಂಬೂ ಬಜಾರ್ ದಾವಣಗೆರೆ.

ದೂರವಾಣಿ.ಸಂ: 08192–297055 E-mail : agridvg@gmail.com

ಸಂ:ಜಕೃನಿ–ದಾ/ಲೆಕ್ಕ–5/ಟೆಂಡರ್/ರೈ.ಸಂ.ಕೇ/ಹೊ.ಗು/2024–25 ದಿ: 01.07.2024

ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಜಿಲ್ಲೆಯ ಅಧೀನ ಕಛೇರಿಗಳಾದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಬರುವ ರೈತ ಸಂಪರ್ಕ ಕೇಂದ್ರಗಳಿಗೆ ಹೊರ ಗುತ್ತಿಗೆ ಆಧಾರದ ಮೇಲೆ ದಾಸ್ತಾನು ನಿರ್ವಾಹಕರ ಸಿಬ್ಬಂದಿ ಸೇವೆಯನ್ನು ಪಡೆಯಲು ಅಧಿಸೂಚನೆ ಹೊರಡಿಸಿದ್ದು, ಸಂಬಂಧಪಟ್ಟ ಹೊರಗುತ್ತಿಗೆ ಸಂಸ್ಥೆಗಳಿಂದ ಇ–ಟೆಂಡರ್‌ನಲ್ಲಿ ದಿನಾಂಕ :03.07.2024 ರಿಂದ ಟೆಕ್ನಿಕಲ್ ಬಿಡ್, ವಾಣಿಜ್ಯ ಬಿಡ್ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಸಂಬಂಧಪಟ್ಟ ಸಂಸ್ಥೆಯವರು E-procurement ಮುಖಾಂತರ ದಿನಾಂಕ : 18.07.2024 ರ ಸಂಜೆ : 5.00 ಗಂಟೆ ಒಳಗಾಗಿ ಆನ್ ಲೈನ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರ ಮತ್ತು ಷರತ್ತುಗಳಿಗೆ www.kppp.karnataka.gov.in ಅಥವಾ ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಇವರಲ್ಲಿ ಕಛೇರಿಯ ವೇಳೆಯಲ್ಲಿ ಶ್ರೀ ಗಿರೀಶ್. ಬಿ. ಜಿ, ದ್ವಿತೀಯ ದರ್ಜೆ ಸಹಾಯಕರು, ಮೊಬೈಲ್ ನಂ : 7899872469 ರವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ವಾಸಾಇ/ದಾವಣಗೆರೆ/102/ ಕೆಎಸ್‌ಎಂಸಿಎ/2024–25

ಸಹಿ/– ಜಂಟಿ ಕೃಷಿ ನಿರ್ದೇಶಕರು ದಾವಣಗೆರೆ ಜಿಲ್ಲೆ, ದಾವಣಗೆರೆ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 02/2024–25 ದಿನಾಂಕ: 27.06.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)–ಕೆ.ಡಬ್ಲ್ಯೂ–4

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ–4 ರ ಅನ್ವಯ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕು, ಕಸಬಾ ಹೋಬಳಿ ಬೆಟ್ಟದಹಳ್ಳಿ ಗ್ರಾಮದ ಹತ್ತಿರ ಬ್ರಹ್ಮನಹಳ್ಳಿ ಮತ್ತು ಕೋರನಹಳ್ಳಿ ಮಧ್ಯೆ ಹರಿಯುವ ಹಳ್ಳಕ್ಕೆ ಅಡ್ಡಲಾಗಿ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ. 149.79 ಲಕ್ಷಗಳು.(ಜಿ.ಎಸ್.ಟಿ ಒಳಗೊಂಡಂತೆ) ಸದರಿ ಟೆಂಡರಿನಲ್ಲಿ ಬಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ.ಪಿ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ದಿನಾಂಕ 02.07.2024 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ 09.07.2024. ಇನ್ನುಳಿದಂತೆ ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/10/07/24–25/191

ಯೋಜನಾ ನಿರ್ದೇಶಕರ ಕಚೇರಿ

ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ದೂರವಾಣಿ ಸಂ:08352–259855, ಇ–ಮೇಲ್:dudc_bjp@yahoo.co.in, ka.vijayapura.dudc@gmail.com

ಸಂಖ್ಯೆ: ಜಿನಕೊ–5/ಟೆಂಡರ್/ಸಿಆರ್–ಯೋಜನೆ/3ನೇ ವ್ಯಕ್ತಿ ತಪಾಸಣೆ/ಸಿಆರ್–/2024–25/16 ದಿನಾಂಕ: 03.07.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಎಸ್. ಎಫ್. ಸಿ. ವಿಶೇಷ, 14 & 15ನೇ ಹಣಕಾಸು ಯೋಜನೆ, ಕುಡಿಯುವ ನೀರು ಸರಬರಾಜು ಯೋಜನೆ, ನಗರ ಸ್ಥಳೀಯ ಸಂಸ್ಥೆ ನಿಧಿ ಹಾಗೂ ಇತರೆ ಅಭಿವೃದ್ಧಿ ಯೋಜನೆಗಳಡಿ ಕೈಗೊಳ್ಳುವ ಕಾಮಗಾರಿಗಳನ್ನು ಪರಿಶೀಲಿಸಿ ತಪಾಸಣಾ ವರದಿ ಸಲ್ಲಿಸುವ ಕುರತು 3ನೇ ವ್ಯಕ್ತಿ ತಪಾಸಣೆ ಏಜೆನ್ಸಿ (3rd Party Inspection Consultancy) ನೇಮಿಸಲು ಮಾನ್ಯ ಸರ್ಕಾರವು ಅದೇಶೀಸಿದ್ದು, ಅದರಂತೆ ಒಂದು ವರ್ಷದ ಅವಧಿಗೆ ಕಾಮಗಾರಿಗಳನ್ನು ಪರಿಶೀಲಿಸಿ ತಪಾಸಣಾ ವರದಿ ಸಲ್ಲಿಸುವ ಕಾರ್ಯಕ್ಕಾಗಿ 3ನೇ ವ್ಯಕ್ತಿ ತಪಾಸಣಾ ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರಿನ ವಿವರವನ್ನು www.kppp.karnataka.gov.in ಈ ಪೋರ್ಟಲ್‌ನಲ್ಲಿ ಪಡೆದು ಸಲ್ಲಿಸತಕ್ಕದ್ದು.

1) ಪ್ಯಾಕೇಜ್–I ಇಂಡೆಂಟ್ ಸಂಖ್ಯೆ: DMA/2023-24/SE0585. CALL-2
2) ಪ್ಯಾಕೇಜ್–II ಇಂಡೆಂಟ್ ಸಂಖ್ಯೆ: DMA/2023-24/SE0605. CALL-2

(1) ಟೆಂಡರ್ ಪ್ರೀ ಬಿಡ್ ಸಭೆ ದಿನಾಂಕ : 11.07.2024 ಪೂರ್ವಾಹ್ನ 12.00 ಘಂಟೆಗೆ.
(2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 15.07.2024 ಸಾಯಂಕಾಲ 5.15 ಘಂಟೆಗೆ.
(3) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ : 16.07.2024 ಸಾಯಂಕಾಲ 5.20 ಘಂಟೆಗೆ.
(4) ಆರ್ಥಿಕ ದಾಖಲೆಗಳನ್ನು ತೆರೆಯುವ ದಿನಾಂಕ : 22.07.2024 ಬೆಳಿಗ್ಗೆ 11.00 ಘಂಟೆಗೆ.

ಸಹಿ– ಜಿಲ್ಲಾಧಿಕಾರಿಗಳು, ವಿಜಯಪುರ

ವಾಸಾಸಂಇ/ವಿಜಯಪುರ/75/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570006.

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ.04/2024–25 ದಿನಾಂಕ:01.07.2024 (call-4)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 1ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) ಡಿ.ಬಿ.ಕುಪ್ಪೆ ಮತ್ತು ಇತರೆ 19 ಜನವಸತಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ (DBOT basis under JJM) ಕಾಮಗಾರಿಗೆ (ಅಂದಾಜು ಮೊತ್ತ ರೂ.13.83ಕೋಟಿಗಳವರೆಗೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 01.07.2024 ರಿಂದ 10.07.2024 ರವರೆಗೆ, ಟೆಂಡರ್ ತೆರೆಯುವ ದಿ: 11.07.2024 ರಂದು ಸಂಜೆ.5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (kppp-portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು

DIPR/DDMYS-203/KSMCA-141/2024-25

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100

ಫೋನ್: 080–22111177, E-Mail:ka.doddathoguru.tp@gmail.com

ಸಂ:ದೊ.ಪ.ಪಂ/ತಾ.ಶಾ/ಸಿ.ಆರ್/01/2024–25 ದಿನಾಂಕ:02.07.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ದರ್ಜೆಯ ಗುತ್ತಿಗೆದಾರರಿಂದ 2023–24ನೇ ಸಾಲಿನ ಸ್ವಂತ ನಿಧಿ, SFC, ಕುಡಿಯುವ ನೀರಿನ ಸಮಸ್ಯೆ ಪರಿಹಾರ, 2024–25ನೇ ಸಾಲಿನ ಸ್ವಂತ ನಿಧಿ, SFC ಮುಕ್ತ ನಿಧಿ, 15ನೇ ಹಣಕಾಸು ಯೋಜನೆಯ ಅನುದಾನದಡಿಯಲ್ಲಿ ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ನಿಭಂದನೆಗಳಿಗೆ ಒಳಪಟ್ಟು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–1 ಮತ್ತು 2 ಹಾಗೂ ಕೆ.ಜಿ–1ರ ನಿಬಂದನೆಗೆ ಒಳಪಟ್ಟು ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಚ್ಚೆಯುಳ್ಳ ಅರ್ಹ ದರ್ಜೆಯ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಕೆಪಿಪಿಪಿ– ಪ್ರೂಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಕಾಮಗಾರಿ ಕುರಿತು ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್: www.kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು. ಅಥವಾ ಪಟ್ಟಣ ಪಂಚಾಯಿತಿ ಕಾರ್ಯಾಲಯದ ತಾಂತ್ರಿಕ ವಿಭಾಗದಿಂದ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (ರೂ)
01	DMA/2024-25/WS/WORK-Indent 19902(SC)	3,50,000/-
02	DMA/2024-25/WS/WORK-Indent 19959 (SC)	2,88,000/-
03	DMA/2024-25/WS/WORK-Indent 19963 (Others)	1,66,000/-
04	DMA/2024-25/WS/WORK-Indent 19965(Others)	2,18,000/-
05	DMA/2024-25/WS/WORK-Indent 19966(Others)	30,80,000/-
06	DMA/2024-25/WS/WORK-Indent 19967 (Others)	23,10,000/-
07	DMA/2024-25/RD/WORK-Indent 20000 (SC)	11,28,000/-
08	DMA/2024-25/BD/WORK-Indent 20014 (Others)	1,77,000/-
09	DMA/2024-25/RD/WORK-Indent 20043 (Others)	4,12,000/-
10	DMA/2024-25/BD/WORK-Indent 20049(Others)	1,25,000/-
11	DMA/2024-25/RD/WORK-Indent 20055 (ST)	1,37,000/-
12	DMA/2024-25/OW/WORK-Indent 20065 (Others)	96,000/-
13	DMA/2024-25/BD/WORK-Indent 20070 (Others)	23,10,000/-
14	DMA/2024-25/WS/WORK-Indent 19980 (Others)	3,98,000/-

01. ಮೇಲೆ ತಿಳಿಸಿದ ಕಾಮಗಾರಿಗಳ ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:12.07.2024 ಸಂಜೆ 5.30 ಗಂಟೆಯವರೆಗೆ.
02. ಈ ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.

ಸಹಿ/– ಆಡಳಿತಾಧಿಕಾರಿಗಳು ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಹಾಗೂ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು.

ವಾಸಾಸಂಇ/ವಾಪ್ರ/ ಜಿಎ/762/2024–25

ಸಹಿ/– ಮುಖ್ಯಾಧಿಕಾರಿ ದೊಡ್ಡತೋಗೂರು ಪಟ್ಟಣ ಪಂಚಾಯಿತಿ



ಸುಭಾಷಿತ

ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಹಾಥರಸ್‌ನಲ್ಲಿ ಕಾಲ್ತುಳಿತ ದುರಂತ ಮತ್ತೆ ಮತ್ತೆ ಲೋಪ, ಕಲಿಯದ ಪಾಠ

ಉತ್ತರಪ್ರದೇಶ ರಾಜ್ಯದ ಹಾಥರಸ್ ಜಿಲ್ಲೆಯ ಫೂಲರಾಯ್ ಗ್ರಾಮದಲ್ಲಿ ಮಂಗಳವಾರ ಆಯೋಜನೆ ಆಗಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ನಡೆದ ಕಾಲ್ತುಳಿತದಲ್ಲಿ 121 ಮಂದಿ ಪ್ರಾಣ ಕಳೆದುಕೊಂಡಿರುವುದು ತಲ್ಲಣ ಮೂಡಿಸುವಂಥದ್ದು. ಧಾರ್ಮಿಕ ಕಾರ್ಯಕ್ರಮದ ವೇಳೆ ಇಂತಹ ದುರ್ಘಟನೆ, ಇಷ್ಟು ಜನರ ಪ್ರಾಣಹಾನಿ ಈಚಿನ ದಿನಗಳಲ್ಲಿ ಸಂಭವಿಸಿದ ನಿದರ್ಶನ ಇಲ್ಲ. ಈ ಘಟನೆಯಲ್ಲಿ ಹಲವರಿಗೆ ಗಾಯಗಳಾಗಿವೆ. ದೇಶದ ಹಲವು ಭಾಗಗಳಲ್ಲಿ ಕಾಲ್ತುಳಿತ ದುರಂತಗಳು ನಡೆದಿವೆ. ಜನರು ಭಾರಿ ಸಂಖ್ಯೆಯಲ್ಲಿ ಸೇರುವ ಸಂದರ್ಭಗಳಲ್ಲಿ ಇಂಥವು ನಡೆದಿವೆ. ಅದರಲ್ಲೂ ಮುಖ್ಯವಾಗಿ, ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಹಾಗೂ ಯಾತ್ರಾ ಸ್ಥಳಗಳಲ್ಲಿ ಇಂತಹ ಕೆಟ್ಟ ಘಟನೆಗಳು ಹಲವು ಬಾರಿ ನಡೆದಿವೆ. ಏಕೆಂದರೆ, ಇಂತಹ ಕಾರ್ಯಕ್ರಮಗಳಲ್ಲಿ ಹಾಗೂ ಸ್ಥಳಗಳಲ್ಲಿ ಮೂಲಸೌಕರ್ಯದ ವ್ಯವಸ್ಥೆಯನ್ನು ಸರಿಯಾಗಿ ಕಲ್ಪಿಸಿರುವುದಿಲ್ಲ, ಅಲ್ಲಿಗೆ ಬರುವ ಜನರ ಸಂಖ್ಯೆಯ ಮೇಲೆ ಯಾರಿಗೂ ನಿಯಂತ್ರಣ ಕೂಡ ಇರುವುದಿಲ್ಲ. ಹಾಥರಸ್‌ನಲ್ಲಿ ಆಗಿರುವುದು ಕೂಡ ಇದೇ. ಸಾಕಾರ ವಿಶ್ವಹರಿ ಭೋಲೆಬಾಬಾ ಎನ್ನುವ ಧಾರ್ಮಿಕ ಬೋಧಕರೊಬ್ಬರು ಸಣ್ಣ ಗ್ರಾಮದಲ್ಲಿ ಬಹಳ ದೊಡ್ಡ ಮಟ್ಟದ ಕಾರ್ಯಕ್ರಮ ಆಯೋಜಿಸಿದ್ದರು. ಭೋಲೆಬಾಬಾ ಅವರು ಈ ಪ್ರದೇಶದಲ್ಲಿ ಈಚೆಗೆ ಬಹಳ ಜನಪ್ರಿಯತೆ ಪಡೆದಿದ್ದಾರೆ ಎನ್ನಲಾಗಿದೆ. ಆದರೆ ಕಾರ್ಯಕ್ರಮ ನಡೆದ ಸ್ಥಳದಲ್ಲಿ ಜನಜಂಗುಳಿಯನ್ನು ನಿಯಂತ್ರಿಸಲು ವ್ಯವಸ್ಥೆ ಇರಲಿಲ್ಲ, ಅಲ್ಲಿ ವೈದ್ಯಕೀಯ ಸೌಲಭ್ಯಗಳೂ ಲಭ್ಯವಿರಲಿಲ್ಲ ಎಂದು ವರದಿಗಳು ಹೇಳುತ್ತವೆ.

ದುರಂತಕ್ಕೆ ಕಾರಣರಾದ ಕಾರ್ಯಕ್ರಮ ಸಂಘಟಕರು, ಬೇರೆ ಬೇರೆ ಹಂತಗಳ ಅಧಿಕಾರಿಗಳು, ಭೋಲೆಬಾಬಾ ಸೇರಿದಂತೆ ಎಲ್ಲರನ್ನೂ ಉತ್ತರದಾಯಿ ಆಗಿಸಬೇಕು

ಹಾಥರಸ್‌ನಲ್ಲಿ ನಡೆದ ಈ ಸತ್ಸಂಗದ ಸಂದರ್ಭದಲ್ಲಿ ಏನೆಲ್ಲ ಎಡವಟ್ಟುಗಳು ಆಗಬಹುದೋ ಅವೆಲ್ಲವೂ ಆಗಿಹೋದವು. ಅಲ್ಲಿ ಸೇರಿದ್ದ ಜನರ ನಿಖರ ಸಂಖ್ಯೆ ಎಷ್ಟು ಎಂಬ ಮಾಹಿತಿ ಇಲ್ಲ. ಸತ್ಸಂಗ ಕಾರ್ಯಕ್ರಮಕ್ಕೆ ಅಂದಾಜು ಒಂದು ಲಕ್ಷ ಮಂದಿ ಸೇರಿದ್ದರು ಎನ್ನಲಾಗಿದೆ. ಅಲ್ಲದೆ, ಗ್ರಾಮದಲ್ಲಿನ ಸಣ್ಣ ಸಭಾಂಗಣದಲ್ಲಿ ಅಷ್ಟೊಂದು ಜನರನ್ನು ಸೇರಿಸಲು ಆಗುತ್ತಿರಲಿಲ್ಲ ಎಂದೂ ಹೇಳಲಾಗಿದೆ. ಕಾರ್ಯಕ್ರಮ ಆಯೋಜಿಸಲು ಸ್ಥಳೀಯ ಆಡಳಿತದಿಂದ ಅನುಮತಿ ಪಡೆಯಲಾಗಿತ್ತೇ ಎಂಬ ವಿಚಾರದಲ್ಲಿ ಖಚಿತತೆ ಇಲ್ಲ. ಕಾರ್ಯಕ್ರಮದಲ್ಲಿ ಎಷ್ಟು ಜನ ಸೇರಬಹುದು ಎಂಬ ಅಂದಾಜು ಆಧರಿಸಿಯೇ, ಕಾರ್ಯಕ್ರಮ ಆಯೋಜನೆಗೆ ಅನುಮತಿ ನೀಡಲಾಗುತ್ತದೆ. ಆದರೆ ಜನ ಯಾವ ಪ್ರಮಾಣದಲ್ಲಿ ಸೇರಬಹುದು ಎಂಬುದನ್ನು ಗಣನೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ. ಭೋಲೆಬಾಬಾ ಅವರ ಬೆಂಗಾವಲು ವಾಹನಗಳಿಗೆ ಸಾಗಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಸಭಾಂಗಣದ ಒಂದು ದ್ವಾರವನ್ನು ಮುಚ್ಚಲಾಗಿತ್ತು, ಇದು ಕೂಡ ಕಾಲ್ತುಳಿತಕ್ಕೆ ಕಾರಣವಾಯಿತು ಎಂದು ವರದಿಗಳು ಹೇಳಿವೆ. ಗಾಯಗೊಂಡವರಿಗೆ ಚಿಕಿತ್ಸೆ ನೀಡಲು ಸ್ಥಳದಲ್ಲಿ ವೈದ್ಯಕೀಯ ಸೌಲಭ್ಯ, ಗಾಯಗೊಂಡವರನ್ನು ಆಸ್ಪತ್ರೆಗೆ ಕರೆದೊಯ್ಯುವ ವ್ಯವಸ್ಥೆಯೂ ಇರಲಿಲ್ಲ. ತುರ್ತು ಪರಿಸ್ಥಿತಿಯೊಂದರ ಸಂದರ್ಭದಲ್ಲಿ ಸ್ಪಂದಿಸುವುದು ಹೇಗೆ ಎಂಬ ಬಗ್ಗೆ ಕಾರ್ಯಕ್ರಮದ ಆಯೋಜಕರಿಗಾಗಲಿ, ಅಲ್ಲಿದ್ದ ಇತರ ಯಾರಿಗೇ ಆಗಲಿ ಗೊತ್ತಿರಲಿಲ್ಲ.

ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಪೈಕಿ ಬಹುತೇಕರು ಬಡ ಹಾಗೂ ದುರ್ಬಲ ವರ್ಗಗಳಿಗೆ ಸೇರಿರುವ ಸಾಧ್ಯತೆ ಇದೆ. ಏಕೆಂದರೆ, ಭೋಲೆಬಾಬಾ ಅವರ ಅನುಯಾಯಿಗಳಲ್ಲಿ ಹೆಚ್ಚಿನವರು ಈ ವರ್ಗಗಳಿಗೆ ಸೇರಿದವರು. ಮೃತರಲ್ಲಿ ಕೆಲವರನ್ನು ಗುರುತುಹಿಡಿಯುವುದೂ ಕಷ್ಟವಾಗಬಹುದು. ಈ ದುರಂತ ನಡೆಯಲು ಕಾರಣರಾದ ಕಾರ್ಯಕ್ರಮ ಸಂಘಟಕರು, ಬೇರೆ ಬೇರೆ ಹಂತಗಳ ಅಧಿಕಾರಿಗಳು, ಭೋಲೆಬಾಬಾ ಸೇರಿದಂತೆ ಎಲ್ಲರನ್ನೂ ಉತ್ತರದಾಯಿಗಳನ್ನಾಗಿಸಬೇಕು, ಅವರಿಂದ ಆಗಿರಬಹುದಾದ ಲೋಪಕ್ಕೆ ಶಿಕ್ಷೆ ವಿಧಿಸಬೇಕು. ಆದರೆ ಹೀಗೆ ಶಿಕ್ಷೆಗೆ ಗುರಿಪಡಿಸುವ ಕೆಲಸವು ಸಾಮಾನ್ಯ ಸಂದರ್ಭಗಳಲ್ಲಿ ಆಗುವುದೇ ಇಲ್ಲ. ವಿಚಾರಣೆ ನಡೆಸಲಾಗುತ್ತದೆ ಎಂಬ ಘೋಷಣೆ ಆಗುತ್ತದೆಯಾದರೂ ಅದು ತಾರ್ಕಿಕ ಅಂತ್ಯ ಮುಟ್ಟುವುದಿಲ್ಲ. ಭೋಲೆಬಾಬಾ ಅವರಿಗೆ ರಾಜಕೀಯ ಸಂಪರ್ಕ ಇದೆ ಎಂಬ ಮಾತಿದೆ. ಇಂತಹ ಘಟನೆಗಳು ನಡೆದ ನಂತರ ಮೂಲಸೌಕರ್ಯದ ಬಗ್ಗೆ, ಸುರಕ್ಷತಾ ಕ್ರಮಗಳ ಬಗ್ಗೆ ಹಾಗೂ ಮುಂಜಾಗರೂಕತಾ ಕ್ರಮಗಳ ಬಗ್ಗೆ ಬಹಳಷ್ಟು ಮಾತುಗಳನ್ನು ಆಡಲಾಗುತ್ತದೆ. ಆದರೆ ಅವುಗಳನ್ನು ಬಹಳ ಬೇಗ ಮರೆಯಲಾಗುತ್ತದೆ. ಜನ ಭಾರಿ ಸಂಖ್ಯೆಯಲ್ಲಿ ಸೇರುವ ಎಲ್ಲ ಸಂದರ್ಭಗಳಲ್ಲಿಯೂ ಮೂಲಸೌಕರ್ಯವನ್ನು ಖಾತರಿಪಡಿಸುವ, ಅಗತ್ಯ ನೆರವು ವ್ಯವಸ್ಥೆಗಳನ್ನು ಸಜ್ಜುಗೊಳಿಸಿ ಇರಿಸುವ ಕೆಲಸ ಆಗದೇ ಇದ್ದರೆ ಇಂತಹ ದುರಂತಗಳು ಮತ್ತೆ ಮತ್ತೆ ನಡೆಯುತ್ತಿರುತ್ತವೆ. ಈ ರೀತಿಯ ದುರಂತಗಳಿಗೆ ಮನುಷ್ಯನೇ ಕಾರಣ. ಇಂಥವುಗಳಲ್ಲಿ ಜನ ಜೀವ ಕಳೆದುಕೊಳ್ಳುತ್ತಾರೆ, ಹಲವರು ಗಾಯಗೊಳ್ಳುತ್ತಾರೆ, ಹಲವರು ಅನಾಥರಾಗುತ್ತಾರೆ. ಹೀಗಿದ್ದರೂ ಇಂಥವುಗಳಿಂದ ಪಾಠ ಕಲಿತುಕೊಳ್ಳದೇ ಇರುವುದು ತೀರಾ ದುರದೃಷ್ಟಕರ.

ಸಂಘಟಿತ ಹೋರಾಟಕ್ಕೆ ಒಲಿಯಿತು ಟಿ20 ಕ್ರಿಕೆಟ್ ಕಿರೀಟ

ವಿಶ್ವಕಪ್ ವಿಜಯ ಕಲಿಸಿದ ಪಾಠ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಭಾರತ ಕ್ರಿಕೆಟ್ ತಂಡವು ಈ ಸಲ ಟಿ20 ವಿಶ್ವಕಪ್ ಜಯಿಸಲು ಸಾಧ್ಯವಾಗಿದ್ದು ಹೇಗೆ ಎಂಬ ಪ್ರಶ್ನೆಯನ್ನು ಯಾರಿಗಾದರೂ ಕೇಳಿದರೆ 'ಸಂಘಟಿತ ಆಟ'ದಿಂದ ಎಂಬ ಉತ್ತರ ಬರುತ್ತದೆ. ಇದು ನಿಜವೂ ಹೌದು. ಈ ಬಾರಿಯ ಟೂರ್ನಿಯ ಎಲ್ಲ ಪಂದ್ಯಗಳನ್ನು ಅವಲೋಕಿಸುತ್ತ ಹೋದರೆ ಬರೀ ಒಬ್ಬ ಆಟಗಾರನ ಪ್ರದರ್ಶನದ ಮೇಲೆ ತಂಡ ಅವಲಂಬಿತವಾಗಿರಲಿಲ್ಲ. ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯವನ್ನು ಪಣಕ್ಕಿಟ್ಟು ತಂಡದ ಗೆಲುವಿಗೆ ಕಾಣಿಕೆ ನೀಡಿದ್ದಾರೆ. ಇದರ ಶ್ರೇಯ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ನಾಯಕ ರೋಹಿತ್ ಶರ್ಮಾ ಮತ್ತು ಅನುಭವಿ ಆಟಗಾರ ವಿರಾಟ್ ಕೊಹ್ಲಿ ಅವರಿಗೇ ಸಲ್ಲಬೇಕು.

ಸುಮಾರು ಎರಡು ವರ್ಷಗಳ ಹಿಂದೆ ರೋಹಿತ್ ಶರ್ಮಾ ಅವರನ್ನು ನಾಯಕರನ್ನಾಗಿ ನೇಮಕ ಮಾಡಿದಾಗ ಅವರು ಮತ್ತು ವಿರಾಟ್ ಕೊಹ್ಲಿ ನಡುವಿನ ವೈಮನಸ್ಸು ಕುರಿತು ಮಾತುಗಳು ಕೇಳಿಬಂದಿದ್ದವು. ವಿಶ್ವದ ಅಗ್ರಮಾನ್ಯ ಬ್ಯಾಟರ್‌ಗಳಾದ ವಿರಾಟ್ ಮತ್ತು ರೋಹಿತ್ ಮನೋಭಾವ ತದ್ವಿರುದ್ಧ ಎಂದು ಹೇಳಲಾಗಿತ್ತು. ಆದರೆ ಅವರಿಬ್ಬರೂ ತಮಗಿಂತ ಆಟ ದೊಡ್ಡದು ಎಂದು ಅರಿತು ಕೈಜೋಡಿಸಿದ್ದು ತಂಡಕ್ಕೆ ಲಾಭವಾಯಿತು. 2022ರ ಟಿ20 ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಎರಡು ಅಮೋಘ ಸಿಕ್ಸರ್‌ಗಳನ್ನು ಹೊಡೆದಿದ್ದ ವಿರಾಟ್ ಆ ಪಂದ್ಯದ ಗೆಲುವಿನ ರೂವಾರಿಯಾಗಿದ್ದರು. ಪಿಚ್‌ಗೆ ಓಡೋಡಿ ಬಂದಿದ್ದ ರೋಹಿತ್ ಅವರು ಕೊಹ್ಲಿಯನ್ನು ತಮ್ಮ ಹೆಗಲ ಮೇಲೆ ಹೊತ್ತು ಸಂಭ್ರಮಿಸಿದ್ದರು. ಆ ಮೂಲಕ ತಾವಿಬ್ಬರೂ 'ಗೆಳೆಯರು' ಎಂಬ ಸಂದೇಶ ಸಾರಿದ್ದರು.

ವಿರಾಟ್ ಫಾರ್ಮ್ ಕುರಿತು ರೋಹಿತ್ ಅವರನ್ನು ಪತ್ರಿಕಾಗೋಷ್ಠಿಗಳಲ್ಲಿ ಕೆಣಕಿದ ಪತ್ರಕರ್ತರಿಗೆ ಅವರು ಬಯಸಿದ್ದ ಅಥವಾ ವಿವಾದಾತ್ಮಕ ಉತ್ತರಗಳು ದೊರೆಯಲೇ ಇಲ್ಲ. ರೋಹಿತ್ ಕುರಿತ ಪ್ರಶ್ನೆಗಳು ತಮಗೆ ಎದುರಾದಾಗಲೂ ವಿರಾಟ್ ತೋರಿದ ಸಂಯಮವೇ ಸುದ್ದಿಯಾಯಿತು. ಇದು ತಂಡದ ಡ್ರೆಸ್ಸಿಂಗ್ ರೂಮ್ ಸ್ವಾಸ್ಥ್ಯವನ್ನು ಉತ್ತಮಗೊಳಿಸಿತು. ತಂಡವನ್ನು ಒಂದುಗೂಡಿಸಿತು. ಐಪಿಎಲ್‌ನಲ್ಲಿಯೂ ರೋಹಿತ್ ಮತ್ತು ವಿರಾಟ್ ಅವರು ಎದುರಾಳಿಗಳು. ಆದರೆ ರಾಷ್ಟ್ರೀಯ ತಂಡಕ್ಕೆ ಬಂದಾಗ ಅದರ ಛಾಯೆ ಬೀಳದಂತೆ ನೋಡಿಕೊಂಡರು.

ಈ ವಿಶ್ವಕಪ್ ಟೂರ್ನಿಯಲ್ಲಂತೂ ಇಬ್ಬರೂ ಸೇರಿ ಇನಿಂಗ್ಸ್ ಆರಂಭಿಸಿದರು. ಫೈನಲ್ ಬಿಟ್ಟರೆ ಉಳಿದೆಲ್ಲ ಪಂದ್ಯಗಳಲ್ಲಿಯೂ ವಿರಾಟ್ ವೈಫಲ್ಯ ಅನುಭವಿಸಿದರು. ಆದರೆ ಆ ಕೊರತೆಯನ್ನು ರೋಹಿತ್ ತುಂಬಿದರು. ವಿರಾಟ್ ಕ್ರಮಾಂಕ ಬದಲಿಸಬೇಕು ಅಥವಾ ಕೈಬಿಡಬೇಕು ಎಂಬ ಒತ್ತಡಗಳು ಬಂದರೂ ರೋಹಿತ್ ಜಗ್ಗಲಿಲ್ಲ. ಅವರೊಂದಿಗೆ ದ್ರಾವಿಡ್ ಕೂಡ ಗಟ್ಟಿಯಾಗಿ ನಿಂತರು. ದಕ್ಷಿಣ ಆಫ್ರಿಕಾ ಎದುರಿನ ಫೈನಲ್‌ನಲ್ಲಿ ವಿರಾಟ್ ತಮ್ಮ ಮೇಲೆ ತಂಡವು ಇಟ್ಟ ವಿಶ್ವಾಸವನ್ನು ಉಳಿಸಿಕೊಂಡರು. ಇದು ವಿರಾಟ್ ಮತ್ತು ರೋಹಿತ್ ಅವರಿಬ್ಬರ ಸ್ನೇಹಕ್ಕೆ ಸಿಕ್ಕ ಜಯವೂ ಹೌದು.

ಎರಡು ತಿಂಗಳ ಹಿಂದೆ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ನಾಯಕತ್ವ ವಹಿಸಿದ್ದ ಹಾರ್ದಿಕ್ ಪಾಂಡ್ಯ ಅವರು ರೋಹಿತ್ ಶರ್ಮಾ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು. ಟೂರ್ನಿಯುದ್ದಕ್ಕೂ ಪ್ರೇಕ್ಷಕರಿಂದ ನಿಂದನೆಗೊಳಗಾಗಿದ್ದರು. ಮುಂಬೈ ತಂಡ ಲೀಗ್ ಹಂತದಲ್ಲೇ ನಿರ್ಗಮಿಸಿತ್ತು. ಮುಂಬೈ ತಂಡಕ್ಕೆ ಐದು ಐಪಿಎಲ್ ಪ್ರಶಸ್ತಿ ಜಯಿಸಿಕೊಟ್ಟಿದ್ದ ರೋಹಿತ್ ಅವರು ಹಾರ್ದಿಕ್ ನಾಯಕತ್ವದಡಿ ಆಡಿದ್ದರು. ಆದರೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ರೋಹಿತ್ ಹಳೆಯದನ್ನೆಲ್ಲ ಮರೆತರು. ಹಾರ್ದಿಕ್ ಮೇಲೆ ಸಂಪೂರ್ಣ ವಿಶ್ವಾಸವಿಟ್ಟರು. ಹಾರ್ದಿಕ್ ಕೂಡ ತಮ್ಮ ಮೇಲಿಟ್ಟ ನಂಬಿಕೆ ಹುಸಿಮಾಡಲಿಲ್ಲ. ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿ, ವಿಶ್ವಕಪ್ ಟ್ರೋಫಿಗೆ ಮುತ್ತಿಕ್ಕಿದರು. ರೋಹಿತ್ ಅವರನ್ನು ಅಪ್ಪಿಕೊಂಡು ಕಣ್ಣೀರುಗರೆದರು.

ಮೂರು ವರ್ಷಗಳ ಹಿಂದೆ ವಿರಾಟ್ ಮತ್ತು ಸೂರ್ಯಕುಮಾರ್ ಯಾದವ್ ಅವರ ನಡುವೆ ಐಪಿಎಲ್ ಪಂದ್ಯವೊಂದರಲ್ಲಿ ನಡೆದಿದ್ದ ಜಟಾಪಟಿ ಬಹಳಷ್ಟು ಸುದ್ದಿಯಾಗಿತ್ತು. ಆಗಿನ್ನೂ ಸೂರ್ಯ ಭಾರತ ತಂಡಕ್ಕೆ ಪದಾರ್ಪಣೆ ಮಾಡಿರಲಿಲ್ಲ. ವಿರಾಟ್ ಜೊತೆಗಿನ ವಿರಸ ಅವರ ಭವಿಷ್ಯಕ್ಕೆ ತುಟ್ಟಿಯಾಗಬಹುದು ಎಂದೂ ಹೇಳಲಾಗಿತ್ತು. ಆದರೆ, ಸೂರ್ಯ ಭಾರತ ತಂಡಕ್ಕೆ ಬಂದರು. ಅವರನ್ನು ಹೆಚ್ಚು ಬೆಂಬಲಿಸಿದವರು ವಿರಾಟ್ ಅವರೇ. ಫೈನಲ್ ಪಂದ್ಯದಲ್ಲಿ ಸೂರ್ಯ ಪಡೆದ ಕ್ಯಾಚ್ ತಂಡದ ಗೆಲುವಿಗೆ ಕಾರಣವಾಯಿತು.

ಭಾರತದ ಕ್ರಿಕೆಟ್ ಇತಿಹಾಸದಲ್ಲಿ ಇಂತಹ ನಿದರ್ಶನಗಳು ಮತ್ತು ಸ್ನೇಹದ ಕತೆಗಳಿಗೆ ಕೊರತೆ ಇಲ್ಲ. ಕಪಿಲ್ ದೇವ್-ಸುನಿಲ್ ಗಾವಸ್ಕರ್, ಮಹೇಂದ್ರಸಿಂಗ್ ಧೋನಿ-ಯುವರಾಜ್ ಸಿಂಗ್ ಅವರ ವೈಯಕ್ತಿಕ ಮತ್ತು ವೃತ್ತಿಪರ ಸಂಬಂಧದ ಕುರಿತ ಚರ್ಚೆಗಳು ಈಗಲೂ ನಡೆಯುತ್ತವೆ. ಸ್ವಭಾವ ಮತ್ತು ಆಟದ ಶೈಲಿಗಳು ಬದಲಾದರೂ ಕಣಕ್ಕಿಳಿದಾಗ ತಂಡವಾಗಿ ಆಡಿದ್ದರಿಂದಲೇ ಯಶಸ್ವಿಯಾದರು. ಅವರು ಕ್ರಿಕೆಟ್ ಲೋಕದ ದಿಗ್ಗಜರಾಗಿ ಬೆಳಗಿದರು.

ರಿಲೆ ಓಟದಲ್ಲಿ ಒಬ್ಬ ಅಥ್ಲೀಟ್, ಇನ್ನೊಬ್ಬನಿಗೆ ಬೇಟನ್ ಹಸ್ತಾಂತರಿಸುವ ರೀತಿ ಭಾರತದ ಕ್ರಿಕೆಟ್‌ನಲ್ಲಿಯೂ ಇಂತಹ ಸ್ನೇಹದ ಪರಂಪರೆಯನ್ನು ಹಿರಿಯರು, ಕಿರಿಯರಿಗೆ ಹಸ್ತಾಂತರಿಸಿದ್ದಾರೆ. ಮೊದಲ ನಾಯಕ ಸಿ.ಕೆ. ನಾಯ್ಡು ಅವರಿಂದ ರೋಹಿತ್ ಶರ್ಮಾ ಅವರವರೆಗೂ ಈ ಭವ್ಯ ಪರಂಪರೆ ಸಾಗಿಬಂದಿದೆ. ಇದರ ಕೊಂಡಿಯಾಗಿದ್ದ ರೋಹಿತ್, ವಿರಾಟ್ ಮತ್ತು ರವೀಂದ್ರ ಜಡೇಜ ಅವರು ಈಗ ಟಿ20 ಕ್ರಿಕೆಟ್ ಮಾದರಿಗೆ ವಿದಾಯ ಘೋಷಿಸಿದ್ದಾರೆ. ಇದರೊಂದಿಗೆ ಟಿ20 ಕ್ರಿಕೆಟ್ ಉಗಮಕ್ಕೂ ಮುಂಚಿನ 'ಸಾಂಪ್ರದಾಯಿಕ ಕ್ರಿಕೆಟ್ ಶಾಲೆ'ಯಿಂದ ಬಂದ ಆಟಗಾರರ ಯುಗ ಮುಗಿದಂತಾಗಿದೆ.

ಏಕೆಂದರೆ ಸದ್ಯ ಭಾರತ ತಂಡದಲ್ಲಿರುವ ಎಲ್ಲ ಆಟಗಾರರೂ ಟಿ20 ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕಾಲದಿಂದ ಬೆಳೆದು ಬಂದವರು. ಚುಟುಕು ಕ್ರಿಕೆಟ್‌ನ ನೆರಳಲ್ಲಿಯೇ ಆಡಿದವರು. ತಂಡದ ಭಾವಿ ನಾಯಕರೆಂದೇ ಹೇಳಲಾಗುತ್ತಿರುವ ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್ ಅವರೆಲ್ಲರೂ ಭವಿಷ್ಯದಲ್ಲಿ ಭಾರತದ ಕ್ರಿಕೆಟ್ ರಥವನ್ನು ಮುನ್ನಡೆಸುವ ಭರವಸೆ ಮೂಡಿಸಿದ್ದಾರೆ. ಆದರೆ ಇವರೆಲ್ಲರೂ ತಮಗಿಂತ ಹಿಂದಿನ ಪೀಳಿಗೆಯ ಆಟಗಾರರು ಬಿಟ್ಟು ಹೋದ ಪರಂಪರೆಯನ್ನು ಮುಂದುವರಿಸಬಲ್ಲರೇ?

ಭೀಕರ ಅಪಘಾತದಿಂದಾಗಿ ಸಾವು-ಬದುಕಿನ ಜೊತೆ ಹೋರಾಡಿ ಪುನರಾಗಮನ ಮಾಡಿದ ಮೇಲೂ ಅಮೋಘ ಆಟವಾಡಿದ ರಿಷಭ್ ಪಂತ್ ಭರವಸೆಯ ಆಟಗಾರ. ಅಕ್ಷರ್ ಪಟೇಲ್ ಆಲ್‌ರೌಂಡರ್ ಆಗಿ ರವೀಂದ್ರ ಜಡೇಜ ಅವರ ಸ್ಥಾನ ತುಂಬಬಲ್ಲರು. ಜಸ್‌ಪ್ರೀತ್ ಬೂಮ್ರಾ ವೇಗದ ತಾರೆಯಾಗಿ ಬೆಳಗುತ್ತಿದ್ದಾರೆ. ಆದರೆ ಐಪಿಎಲ್ ಪ್ರಭಾವ, ಡಿಜಿಟಲ್ ಯುಗದ ಹವ್ಯಾಸಗಳಿಂದಾಗಿ ತಂಡದಲ್ಲಿ ಪರಸ್ಪರ ಬಾಂಧವ್ಯ ಬೆಳೆಸುವುದು ಸವಾಲಾಗಿದೆ ಎಂದು ಕೆಲವು ಕೋಚ್‌ಗಳು ಹೇಳುತ್ತಾರೆ.

ಇಂತಹ ಸಂದರ್ಭದಲ್ಲಿ ವಿರಾಟ್ ಮತ್ತು ರೋಹಿತ್ ಅವರ ಸ್ನೇಹದ ಕತೆಯೇ ಸ್ಫೂರ್ತಿಯಾಗಬಹುದು. ಈಗ ಟಿ20 ಮಾದರಿಗೆ ವಿದಾಯ ಹೇಳಿರುವ ಇವರು, ಇನ್ನು ಕೆಲವೇ ತಿಂಗಳುಗಳಲ್ಲಿ ಟೆಸ್ಟ್ ಮತ್ತು ಏಕದಿನ ಮಾದರಿಯಿಂದಲೂ ನಿವೃತ್ತಿ ಘೋಷಿಸಬಹುದು. ಇವರು ಪೇರಿಸಿ ಹೋಗುವ ಆಟದ ದಾಖಲೆಗಳಿಗಿಂತ ಸ್ನೇಹದ ಮಾದರಿಯನ್ನು ಉಳಿಸಿಕೊಂಡು ಹೋಗುವ ವಾರಸುದಾರರು ಬೇಕು. ಮುಂಬೈನ ಗಲ್ಲಿ ಕ್ರಿಕೆಟ್‌ನಿಂದ ಬಂದ ರೋಹಿತ್, ದೆಹಲಿಯ ಅಂಗಳದಲ್ಲಿ ಪ್ರತಿಭೆ ತೋರುತ್ತ ಬೆಳೆದ ವಿರಾಟ್ ಅವರು ಬ್ಯಾಟಿಂಗ್‌ನಲ್ಲಿ ಮತ್ತು ನಾಯಕತ್ವದಲ್ಲಿ ಹಲವಾರು ದಾಖಲೆಗಳನ್ನು ಮಾಡಿದ್ದಾರೆ. ಅವರ ವೃತ್ತಿಜೀವನದ ಸಂಧ್ಯಾಕಾಲದಲ್ಲಿ ಸ್ನೇಹ ಮತ್ತು ತಂಡಸ್ಫೂರ್ತಿಗೆ ನೀಡಿದ ಆದ್ಯತೆಯಿಂದ ವಿಶ್ವಕಪ್ ವಿಜೇತರಾಗಿದ್ದಾರೆ. ಯುವ ಆಟಗಾರರಿಗೆ ಮಾದರಿಯಾಗಿದ್ದಾರೆ.

ಚುರುಮುರಿ



ಗುದ್ಲಿಂಗನ ವ್ಯಥೆ!

• ತುರುವೇಕೆರೆ ಪ್ರಸಾದ್

ಗುದ್ಲಿಂಗ ಮುಖ, ಮೂತಿಗೆಲ್ಲಾ ಬ್ಯಾಂಡೇಜ್ ಸುತ್ಕಂಡು ಕುಕ್ಕರಿಸಿದ್ದನ್ನು ನೋಡಿ ಮಾಲಿಂಗ ಕೇಳಿದ: 'ಏನೋ ಇದು ನಿನ್ ಅವತಾರ? ಹೆಂಡ್ತಿ ಸರಿಯಾಗ್ ಕೊಟ್ಟರೋ ಹಾಗಿದೆ?'

'ಹೆಂಡ್ತಿ ಅಲ್ಲಲೇ, ಮೊನ್ನೆ ಹಾಲಿನ್ ರೇಟ್ ಜಾಸ್ತಿ ಆಗದೆ ಅಂತ ಪಂಚಾಯಿತಿ ಆಫೀಸ್ ಮುಂದೆ ಹಸುಗಳನ್ನ ಕಟ್ಟಿ ಹಾಲು ಕರೆಯೋ ಪ್ರತಿಭಟನೆ ಹಮ್ಕಂಡಿದ್ವಿ. ಆಗ ಕಪಿಲೆ ಗುಮ್ಮಿ ಇಂಗಾಗದೆ?'

'ಓ ಇಂಗಾ ಸಮಾಚಾರ? ಅವಳ್ಯಾಕ್ ಗುಮ್ಮುದ್ಲು ಅಂತೀನಿ?' ಕೇಳಿದ ಕಲ್ಲೇಶಿ.

'ತೆನೆಯೋರು, ಕಮಲದೋರು ಒಟ್ಟಿಗೆ ಸ್ಟ್ರೈಕ್ ಮಾಡಕ್ ಒಂಟವ್ದಲ್ಲ, ಈ ತೆನೆ ಕಡೆಯೋರ ಕಪಿಲೆ ಕಮಲದ ಕಡೆಯೋರ ಭದ್ರ ಮೇಲೆ ಕಾಲ್ ಕೆರ್ಕಂಡು, ಗುಟುರು ಹಾಕ್ತಾ ಕೊಂಬಲ್ಲಿ ತಿವಿಯಕ್ ಬಂದ್ಲು. ನಾನು ಬಿಡ್ಸಣ ಅಂತ ಓಗಿದ್ದಕ್ಕೆ ಅವಳು ನಂಗೆ ಗುಮ್ಮಿಬಿಟ್ಲು'.

'ಹಳೇ ದ್ವೇಷ ಇರಕಿಲ್ವಾ? ನೀವು ಮನುಷ್ಯರು ನಿಮ್ ಅನುಕೂಲಕ್ಕೆ ಮೈತ್ರಿ ಮಾಡ್ಕಂಡು ಸ್ವಾಭಿಮಾನ ಬುಡ್ತೀರ ಅಂದ್ರೆ ಪ್ರಾಣಿಗಳು ಬಿಟ್ಟಾವಾ?'

'ನಾನೇ ಪರವಾಗಿಲ್ಲ, ನನ್ ಕುಟ್ತೆ ಬಂದಿದ್ದೋರ್ಗೆ ಇನ್ನೂ ಶಾನೆ ಏಟಾಗೈತೆ. ಕಮಲದೋರ ಚೆಲ್ವ ಹಸು ಇಡ್ಕಂಡ್ ಇರ್ಬೇಕಾದ್ರೆ ಅದು ಯಾವ್ದೋ ಹೆಂಗ್ಸು ಹೊಕ್ಕಂಡು ಓಗ್ತಿದ್ದ ಹೊರಗೆ ಬಾಯ್ ಹಾಕಿದೆ. ಆ ಹೆಮ್ಮ ಇದೆಲ್ಲಾ ಚೆಲ್ವಂದೇ ಇಕ್ಮತ್ತು ಅಂತ ಹಲ್ ಉದರ್ಸಿದೆ. ಇನ್ನು ಶಂಕ್ರ ಹಾಲು ಕರೆಯೋಕೆ ಓದ್ನಾ, ಆ ಪಮ್ಮಿ ಹಸ ಎರಡೂ ಕಾಲೆತ್ತಿ ಜಾಡ್ಸಿ ಒದ್ದು ನೋಡು, ಶಂಕ್ರ ಹಾರಿ ಬಿದ್ದೋನು ಇನ್ನೂ ಕೋಮಾನಾಗೇ ಅವ್ನೆ'

'ಮಾಲುಸ್ಕಂಡಿರೋ ಹಸುಗೆ ಕೈ ಆಕುದ್ರೆ ಇನ್ನೇನ್ ಮಾಡುತ್ತೆ ತಗೋ?'

'ಪಂಚಾಯಿತಿ ಆಫೀಸ್ ಮುಂದೆ ಗಲೀಜಾಯ್ತು ಅಂತ ನಮ್ ಕೈಲೇ ಗಂಜಲ, ಸಗಣಿ ಬಾಚುಸುದ್ರು' ಎಂದು ಮುಖ ಕಿವುಚಿದ ಗುದ್ಲಿಂಗ. 'ಮಂಜುಮೆಲ್ ಬಾಯ್ಸ್' ಅಲ್ಲ, ಗಂಜಲಸ್ಮೆಲ್ ಬಾಯ್ಸ್ ಎಂದು ನಕ್ಕು ಎಲ್ಲ ಮೂಗು ಮುಚ್ಚಿಕೊಂಡರು.

ದಿನದ ಟ್ವೀಟ್

ಸಂಸತ್ತು ಹೆಚ್ಚು ಆಸಕ್ತಿಕರ

ಈಗ ಯಾವುದೇ ಸಿನಿಮಾ ಅಥವಾ ಒಟಿಟಿ ಕಾರ್ಯಕ್ರಮಗಳಿಗಿಂತಲೂ ಸಂಸತ್ತೇ ಹೆಚ್ಚು ಆಸಕ್ತಿ ಮೂಡಿಸುವಂತೆ ಇದೆ.

ಚೇತನ್ ಭಗತ್, ಲೇಖಕ

ಕಿಡಿನುಡಿ



ಆರ್‌ಎಸ್‌ಎಸ್ ಅನ್ನು ಕುರುಡಾಗಿ ವಿರೋಧಿಸುವುದನ್ನು ಕಾಂಗ್ರೆಸ್ ನಿಲ್ಲಿಸಬೇಕು. 1950ರಲ್ಲಿ ಆರ್ಗನೈಸರ್ ಪತ್ರಿಕೆ ಸಂವಿಧಾನದ ಬಗ್ಗೆ ಏನು ಹೇಳಿತ್ತು ಎಂಬುದನ್ನು ಉಲ್ಲೇಖಿಸುತ್ತ ಇರುವುದರಲ್ಲಿ ಅರ್ಥವಿಲ್ಲ... 2018ರ ಭಾಷಣದಲ್ಲಿ ಮೋಹನ್ ಭಾಗವತ್ ಏನು ಹೇಳಿದ್ದರು ಎಂಬುದನ್ನು ಓದಿ. ಸಂಘಟನೆಗಳು ಬದಲಾಗುತ್ತವೆ. ರಾಷ್ಟ್ರೀಯ ಏಕತೆ, ಸಹಮತ ಮತ್ತು ಸಹಕಾರವನ್ನು ಮಾತುಕತೆಯ ಮೂಲಕ ಸಾಧ್ಯವಾಗಿಸುವುದು ಈಗಿನ ಅಗತ್ಯ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಭಾನುವಾರ, 4-7-1999

• ಟೈಗರ್ ಶಿಖರ ವಶಕ್ಕೆ ಭಾರಿ ಹೋರಾಟ: ಅಪಾರ ಸಾವು

ನವದೆಹಲಿ, ಜುಲೈ 3– ಬಟಾಲಿಕ್ ಮತ್ತು ಡ್ರಾಸ್ ವಲಯಗಳಲ್ಲಿ ಮುಂದುವರೆದಿರುವ ಭೀಕರ ಹೋರಾಟದಿಂದ ಗಡಿ ನಿಯಂತ್ರಣ ರೇಖೆಯ ಟೈಗರ್ ಶಿಖರ ವಶ ಹತ್ತಿರವಾಗುತ್ತಿದ್ದಂತೆ ಭಾರತೀಯ ಸೈನಿಕರ ಸಾವು ನೋವುಗಳು ಹೆಚ್ಚಾಗುತ್ತಿವೆ.

ಕಳೆದ 24 ಗಂಟೆಗಳಲ್ಲಿ ನಡೆದಿರುವ ಹೋರಾಟದಲ್ಲಿ ಪಾಕಿಸ್ತಾನದ ಕಡೆ 21 ಸಾವುಗಳು ಆಗಿದ್ದರೆ, ಮೂವರು ಅಧಿಕಾರಿಗಳು ಸೇರಿದಂತೆ 23 ಮಂದಿ ಭಾರತೀಯ ಸೈನಿಕರು ವೀರಮರಣ ಅಪ್ಪಿದ್ದಾರೆ.

ಅಲ್ಲದೆ, ಹದಿನಾಲ್ಕು ಮಂದಿ ಯೋಧರು ಗಾಯಗೊಂಡಿದ್ದಾರೆ ಎಂದು ಭೂ ಸೇನೆಯ ವಕ್ತಾರ ಕರ್ನಲ್ ಬಿಕ್ರಂ ಸಿಂಗ್ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• ರಾಜ್ಯದಲ್ಲಿ ಆರ್ಥಿಕ ಪ್ರಗತಿ ಕುಂಠಿತ: ಕೃಷ್ಣ

ಕಲ್ಬುರ್ಗಿ, ಜುಲೈ 3– ರಾಜ್ಯದಲ್ಲಿ ಜನತಾದಳ ನೇತೃತ್ವದ ಸರ್ಕಾರದ ಗೊತ್ತು ಗುರಿಯಿಲ್ಲದ ಆರ್ಥಿಕ ಮತ್ತು ಕೈಗಾರಿಕಾ ನೀತಿಯಿಂದ ಕೈಗಾರಿಕಾ ಪ್ರಗತಿ ಕುಂಠಿತಗೊಂಡಿದೆ ಎಂದು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್.ಎಂ. ಕೃಷ್ಣ ಅವರು ಆರೋಪಿಸಿದರು.

'ಪಾಂಚಜನ್ಯ' ಯಾತ್ರೆಯ ಅಂಗವಾಗಿ ಇಂದು ಕಲ್ಬುರ್ಗಿಯಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ದಳದ ನಾಲ್ಕುವರೆ ವರ್ಷದ ಆಡಳಿತದಲ್ಲಿ ರಾಜ್ಯದಲ್ಲಿ ಕೈಗಾರಿಕೆಗಳ ಪ್ರಗತಿಯಾಗಿಲ್ಲ. ಕೈಗಾರಿಕಾ ಪ್ರಗತಿಯಲ್ಲಿ ಮೊದಲಿನಿಂದ ಮುಂದಿದ್ದ ರಾಜ್ಯದಲ್ಲಿ ಇಂದು ಬೆಂಗಳೂರು ಸಮೀಪದ ಕೆಲವು ಸಾಫ್ಟ್‌ವೇರ್ ಕೈಗಾರಿಕೆಗಳನ್ನು ಬಿಟ್ಟರೆ ಉಳಿದವು ಮುಚ್ಚುವ ಸ್ಥಿತಿಗೆ ಬಂದಿವೆ ಎಂದರು.

50 ವರ್ಷಗಳ ಹಿಂದೆ

ಗುರುವಾರ, 4-7-1974

• ತಿನ್ನುವ ಎಣ್ಣೆಗೆ ಮೋಟಾರ್ ತೈಲದ ಬೆರಕೆ

ನವದೆಹಲಿ, ಜುಲೈ 3– ಮೋಟಾರ್ ವಾಹನ ಯಂತ್ರದಲ್ಲಿ ಬಳಸಿ ಆದಮೇಲೆ ಹೊರಚೆಲ್ಲುವ ಎಣ್ಣೆಯನ್ನು ಖಾದ್ಯ ತೈಲಗಳ ಜೊತೆ ಕಲಬೆರಕೆ ಮಾಡುತ್ತಾರೆ. ಭಾರತದ ಬಳಕೆದಾರರ ಮಂಡಳಿ ನಡೆಸಿರುವ ಸಮೀಕ್ಷೆಯಿಂದ ಈ ಅಂಶ ಗೊತ್ತಾಗಿದೆ.

ಪೆಟ್ರೋಲ್ ಬಂಕುಗಳಲ್ಲಿರುವ ಸರ್ವಿಸ್ ಸ್ಟೇಷನ್‌ಗಳಿಂದ ಈ ಬಗೆಯ ಕೊಳಕು ಜಿಡ್ಡನ್ನು ಸಂಗ್ರಹಿಸಿ ಕಲಬೆರಕೆ ಮಾಡುವ ವರ್ತಕರಿಗೆ ಭಾರಿ ಬೆಲೆಗೆ ಮಾರುವವರಿದ್ದಾರೆ.

ಕಲಬೆರಕೆ ಮಾಡುವವರು ಅವರಿಂದ ಆ ಮೋಟಾರು ಎಣ್ಣೆ ಸಂಗ್ರಹಿಸಿ ಶುದ್ಧಗೊಳಿಸಿ ಖಾದ್ಯ ತೈಲದ ಜೊತೆ ಅಥವಾ ಇತರ ಕೀಲೆಣ್ಣೆಗಳ ಜೊತೆ ಬೆರೆಸುತ್ತಾರೆ.

• ಫಕ್ರುದ್ದೀನ್ ಅಹ್ಮದ್ ರಾಜೀನಾಮೆ ಒಪ್ಪಿಗೆ

ನವದೆಹಲಿ, ಜುಲೈ 3– ಕೇಂದ್ರ ಆಹಾರ ಸಚಿವ ಫಕ್ರುದ್ದೀನ್ ಅಲೀ ಅಹ್ಮದ್ ಅವರು ಸಂಪುಟಕ್ಕೆ ಕೊಟ್ಟಿರುವ ರಾಜೀನಾಮೆಯನ್ನು ರಾಷ್ಟ್ರಪತಿ ವಿ.ವಿ. ಗಿರಿ ಅವರು ಅಂಗೀಕರಿಸಿದ್ದಾರೆ.

ಈ ಸಂಬಂಧದಲ್ಲಿ ಇಂದು ಬೆಳಿಗ್ಗೆ ರಾಷ್ಟ್ರಪತಿ ಭವನ ಕೊಟ್ಟಿರುವ ಒಂದು ಪ್ರಕಟಣೆಯಲ್ಲಿ ಕೈಗಾರಿಕಾಭಿವೃದ್ಧಿ ಸಚಿವ ಸಿ. ಸುಬ್ರಹ್ಮಣ್ಯಂ ಅವರು ಆಹಾರ ಖಾತೆಯನ್ನೂ ನೋಡಿಕೊಳ್ಳುವಂತೆ ಪ್ರಧಾನಿ ಸಲಹೆ ಪ್ರಕಾರ ರಾಷ್ಟ್ರಪತಿ ಆದೇಶ ಕೊಟ್ಟಿದ್ದಾರೆಂದು ತಿಳಿಸಲಾಗಿದೆ. ರಾಷ್ಟ್ರಪತಿ ಸ್ಥಾನಕ್ಕೆ ತಾವು ಕಾಂಗ್ರೆಸ್ ಉಮೇದುವಾರರಾಗಿ ನಾಮಕರಣಗೊಂಡುದರಿಂದ ಫಕ್ರುದ್ದೀನ್ ಅಲೀ ಅಹ್ಮದ್ ಅವರು ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿದರು.

ಸಂಗತ

ಅಭಿಮಾನ ಅತಿರೇಕಕ್ಕೆ ಹೋಗದಿರಲಿ

ತಾವು ಆರಾಧಿಸುವ ವ್ಯಕ್ತಿಗಳ ಹೆಸರನ್ನು ಹಚ್ಚೆ ಹಾಕಿಸಿಕೊಳ್ಳುವ, ತಮ್ಮ ನಡೆ, ನುಡಿಯಲ್ಲಿ ಅವರನ್ನು ಅನುಕರಿಸುವ ಚಾಳಿ ಯುವಕರನ್ನು ಆವರಿಸಿಕೊಂಡಿದೆ

• ರಾಜಕುಮಾರ ಕುಲಕರ್ಣಿ

ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರ ಭಾವಚಿತ್ರವನ್ನು ಪ್ರೌಢಶಾಲಾ ಶಿಕ್ಷಕರೊಬ್ಬರು ತಮ್ಮ ರಕ್ತದಿಂದಲೇ ರಚಿಸಿದ ಸುದ್ದಿ ಗಮನಸೆಳೆಯಿತು. ಅಭಿಮಾನವನ್ನು ಈ ಬಗೆಯಲ್ಲಿ ವ್ಯಕ್ತಪಡಿಸುವ ಅಗತ್ಯವೇನಿತ್ತು ಎನ್ನುವುದು ಪ್ರಜ್ಞಾವಂತರನ್ನು ಕಾಡುವ ಪ್ರಶ್ನೆ. ಏಕೆಂದರೆ ಅಭಿಮಾನದ ಅಭಿವ್ಯಕ್ತಿಗಾಗಿ ರಕ್ತವನ್ನು ಬಳಸಬೇಕೇ?! ಬೇರೆ ವಿಧಾನಗಳಲ್ಲಿ ಅಭಿಮಾನವನ್ನು ವ್ಯಕ್ತಪಡಿಸಲು ಹಲವು ಅವಕಾಶಗಳಿರುವಾಗ ರಕ್ತವನ್ನು ಬಳಸಿ ಚಿತ್ರ ಬಿಡಿಸಿದ್ದು ಅಭಿಮಾನದ ಅತಿರೇಕದಂತೆ ಕೆಲವರಿಗೆ ಕಾಣಬಹುದು.

ರಕ್ತವು ಜನರ ಜೀವ ಉಳಿಸುತ್ತದೆ. ಸ್ವಯಂಪ್ರೇರಣೆಯಿಂದ ರಕ್ತವನ್ನು ಕೊಡಲು ಮುಂದೆ ಬರುವವರಿಂದ ಮಾತ್ರ ರಕ್ತ ಪಡೆಯಲು ಸಾಧ್ಯ. ಅದೆಷ್ಟೋ ಸಂದರ್ಭಗಳಲ್ಲಿ ಅಗತ್ಯ ರಕ್ತ ದೊರೆಯದೆ ರೋಗಿಗಳು ಸಾವನ್ನಪ್ಪುವುದೂ ಇದೆ. ಪರಿಸ್ಥಿತಿ ಹೀಗಿರುವಾಗ ಚಿತ್ರ ರಚಿಸಲು ರಕ್ತವನ್ನು ಬಳಸಿದ್ದು ತಪ್ಪು ಸಂದೇಶಕ್ಕೆ ಎಡೆಮಾಡಿಕೊಡಬಹುದು. ಇಂಥದ್ದೊಂದು ವರ್ತನೆಯನ್ನು ಶಿಕ್ಷಕನೊಬ್ಬ ತೋರಿದ್ದು ತುಸು ಆಶ್ಚರ್ಯ ಮೂಡಿಸುವಂಥದ್ದು.

ವಿವಿಧ ಕ್ಷೇತ್ರಗಳ ಹೀರೊಗಳ ಬಗೆಗೆ ಸಾರ್ವಜನಿಕರಲ್ಲಿ ಇರುವ ಅಭಿಮಾನವು ಅತಿರೇಕಕ್ಕೆ ಹೋಗಲು ನಾಂದಿಹಾಡಿದ್ದು ಸಿನಿಮಾ ಮಾಧ್ಯಮ ಎಂದರೆ ತಪ್ಪಾಗಲಾರದು. ತಮ್ಮ ನೆಚ್ಚಿನ ನಟರ ಸಿನಿಮಾ ಬಿಡುಗಡೆಯ ದಿನ ಮೆರವಣಿಗೆ, ಬೃಹತ್ ಗಾತ್ರದ ಕಟೌಟ್‌ಗಳಿಗೆ ಹಾಲಿನ ಅಭಿಷೇಕ, ಪಟಾಕಿ ಸಿಡಿಸುವುದು ಇತ್ಯಾದಿ ಚಟುವಟಿಕೆಗಳ ಮೂಲಕ ಅಭಿಮಾನಿಗಳು ತಮ್ಮ ಅಭಿಮಾನ ಮೆರೆಯುವರು. ಹಾಲಿನಂತಹ ಪೌಷ್ಟಿಕ ಆಹಾರವನ್ನು ಸಿನಿಮಾ ತಾರೆಯರ ಕಟೌಟ್‌ಗಳ ಮೇಲೆ ಸುರಿದು ಹಾಳು ಮಾಡುತ್ತಾರೆ. ಅದೆಷ್ಟೋ ಕುಟುಂಬಗಳಲ್ಲಿ ಪೌಷ್ಟಿಕ ಆಹಾರದ ಕೊರತೆಯಿಂದ ಮಕ್ಕಳು ನಿಶ್ಶಕ್ತಿಗೆ ಗುರಿಯಾಗುತ್ತಿದ್ದಾರೆ, ಹಲವಾರು ಬಗೆಯ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ ಎಂಬುದು ನಮಗೆಲ್ಲ ಗೊತ್ತಿರುವ ಸಂಗತಿ ಅಲ್ಲವೇ? ಬಡ ಕುಟುಂಬಗಳಲ್ಲಿ, ತಮ್ಮ ಮಕ್ಕಳಿಗೆ ಅಗತ್ಯವಾದ ಪೌಷ್ಟಿಕಾಂಶಯುಕ್ತ ಊಟ ಒದಗಿಸಲೂ ಸಾಧ್ಯವಾಗುತ್ತಿಲ್ಲ. ಆದರೆ ಅಭಿಮಾನಿಗಳು ತಮ್ಮ ನೆಚ್ಚಿನ ತಾರೆಯರ ಮೇಲಿನ ಅಭಿಮಾನದಿಂದ ಹಾಲಿನಂತಹ ಅತ್ಯುತ್ತಮ ಆಹಾರವನ್ನು ಪೋಲು ಮಾಡುತ್ತಾರೆ.

ಸಿನಿಮಾ ನಟರ ಜನ್ಮದಿನಾಚರಣೆಯಂದು ಅವರು ವಾಸಿಸುವ ಬಡಾವಣೆಗಳಲ್ಲಿ ಇರುವೆ ಕೂಡ ನುಸುಳಲು ಜಾಗವಿಲ್ಲದಷ್ಟು ಜನಸಂದಣಿ ಇರುತ್ತದೆ. ಅಕ್ಕಪಕ್ಕದ ನಿವಾಸಿಗಳಿಗೆ ಮತ್ತು ಸಾರ್ವಜನಿಕರಿಗೆ ಆಗುವ ತೊಂದರೆಗಳ ಕುರಿತು ಅಭಿಮಾನಿ ಬಳಗ ಯೋಚಿಸುವುದಿಲ್ಲ. ರಾತ್ರಿಯಿಂದಲೇ ನಟ-ನಟಿಯರ ಮನೆಯ ಮುಂದೆ ಜಮಾಯಿಸುವ ಅಭಿಮಾನಿ ಪಡೆ ತಮ್ಮ ಗೌಜು ಗದ್ದಲಗಳಿಂದ ಸುತ್ತಮುತ್ತಲಿನ ನಿವಾಸಿಗಳ ನಿದ್ರೆ ಹಾಳುಗೆಡವಿ ಅಶಾಂತಿ ಸೃಷ್ಟಿಸುತ್ತದೆ. ಅದೆಷ್ಟೋ ಮನೆಗಳಲ್ಲಿ ವೃದ್ಧರು, ಮಕ್ಕಳು, ಕಾಯಿಲೆಗಳಿಂದ ಬಳಲುತ್ತಿರುವವರು, ಪರೀಕ್ಷೆಗಾಗಿ ಓದಿಕೊಳ್ಳುತ್ತಿರುವವರು, ಹಗಲಿಡೀ ದುಡಿದು ಹೈರಾಣಾಗಿ ವಿಶ್ರಾಂತಿ ಪಡೆಯುತ್ತಿರುವವರು ಇರುವರೆಂಬ ಕಿಂಚಿತ್ ಪ್ರಜ್ಞೆ ಕೂಡ ಇಲ್ಲದಂತೆ ವರ್ತಿಸುತ್ತಾರೆ. ಕೆಲವೊಮ್ಮೆ ಇಂತಹ ಅತಿರೇಕದ ಅಭಿಮಾನವೇ ಪ್ರಾಣಕ್ಕೆ ಅಪಾಯವಾಗಿ ಪರಿಣಮಿಸುವುದುಂಟು.

ಕೆಲವು ತಿಂಗಳ ಹಿಂದೆ ಸಿನಿಮಾ ನಟರೊಬ್ಬರ ಜನ್ಮದಿನದ ಸಂದರ್ಭ ಮೆರವಣಿಗೆಯ ವೇಳೆ ವಿದ್ಯುತ್ ತಂತಿ ಸ್ಪರ್ಶಿಸಿ ಇಬ್ಬರು ಬಲಿಯಾದ ದುರ್ಘಟನೆ ಹಲವರಿಗೆ ಇನ್ನೂ ನೆನಪಿನಲ್ಲಿದೆ. ಒಂದು ಕಾಲದಲ್ಲಿ ಸಿನಿಮಾ ನಟರ ಅಭಿಮಾನಿಗಳ ನಡುವೆ ಜಗಳ, ಕಾದಾಟಗಳು ಕೂಡ ನಡೆಯುತ್ತಿದ್ದವು. ಸಿನಿಮಾ ಬಿಡುಗಡೆಯ ದಿನ ಅಭಿಮಾನಿ ಗುಂಪುಗಳ ನಡುವಿನ ದ್ವೇಷ ತಾರಕಕ್ಕೇರುತ್ತಿತ್ತು. ರಸ್ತೆಗಳಲ್ಲಿ

ಕೈ ಕೈ ಮಿಲಾಯಿಸಿ ಅವರು ಹೊಡೆದಾಟಕ್ಕಿಳಿಯುತ್ತಿದ್ದರು. ತಾವು 'ವಿರೋಧಿ' ಎಂದು ಭಾವಿಸುವ ನಟರ ಪೋಸ್ಟರ್‌ಗಳಿಗೆ ಸಗಣಿ ಬಳಿಯುವ, ಪೋಸ್ಟರ್ ಹರಿದು ಹಾಕುವ, ಸಿನಿಮಾ ಮಂದಿರಗಳಲ್ಲಿ ಚಿತ್ರ ಪ್ರದರ್ಶನದ ವೇಳೆ ಗಲಾಟೆ ಮಾಡುವಂತಹ ಅತಿರೇಕದ ವರ್ತನೆಗಳನ್ನು ಅಭಿಮಾನಿ ಬಳಗ ತೋರುತ್ತಿತ್ತು. ಕೆಲವೊಮ್ಮೆ ಅಭಿಮಾನಿಗಳ ವರ್ತನೆಯಿಂದ ಕಲಾವಿದರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ಮುಜುಗರವಾಗುವುದುಂಟು.

ಇತ್ತೀಚೆಗೆ ಹತ್ಯೆ ಪ್ರಕರಣವೊಂದರಲ್ಲಿ ಆರೋಪಿಯಾಗಿ ಜೈಲು ಸೇರಿರುವ ನಟನೊಬ್ಬನ ಅಭಿಮಾನಿಗಳ ಹುಚ್ಚಾಟ ಕೂಡ ಎಲ್ಲೆ ಮೀರಿದೆ. ತಮ್ಮ ನೆಚ್ಚಿನ ನಟನ ವಿರುದ್ಧ ಹೇಳಿಕೆ ನೀಡುವ ಕಲಾವಿದರನ್ನು ಇವರು ಗೋಳುಹೊಯ್ದುಕೊಳ್ಳುತ್ತಿದ್ದಾರೆ. ಅತಿಯಾದ ಅಭಿಮಾನ ಮತ್ತು ಆರಾಧನಾ ಭಾವನೆಯು ಕೆಲವು ಅಭಿಮಾನಿಗಳನ್ನು ಅಂಧರನ್ನಾಗಿಸಿದೆ. ಹತ್ಯೆ ಪ್ರಕರಣದ ಕುರಿತು ತನಿಖೆ ನಡೆಯುತ್ತಿದೆ. ಆದರೆ ಅಭಿಮಾನಿಗಳು ತಾವೇ ನ್ಯಾಯಾಧೀಶರಾಗಿ ತಮ್ಮ ಆರಾಧ್ಯದೈವವನ್ನು (ನಟನನ್ನು) ಆರೋಪಗಳಿಂದ ಮುಕ್ತಗೊಳಿಸಿದ್ದಾರೆ. ಅದೆಷ್ಟೋ ಅಭಿಮಾನಿಗಳು ನಟನಿಗೆ ಜೈಲಿನಲ್ಲಿ ನೀಡಲಾಗಿರುವ ಕೈದಿ ಸಂಖ್ಯೆಯನ್ನು ತಮ್ಮ ವಾಹನಗಳ ಮೇಲೆ ಬರೆದುಕೊಂಡು ಧನ್ಯರಾಗಿದ್ದಾರೆ.

ತಾವು ಆರಾಧಿಸುವ ನಟ, ನಟಿಯರ ಮತ್ತು ಕ್ರೀಡಾಪಟುಗಳ ಹೆಸರುಗಳನ್ನು ಹಚ್ಚೆ ಹಾಕಿಸಿಕೊಳ್ಳುವ, ತಮ್ಮ ನಡೆ-ನುಡಿಗಳಲ್ಲಿ ಅವರನ್ನು ಅನುಕರಿಸುವ ಚಾಳಿಯು ಯುವಪೀಳಿಗೆಯನ್ನು ಆವರಿಸಿದೆ. ತಾವು ಆರಾಧಿಸುವವರ ಮೇಲಿನ ಅತಿಯಾದ ಪ್ರೀತಿ ಮತ್ತು ಅಭಿಮಾನ ಯುವ ಜನರನ್ನು ತಪ್ಪುದಾರಿಗೆ ಕರೆದೊಯ್ಯುತ್ತಿದೆ. ಈ ತಪ್ಪು, ಹಾಲಿನ ಅಭಿಷೇಕ, ಸಾರ್ವಜನಿಕರ ನೆಮ್ಮದಿಗೆ ಧಕ್ಕೆ ತರುವಂತಹ ವರ್ತನೆಗಳ ರೂಪದಲ್ಲಿ ವ್ಯಕ್ತವಾಗುತ್ತಿದೆ.

ವಾಚಕರ ವಾಣಿ

ಹಾಥರಸ್: ಈ ಸಾವು ನ್ಯಾಯವೇ?

ಉತ್ತರಪ್ರದೇಶದ ಹಾಥರಸ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಭೋಲೆಬಾಬಾ ಎನ್ನುವವರ ಭಾಷಣ ಕೇಳುವುದಕ್ಕೆಂದು ಸೇರಿದ್ದ ಜನರಲ್ಲಿ ಹಲವರು ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಮೃತರಲ್ಲಿ ಹೆಚ್ಚಿನವರು ಮಹಿಳೆಯರು, ಪುಟ್ಟ ಮಕ್ಕಳು. ಇದು ನಾಗರಿಕ ಸಮಾಜ ತಲೆ ತಗ್ಗಿಸಬೇಕಾದಂತಹ ಘಟನೆ. ಕಾಲ್ತುಳಿತಕ್ಕೆ ನೂರಾರು ಮಂದಿ ಬಲಿಯಾಗಿದ್ದಾರೆ ಎನ್ನುವುದಾದರೆ ಇದು ಯಾವ ಬಗೆಯ ಸತ್ಸಂಗ? ಈ ದುರ್ಘಟನೆಗೆ ಉತ್ತರಪ್ರದೇಶದ ಮುಖ್ಯಮಂತ್ರಿ ನೈತಿಕ ಜವಾಬ್ದಾರಿ ಹೊರಬೇಕು. ತಮ್ಮ ಜೀವ ಉಳಿದರೆ ಸಾಕೆಂದು ಹಲವರು ಮೃಗಗಳಂತೆ, ಕೆಳಕ್ಕೆ ಬಿದ್ದವರ ಮೇಲೆ ಕಾಲಿಟ್ಟು ಹೊರಬಂದರು ಎಂಬುದನ್ನು ತಿಳಿದು ಮನಸ್ಸಿಗೆ ಬಹಳ ನೋವಾಯಿತು.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಜುಗಾರಿ ಕ್ರಾಸ್ ನೆನಪಾಯಿತು

'ಜನಾದೇಶದ ಸಂದೇಶ ಮರೆತ ಕಾಂಗ್ರೆಸ್' ಎನ್ನುವ ನಾರಾಯಣ ಎ. ಅವರ ಲೇಖನ (ಪ್ರ.ವಾ., ಜುಲೈ 3) ಓದಿದಾಗ ಪೂರ್ಣಚಂದ್ರ ತೇಜಸ್ವಿಯವರು 'ಜುಗಾರಿ ಕ್ರಾಸ್' ಕಾದಂಬರಿಯಲ್ಲಿ ಬರೆದ ಕೆಲವು ಸಾಲುಗಳು ಇಂದಿಗೂ ಪ್ರಸ್ತುತ ಅನ್ನಿಸಿತು. ಆ ಸಾಲುಗಳು ಹೀಗಿವೆ: 'ದುಷ್ಟರು ಕಷ್ಟಕ್ಕೆ ಸಿಕ್ಕಿಕೊಂಡಾಗ, ಕಳ್ಳರಿಗೆ ಶಿಕ್ಷೆಯಾದಾಗ ಕೊನೆಗೂ ಸತ್ಯಕ್ಕೆ ಜಯವಾಗಿದೆ ಎಂದು ಜನ ನಂಬುತ್ತಾರೆ. ಆದರೆ ವಾಸ್ತವವನ್ನು ಗಮನಿಸಿದಾಗ ದುಷ್ಟರಿಗೆ ಶಿಕ್ಷೆ ಆಗಿರುವುದು ನ್ಯಾಯ, ಧರ್ಮದಿಂದ ಅಲ್ಲ, ಅದಕ್ಕೆ ಇನ್ನೊಬ್ಬ ದೊಡ್ಡ ದುಷ್ಟನೇ ಕಾರಣ ಎಂಬುದು ಕ್ರಮೇಣ ಅರಿವಾಗುತ್ತದೆ. ದುಷ್ಟರನ್ನು ದೊಡ್ಡ ದುಷ್ಟರು, ಕೇಡಿಗಳನ್ನು ದೊಡ್ಡ ಕೇಡಿಗಳೂ, ಪಾತಕಿಗಳನ್ನು ದೊಡ್ಡ ಪಾತಕಿಗಳು ಬಲಿ ಹಾಕುವುದನ್ನು ಧರ್ಮ ಪ್ರತಿಷ್ಠಾಪನೆ ಎಂದು ಜನ ತಾತ್ಕಾಲಿಕವಾಗಿ ನಂಬುತ್ತಾರೆ. ಆಮೇಲೆ ಅವರಿಗೆ ಭ್ರಮನಿರಸನವಾಗುತ್ತದೆ. ಆಗ ಕಳೆದುಹೋದ ಕಾಲವೇ ಎಷ್ಟೋ ವಾಸಿ ಇತ್ತೆಂದು ಜನ ಯೋಚಿಸಲು ಪ್ರಾರಂಭಿಸುತ್ತಾರೆ'.

ಟಿ. ಜಯರಾಂ, ಕೋಲಾರ

ಕೇಂದ್ರೀಕೃತ ಪರೀಕ್ಷೆ ಬೇಕೇ?

ವೈದ್ಯಕೀಯ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಆಯೋಜಿಸಿದ್ದ ನೀಟ್ ಪರೀಕ್ಷೆಯನ್ನು ಕೊನೆ ಕ್ಷಣದಲ್ಲಿ ಮುಂದೂಡಿದ್ದರಿಂದ ವಿದ್ಯಾರ್ಥಿಗಳು, ಪೋಷಕರು ಅನುಭವಿಸಿದ ದುಗುಡ, ಆತಂಕ, ಮಾನಸಿಕ ಯಾತನೆಗಳನ್ನು ಡಾ. ವಿನಯ ಶ್ರೀನಿವಾಸ್ ಅವರು ಬಹಳ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ (ಪ್ರ.ವಾ., ಜೂನ್ 29). ಒಂದು ದೇಶ, ಒಂದು ತೆರಿಗೆ ಎನ್ನುವ ವ್ಯವಸ್ಥೆಯೇನೋ ಸರಿ ಇರಬಹುದು. ಆದರೆ ಒಂದು ದೇಶ, ಒಂದು ಪರೀಕ್ಷೆ ವ್ಯವಸ್ಥೆಯು ಸರಿಯೇ ಎಂಬ ವಿಚಾರ ಹೆಚ್ಚು ಚರ್ಚೆಗೆ ಒಳಗಾಗಬೇಕಿದೆ. ನಾವು ವೈದ್ಯಕೀಯ ಪದವಿ ಪಡೆದ ಸಂದರ್ಭದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯಲು ರಾಜ್ಯದ ಸಾಮಾನ್ಯ ಪ್ರವೇಶ ಪರೀಕ್ಷೆ, ಅಖಿಲ ಭಾರತ ಪ್ರವೇಶ ಪರೀಕ್ಷೆ, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಡೆಸುವ ಪರೀಕ್ಷೆ ಸೇರಿದಂತೆ ಬೇರೆ ಬೇರೆ ಪರೀಕ್ಷೆಗಳು ಇರುತ್ತಿದ್ದವು.

ಯಾವುದೇ ಕಾರಣಕ್ಕೆ ವಿದ್ಯಾರ್ಥಿಗಳಿಗೆ ಒಂದು ಪರೀಕ್ಷೆ ಸರಿಯಾಗದೆ ಇದ್ದಾಗ ಇನ್ನೊಂದು ಅವಕಾಶ ಇರುತ್ತಿತ್ತು. ಆದರೆ ಈಗ ಒಂದು ಪರೀಕ್ಷೆ ಸರಿಯಾಗದೆ ಇದ್ದರೆ ಮತ್ತೆ ಅವಕಾಶ ಸಿಗಬೇಕು ಎಂದಾದರೆ ಮತ್ತೊಂದು ವರ್ಷ ಕಾಯಬೇಕಾಗುತ್ತದೆ. ಇದು ಅರ್ಹ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಡಿಮೆ ಮಾಡುವುದಲ್ಲದೆ ಅವರ ಮಾನಸಿಕ ಒತ್ತಡವನ್ನು ಹೆಚ್ಚು ಮಾಡುತ್ತದೆ. ಜನಪ್ರತಿನಿಧಿಗಳು ಹಾಗೂ ಕೇಂದ್ರ ಸರ್ಕಾರ ಈ ವಿಷಯಯವನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯ ಬಗ್ಗೆ ಮರುವಿಚಾರ ಮಾಡಬೇಕಿದೆ.

ಡಾ. ರಾಜಶೇಖರ ವಿ. ಪಾಟೀಲ್, ಹುಬ್ಬಳ್ಳಿ

ನೂತನ ಕ್ರಿಮಿನಲ್ ಕಾನೂನು: ಜನಜಾಗೃತಿ ಅಗತ್ಯ

ದೇಶದಲ್ಲಿ ಜುಲೈ 1ರಿಂದ ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದಂತೆ ಮೂರು ಹೊಸ ಕಾನೂನುಗಳನ್ನು ಜಾರಿಗೆ ತರಲಾಗಿದೆ. ಈ ಕಾನೂನುಗಳಲ್ಲಿ ಸ್ವದೇಶಿ ಪರಿಕಲ್ಪನೆಯನ್ನು ಅಳವಡಿಸಿಕೊಂಡಿರುವುದು, 'ದಂಡ'ದ ಬದಲು 'ನ್ಯಾಯ'ಕ್ಕೆ ಒತ್ತು ನೀಡಿರುವುದು ಸ್ವಾಗತಾರ್ಹ. ಆದರೆ, ನಮ್ಮಲ್ಲಿರುವ ಎಲ್ಲ ಪೊಲೀಸ್ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಈ ಕಾನೂನುಗಳಲ್ಲಿ ಇರುವ ನಿಯಮಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆಯೇ ಎಂಬುದು ಮುಖ್ಯ. ಕಾನೂನುಗಳ ಅನುಷ್ಠಾನಕ್ಕೆ ಮೊದಲು ಅಗತ್ಯ ತರಬೇತಿಯನ್ನು ಬೆರಳೆಣಿಕೆಯಷ್ಟು ಅಧಿಕಾರಿಗಳಿಗೆ ಮಾತ್ರ ನೀಡಿರಬಹುದು. ಆದರೆ ಜನಸಾಮಾನ್ಯರಿಗೆ ಯಾವುದು ಸರಿ, ಯಾವುದು ತಪ್ಪು, ಯಾವ ನಿಯಮ ಬದಲಾವಣೆಯಾಗಿದೆ ಎಂಬುದರ ಬಗ್ಗೆ ತಿಳಿವಳಿಕೆ ಮೂಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಿದೆ.

ಕಾನೂನು ಪಾಲಿಸಬೇಕಿರುವ ಜನರಿಗೂ ಆ ಕಾನೂನು ಅನುಷ್ಠಾನಕ್ಕೆ ತರುವ ಹೊಣೆ ಇರುವ ಪೊಲೀಸ್ ಸಿಬ್ಬಂದಿಗೂ ಕಾನೂನಿನ ಬಗ್ಗೆ ಸ್ಪಷ್ಟ ಮಾಹಿತಿ ಇದ್ದಾಗ ಮಾತ್ರ ವ್ಯವಸ್ಥೆ ಸರಿಯಾಗಿ ನಡೆಯಲು ಸಾಧ್ಯ. ಹೊಸ ಕಾನೂನಿನ ಪ್ರತಿಗಳನ್ನು ರಾಜ್ಯಗಳ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಿಸಿ, ಆ ಪ್ರತಿಗಳು ಎಲ್ಲರ ಕೈಗೂ ಸಿಗುವಂತೆ ಮಾಡಿ ಜನಜಾಗೃತಿ ಮೂಡಿಸುವುದು ಸೂಕ್ತ.

ಸುರೇಂದ್ರ ಪೈ, ಭಟ್ಕಳ

ವರದಿ ಬಂದ ನಂತರ ಎಚ್ಚರವಾಗುವ ಪ್ರಜ್ಞೆ!

ಬೀದರ್ ಮತ್ತು ಹುಮನಾಬಾದ್ ತಾಲ್ಲೂಕುಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ಕೋಟ್ಯಂತರ ರೂಪಾಯಿ ನಷ್ಟ ಹಾಗೂ ಪರಿಸರ ನಾಶದ ಕುರಿತ ವರದಿ ಗಾಬರಿ ಮೂಡಿಸಿತು (ಪ್ರ.ವಾ., ಜುಲೈ 3). ಅಕ್ರಮ ಗಣಿಗಾರಿಕೆ ನಿರಂತರವಾಗಿ ನಡೆಯುತ್ತಿದ್ದರೂ ಮುರಂ ಖನಿಜವು ಅಕ್ರಮವಾಗಿ ಸಾಗಾಟವಾಗುತ್ತಿದ್ದರೂ ಸಂಬಂಧಿಸಿದ ಅಧಿಕಾರಿಗಳಿಗೆ ಅದರ ಸುಳಿವೇ ಗೋಚರಿಸದಿರುವುದು ಆಶ್ಚರ್ಯಕರ. ಮಾಧ್ಯಮಗಳಲ್ಲಿ ಸುದ್ದಿ ಬಂದ ನಂತರವೇ ಎಚ್ಚೆತ್ತುಕೊಳ್ಳುವ ಅವರ ಕರ್ತವ್ಯ ಪ್ರಜ್ಞೆ ಹಾಗೂ ದಕ್ಷತೆ ಪ್ರಶ್ನಾರ್ಹ. ಗಣಿಗಾರಿಕೆ ನಡೆಸುವವರ ಹಿಂದೆ ಕೆಲವು ಪ್ರಭಾವಿಗಳು ನಿಂತಿರುವುದರಿಂದ, ಅಧಿಕಾರಿಗಳು ಅಸಹಾಯಕರಾಗಿದ್ದಾರೆಂಬ ಸ್ಥಳೀಯರ ದೂರಿನಲ್ಲಿ ಹುರುಳಿಲ್ಲದಿಲ್ಲ. ಅಕ್ರಮ ಗಣಿಗಾರಿಕೆಗೆ ತಕ್ಷಣ ಕಡಿವಾಣ ಹಾಕದಿದ್ದರೆ, ಬೀದರ್ ಜೊತೆಗೆ ಮತ್ತಷ್ಟು ಜಿಲ್ಲೆಗಳೂ ಬಳ್ಳಾರಿ ಆಗುವ ದಿನಗಳು ಬಹಳ ದೂರವಿಲ್ಲ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹೊಸ ಕ್ರಿಮಿನಲ್ ಕಾನೂನುಗಳು ರಾಜ್ಯದ ಆಕ್ಷೇಪಗಳೇನು?

ದೇಶದಾದ್ಯಂತ ಜುಲೈ 1ರಿಂದ ಜಾರಿಗೆ ಬಂದಿರುವ ಮೂರು ಅಪರಾಧ ಕಾನೂನುಗಳಲ್ಲಿರುವ ಕೆಲವು ಅಂಶಗಳ ಬಗ್ಗೆ ಕರ್ನಾಟಕ ಸರ್ಕಾರ ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಕಾಯ್ದೆ ಆಗುವುದಕ್ಕೂ ಮುನ್ನ ಮೂರು ಮಸೂದೆಗಳ ಅಧ್ಯಯನ ನಡೆಸಿ ವರದಿ ನೀಡಲು ರಾಜ್ಯ ಸರ್ಕಾರ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ನೇತೃತ್ವದಲ್ಲಿ 11 ಸದಸ್ಯರ ತಜ್ಞರ ಸಮಿತಿ ರಚಿಸಿತ್ತು. ಸಮಿತಿಯು ವರದಿ ನೀಡಿದ್ದು, ಕಾಯ್ದೆಗಳಲ್ಲಿ ಹಲವು ತಿದ್ದುಪಡಿಗಳಿಗೆ ಸಲಹೆ ನೀಡಿತ್ತು. ಈ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ, ಈ ಸಲಹೆಯನ್ನು ಕೇಂದ್ರವು ಗಣನೆಗೆ ತೆಗೆದುಕೊಂಡಿಲ್ಲ ಎಂಬ ಕಾರಣಕ್ಕೆ ರಾಜ್ಯ ಸರ್ಕಾರವು ಅಸಮಾಧಾನಗೊಂಡಿದೆ. ಹಾಗಾಗಿ, ರಾಜ್ಯದಲ್ಲಿ ಮೂರೂ ಕಾಯ್ದೆಗಳ ಕೆಲವು ಕಲಂಗಳಿಗೆ ತಿದ್ದುಪಡಿ ಮಾಡುವುದಾಗಿ ಸರ್ಕಾರ ಹೇಳಿದೆ. ತಜ್ಞರ ಸಮಿತಿಯ ವರದಿಯಲ್ಲಿರುವ ಪ್ರಮುಖ ಸಲಹೆಗಳ ಕುರಿತು ಇಲ್ಲಿ ಬೆಳಕು ಚೆಲ್ಲಲಾಗಿದೆ...

ಹೊಸ ಕಲಂ 150ಎ ಸೇರಿಸಿ

ರಾಷ್ಟ್ರ ಧ್ವಜ, ರಾಷ್ಟ್ರ ಗೀತೆ ಮತ್ತು ರಾಷ್ಟ್ರ ಪಿತ ಮಹಾತ್ಮ ಗಾಂಧೀಜಿ ಅವರಿಗೆ ಅವಮಾನ ಮಾಡಿದವರಿಗೆ ಶಿಕ್ಷೆ ವಿಧಿಸುವ ನಿಯಮಗಳು ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಇರಲಿಲ್ಲ. ಭಾರತೀಯ ನ್ಯಾಯ ಸಂಹಿತೆಯಲ್ಲಿ ಇದಕ್ಕಾಗಿ ಪ್ರತ್ಯೇಕ ಕಲಂ ಸೇರಿಸುವ ಅಗತ್ಯವಿದೆ. ತ್ರಿವರ್ಣಧ್ವಜ, ರಾಷ್ಟ್ರ ಗೀತೆ ಮತ್ತು ಮಹಾತ್ಮ ಗಾಂಧೀಜಿ ಅವರನ್ನು ಮಾತಿನಲ್ಲಿ ಅಥವಾ ಬರವಣಿಗೆಯಲ್ಲಿ ಅಥವಾ ಸಂಕೇತದ ಮೂಲಕ ಅಥವಾ ಕಣ್ಣಿಗೆ ಕಾಣುವಂತಹ ರೀತಿಯಲ್ಲಿ ಅಥವಾ ಹೇಳಿಕೆ ಮುದ್ರಿಸುವ ಮೂಲಕ ಅವಮಾನಿಸಿದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವಂತಹ ಕಲಂ ಅನ್ನು ಸೇರ್ಪಡೆಗೊಳಿಸಬೇಕು.

ಭಾರತೀಯ ನ್ಯಾಯ ಸಂಹಿತೆ–2023 (ಬಿಎನ್‌ಎಸ್)

- ಹಿಂದಿನ ಹೆಸರು: ಭಾರತೀಯ ದಂಡ ಸಂಹಿತೆ (ಐಪಿಸಿ)
- ಕಲಂಗಳು: ಬಿಎನ್‌ಎಸ್–356, ಐಪಿಸಿ–511
- 204 ಕಲಂಗಳಲ್ಲಿ ಬದಲಾವಣೆ ಇಲ್ಲ
- 139 ಕಲಂಗಳಲ್ಲಿ ಸಣ್ಣ ಪುಟ್ಟ ಬದಲಾವಣೆ
- 13 ಹೊಸ ಕಲಂಗಳ ಸೇರ್ಪಡೆ
- 16 ಕಲಂಗಳನ್ನು ತೆಗೆದುಹಾಕಲಾಗಿದೆ

ಪ್ರಮುಖ ಸಲಹೆಗಳು

- ಕಾಯ್ದೆಯಲ್ಲಿರುವ 'ನ್ಯಾಯ' ಮತ್ತು 'ಸಂಹಿತೆ' ಪದಗಳು ಇಂಗ್ಲಿಷ್ ಪದಗಳಲ್ಲ. ಭಾರತೀಯ ಸಂವಿಧಾನದ ವಿಧಿ 348ರ ಪ್ರಕಾರ, ಸಂಸತ್ ಅಥವಾ ರಾಜ್ಯ ವಿಧಾನಸಭೆಗಳು ಅಂಗೀಕರಿಸುವ ಕಾಯ್ದೆಗಳು ಇಂಗ್ಲಿಷ್‌ನಲ್ಲಿರಬೇಕು.
- ಕಾನೂನಿನ ಉದ್ದೇಶ ಮತ್ತು ಆಶಯವನ್ನು ಕಾಯ್ದೆಯ ಹೆಸರು ಪ್ರತಿಧ್ವನಿಸುವುದಿಲ್ಲ. ನಾಗರಿಕರಿಗೆ ಭದ್ರತೆ ನೀಡುವ, ಅವರ ಜೀವ, ಆಸ್ತಿ ರಕ್ಷಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಕ್ರಿಮಿನಲ್ ಕಾನೂನಿನ ಸಹಾಯದಿಂದ ಇದನ್ನು ಸಾಧಿಸಬಹುದು. ತಪ್ಪು ಮಾಡಿದವರನ್ನು ಶಿಕ್ಷಿಸುವುದು ಮತ್ತು ಅಪರಾಧಗಳನ್ನು ತಡೆಯುವುದು ಕಾನೂನಿನ ಉದ್ದೇಶ. ವಸಾಹತುಶಾಹಿಯ ಕಾಲದ ಕಾನೂನಿನಿಂದ ಹೊಸ ಕಾನೂನಿಗೆ ಬದಲಾಗುವಾಗ ಕಾಯ್ದೆಯ ಆಶಯವು 'ಶಿಕ್ಷಿಸುವುದು' ಎಂಬುವುದರಿಂದ, 'ನ್ಯಾಯ' ಕೊಡುವುದು ಎಂದು ಬದಲಾದಂತೆ ಕಾಣುತ್ತದೆ. 'ಶಿಕ್ಷೆ' ಎಂಬ ಅಂಶಕ್ಕೆ ಒತ್ತು ನೀಡುವ ಅಗತ್ಯವಿದೆ. ಹಾಗಾಗಿ, ಕಾಯ್ದೆಯ ಹೆಸರು 'ದಂಡ ಸಂಹಿತೆ' ಎಂದಿರಬೇಕು.
- ಕಾಯ್ದೆಯ ಹೆಸರು ಭಾರತೀಯ ನ್ಯಾಯ ಸಂಹಿತೆ ಎಂದಿದ್ದರೂ, ಎಲ್ಲ ಕಲಂಗಳಲ್ಲಿ 'ಇಂಡಿಯಾ' ಎಂದು ಬಳಸಲಾಗಿದೆ. ಎಲ್ಲೆಲ್ಲಿ 'ಇಂಡಿಯಾ' ಎಂದು ಬಳಸಲಾಗಿದೆಯೋ, ಅಲ್ಲೆಲ್ಲ 'ಭಾರತ' ಎಂದು ಬದಲಾಯಿಸಬೇಕು.
- ಭಾರತೀಯ ದಂಡ ಸಂಹಿತೆಯು (ಐಪಿಸಿ) ಪರಿಪೂರ್ಣವಾದಂತಹ ಕಾನೂನು. ಎಲ್ಲ ರೀತಿಯ ಅಪರಾಧಗಳಿಗೆ ಶಿಕ್ಷೆಯ ಪ್ರಮಾಣವನ್ನು ಇದರಲ್ಲಿ ನಿಗದಿಪಡಿಸಲಾಗಿದೆ. ಶಿಕ್ಷೆಗಾಗಿ ಬೇರೆ ಕಾಯ್ದೆಗಳನ್ನು ಉಲ್ಲೇಖಿಸಬೇಕಾಗಿಲ್ಲ. ಆದರೆ, ಭಾರತೀಯ ನ್ಯಾಯ ಸಂಹಿತೆಯಲ್ಲಿ ಕೆಲವು ನಿರ್ದಿಷ್ಟ ವಿಷಯಗಳ ವ್ಯಾಖ್ಯಾನಕ್ಕಾಗಿ ಬೇರೆ ಕಾನೂನುಗಳನ್ನು ಅವಲಂಬಿಸಬೇಕಾಗಿದೆ. ಇದು ಸರಿಯಲ್ಲ. ಬೇರೆ ಕಾನೂನುಗಳನ್ನು ಅವಲಂಬಿಸದೆ ಎಲ್ಲ ಅಪರಾಧಗಳಿಗೆ ಸಂಬಂಧಿಸಿದ ವ್ಯಾಖ್ಯಾನಗಳು ಕಾಯ್ದೆಯಲ್ಲೇ ಇರಬೇಕು.
- 'ಶಿಕ್ಷೆ'ಗೆ ಸಂಬಂಧಿಸಿದ ಕಾಯ್ದೆಯ ಎರಡನೇ ಅಧ್ಯಾಯದಲ್ಲಿ 4ನೇ ಕಲಂನ ಉಪ ಕಲಂ (ಎಫ್) ನಲ್ಲಿ 'ಸಮುದಾಯ ಸೇವೆ' ಎಂಬ ಶಿಕ್ಷೆಯನ್ನು ಉಲ್ಲೇಖಿಸಲಾಗಿದೆ. ಆದರೆ, ಶಿಕ್ಷೆ ರೂಪದ 'ಸಮುದಾಯ ಸೇವೆ'ಯನ್ನು ಕಾಯ್ದೆಯಲ್ಲಿ ವಿವರಿಸಲಾಗಿಲ್ಲ. ಸ್ಪಷ್ಟವಾದ ವ್ಯಾಖ್ಯಾನ ನೀಡಬೇಕು.
- 'ಸರ್ಕಾರಿ ಅಧಿಕಾರಿ' (ಪಬ್ಲಿಕ್ ಸರ್ವೆಂಟ್) ಬಗ್ಗೆ ವಿವರಣೆ ನೀಡುವ ಕಲಂ 2 (28)ರ ಉಪಕಲಂ 28(ಕೆ) ನಂತರ ನೀಡಿರುವ (ಸಿ) ವಿವರಣೆಯಲ್ಲಿ 'ಚುನಾವಣೆ' ಕುರಿತಂತೆ ಅರ್ಥ ವಿವರಿಸಲಾಗಿದ್ದು, ಈ ಕಲಂ ಅಡಿಯಲ್ಲಿ ಇದರ ಅಗತ್ಯವಿಲ್ಲ. ಚುನಾವಣೆಗೆ ಸಂಬಂಧಿಸಿದ ಅಪರಾಧಗಳ ಬಗ್ಗೆ ಕಾಯ್ದೆಯ ಒಂಬತ್ತನೇ ಅಧ್ಯಾಯ ಇದೆ. ಹಾಗಾಗಿ, ಚುನಾವಣೆಗೆ ಸಂಬಂಧಿಸಿದ ವಿವರಣೆಗೆ ಪ್ರತ್ಯೇಕ ಉಪ ಕಲಂ 2(29) ಅಗತ್ಯವಿದೆ.
- ಅಪರಾಧದ ಬಗ್ಗೆ ತಿಳಿವಳಿಕೆ ಇದ್ದುಕೊಂಡು ಅಥವಾ ಉದ್ದೇಶಪೂರ್ವಕವಾಗಿ ಅಪರಾಧ ಕೃತ್ಯವನ್ನು ಹಲವರು ಎಸಗಿದರೆ ಪ್ರತಿಯೊಬ್ಬರೂ ಒಂದೇ ರೀತಿಯ ಶಿಕ್ಷೆ ಅನುಭವಿಸಬೇಕು ಎಂದು ವಿವರಿಸುವ ಕಲಂ 3 (6) ಅನ್ನು ಪ್ರತ್ಯೇಕ ಕಲಂ ಆಗಿ ಪರಿಗಣಿಸಬೇಕು.
- ಶಿಕ್ಷೆಗೆ ಸಂಬಂಧಿಸಿದ ಅಧ್ಯಾಯ 2ರಲ್ಲಿ ಉಪ ಕಲಂ (ಬಿ) ಜೀವಾವಧಿ ಶಿಕ್ಷೆಯನ್ನು ವ್ಯಾಖ್ಯಾನಿಸಲಾಗಿದೆ. ಇಲ್ಲಿ ಜೀವಾವಧಿ ಶಿಕ್ಷೆಯನ್ನು 'ಒಬ್ಬ ವ್ಯಕ್ತಿಯ ಜೀವಾವಧಿಯ ಬಾಕಿ ಸಹಜ ಜೀವನದ ಅವಧಿ' ಎಂದು ಹೇಳಲಾಗಿದೆ. ಕಾಯ್ದೆಯ 6ನೇ ಕಲಂ, 'ಜೈಲು ಶಿಕ್ಷೆಯ ಪ್ರಮಾಣವನ್ನು ಲೆಕ್ಕ ಹಾಕುವಾಗ, ನಿರ್ದಿಷ್ಟ ಅವಧಿಯನ್ನು ಉಲ್ಲೇಖಿಸದೆ, ಜೀವಾವಧಿ ಶಿಕ್ಷೆ ಎಂದರೆ 20 ವರ್ಷಗಳ ಕಾರಾಗೃಹ ಶಿಕ್ಷೆ ಎಂದರ್ಥ' ಎಂದು ಹೇಳುತ್ತದೆ. ಇವೆರಡೂ ಭಿನ್ನ ವ್ಯಾಖ್ಯಾನವನ್ನು ನೀಡುತ್ತವೆ. ಹಾಗಾಗಿ, ಇದನ್ನು ಸರಿಪಡಿಸಬೇಕು.
- ಕಲಂ 41 (ಬಿ)ಯಲ್ಲಿ ಮನೆ ಕಳ್ಳತನ ಎಂಬ ಪದಗಳ ನಂತರ 'ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕೂ ಮೊದಲು' ಎಂದು ಸೇರಿಸಲಾಗಿದೆ. ಕಲಂ 41, ಸಂತ್ರಸ್ತ ವ್ಯಕ್ತಿಗೆ ಸ್ವಯಂ ರಕ್ಷಣೆ ಲಭ್ಯವಿರುವ ಬಗ್ಗೆ ಪ್ರಸ್ತಾಪಿಸುತ್ತದೆ. ಹಗಲು ಹೊತ್ತಿನಲ್ಲಿ ನಡೆಯುವ ಮನೆ ಕಳ್ಳತನದ ಸಂದರ್ಭದಲ್ಲೂ ಸಂತ್ರಸ್ತರಿಗೆ ಸ್ವಯಂ ರಕ್ಷಣೆ ಲಭ್ಯವಿರಬೇಕು. ಹಾಗಾಗಿ, 'ಸೂರ್ಯಾಸ್ತದ ನಂತರ ಮತ್ತು ಸೂರ್ಯೋದಯಕ್ಕೂ ಮೊದಲು' ಎಂಬ ಉಲ್ಲೇಖವನ್ನು ತೆಗೆಯಬೇಕು.
- ಕಲಂ 101ರ ಉಪ ಕಲಂ 2 ಅನ್ನು ಕಾಯ್ದೆಗೆ ಹೊಸದಾಗಿ ಸೇರಿಸಲಾಗಿದೆ.

  'ಹತ್ಯೆಯ ಅಪರಾಧಕ್ಕೆ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ನೀಡಬೇಕು. ಮತ್ತು ಅಪರಾಧಿಗಳಿಗೆ ದಂಡವನ್ನೂ ವಿಧಿಸಬಹುದು' ಎಂದು 101ರ ಉಪ ಕಲಂ (1) ಹೇಳುತ್ತದೆ.

  ಉಪ ಕಲಂ (2)ರಲ್ಲಿ ಐದಕ್ಕಿಂತ ಹೆಚ್ಚು ಜನರ ತಂಡ ಕೊಲೆ ಮಾಡಿದರೆ ವಿಧಿಸಬಹುದಾದ ಶಿಕ್ಷೆಯ ಬಗ್ಗೆ ವಿವರಿಸಲಾಗಿದೆ. 'ಹಂತಕರು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಅರ್ಹರು ಮತ್ತು ದಂಡವನ್ನೂ ವಿಧಿಸಬಹುದು ಅಥವಾ ಏಳು ವರ್ಷಕ್ಕಿಂತ ಕಡಿಮೆ ಅವಧಿ ಅಲ್ಲದ ಜೈಲು ಶಿಕ್ಷೆಯನ್ನು ವಿಧಿಸಬಹುದು ಮತ್ತು ದಂಡವನ್ನೂ ಹೇರಬಹುದು' ಎಂದು ಅದು ಹೇಳಿದೆ.

  ಐದಕ್ಕಿಂತ ಹೆಚ್ಚು ಜನರು ಮಾಡಿರುವ ಕೊಲೆ ಪ್ರಕರಣದ ತಪ್ಪಿತಸ್ಥರಿಗೆ ಕಡಿಮೆ ಪ್ರಮಾಣದ ಪರ್ಯಾಯ ಶಿಕ್ಷೆ ವಿಧಿಸಲು ಅವಕಾಶವಿದೆ ಎಂಬುದು ಈ ಎರಡು ಉಪ ಕಲಂಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ, (2) ಉಪ ಕಲಂನಲ್ಲಿ 'ಏಳು ವರ್ಷಕ್ಕಿಂತ ಕಡಿಮೆ ಅವಧಿಯಲ್ಲದ ಜೈಲು ಶಿಕ್ಷೆ' ಎಂಬ ಸಾಲನ್ನು ತೆಗೆಯಬೇಕು.
- ಕಾಯ್ದೆಯ 104ನೇ ಕಲಂ ಐಪಿಸಿಯ 304ಎ ಕಲಂ ಆಗಿದ್ದು, ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಅವುಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯವಿದೆ.

  – ವ್ಯಕ್ತಿಯ ಅತಿ ವೇಗ ಅಥವಾ ನಿರ್ಲಕ್ಷ್ಯದಿಂದ ಆಗುವ ಸಾವು ಕೊಲೆ ಉದ್ದೇಶದಿಂದ ಮಾಡಿದ ಹತ್ಯೆ ಆಗಿರುವುದಿಲ್ಲ. ನಿರ್ಲಕ್ಷ್ಯದಿಂದ ಆಗಿರುತ್ತದೆ. ಇಂತಹ ಪ್ರಕರಣಗಳನ್ನು ಅಪಘಾತ ಅಥವಾ ಹಿಟ್ ಅಂಡ್ ರನ್ ಪ್ರಕರಣಗಳ ಸಂದರ್ಭಗಳಿಗೆ ಸೀಮಿತಗೊಳಿಸಬೇಕಾಗಿಲ್ಲ.

  – ವೇಗ ಅಥವಾ ನಿರ್ಲಕ್ಷ್ಯದಿಂದ ಸಂಭವಿಸಿರುವ ಸಾವಿನ ಘಟನೆಯ ಬಗ್ಗೆ ಆರೋಪಿಯು ಪೊಲೀಸ್ ಅಥವಾ ಇತರ ಆಡಳಿತದ ಗಮನಕ್ಕೆ ತರಬೇಕು ಎಂಬ ಹೊಸ ಅಂಶವನ್ನು ಸೇರಿಸಲಾಗಿದೆ. ಅಪಘಾತದ ಪ್ರಕರಣಗಳಲ್ಲಿ ಅಪಘಾತ ಮಾಡಿದವರಿಗೆ ಹೆಚ್ಚುವರಿ ಹೊಣೆ ನೀಡಿರುವುದು ನ್ಯಾಯಸಮ್ಮತವೇ. ಆದರೆ, ಪರಿಷ್ಕೃತ ಶಿಕ್ಷೆಯು ತರ್ಕರಹಿತವಾದುದು ಮತ್ತು ಹೊಂದಿಕೆಯಾಗದ್ದು. ಶಿಕ್ಷೆಯ ಪ್ರಮಾಣವನ್ನು ಬದಲಾಯಿಸಬೇಕು.

  –ವೃತ್ತಿಯಲ್ಲಿನ ನಿರ್ಲಕ್ಷ್ಯ ಅಥವಾ ವೈದ್ಯಕೀಯ ನಿರ್ಲಕ್ಷ್ಯದ ಸಂದರ್ಭಗಳಿಗೆ ಸಂಬಂಧಿಸಿದಂತೆ ಹೆಚ್ಚು ಸೂಕ್ತವಾದ ರಚನಾತ್ಮಕವಾದ ವಿವರಣೆ ಅಗತ್ಯ.
- ಕಾಯ್ದೆಯ 109ನೇ ಕಲಂ 'ಸಂಘಟಿತ ಅಪರಾಧ' ಶೀರ್ಷಿಕೆ ಅಡಿಯಲ್ಲಿ ವಿವಿಧ ಕಾನೂನುಬಾಹಿರ ಚಟುವಟಿಕೆಗಳಿಗೆ ಶಿಕ್ಷೆಯ ಪ್ರಮಾಣವನ್ನು ನಿಗದಿ ಪಡಿಸಿದೆ. ಇಲ್ಲಿ ವಿವರಿಸಿರುವ ಕಾನೂನು ಬಾಹಿರ ಚಟುವಟಿಕೆಗಳು, ಈಗ ಜಾರಿಯಲ್ಲಿರುವ ವಿವಿಧ ಅಪರಾಧ ಕಾನೂನುಗಳಲ್ಲಿ ವಿವರಿಸಲಾಗಿರುವ ಅಪರಾಧಗಳ ವಿವರಣೆಯಂತೆಯೇ ಇವೆ. 110ನೇ ಕಲಂ 'ಸಣ್ಣ ಸಂಘಟಿತ ಅಪರಾಧ'ಗಳಿಗೆ ಶಿಕ್ಷೆ ವಿಧಿಸುತ್ತದೆ. ಆದರೆ, ಸಂಹಿತೆಯಲ್ಲಿ ಎಲ್ಲೂ 'ಅಪರಾಧ'ವನ್ನು (ಕ್ರೈಂ) ವ್ಯಾಖ್ಯಾನಿಸಿಲ್ಲ. ಕಾಯ್ದೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳು (ಅಫೆನ್ಸ್) ಎಂಬ ಪದ ಬಳಸಲಾಗಿದೆ.

  'ಆರ್ಥಿಕ ಕಾನೂನು ಬಾಹಿರ ಚಟುವಟಿಕೆಗಳು' ಎಂಬುದನ್ನೂ ವ್ಯಾಖ್ಯಾನಿಸಲಾಗಿಲ್ಲ. 'ಆರ್ಥಿಕ ಹಗರಣಗಳು', 'ಬಂಡವಾಳ ಸಂಗ್ರಹಿಸಿ ವಂಚಿಸುವ ಯೋಜನೆ' (ಪಾಂಝಿ ಸ್ಕೀಮ್) ಮತ್ತು 'ಸಾಮೂಹಿಕ ಮಾರುಕಟ್ಟೆ ವಂಚನೆ'ಯಂತಹ ಅಸ್ಪಷ್ಟ ಪದಗಳನ್ನು ಬಳಸಲಾಗಿದೆ.

  ಈ ಎರಡು ಕಲಂಗಳಲ್ಲಿ ಪ್ರಸ್ತಾಪಿಸಿರುವ ಅಂಶಗಳು ಅಪರಾಧೀಕರಣ ಮತ್ತು ಕ್ರಿಮಿನಲ್ ಅಪರಾಧಗಳ ಕರಡು ರಚನೆಯ ನಿಯಮಗಳನ್ನು ಅನುಮೋದಿಸುವುದಿಲ್ಲ. ಈ ನಿಯಮಗಳಿಗೆ ಅನುಗುಣವಾಗಿ ಈ ಕಲಂಗಳ ಪೂರ್ಣ ಅಂಶಗಳನ್ನು ಮತ್ತೆ ಸಿದ್ಧಪಡಿಸಬೇಕು.

ಲೈಂಗಿಕ ದೌರ್ಜನ್ಯ: ಲಿಂಗತ್ವ ತಟಸ್ಥ ವ್ಯಾಖ್ಯಾನ ಇರಲಿ

ಕಾಯ್ದೆಯ 5ನೇ ಅಧ್ಯಾಯ ಮಹಿಳೆ ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಕುರಿತಾಗಿ ಇದೆ. ಆದರೆ, ವಯಸ್ಕ ಪುರುಷರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಯಾವ ಪ್ರಸ್ತಾವವೂ ಕಾಯ್ದೆಯಲ್ಲಿಲ್ಲ. 2000ದಲ್ಲಿ ಭಾರತೀಯ ಕಾನೂನು ಆಯೋಗವು ತನ್ನ 172ನೇ ವರದಿಯಲ್ಲಿ ಅತ್ಯಾಚಾರ ಕಾನೂನುಗಳು 'ಲಿಂಗತ್ವ ತಟಸ್ಥ' (ಜೆಂಡರ್ ನ್ಯೂಟ್ರಲ್) ಆಗಿರಬೇಕು ಎಂದು ಅಭಿಪ್ರಾಯಪಟ್ಟಿದೆ.

ಅತ್ಯಾಚಾರ ಕಾನೂನು 'ಲಿಂಗತ್ವ ತಟಸ್ಥ'ವಾಗಿರಬೇಕು ಎಂದು ಒತ್ತಾಯಿಸಿ 2017ರಲ್ಲಿ ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಸಂಸದ ಮತ್ತು ಹಿರಿಯ ವಕೀಲರಾದ ಕೆ.ಟಿ.ಎಸ್ ತುಳಸಿ ಅವರು ರಾಜ್ಯಸಭೆಯಲ್ಲೂ ಈ ಬಗ್ಗೆ ಒಂದು ಮಸೂದೆ ಮಂಡಿಸಿದ್ದರು. ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಕಾನೂನುಗಳು ಲಿಂಗತ್ವ ತಟಸ್ಥವಾಗಿರಬೇಕು ಎಂಬ ಕುರಿತು ಮಾಡಿದ ಪ್ರಯತ್ನಗಳು ಇದುವರೆಗೆ ಫಲ ನೀಡಿಲ್ಲ. ಭಾರತವು ಪುರುಷ ಪ್ರಧಾನ ಸಮಾಜವಾಗಿರುವುದರಿಂದ ಮತ್ತು ಪುರುಷರ ಮೇಲೆ ಲೈಂಗಿಕ ದೌರ್ಜನ್ಯ ಅಪರಾಧಗಳಿಗೆ ಒಳಪಡುವುದಿಲ್ಲ ಎಂಬ ಕಾರಣಕ್ಕೆ ಈ ಪ್ರಯತ್ನಗಳನ್ನು ಪರಿಗಣಿಸಿಲ್ಲ.

ಆದರೆ, ವಿವಿಧ ಸಂದರ್ಭಗಳಲ್ಲಿ ಪುರುಷರು ಕೂಡ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ, 5ನೇ ಅಧ್ಯಾಯದಲ್ಲಿ ಈ ಅಪರಾಧಗಳನ್ನು ಲಿಂಗತ್ವ ತಟಸ್ಥ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸಬೇಕು. ಇದಕ್ಕಾಗಿ ಹೆಚ್ಚುವರಿ ಮೂರು ಕಲಂಗಳನ್ನು ಸೇರಿಸಬೇಕು.

ಭಾರತೀಯ ಸಾಕ್ಷ್ಯ ಕಾಯ್ದೆ–2023

- ಹಿಂದಿನ ಹೆಸರು: ಇಂಡಿಯನ್ ಎವಿಡೆನ್ಸ್ ಆ್ಯಕ್ಟ್ –1872
- ಇಂಡಿಯನ್ ಎವಿಡೆನ್ಸ್ ಆ್ಯಕ್ಟ್‌ನಲ್ಲಿ ಇದ್ದ ಕಲಂಗಳು: 167
- ಭಾರತೀಯ ಸಾಕ್ಷ್ಯ ಕಾಯ್ದೆಯಲ್ಲಿರುವ ಕಲಂಗಳು: 170
- 146 ಕಲಂಗಳಲ್ಲಿ ಯಾವುದೇ ಬದಲಾವಣೆ ಇಲ್ಲ
- 35 ಕಲಂಗಳಲ್ಲಿ ಅಲ್ಪ ಬದಲಾವಣೆ
- 2 ಹೆಚ್ಚುವರಿ ಕಲಂಗಳ ಸೇರ್ಪಡೆ
- 5 ಕಲಂಗಳನ್ನು ತೆಗೆದುಹಾಕಲಾಗಿದೆ

ಸಮಿತಿಯ ಸಲಹೆಗಳು...

- 2ಇ ಕಲಂನ 'ಸಾಕ್ಷ್ಯ'ದ 'ವಿವರಣೆ'ಯಲ್ಲಿ, 'ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ಮಾಹಿತಿ ನೀಡುವುದು' ಎಂದಿದೆ. ಅದಕ್ಕೆ ವಿವರಣೆಯ ಅಗತ್ಯವಿದ್ದು, 'ನ್ಯಾಯಾಲಯವು ಸಾಕ್ಷಿಯ ಹೇಳಿಕೆಯನ್ನು ವಿಡಿಯೊ ಕಾನ್ಫರೆನ್ಸ್ ಅಥವಾ ವರ್ಚ್ಯುಯಲ್ ಮೂಲಕ ದಾಖಲಿಸಿಕೊಳ್ಳಬೇಕು' ಎನ್ನುವುದನ್ನು ಸೇರಿಸಬೇಕು.

ಕಲಂ 62ರಲ್ಲಿ ಎಲೆಕ್ಟ್ರಾನಿಕ್ ದಾಖಲೆಗಳಲ್ಲಿನ ವಿಷಯವನ್ನು ಕಲಂ 59ರ ನಿಬಂಧನೆಗಳ ಅನ್ವಯ ಸಾಬೀತುಪಡಿಸಬೇಕು ಎಂದು ಇದೆ. ಇದನ್ನು ಕಲಂ 63ರ ನಿಬಂಧನೆಗಳ ಅನ್ವಯ ಸಾಬೀತುಪಡಿಸಬೇಕು ಎಂದು ಬದಲಾಯಿಸಬೇಕಿದೆ. ಏಕೆಂದರೆ, ಕಲಂ 59 ದಾಖಲೆಗಳ ನೈಜತೆಗೆ ಸಂಬಂಧಿಸಿದ್ದಾಗಿದ್ದು, ಕಲಂ 63 ಎಲೆಕ್ಟ್ರಾನಿಕ್ ದಾಖಲೆಗಳನ್ನು ಅಂಗೀಕರಿಸುವುದಕ್ಕೆ ಸಂಬಂಧಿಸಿದೆ. ಕಲಂ 62ರಲ್ಲಿ 59ನೇ ಕಲಂ ಸೇರಿಸಿದರೆ, ಕಲಂ 63 ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತದೆ.

- ಕಲಂ 39, ಅಗತ್ಯಬಿದ್ದಾಗ ತಜ್ಞರ ಅಭಿಪ್ರಾಯಗಳ ಪಡೆಯುವ ಬಗ್ಗೆ ಹೇಳುತ್ತದೆ.

ಕೈ ಬರಹ, ಬೆರಳಚ್ಚು ಗುರುತಿಸುವ ಬಗ್ಗೆ ಕಲಂ ಪ್ರಸ್ತಾಪಿಸುವುದರಿಂದ ಎಲೆಕ್ಟ್ರಾನಿಕ್ ಅಥವಾ ಡಿಜಿಟಲ್ ಸಾಕ್ಷ್ಯ ಅಂದರೆ, ಧ್ವನಿ, ಚಿತ್ರ, ಕಣ್ಣಿನ ಪಾಪೆ ಪದಗಳನ್ನು ಸೇರಿಸಬೇಕು ಮತ್ತು 'ತಾಂತ್ರಿಕ ತಜ್ಞ' ಪದವನ್ನೂ ಸೇರಿಸಬೇಕು.

- ಭಾರತೀಯ ನಾಗರಿಕ ಸುರಕ್ಷಾ ಕಾಯ್ದೆಯ ಕಲಂ 64, 65, 67, 68, 70, 71, 73, 74, 75, 76 ಮತ್ತು 77ರ ಅಡಿಯಲ್ಲಿ ಕೆಲವು ಪ್ರಕರಣಗಳಲ್ಲಿ ಸಂತ್ರಸ್ತೆಯ ನಡತೆ ಮತ್ತು ಹಿಂದಿನ ಲೈಂಗಿಕ ಅನುಭವಗಳು ಮುಖ್ಯವಲ್ಲ ಎಂದು ಕಲಂ 48ರಲ್ಲಿ ಹೇಳಲಾಗಿದೆ. ಆದರೆ, ಇದು ಭಾರತೀಯ ನ್ಯಾಯ ಸಂಹಿತೆ ಕಾಯ್ದೆಗೆ ಸಂಬಂಧಿಸಿದ ಕಲಂಗಳಾಗಿವೆ. ಈ ಕಾಯ್ದೆಯಲ್ಲಿ ನಾಗರಿಕ ಸುರಕ್ಷಾ ಸಂಹಿತೆ ಎಂದು ಉಲ್ಲೇಖಿಸಲಾಗಿದೆ. ಹಾಗಾಗಿ, ಭಾರತೀಯ ನಾಗರಿಕ ಸುರಕ್ಷಾ ಕಾಯ್ದೆ ಎಂಬುದನ್ನು ತೆಗೆದು ಭಾರತೀಯ ನ್ಯಾಯ ಸಂಹಿತೆ ಎಂದು ಸೇರಿಸಬೇಕು.
- ಕಾಯ್ದೆಯ 58ನೇ ಕಲಂ ಎರಡನೇ ಸಾಕ್ಷ್ಯದ ಬಗ್ಗೆ ಪ್ರಸ್ತಾಪಿಸುತ್ತದೆ. ಇದರಲ್ಲಿ ಎಂಟು ಉಪ ಕಲಂಗಳಿದ್ದು, ಈ ಪೈಕಿ ಉಪ ಕಲಂ (6) 'ಮೌಖಿಕವಾಗಿ ತಪ್ಪೊಪ್ಪಿಗೆ' ಮತ್ತು (7) 'ಲಿಖಿತ ತಪ್ಪೊಪ್ಪಿಗೆ' ತೆಗೆಯಬೇಕು.

ಆಧಾರ: ರಾಜ್ಯ ಸರ್ಕಾರ ರಚಿಸಿದ್ದ ತಜ್ಞರ ಸಮಿತಿ ವರದಿ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರಿಲಯನ್ಸ್ ಇಂಡಸ್ಟ್ರೀಸ್‌ನ ಕಾರ್ಯನಿರ್ವಾಹಕೇತರ ನಿರ್ದೇಶಕ ಅನಂತ್ ಅಂಬಾನಿ ಅವರು ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಪರ ಪ್ರಚಾರ ಮಾಡಿದ್ದಾರೆ ಎನ್ನಲಾದ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಹಂಚಿಕೊಂಡಿದ್ದಾರೆ. 'ನನ್ನ ಮದುವೆಯ ಗೌರವಾರ್ಥ ದೇಶದ ಜನರಿಗೆ ₹100 ಕೋಟಿ ನೀಡುತ್ತೇನೆ. ನೀವು ನನ್ನ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ನನ್ನ ನೆಚ್ಚಿನ ಆಟ ಆಡಬೇಕು. ನೀವು ಗೆದ್ದ ಹಣದ ಐದು ಪಟ್ಟು ಹಣವನ್ನು ನಾನು ಕೊಡುತ್ತೇನೆ ಮತ್ತು ಸೋತರೆ ನಿಮ್ಮ ಠೇವಣಿಯ ಎರಡು ಪಟ್ಟು ಕೊಡುತ್ತೇನೆ' ಎಂದು ಅನಂತ್ ಅಂಬಾನಿ ಹೇಳುವ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿತ್ತು. ಆದರೆ ಇದು ಸುಳ್ಳು.

ಈ ವಿಡಿಯೊದ ಸತ್ಯಾಸತ್ಯತೆ ಪರಿಶೀಲಿಸುವಾಗ, ವಿಡಿಯೊದಲ್ಲಿ ಅನಂತ್ ಅಂಬಾನಿಯವರ ತುಟಿಯ ಚಲನೆಗೂ, ವಿಡಿಯೊದಲ್ಲಿ ಬರುವ ಧ್ವನಿಗೂ ಹೊಂದಾಣಿಕೆಯಾಗದಿರುವುದು ಕಂಡು ಬಂತು. ಹಾಗಾಗಿ, ಇನ್‌ವಿಡ್ ಟೂಲ್ ಮೂಲಕ ಶೋಧ ನಡೆಸಿದಾಗ, ವಿಡಿಯೊದಲ್ಲಿ ಹಲವು ಫ್ರೇಮ್‌ಗಳು ಕಂಡು ಬಂದವು. ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಶೋಧಿಸಿದಾಗ, ಮಾರ್ಚ್ 2ರಂದು ಇಂಡಿಯಾ ಟುಡೆಯಲ್ಲಿ ಪ್ರಸಾರವಾದ ಅನಂತ್ ಅಂಬಾನಿಯವರ ಸಂದರ್ಶನದ ವಿಡಿಯೊವನ್ನು ತೋರಿಸಿತು. ಅನಂತ್ ಅಂಬಾನಿ ಯಾವುದೇ ಬೆಟ್ಟಿಂಗ್ ಆ್ಯಪ್ ಪರ ಪ್ರಚಾರ ಮಾಡಿಲ್ಲ. ಅವರ ಸಂದರ್ಶನದ ವಿಡಿಯೊವನ್ನು ತಿರುಚಿ, ಬೇರೆ ಧ್ವನಿಯನ್ನು ಅದಕ್ಕೆ ಜೋಡಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ಗುಂಡಣ್ಣ

ನುಡಿ ಬೆಳಗು

ನಮ್ಮ ನಮ್ಮ ಮನವ ಸಂತೈಸಿಕೊಂಡರೆ...



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಗುರುಕುಲದಲ್ಲಿ ವಿದ್ಯಾರ್ಥಿಯೊಬ್ಬ ವಿದ್ಯಾಭ್ಯಾಸ ಮುಗಿಸಿ ಮರಳಿ ಹೊರಟಿದ್ದ. ಎಲ್ಲರಿಂದ ಒಳ್ಳೆಯ ಶಿಷ್ಯ ಎಂದು ಹೊಗಳಿಸಿಕೊಂಡಿದ್ದನಾತ. ಗುರುಗಳು ಅವನಿಗೊಂದು ಕನ್ನಡಿಯನ್ನು ಕೊಟ್ಟರು. 'ಮಗೂ ಇದು ಅಮೂಲ್ಯವಾದ ಕನ್ನಡಿ. ಇದರಲ್ಲಿ ಮುಖ ನೋಡಿಕೊಂಡವರ ಸದ್ಗುಣ, ದುರ್ಗುಣವೆಲ್ಲ ಗೊತ್ತಾಗುತ್ತದೆ' ಎಂದರು. ಶಿಷ್ಯ ಆ ಕನ್ನಡಿಯನ್ನು ಮೊದಲು ಗುರುಗಳ ಕಡೆಗೇ ತಿರುಗಿಸಿದ. ಅವರಲ್ಲಿ ಕ್ರೋಧದ ಒಂದಂಶ ಇನ್ನೂ ಬಾಕಿ ಇರುವುದನ್ನು ನೋಡಿ, 'ಅಲ್ಲ, ನನ್ನ ಗುರುಗಳನ್ನು ಆದರ್ಶ ವ್ಯಕ್ತಿ ಎಂದು ಭಾವಿಸಿದ್ದೆ, ಇವರಲ್ಲೇ ದುರ್ಗುಣ ಇದೆಯಲ್ಲ' ಎಂದುಕೊಂಡು ತನಗಾದ ನಿರಾಸೆಯನ್ನು ನುಂಗಿಕೊಂಡು ಮನೆಕಡೆಗೆ ಹೊರಟ.

ಊರ ಹತ್ತಿರ ಬರುತ್ತಿದ್ದಂತೆಯೇ ಸ್ನೇಹಿತನೊಬ್ಬ ಸಿಕ್ಕಿದ. ಅವನನ್ನು ಪರೀಕ್ಷೆ ಮಾಡೋಣವೆಂದು ಕನ್ನಡಿ ಹಿಡಿದರೆ ಅವನಲ್ಲೂ ಕೆಟ್ಟ ಗುಣಗಳು... ಗೆಳೆಯನ ಮೇಲಿನ ನಂಬಿಕೆಯೂ ಹೋಯಿತು. ಮನೆಯ ಹತ್ತಿರ ಬರುತ್ತಿದ್ದಂತೆ ಸಂಬಂಧಿಯೊಬ್ಬ ಸಿಕ್ಕಿದ. ಅವನನ್ನು ಪರೀಕ್ಷೆ ಮಾಡಿದರೆ ಅವನಲ್ಲೂ ಅದೇ...

ಮನೆಗೆ ಹೋಗಿ ತಂದೆಯೆದುರು ಕನ್ನಡಿ ಹಿಡಿದರೆ ಕೆಟ್ಟ ಗುಣ ಕಾಣಲಿಕ್ಕಿಲ್ಲ, ಅಪ್ಪನಿಗೆ, ಅಮ್ಮನಿಗೆ ಸಮಾಜದಲ್ಲಿ ಎಷ್ಟೊಳ್ಳೆಯ ಹೆಸರಿದೆ ಎಂದೆಲ್ಲ ಯೋಚಿಸಿ ಅವರೆದುರು ಕನ್ನಡಿ ಹಿಡಿದರೆ ನೋಡುವುದೇನು... ಅವಗುಣಗಳು ಅವರನ್ನೂ ಬಿಟ್ಟಿಲ್ಲ... ಈತ ನಿರಾಸೆಯಿಂದ ಕುಸಿದು ಕುಳಿತ. ಅಲ್ಲ, ಎಂಥ ಇಬ್ಬಗೆಯ ಜಗತ್ತಿದು... ಎಲ್ಲರೂ ಹೊರಗೆ ಕಾಣುವುದೊಂದು, ಒಳಗಿರುವುದು ಇನ್ನೊಂದು. ಗುರುಗಳಿಂದ ಹಿಡಿದು ತಂದೆತಾಯಿಗಳವರೆಗೆ ಪ್ರತಿಯೊಬ್ಬರಲ್ಲೂ ಕೆಟ್ಟ ಗುಣಗಳಿವೆ. ಬೇಸರದಿಂದ ಮತ್ತೆ ಗುರುಕುಲಕ್ಕೆ ಹೋಗಿ ಗುರುಗಳನ್ನು ಕೇಳಿದ, 'ಗುರುಗಳೇ ಇದೆಂಥ ಕನ್ನಡಿಯನ್ನು ಕೊಟ್ಟಿದ್ದೀರಿ ನೀವು? ಎಲ್ಲರಲ್ಲೂ ಎಷ್ಟು ಕೆಟ್ಟ ಗುಣಗಳಿವೆ. ನಿಮ್ಮಲ್ಲಿಯೂ ಕೋಪದ ಅಂಶವೊಂದು ಉಳಿದುಕೊಂಡಿದೆ'.

ಗುರುಗಳು ಜೋರಾಗಿ ನಕ್ಕು ಒಂದು ನಿಮಿಷ ತಡಿ ಎಂದವರೇ ಆ ಕನ್ನಡಿಯನ್ನು ತೆಗೆದು ಶಿಷ್ಯನ ಮುಖಕ್ಕೆ ಹಿಡಿದರು. 'ನೋಡು ನಿನ್ನ ಪೂರ್ತಿ ಮನಸ್ಸು ಮೈಲಿಗೆಯಾಗಿದೆ, ಅದರಲ್ಲಿ ಒಳ್ಳೆಯ ಗುಣಗಳೇ ಕಾಣುತ್ತಿಲ್ಲ' ಅಂದವರೇ 'ಮಗೂ ನಾನು ನಿನಗೆ ಈ ಕನ್ನಡಿಯನ್ನು ಕೊಟ್ಟಿದ್ದು ನೀನು ನಿನ್ನ ಪ್ರತಿಬಿಂಬವನ್ನು ನೋಡಿಕೊಂಡು ನಿನ್ನದೇ ಅವಗುಣಗಳನ್ನು ಅರಿತುಕೊಂಡು ಸುಧಾರಣೆ ತಂದುಕೊಳ್ಳಲೆಂದು... ಆದರೆ ನೀನು ಬೇರೆಯವರ ಅವಗುಣಗಳ ಪಟ್ಟಿ ಮಾಡಿದೆಯೇ ಹೊರತು ನಿನ್ನಲ್ಲಿ ಯಾವ ಕೆಟ್ಟ ಗುಣವಿದೆ ಎಂಬುದನ್ನು ನೋಡಿಕೊಳ್ಳಲೇ ಇಲ್ಲ' ಅಂದರು. ಶಿಷ್ಯ ತಲೆತಗ್ಗಿಸಿದ.

ನಿಜ, ಈಗ ಜಗತ್ತಿನಲ್ಲಿ ಆಗುತ್ತಿರುವುದೂ ಹೀಗೆಯೇ... ಬೇರೆಯವರಲ್ಲಿ ಇರುವ ದೋಷಗಳ ಪಟ್ಟಿ ಮಾಡುತ್ತ ಮಾಡುತ್ತ ನಾವು ನಮ್ಮ ಅಂತರ್ಯವನ್ನು ಇಣುಕಿನೋಡುವುದನ್ನೇ ಮರೆತಿದ್ದೇವೆ. ಇತರರನ್ನು ದೂಷಿಸುವ ಮೊದಲು ನಾವೆಲ್ಲ ನಮ್ಮನ್ನು ಸುಧಾರಿಸಿಕೊಳ್ಳುವುದೇ ಇಂದಿನ ಅಗತ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜುಲೈ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತ್ರಯೋದಶಿ ಗಂ. 5-55 ನಂತರ ಚತುರ್ದಶಿ ಗಂ. 28-58 ನಕ್ಷತ್ರ: ಮೃಗಶಿರ ಗಂ. 27-55 ಯೋಗ: ಗಂಡ ಗಂ. 07-00, ಮಿಥುನ ಮಾಸದ 20 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-12 ಸೂರ್ಯಾಸ್ತ : 06-58

ಮುಸ್ಲಿಂ ದಿನಾಂಕ : 28 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 9, 11

ಮೇಷ: ತುಂಬ ಮೃದುವಾಗಿ ಬದುಕನ್ನು ಸಾಗಿಸಿದವರಿಗೆ ಕಳೆಯಬೇಕಾದ ಬದುಕು ಸ್ವಲ್ಪ ಕಷ್ಟಕರವೆಂದು ತೋರಬಹುದು. ಹಣ್ಣು ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಣೆಯಲ್ಲಿ ತೊಂದರೆಗಳಾಗಬಹುದು.

ವೃಷಭ: ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಎಚ್ಚರಿಕೆಯ ಮಾತುಗಳು ಹಿರಿಯರಿಂದ ಕೇಳಬೇಕಾಗಬಹುದು. ಹಾಗೆ ನಡೆದುಕೊಳ್ಳಿ. ಮದುವೆಯ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ದುಡುಕುವುದು ಬೇಡ.

ಮಿಥುನ: ಮುಖ್ಯ ವ್ಯಕ್ತಿಯ ಬಳಿ ಮಾತನಾಡುವಾಗ ಪೂರ್ವ ತಯಾರಿ ಮಾಡಿಕೊಳ್ಳುವುದು ಪ್ರಮುಖವಾಗುವುದು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಲಾಭಾಂಶ ವೃದ್ಧಿ. ದೇವತಾ ಅನುಗ್ರಹ ಸದಾ ಇರಲಿದೆ.

ಕರ್ಕಾಟಕ: ಸುಲಭವಾಗಿ ಕೆಲವೊಂದು ವಿಷಯಗಳು ಎಲ್ಲರಿಗೂ ಲಭ್ಯವಾಗುವುದು; ಕೆಲವೊಂದು ಸಮಯದಲ್ಲಿ ಕುಟುಂಬದವರಿಗೆ ತೊಂದರೆಯಾಗುತ್ತದೆ. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಸಿಂಹ: ರಾಜಕೀಯದವರಿಂದ ಸಾಮಾಜಿಕ ಕಾರ್ಯ ಸಾಧಿಸಿಕೊಳ್ಳುವಲ್ಲಿ ಪಾತ್ರ ಮುಖ್ಯವಾಗಿರಲಿದೆ. ವರ್ಗಾವಣೆಯಿಂದಾಗಿ ದೂರದೂರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ. ಅಕ್ಕ ಪಕ್ಕದವರಲ್ಲಿ ಅನುಕಂಪ ತೋರುವಿರಿ.

ಕನ್ಯಾ: ದೇಹ ಪ್ರಕೃತಿಗೆ ಸರಿ ಹೊಂದದಂಥ ಆಹಾರವನ್ನು ಸ್ವೀಕರಿಸಿದ ಕಾರಣಕ್ಕೆ ಅನಾರೋಗ್ಯ ಉಂಟಾಗುವುದು. ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಹೊಂದುವಿರಿ.

ತುಲಾ: ಸಹೋದರ ಅಥವಾ ಸಹೋದರಿಯರ ಆರೋಗ್ಯ ವಿಚಾರವಾಗಿ ಹಣ, ಸಮಯ ಕೊಡುವಿರಿ. ನಿತ್ಯ ಕೆಲಸಗಳನ್ನೇ ವಿಶೇಷವಾಗಿ ಮಾಡುವ ರೀತಿಯನ್ನು ಕಂಡುಕೊಳ್ಳುವಿರಿ. ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವ ಬಗ್ಗೆ ಯೋಚಿಸಿ.

ವೃಶ್ಚಿಕ: ಆಸ್ತಿಯನ್ನು ಸೇರಬೇಕಾದವರಿಗೆಲ್ಲರಿಗೂ ಸೇರಿಸುವಂಥ ಕೆಲಸವನ್ನು ಮಾಡಬೇಕಾದೀತು . ಪ್ರಾರಂಭಿಕ ವಿಫಲತೆಯ ಬಗ್ಗೆ ನೀವು ನಿರಾಶೆಗೊಳ್ಳ ಬಾರದು. ಅಧಿಕ ಸುತ್ತಾಟದಿಂದ ಆಯಾಸವಾಗುವುದು.

ಧನು: ಸರಿ ರೀತಿಯಲ್ಲಿ ರೂಪುರೇಷೆಯನ್ನು ಹಾಕಿಕೊಳ್ಳದೆ ಶುರು ಮಾಡಿದ ಕೆಲಸವು ಶುರುವಿನಲ್ಲಿ ವಿಘ್ನಗಳನ್ನು ಎದುರಿಸುವುದು. ತಾಂತ್ರಿಕ ಕ್ಷೇತ್ರದಲ್ಲಿರುವವರು ಸಾಧನೆಯನ್ನು ಮಾಡುವಿರಿ. ಬಟ್ಟೆ ವ್ಯಾಪಾರಿಗಳಿಗೆ ಲಾಭವಿರುವುದು.

ಮಕರ: ಅಪ್ರಿಯ ಸತ್ಯವನ್ನು ಸ್ವೀಕರಿಸಲು ಅಸಾಧ್ಯವಾಗುವಂಥ ಹಿರಿಯ ನಾಗರಿಕರ ಬಳಿ ಹೇಳದಿರುವುದು ಒಳ್ಳೆಯದೆಂದು ಯೋಚಿಸುವಿರಿ. ಹೊಸ ಕೆಲಸಗಳ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳುವಿರಿ.

ಕುಂಭ: ಭಾಗವತ ಅಥವಾ ಮಹಾಭಾರತದಂತಹ ಧಾರ್ಮಿಕ ಉಪನ್ಯಾಸಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುವ ಸಾಧ್ಯತೆ ಇದೆ. ವ್ಯವಹಾರ ನಿಮಿತ್ತವಾಗಿ ವಿದೇಶಯಾನವನ್ನು ಮಾಡುವ ಅವಕಾಶ ಸಿಗಲಿದೆ.

ಮೀನ: ವೃತ್ತಿ ವಿಷಯದಲ್ಲಿ ಏಳುಬೀಳುಗಳು ಸಹಜ ಎಂದು ಕಂಡುಕೊಂಡದ್ದನ್ನು ಕಿರಿಯರಿಗೂ ತಿಳಿಸುವಂಥ ಕೆಲಸ ಮಾಡುವಿರಿ. ಆರ್ಥಿಕವಾಗಿ ಬೆಳೆಯುವ ಅವಕಾಶವನ್ನು ಪಡೆಯಲಿದ್ದೀರಿ. ದೂರ ಸಂಚಾರದ ಸಾಧ್ಯತೆ ಇದೆ.

ಪದಬಂಧ 5731

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚರ್ಚೆಗೆ ಗ್ರಾಸವಾದ ವಾದ (3)
3.ಪ್ರಯಾಸವಾಗದ ಪಯಣ (3)
5.ಅಭಿವ್ಯಕ್ತಿಗೊಳಿಸುತ್ತಿರುವ ಮನುಷ್ಯ (2)
6.ಇದೇ ಎಲ್ಲವೂ (3)
7.ವಿಕಸನದಲ್ಲಿರುವ ಗಲೀಜುಕಾಣುತ್ತಿದೆಯೇ? (2)
9.ನಗರದಿಂದ ತಂದಿರುವ ಆಭರಣ (2)
11.ಪುಷ್ಪಗಳನ್ನು ಜೋಡಿಸಿಡುವ ಕರಂಡ (3)
13.ಜವಾನನ ಸುತ್ತ ನೆರೆದಿರುವ ಮಂದಿ (2)
14.ಒಳ್ಳೆಯ ಸ್ವಭಾವವಿದು (3)
15.ನೃತ್ಯವನ್ನು ಈ ರೀತಿಯೂ ಹೇಳುವರು (3)

ಮೇಲಿಂದ ಕೆಳಕ್ಕೆ

1.ಮೋಕ್ಷಕ್ಕೊಂದು ಪರ್ಯಾಯ ಪದ (3)
2. ಆ ದಿವಸ ತಂದಿಟ್ಟಿರುವ ಕಾಳುಕಡಿ (3)
3.ಇದು ಶ್ರೇಷ್ಠವಾದುದು (3)
4.ಸರಿ ಸಮಾನನದವನು (3)
5.ಕಳೆಯುವ ಲೆಕ್ಕವಿದು (5)
8.ಕಡಲಿನ ಮೇಲೆ ಕೈಗೊಳ್ಳುವ ಪಯಣ (5)
10.ಕತ್ತಿಯನ್ನು ಇಡುವ ಕೋಶ (3)
11.ಪುಷ್ಪದ ಶರ ಇಲ್ಲಿದೆ (3)
12.ತಡವೆಂದು ಹೀಗೆನ್ನಿ (3)
13.ಜನರ ನಡುವೆ ನುಸುಳಿದ ಆಳು (3)



5730ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 4.ತಿಮಿಂಗಿಲ 6.ಕಲರವ 7.ಕಡಿಮೆ 9.ಗರತಿ 10.ದುರುಪಯೋಗ 11.ಆಕಳು 12.ನಸುಕು 16.ವ್ಯರ್ಥಾಲಾಪ 17.ಮಾರಾಮಾರಿ

ಮೇಲಿಂದ ಕೆಳಕ್ಕೆ: 1.ಅತಿರೇಕ 2.ಫಲಕ 3.ತಕಲಿ 4.ಅವನತಿ 8.ಮೆದುಳು 9.ಗಗನ 11.ಆಯವ್ಯಯ 13.ಕುಕ್ಕರಿಸು 14.ಶಪಥ 15.ಗುಮಾನಿ

ಸುಡೊಕು 6116

1		9		2			8	
	6				9		5	2
3	8			4	5			
2							6	
		4		3				1
5					2			
		5		9			7	6
7			2		6	8		
9	4			7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6115 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಷೇರುಪೇಟೆ ವಹಿವಾಟು 545



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,123
ಇಂದಿನ ಅಂತ್ಯ	24,286
▲	162
ದಿನದ ಗರಿಷ್ಠ	24,309

ವಿನಿಮಯ ದರ

$ ಡಾಲರ್	83.49
£ ಪೌಂಡ್	106.06
€ ಯುರೊ	89.84
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹975 (975)
ಸೂರ್ಯಕಾಂತಿ (ರಿಫೈನ್ಡ್)	₹970 (972)
ಪಾಮೋಲಿನ್	₹922 (927)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹280-455
ದ್ವಿತಳಿ (ಬಿ.ವಿ)	₹333-630

ಮುಂಬೈ ಧಾರಣೆ

ಶೇಂಗಾ

03-07-2024

ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	925 (925)
ಪಾಮ್ ವಾರದ ಡೆಲಿವರಿ	920 (925)
ಸೂರ್ಯಕಾಂತಿ ಎಣ್ಣೆ ಕಚ್ಚಾ	912 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,000 (71,500)

ಬೆಳ್ಳಿ ಕೆ.ಜಿ ₹89,600 (87,950)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹202.50
ಆರ್‌ಎಸ್‌ಎಸ್-5	₹195
ಗುಡ್ ಲಾಟ್ ₹182	(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-7700
ಬೆಂಗಳೂರು	₹8000-12000
ದಾವಣಗೆರೆ	₹6700-6800
ತಿಪಟೂರು	₹8400-9500

ಹೊಸ ಬೇಡಿಕೆಗಳ ಹೆಚ್ಚಳದಿಂದ ಸೂಚ್ಯಂಕ ಏರಿಕೆ: ಬಿರುಸುಗೊಂಡ ನೇಮಕಾತಿ

ಸೇವಾ ವಲಯದ ಚಟುವಟಿಕೆ ಚುರುಕು

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಜೂನ್ ತಿಂಗಳಲ್ಲಿ ಚುರುಕುಗೊಂಡಿವೆ ಎಂದು ಮಾಸಿಕ ಸಮೀಕ್ಷೆ ವರದಿ ಬುಧವಾರ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕವು, ಮೇ ತಿಂಗಳಿನಲ್ಲಿ 60.2 ದಾಖಲಾಗಿತ್ತು. ಇದು ಜೂನ್ ತಿಂಗಳಲ್ಲಿ 60.5ಕ್ಕೆ ಏರಿಕೆಯಾಗಿದೆ. ಸೇವಾ ವಲಯದ ಚಟುವಟಿಕೆಗಳು ಮೇ ತಿಂಗಳಿನಲ್ಲಿ ಐದು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿತ್ತು.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸಶಕ್ತವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದರ್ಥ.

ದೇಶೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಸ ಬೇಡಿಕೆಗಳು ಹೆಚ್ಚಿದ್ದರಿಂದ ಜೂನ್‌ನಲ್ಲಿ ದೇಶದ ಸೇವಾ ವಲಯದ ಚಟುವಟಿಕೆಯ ಬೆಳವಣಿಗೆಗೆ ವೇಗ ದೊರಕಿದೆ ಎಂದು

ಸೇವಾ ವಲಯದ ಸೂಚ್ಯಂಕ



ಎಚ್‌ಎಸ್‌ಬಿಸಿಯ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ. ಈ ಚಟುವಟಿಕೆಗಳ ಏರಿಕೆಯು ಸೇವಾ ಸಂಸ್ಥೆಗಳು ತಮ್ಮ ಸಿಬ್ಬಂದಿ ನೇಮಕಾತಿಯ ಹೆಚ್ಚಳಕ್ಕೆ ಉತ್ತೇಜನ ನೀಡಿತು ಎಂದು ತಿಳಿಸಿದ್ದಾರೆ.

ಸದೃಢ ಬೇಡಿಕೆ ಮತ್ತು ಹೊಸ ವ್ಯಾಪಾರವು ಸೂಚ್ಯಂಕದ ಏರಿಕೆಗೆ ಕಾರಣವಾಗಿದೆ. ದೇಶೀಯ ಸೇವಾ ಪೂರೈಕೆದಾರರಿಂದ ಹೊಸ ಬೇಡಿಕೆಗಳ ಸ್ವೀಕಾರವು ಜೂನ್‌ನಲ್ಲಿ ಹೆಚ್ಚಾಗುತ್ತಲೇ ಇದೆ. ಏಷ್ಯಾ, ಆಸ್ಟ್ರೇಲಿಯಾ, ಯುರೋಪ್, ಲ್ಯಾಟಿನ್ ಅಮೆರಿಕ, ಮಧ್ಯಪ್ರಾಚ್ಯ ಮತ್ತು ಅಮೆರಿಕದಿಂದಲೂ ಹೊಸ ಬೇಡಿಕೆಗಳಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಆಹಾರ, ಇಂಧನ ಮತ್ತು ಕಾರ್ಮಿಕ ವೆಚ್ಚ ಹೆಚ್ಚಳದ ಕಾರಣದಿಂದಾಗಿ ಸೇವಾ ಪೂರೈಕೆದಾರರು ತಮ್ಮ ಸರಾಸರಿ ವೆಚ್ಚದಲ್ಲಿ ಮಧ್ಯಮ ಹೆಚ್ಚಳವನ್ನು ದಾಖಲಿಸಿದ್ದಾರೆ. ಫೆಬ್ರುವರಿಯಿಂದ ಮಾರಾಟ ದರವು ನಿಧಾನಗತಿಯಲ್ಲಿ ಏರಿತು ಎಂದು ವರದಿ ತಿಳಿಸಿದೆ.

ತಯಾರಿಕಾ ವೆಚ್ಚವು ಮಂದಗತಿಯಲ್ಲಿ ಏರಿಕೆಯಾಗಿದೆ. ಇದರಿಂದ ಉತ್ಪಾದನಾ ವೆಚ್ಚವು ಹೆಚ್ಚಳವಾಗಿದೆ. ಒಟ್ಟಾರೆಯಾಗಿ ಸೇವಾ ಪೂರೈಕೆದಾರರು ಮುಂಬರುವ 12 ತಿಂಗಳಲ್ಲಿ ವ್ಯಾಪಾರ ಚಟುವಟಿಕೆಯಲ್ಲಿ ಏರಿಕೆಯಾಗುವ ವಿಶ್ವಾಸವನ್ನು ಹೊಂದಿದ್ದಾರೆ ಎಂದು ಭಂಡಾರಿ ತಿಳಿಸಿದ್ದಾರೆ.

ಉತ್ಪಾದನಾ ಸೂಚ್ಯಂಕ ಏರಿಕೆ: ಇಂಡಿಯಾ ಕಾಂಪೊಸಿಟ್ ಉತ್ಪಾದನಾ ಸೂಚ್ಯಂಕವು 60.9ಕ್ಕೆ ಏರಿಕೆಯಾಗಿದೆ. ಇದು ಮೇ ತಿಂಗಳಲ್ಲಿ 60.5 ದಾಖಲಾಗಿತ್ತು.

ಹೆಚ್ಚಿನ ಹೊಸ ಬೇಡಿಕೆಗಳ ಒಳಹರಿವಿನಿಂದ ಕಾಂಪೊಸಿಟ್ ಪಿಎಂಐ ಜೂನ್‌ನಲ್ಲಿ ಏರಿಕೆಯಾಗಿದೆ. ಸೇವಾ ವಲಯದ ಸಂಸ್ಥೆಗಳಿಗಿಂತ ತಯಾರಿಕಾ ಸಂಸ್ಥೆಗಳು ಸೂಚ್ಯಂಕದ ಏರಿಕೆಗೆ ಕೊಡುಗೆ ನೀಡಿದವು ಎಂದು ಭಂಡಾರಿ ತಿಳಿಸಿದ್ದಾರೆ.

2005ರ ಡಿಸೆಂಬರ್‌ಗೆ ಹೋಲಿಸಿದರೆ ಈ ತಿಂಗಳಲ್ಲಿ ಖಾಸಗಿ ವಲಯದ ಉದ್ಯೋಗ ನೇಮಕಾತಿಯು ಹೆಚ್ಚಳವಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

ಸೇವಾ ವಲಯದ 400 ಕಂಪನಿಗಳಿಂದ ಅಭಿಪ್ರಾಯ ಸಂಗ್ರಹಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಸುದ್ದಿ 2 ನಿಮಿಷ

ಬಡತನ ಪ್ರಮಾಣ ಶೇ 8.5ಕ್ಕೆ ಇಳಿಕೆ

ನವದೆಹಲಿ(ಪಿಟಿಐ): ಸಾಂಕ್ರಾಮಿಕವು ಒಡ್ಡಿದ್ದ ಸವಾಲಿನ ಹೊರತಾಗಿಯೂ ಭಾರತದಲ್ಲಿ 2022–24ರ ಅವಧಿಯಲ್ಲಿ ಬಡತನ ಪ್ರಮಾಣ ಶೇ 8.5ಕ್ಕೆ ಇಳಿಕೆಯಾಗಿದೆ. 2011-12ರಲ್ಲಿ ಬಡತನ ಪ್ರಮಾಣ ಶೇ 21.2ರಷ್ಟಿತ್ತು ಎಂದು ಚಿಂತಕರ ಚಾವಡಿ ಎನ್‌ಸಿಎಇಆರ್ ಸಂಶೋಧನಾ ವರದಿ ಹೇಳಿದೆ.

ಭಾರತದ ಮಾನವ ಅಭಿವೃದ್ಧಿ ಸಮೀಕ್ಷೆಯ (ಐಎಚ್‌ಡಿಎಸ್) 1, 2 ಮತ್ತು 3ನೇ ಆವೃತ್ತಿಯ ದತ್ತಾಂಶಗಳನ್ನು ಬಳಸಿಕೊಂಡು ಎನ್‌ಸಿಎಇಆರ್‌ನ ಸೋನಾಲ್ದೆ ದೇಸಾಯಿ ಅವರು ರಚಿಸಿದ 'ರಿಥಿಂಕಿಂಗ್ ಸೋಷಿಯಲ್ ಸೇಫ್ಟಿ ನೆಟ್ಸ್ ಇನ್ ಎ ಚೇಂಜಿಂಗ್ ಸೊಸೈಟಿ' ಕುರಿತ ವರದಿಯಲ್ಲಿ ಇದನ್ನು ಉಲ್ಲೇಖಿಸಲಾಗಿದೆ.

ಐಎಚ್‌ಡಿಎಸ್ ಪ್ರಕಾರ, ಭಾರತದಲ್ಲಿ ಬಡತನ ಪ್ರಮಾಣವು ಗಣನೀಯವಾಗಿ ತಗ್ಗುತ್ತಿದೆ. 2004–05ರಲ್ಲಿ

ಶೇ 38.6ರಷ್ಟಿದ್ದ ಬಡತನ ಪ್ರಮಾಣವು 2011–12ರ ವೇಳೆಗೆ ಶೇ 21.2ಕ್ಕೆ ತಗ್ಗಿತ್ತು. ಇದೀಗ ಶೇ 8.5ಕ್ಕೆ ಇಳಿಕೆಯಾಗಿದೆ. 10 ವರ್ಷದಲ್ಲಿ ಬಡತನ ಪ್ರಮಾಣ ಶೇ 12.7ರಷ್ಟು ಇಳಿಕೆಯಾಗಿದೆ.

ದೀರ್ಘಕಾಲದ ಬಡತನವನ್ನು ನಿವಾರಿಸಲು ಕೈಗೊಳ್ಳುವ ಸಾಂಪ್ರದಾಯಿಕ ತಂತ್ರಗಳು ಕಡಿಮೆ ಪರಿಣಾಮಕಾರಿಯಾಗಬಹುದು ಎಂದೂ ವರದಿಯು ಹೇಳಿದೆ.

ಭಾರತವು ಅಭಿವೃದ್ಧಿಯತ್ತ ಸಾಗುತ್ತಿದ್ದು, ಸಾಮಾಜಿಕ ಸಂರಕ್ಷಣಾ ವ್ಯವಸ್ಥೆಗಳು, ಸಾಮಾಜಿಕ ಪರಿವರ್ತನೆಯ ವೇಗದೊಂದಿಗೆ ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳುವುದು ಭಾರತಕ್ಕೆ ಪ್ರಮುಖ ಸವಾಲಾಗಿದೆ ಎಂದು ವರದಿ ತಿಳಿಸಿದೆ.

ಇದೇ ಸಂದರ್ಭದಲ್ಲಿ, ಆರ್ಥಿಕ ಬೆಳವಣಿಗೆಯ ಯುಗದಲ್ಲಿ ವಿಪುಲ ಅವಕಾಶಗಳು ದೊರೆತಾಗ, ದೀರ್ಘಾವಧಿಯಲ್ಲಿ ಬಡತನ ಪ್ರಮಾಣ ಕಡಿಮೆಯಾಗಬಹುದು. ಆದರೆ ನೈಸರ್ಗಿಕ ವಿಪತ್ತು, ಅನಾರೋಗ್ಯ ಮತ್ತು ಸಾವುಗಳಿಗೆ ಸಂಬಂಧಿಸಿದ ಆಕಸ್ಮಿಕ ಘಟನೆಗಳು ಹಾಗೂ ಉದ್ಯೋಗ-ನಿರ್ದಿಷ್ಟ ಅವಕಾಶಗಳಲ್ಲಿನ ಬದಲಾವಣೆಗಳು ಹೆಚ್ಚು ಮುಖ್ಯವಾಗಬಹುದು ಎಂದು ಹೇಳಿದೆ.

ಫೆಡರಲ್ ಬ್ಯಾಂಕ್ ನೀಡಿದ ಸಾಲ ಏರಿಕೆ

ನವದೆಹಲಿ (ಪಿಟಿಐ): ಖಾಸಗಿ ವಲಯದ ಫೆಡರಲ್ ಬ್ಯಾಂಕ್ 2024–25ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ನೀಡಿದ ಸಾಲದ ಪ್ರಮಾಣದಲ್ಲಿ ಶೇ 20ರಷ್ಟು ಏರಿಕೆಯಾಗಿದೆ. ಸಾಲದ ಮೊತ್ತವು ₹2.24 ಲಕ್ಷ ಕೋಟಿ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಒಟ್ಟು ಮುಂಗಡವು (ಸಾಲ) ₹1.86 ಲಕ್ಷ ಕೋಟಿಯಾಗಿತ್ತು ಎಂದು ಷೇರುಪೇಟೆಗೆ ಬ್ಯಾಂಕ್ ಬುಧವಾರ ತಿಳಿಸಿದೆ. ಚಿಲ್ಲರೆ ಸಾಲದ ಪುಸ್ತಕ ಶೇ 25ರಷ್ಟು ಮತ್ತು ಸಗಟು ಸಾಲದ ಪುಸ್ತಕವು ಶೇ 14ರಷ್ಟು ಬೆಳವಣಿಗೆಯಾಗಿದ್ದು, ಅನುಪಾತವು ಕ್ರಮವಾಗಿ 56:44 ಆಗಿದೆ.

ಬ್ಯಾಂಕ್‌ನ ಠೇವಣಿಯು ₹2.22 ಲಕ್ಷ ಕೋಟಿಯಿಂದ ₹2.66 ಲಕ್ಷ ಕೋಟಿಗೆ ಏರಿಕೆಯಾಗಿದೆ. ಠೇವಣಿ ಶೇ 20ರಷ್ಟು ಹೆಚ್ಚಳ ಕಂಡಿದೆ. ಚಾಲ್ತಿ ಖಾತೆ ಮತ್ತು ಉಳಿತಾಯ ಠೇವಣಿಯು (ಸಿಎಎಸ್‌ಎ) ಶೇ 31 ರಿಂದ ಶೇ 29ಕ್ಕೆ ಇಳಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ರಾಜ್ಯದಲ್ಲಿ ₹1,245 ಕೋಟಿ ಹೂಡಿಕೆ

ದಕ್ಷಿಣ ಕೊರಿಯಾದ ವೈಜಿ–1 ಕಂಪನಿಯಿಂದ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ₹1,245 ಕೋಟಿ ಹೂಡಿಕೆ ಮಾಡುವುದಾಗಿ ದಕ್ಷಿಣ ಕೊರಿಯಾದ ಜಾಗತಿಕ ಮಟ್ಟದ ಟೂಲ್ಸ್ ತಯಾರಿಕಾ ಕಂಪನಿ ವೈಜಿ-1 ಘೋಷಿಸಿದೆ.

ರಾಜ್ಯಕ್ಕೆ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ನೇತೃತ್ವದಲ್ಲಿ ಉನ್ನತ ಮಟ್ಟದ ನಿಯೋಗವು ದಕ್ಷಿಣ ಕೊರಿಯಾಕ್ಕೆ ಐದು ದಿನಗಳ ಭೇಟಿ ಕೈಗೊಂಡಿದೆ. ನಿಯೋಗದ ಜತೆಗೆ ಬುಧವಾರ ನಡೆದ ಸಭೆಯ ಸಂದರ್ಭದಲ್ಲಿ ವೈಜಿ-1 ಈ ಘೋಷಣೆ ಮಾಡಿದೆ.

'ಕರ್ನಾಟಕದಲ್ಲಿ ಕೊರಿಯಾ ಭಾಷೆ ಕಲಿಕಾ ಮತ್ತು ತರಬೇತಿ ಕೇಂದ್ರ ಸ್ಥಾಪನೆ, ಇಂಧನ-ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯಾಧುನಿಕ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಲಾಗುವುದು' ಎಂದು ಕಂಪನಿಯ ಮುಖ್ಯಸ್ಥ ಹೊ ಕ್ಯೂನ್ ಸಾಂಗ್ ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಎಂ.ಬಿ.ಪಾಟೀಲ ನೇತೃತ್ವದ ನಿಯೋಗದೊಂದಿಗೆ ನಡೆದ ಸಭೆಯಲ್ಲಿ ಘೋಷಣೆ
- ಬಂಡವಾಳ ಆಕರ್ಷಣೆಗೆ ದಕ್ಷಿಣ ಕೊರಿಯಾ ಭೇಟಿಯಲ್ಲಿರುವ ನಿಯೋಗ
- ರಾಜ್ಯದಲ್ಲಿ ಹೂಡಿಕೆಗೆ ಆಸಕ್ತಿ ತೋರಿದ ಕ್ರಾಫ್ಟನ್ ಇಂಕ್

ಕ್ರಾಫ್ಟನ್ ಇಂಕ್ ಆಸಕ್ತಿ: ಜಾಗತಿಕ ಮಟ್ಟದ ಗೇಮಿಂಗ್ ಕಂಪನಿ ಕ್ರಾಫ್ಟನ್ ಇಂಕ್ ಸಹ ಮುಂದಿನ 2–3 ವರ್ಷಗಳಲ್ಲಿ ₹1,245 ಕೋಟಿ ಬಂಡವಾಳ ಹೂಡಿಕೆ ಮಾಡಲು ಆಸಕ್ತಿ ತೋರಿಸಿದೆ. ಕಂಪನಿಯು ಭಾರತದ ವಿವಿಧ ನವೋದ್ಯಮಗಳಲ್ಲಿ ₹1,162 ಕೋಟಿ ಹೂಡಿಕೆಯನ್ನು ಈಗಾಗಲೇ ಮಾಡಿದೆ. ಇ-ಕ್ರೀಡೆಗಳು ಮತ್ತು ಮೊಬೈಲ್ ಫೋನ್ ಗೇಮಿಂಗ್ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮತ್ತು ಭಾರತದ್ದೇ ಗೇಮಿಂಗ್ ಎಂಜಿನಿಯರ್‌ಗಳನ್ನು ನೇಮಕ ಮಾಡಿಕೊಳ್ಳುವ ಸಂಬಂಧ ಕಂಪನಿಯೊಂದಿಗೆ ಚರ್ಚಿಸಲಾಗಿದೆ ಎಂದು ನಿಯೋಗವು ತಿಳಿಸಿದೆ.

ರಾಜ್ಯದಲ್ಲಿ ವಿದ್ಯುತ್ ಚಾಲಿತ ವಾಹನಗಳ ಮಾರುಕಟ್ಟೆಯ ತ್ವರಿತ ವಿಸ್ತರಣೆ ಮತ್ತು ಆ ಕ್ಷೇತ್ರದಲ್ಲಿ ಹೂಡಿಕೆಗೆ ಇರುವ ವಿಪುಲ ಅವಕಾಶಗಳ ಬಗ್ಗೆ ಈ ಭೇಟಿಯ ವೇಳೆ ಕೊರಿಯಾದ ಕಂಪನಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ನಿಯೋಗವು ಮಾಹಿತಿ ನೀಡಿದೆ.

'ಪ್ರಚಂಡ' ರಾಜೀನಾಮೆಗೆ ಹೆಚ್ಚಿದ ಒತ್ತಡ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಆಡಳಿತಾರೂಢ ಸರ್ಕಾರದ ಪಾಲುದಾರ ಪಕ್ಷಗಳಾದ ಸಿಪಿಎನ್-ಯುಎಂಎಲ್ ತಮ್ಮ ಬೆಂಬಲವನ್ನು ವಾಪಸ್ ಪಡೆದ ಬೆನ್ನಲ್ಲೇ, ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ' ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ನೇಪಾಳಿ ಕಾಂಗ್ರೆಸ್ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ಆಗ್ರಹಿಸಿದ್ದಾರೆ.

ತಮ್ಮ ನಿವಾಸದಲ್ಲಿ ಪಕ್ಷದ ಮಹತ್ವದ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅತಿ ದೊಡ್ಡ ಪಕ್ಷಗಳಾಗಿರುವ ಎನ್‌ಸಿ ಮತ್ತು ಯುಎಂಎಲ್ ಸರ್ಕಾರ ರಚನೆಗೆ ಸಿದ್ಧವಾಗಿದ್ದು, ಪ್ರಧಾನಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು' ಎಂದು ಹೇಳಿದರು.

ಮಾಜಿ ಪ್ರಧಾನಿ ದೇವುಬಾ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ-ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ (ಸಿಪಿಎನ್-ಯುಎಂಎಲ್) ಅಧ್ಯಕ್ಷ ಮತ್ತು ಮಾಜಿ ಪ್ರಧಾನಿ ಕೆ.ಪಿ. ಶರ್ಮ ಒಲಿ ಅವರು ಮೈತ್ರಿಸರ್ಕಾರ ರಚನೆಗೆ ತೀರ್ಮಾನಿಸಿದ್ದಾರೆ.

ಲೇಬರ್ ಪಕ್ಷಕ್ಕೆ ಭಾರಿ ಬಹುಮತದ ನಿರೀಕ್ಷೆ

ಬ್ರಿಟನ್: ಇಂದು ಮತದಾನ

ಲಂಡನ್ (ಪಿಟಿಐ/ರಾಯಿಟರ್ಸ್/ಎಎಫ್‌ಪಿ): ಬ್ರಿಟನ್ ಸಂಸತ್ತಿಗೆ (ಹೌಸ್ ಆಫ್ ಕಾಮನ್ಸ್) ಬುಧವಾರ ಮತದಾನ ನಡೆಯಲಿದ್ದು ಅಂದೇ ಫಲಿತಾಂಶ ಹೊರಬೀಳಲಿದೆ. 14 ವರ್ಷಗಳ ಕನ್ಸರ್ವೇಟಿವ್ ಪಕ್ಷದ ಅಧಿಕಾರ ಕೊನೆಗೊಳ್ಳಲಿದೆ ಎಂದೇ ಚುನಾವಣಾಪೂರ್ವ ಸಮೀಕ್ಷೆಗಳು ಅಂದಾಜಿಸಿವೆ. ಭಾರತ ಮೂಲದ ಹಲವು ಅಭ್ಯರ್ಥಿಗಳು ಕಣದಲ್ಲಿದ್ದು ಭಾರತದ ಪಾಲಿಗೂ ಫಲಿತಾಂಶವು ಪ್ರಾಮುಖ್ಯ ಪಡೆದಿದೆ.

ರಿಷಿ ಸುನಕ್

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಅವಧಿಗೂ ಮೊದಲೇ ಚುನಾವಣೆ ಘೋಷಣೆ ಮಾಡಿದ್ದು, ಅಚ್ಚರಿಗೆ ಕಾರಣವಾಗಿತ್ತು. ಚುನಾವಣೆ ಘೋಷಣೆಯಾದಾಗಿನಿಂದಲೂ ಲೇಬರ್ ಪಕ್ಷವು ಬಹುಮತದೊಂದಿಗೆ ಅಧಿಕಾರಕ್ಕೆ ಏರಲಿದೆ ಎಂದು ಅಂದಾಜಿಸಲಾಗಿತ್ತು. ಪ್ರಚಾರವು ಅಂತ್ಯವಾಗುವ ಹೊತ್ತಿನಲ್ಲಿ ಕೀರ್ ಸ್ಟಾರ್ಮರ್ ಅವರು ಭಾರಿ ಬಹುಮತದೊಂದಿಗೆ ಪ್ರಧಾನಿಯಾಗಲಿದ್ದಾರೆ ಎನ್ನಲಾಗುತ್ತಿದೆ. ವಿಶೇಷವೆಂದರೆ, ಕನ್ಸರ್ವೇಟಿವ್ ಪಕ್ಷದ ಹಲವು ಸಚಿವರುಗಳೇ ಲೇಬರ್ ಪಕ್ಷವು 'ಸೂಪರ್‌ಮೆಜಾರಿಟಿ'ಯೊಂದಿಗೆ ಅಧಿಕಾರಕ್ಕೆ ಬರಲಿದ್ದಾರೆ ಎನ್ನುತ್ತಿದ್ದಾರೆ.

'ಸೂಪರ್‌ಮೆಜಾರಿಟಿ' ಜಟಾಪಟಿ: ಚುನಾವಣಾಪೂರ್ವ ಸಮೀಕ್ಷೆಗಳು ಲೇಬರ್ ಪಕ್ಷಕ್ಕೆ ಬಹುಮತ ನೀಡುತ್ತಿವೆ. ಇದನ್ನೇ ಪ್ರಚಾರ ತಂತ್ರವಾಗಿಸಿಕೊಂಡ ಕನ್ಸರ್ವೇಟಿವ್ ಪಕ್ಷವು, 'ಲೇಬರ್ ಪಕ್ಷಕ್ಕೆ ಭಾರಿ ಬಹುಮತ ಸಿಗಲಿದೆ. ಅವರು ನಿಮ್ಮ ಮೇಲೆ ಹೆಚ್ಚಿಗೆ ತೆರಿಗೆ ವಿಧಿಸಲಿದ್ದಾರೆ. ಇದರಿಂದ ತಪ್ಪಿಸಿಕೊಳ್ಳಬೇಕು ಎಂದರೆ ನಮಗೆ ಮತ ನೀಡಿ' ಎನ್ನುತ್ತಿದ್ದಾರೆ. ಪ್ರಧಾನಿ ರಿಷಿ ಸುನಕ್ ಅವರು ಕೂಡ ಬುಧವಾರ ಇದನ್ನೇ ಹೇಳಿದ್ದಾರೆ.

ಈ ಪ್ರಚಾರ ತಂತ್ರಕ್ಕೆ ಪ್ರತಿಕ್ರಿಯಿಸಿರುವ ಕೀರ್ ಸ್ಟಾರ್ಮರ್ ಅವರು, 'ನಮಗೆ ಮತ ನೀಡದಂತೆ ಮಾಡುವ ತಂತ್ರ ಇದು. ಜನರು ಮನೆಯಲ್ಲಿಯೇ ಕೂರುವಂತೆ ಮಾಡಲು ಕನ್ಸರ್ವೇಟಿವ್ ಪಕ್ಷವು ಯತ್ನಿಸುತ್ತಿದೆ' ಎಂದಿದ್ದಾರೆ.

ಸರಳ ಬಹುಮತಕ್ಕಿಂತಲೂ ಅಧಿಕ ಸಂಖ್ಯೆಯ ಸ್ಥಾನಗಳನ್ನು ಗೆಲ್ಲುವುದಕ್ಕೆ 'ಸೂಪರ್‌ಮೆಜಾರಿಟಿ' ಎನ್ನಬಹುದು. ಇಷ್ಟೊಂದು ಬಹುಮತ ದೊರೆತರೆ, ಸಂವಿಧಾನ ಬದಲಾವಣೆಯನ್ನೂ ಮಾಡಬಹುದಾಗಿದೆ.

'ಜನಾಂಗೀಯ ವೈವಿಧ್ಯದ ಹೊಸ ಸಂಸತ್ತು': ಈ ಬಾರಿಯ ಬ್ರಿಟನ್ ಸಂಸತ್ತು ಇತಿಹಾಸದಲ್ಲಿಯೇ ಹೊಸತನಗಳಿಂದ ಕೂಡಿರಲಿದೆ ಎಂದು ಬ್ರಿಟಿಷ್ ಫ್ಯೂಚರ್ ಎನ್ನುವ ಚಿಂತಕರ ಚಾವಡಿ ವಿಶ್ಲೇಷಿಸಿದೆ. ಸಂಸತ್ತು ಜನಾಂಗೀಯ ವೈವಿಧ್ಯದಿಂದ ಕೂಡಿರಲಿದೆ ಎನ್ನಲಾಗುತ್ತಿದೆ. ಭಾರತೀಯ ಮೂಲದವರೂ ಸೇರಿದಂತೆ ಹಲವು ದೇಶಗಳ ಜನರು ಕಣದಲ್ಲಿದ್ದಾರೆ.

ಹೊಸ ಸಂಸತ್ತಿನಲ್ಲಿ ಸುಮಾರು ಶೇ 14ರಷ್ಟು ಜನಾಂಗೀಯ ಅಲ್ಪಸಂಖ್ಯಾತರು ಇರಲಿದ್ದಾರೆ. ಹಿಂದೆಂದೂ ಇಷ್ಟೊಂದು ವೈವಿಧ್ಯ ಸಂಸತ್ತಿನಲ್ಲಿ ಇರಲಿಲ್ಲ ಎಂದು ವಿಶ್ಲೇಷಿಸಿದೆ.

ಚುನಾವಣಾಪೂರ್ವ ಸಮೀಕ್ಷೆಗಳು ಏನನ್ನುತ್ತವೆ?



2.66 ಕೋಟಿ ಟನ್ ಗೋಧಿ ಸಂಗ್ರಹ

ನವದೆಹಲಿ (ಪಿಟಿಐ): ಭಾರತೀಯ ಆಹಾರ ನಿಗಮವು (ಎಫ್‌ಸಿಐ) 2024–25ರ ಹಿಂಗಾರು ಹಂಗಾಮು ಅವಧಿಯಲ್ಲಿ 2.66 ಕೋಟಿ ಟನ್ ಗೋಧಿಯನ್ನು ಸಂಗ್ರಹಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 2.62 ಕೋಟಿ ಟನ್ ಸಂಗ್ರಹಿಸಲಾಗಿತ್ತು ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಈ ವರ್ಷ ಸಾಮಾನ್ಯಕ್ಕಿಂತ ಮುಂಚೆಯೇ ಪ್ರಾರಂಭವಾದ ಸಂಗ್ರಹಣೆಯು 22 ಲಕ್ಷಕ್ಕೂ ಹೆಚ್ಚು ರೈತರಿಗೆ ಪ್ರಯೋಜನ ನೀಡಿದೆ. ಕನಿಷ್ಠ ಬೆಂಬಲ ಬೆಲೆಯಲ್ಲಿ (ಎಂಎಸ್‌ಪಿ) ಸುಮಾರು ₹61 ಲಕ್ಷ ಕೋಟಿಯನ್ನು ನೇರವಾಗಿ ತಮ್ಮ ಬ್ಯಾಂಕ್ ಖಾತೆಗಳಲ್ಲಿ ಸ್ವೀಕರಿಸಿದ್ದಾರೆ ಎಂದು ತಿಳಿಸಿದೆ.

ಪ್ರಸಕ್ತ ಹಂಗಾಮಿಗೆ (ಏಪ್ರಿಲ್-ಮಾರ್ಚ್) ಸರ್ಕಾರವು ಪ್ರತಿ ಕ್ವಿಂಟಲ್ ಗೋಧಿಗೆ ₹2,275 ಬೆಂಬಲ ಬೆಲೆ ನಿಗದಿಪಡಿಸಿತ್ತು.

ಉತ್ತರ ಪ್ರದೇಶವು ಕಳೆದ ವರ್ಷ 2.20 ಲಕ್ಷ ಟನ್ ಗೋಧಿ ಸಂಗ್ರಹಿಸಿತ್ತು. ಅದು ಪ್ರಸಕ್ತ ಅವಧಿಯಲ್ಲಿ 9.31 ಲಕ್ಷ ಟನ್‌ಗೆ ಏರಿಕೆಯಾಗಿದೆ. ರಾಜಸ್ಥಾನದ ಗೋಧಿ ಸಂಗ್ರಹವು 4.38 ಲಕ್ಷ ಟನ್‌ನಿಂದ 12 ಲಕ್ಷ ಟನ್‌ಗೆ ಏರಿಕೆಯಾಗಿದೆ.

ಗೋಧಿಯ ಜೊತೆಗೆ, 2023-24 ಮುಂಗಾರು ಹಂಗಾಮು ಅವಧಿಯಲ್ಲಿ ಭತ್ತದ ಸಂಗ್ರಹಣೆಯು 7.75 ಕೋಟಿ ಟನ್ ಆಗಿದೆ. 1 ಕೋಟಿಗೂ ಅಧಿಕ ರೈತರಿಗೆ ₹1.74 ಲಕ್ಷ ಕೋಟಿ ಪಾವತಿ ಮಾಡಲಾಗಿದೆ ಎಂದು ತಿಳಿಸಿದೆ.

ರಷ್ಯಾ ಸೇನೆಯಲ್ಲಿರುವ ಭಾರತೀಯರ ಸುರಕ್ಷತೆ ಬಗ್ಗೆ ಜೈಶಂಕರ್ ಕಳವಳ

ಅಸ್ತಾನ (ಕಜಕಸ್ತಾನ) (ಪಿಟಿಐ): ರಷ್ಯಾ–ಉಕ್ರೇನ್ ಯುದ್ಧದಲ್ಲಿ ರಷ್ಯಾದ ಪರ ಯುದ್ಧ ಮಾಡುತ್ತಿರುವ ಭಾರತೀಯರ ಸುರಕ್ಷತೆಯ ಕುರಿತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊ ಅವರೊಂದಿಗೆ ಜೈಶಂಕರ್ ಅವರು ಬುಧವಾರ ಮಾತುಕತೆ ನಡೆಸಿದರು. ಜೊತೆಗೆ, ಭಾರತೀಯರು ದೇಶಕ್ಕೆ ಸುರಕ್ಷಿತವಾಗಿ ವಾಪಸಾಗುವ ಕುರಿತೂ ಸಭೆಯಲ್ಲಿ ಪ್ರಸ್ತಾಪಿಸಿದರು.

ಶಾಂಘೈ ಸಹಕಾರ ಸಂಸ್ಥೆಯ (ಎಸ್‌ಸಿಒ) ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳಲು ಜೈಶಂಕರ್ ಅವರು ಮಂಗಳವಾರ ಅಸ್ತಾನಕ್ಕೆ ತೆರಳಿದ್ದರು. ಮುಂದಿನ ವಾರ ಪ್ರಧಾನಿ ನರೇಂದ್ರ ಮೋದಿ ಅವರೂ ರಷ್ಯಾ ಪ್ರವಾಸ ಕೈಗೊಳ್ಳಲಿದ್ದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡಲಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಇದುವರೆಗೂ ಅಧಿಕೃತವಾಗಿ ಘೋಷಣೆಯಾಗಿಲ್ಲ.

ರಷ್ಯಾ ಸೇನೆಯಲ್ಲಿರುವ ಭಾರತೀಯರ ಸುರಕ್ಷತೆ ಹಾಗೂ ಸುರಕ್ಷಿತ ವಾಪಸಾತಿಯ ಕುರಿತು ರಷ್ಯಾ-ಉಕ್ರೇನ್ ಯುದ್ಧ ಆರಂಭ ಆದಾಗಿನಿಂದಲೂ ಭಾರತವು ರಷ್ಯಾದ ಮೇಲೆ ಒತ್ತಡ ಹೇರುತ್ತಲೇ ಇದೆ. ಯುದ್ಧಭೂಮಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟ ಬಳಿಕ, ವಿದೇಶಾಂಗ ಸಚಿವಾಲಯವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಜೊತೆಗೆ, 'ರಷ್ಯಾ ಸೇನೆಗೆ ಭಾರತೀಯರನ್ನು ನೇಮಿಸಿಕೊಳ್ಳುವುದನ್ನು ನಿಲ್ಲಿಸಬೇಕು', ಇಲ್ಲವಾದಲ್ಲಿ ರಷ್ಯಾ–ಭಾರತದ ಸಂಬಂಧಕ್ಕೆ ಧಕ್ಕೆ ಆಗಬಹುದು ಎಂದೂ ಭಾರತ ಹೇಳಿತ್ತು.

ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಹಾಗೂ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊ ಬುಧವಾರ ಮಾತುಕತೆ ನಡೆಸಿದರು
–ಪಿಟಿಐ ಚಿತ್ರ

ಅಂಕಿ ಅಂಶಗಳು

200 ರಷ್ಯಾ ಸೇನೆಯಲ್ಲಿ ಭದ್ರತಾ ಸಹಾಯಕರಾಗಿ ಕೆಲಸ ಮಾಡುತ್ತಿರುವ ಭಾರತೀಯರು

4 ಜೂನ್ ಮಧ್ಯಭಾಗದಲ್ಲಿ ರಷ್ಯಾ–ಉಕ್ರೇನ್ ಯುದ್ಧದಲ್ಲಿ ಹುತಾತ್ಮರಾದ ಭಾರತೀಯರ ಸಂಖ್ಯೆ

10 ರಷ್ಯಾ ಸೇನೆಯಲ್ಲಿ ಸಹಾಯಕರಾಗಿ ಇದ್ದು, ದೇಶಕ್ಕೆ ಮರಳಿದ ಭಾರತೀಯರ ಸಂಖ್ಯೆ

ನ್ಯೂಯಾರ್ಕ್: 'ಇಂಡಿಯಾ ಡೇ' ಪರೇಡ್‌ನಲ್ಲಿ ರಾಮ ಮಂದಿರದ ಪ್ರತಿಕೃತಿ

ವಾಷಿಂಗ್ಟನ್ (ಪಿಟಿಐ): ನ್ಯೂಯಾರ್ಕ್‌ನಲ್ಲಿ ಆಗಸ್ಟ್ 18ರಂದು ನಡೆಯಲಿರುವ ಐತಿಹಾಸಿಕ 'ಇಂಡಿಯಾ ಡೇ' ಪರೇಡ್‌ನಲ್ಲಿ ರಾಮ ಮಂದಿರದ ಪ್ರತಿಕೃತಿಯನ್ನು ಪ್ರದರ್ಶಿಸಲಾಗುತ್ತದೆ. ಇದು ನ್ಯೂಯಾರ್ಕ್ ಸುತ್ತಮುತ್ತಲಿನ ಸಹಸ್ರಾರು ಸಂಖ್ಯೆಯ ಭಾರತ ಮೂಲದ ಅಮೆರಿಕನ್ನರನ್ನು ಆಕರ್ಷಿಸಲಿದೆ.

ದೇಗುಲದ ಪ್ರತಿಕೃತಿಯು 18 ಅಡಿ ಉದ್ದ, 9 ಅಡಿ ಅಗಲ ಹಾಗೂ 8 ಅಡಿ ಎತ್ತರವಿರಲಿದೆ ಎಂದು ವಿಶ್ವ ಹಿಂದೂ ಪರಿಷತ್‌ನ ಅಮೆರಿಕ ಘಟಕದ (ವಿಎಚ್‌ಪಿಎ) ಪ್ರಧಾನ ಕಾರ್ಯದರ್ಶಿ ಅಮಿತಾಬ್ ಮಿತ್ತಲ್ ತಿಳಿಸಿದ್ದಾರೆ.

ಅಮೆರಿಕದಲ್ಲಿ ರಾಮ ಮಂದಿರದ ಪ್ರತಿಕೃತಿಯು ಮೊದಲ ಬಾರಿಗೆ ಪ್ರದರ್ಶನಗೊಳ್ಳಲಿದೆ ಎಂದು ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ನಡೆಯುವ 'ಇಂಡಿಯಾ ಡೇ' ಪರೇಡ್, ಭಾರತದ ಹೊರಗೆ ನಡೆಯಲಿರುವ ಸ್ವಾತಂತ್ರ್ಯ ದಿನದ ಅತಿದೊಡ್ಡ ಆಚರಣೆಯಾಗಿದೆ. ವಾರ್ಷಿಕ ಪರೇಡ್ ಅನ್ನು 1.5 ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಲಿದ್ದಾರೆ. ಫೆಡರೇಷನ್ ಆಫ್ ಇಂಡಿಯನ್ ಅಸೋಸಿಯೇಷನ್ಸ್ (ಎಫ್‌ಐಎ) ಆಯೋಜಿಸಿರುವ ಈ ಪರೇಡ್‌ನಲ್ಲಿ, ಭಾರತ ಮೂಲದ ಅಮೆರಿಕನ್ನರ ವೈವಿಧ್ಯಮಯ ಸಂಸ್ಕೃತಿಯು ಅನಾವರಣಗೊಳ್ಳಲಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿಮ್ಮೊಗ 8095555517

Wanted

ಮಂಗಳೂರಿನ ಫಾರ್ಮಸಿಟಿಕಲ್ ಗೆ ಬೇಕಾಗಿದ್ದಾರೆ. ಎಂಸ್ಸಿ/ಬಿಎಸ್ಸಿ, ಕ್ವಾಲಿಟಿ ಕಂಟ್ರೋಲ್, ಮ್ಯಾನುಫ್ಯಾಕ್ಚರಿಂಗ್ ಗೆ ಪುರುಷರಿಗೆ ವಸತಿ ವ್ಯವಸ್ಥೆಯಿದೆ. ಅನುಭವಕ್ಕೆ ತಕ್ಕಂತೆವೇತನವಿದೆ. 9353237077

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

ಸುವರ್ಣ ಯಾತ್ರ, ಕಾಶಿ ಪ್ರವಾಸ ಎರಡು ಜ್ಯೋತಿರ್ಲಿಂಗ ಸೇರಿ 23/7/24. ನೇಪಾಳ ಮುಕ್ತಿನಾಥ, ಪಶುಪತಿನಾಥ, ಅಯೋಧ್ಯ ಪ್ರವಾಸ 27/7/24. :8660233673

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ದಿ॥ ಸೋಲೂರು ಬೋರಮ್ಮ ತಿಮ್ಮಯ್ಯನವರು ದಿ॥ ಎಸ್.ಕೆ. ಗೋವಿಂದರಾಜ್ ದಿ॥ ಲೀಲಮ್ಮ ಕೃಷ್ಣಪ್ಪನವರು
ದಿ. ಎಸ್.ಟಿ. ಕೃಷ್ಣಪ್ಪ ನವರ 11ನೇ ವರ್ಷದ ಪುಣ್ಯಸ್ಮರಣೆ
ಇವರ ಆತ್ಮಕ್ಕೆ ಭಗವಂತನು ಶಾಂತಿ ನೀಡಲಿ ಎಂದು ಪ್ರಾರ್ಥಿಸುವ STK Family & ಬಂಧು-ಮಿತ್ರರು

With grief and sorrow, we announce the demise of



REV. FR. PHILIP ETTAMPARAMBIL,
Founder and Manager of St Vincent Pallotti School, founder and first Parish priest of St Vincent Pallotti Church, Banaswadi, son of late Mr Peter and late Mrs Elikutty, Ettamparambil on 1st July, 2024. Funeral mass on 05-07-2024, Friday at 2.30 pm at St Vincent Pallotti Church, Banaswadi, followed by burial at Chelikare Pallotti Nilaya Campus Cemetery. For viewing and paying homage, at St Vincent Pallotti school, Babusapalya between 9am and 10 Am,
Sorrowing family members
Mrs. Mary Peter, EP. George and EP. John.
Late. Mrs. Chinnamma, Mr. Peter, Mr.Joseph.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

For Online Classified Booking
Name Change / Education / Property / Job / Services & many more
Log on to :
dhclassifieds.com

ಸ್ವಯಂ ಘೋಷಿತ ದೇವಮಾನವ ● ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಸೆರೆವಾಸ

ಆಗ ಪೊಲೀಸ್, ಈಗ ಬಾಬಾ!

ಪ್ರಜಾವಾಣಿ ವಾರ್ತೆ/ರಾಯಿಟರ್ಸ್

ನವದೆಹಲಿ: ಉತ್ತರ ಪ್ರದೇಶದ ಹಾಥರಸ್ ಜಿಲ್ಲೆಯಲ್ಲಿ ಸತ್ಸಂಗ ನಡೆಯುತ್ತಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ 121 ಜನರು ಮೃತಪಟ್ಟ ದುರಂತ ಸಂಭವಿಸಿದ ಬೆನ್ನಲ್ಲೇ, ಕಾರ್ಯಕ್ರಮದ ಕೇಂದ್ರ ಬಿಂದುವೆನಿಸಿದ 'ಸ್ವಯಂ ಘೋಷಿತ ದೇವ ಮಾನವ' ಭೋಲೆ ಬಾಬಾ ಕುರಿತ ಅನೇಕ ಸಂಗತಿಗಳು ಹೊರಬರುತ್ತಿವೆ.

ಉತ್ತರ ಪ್ರದೇಶದ ಕಾಸ್‌ಗಂಜ್ ಜಿಲ್ಲೆಯ ಬಹದುರ್ ಎಂಬ ಊರಲ್ಲಿ ಜನಿಸಿದ ಭೋಲೆ ಬಾಬಾ ಮೂಲ ಹೆಸರು ಸೂರಜ್ ಪಾಲ್ ಸಿಂಗ್.

'ಸೂರಜ್ ಸಿಂಗ್ 10 ವರ್ಷಗಳಷ್ಟು ಅವಧಿಗೆ ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದರು' ಎಂದು ಹಿರಿಯ ಪೊಲೀಸ್ ಅಧಿಕಾರಿ ಸುಧೀರ್ ಕುಮಾರ್ ಹೇಳಿಕೆ ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸೂರಜ್ ಸಿಂಗ್‌ಗೆ ಜೈಲು ಶಿಕ್ಷೆ ವಿಧಿಸಲಾಗಿತ್ತು. ಜೈಲಿನಿಂದ ಬಿಡುಗಡೆಗೊಂಡ ನಂತರ ತಮ್ಮ ಹೆಸರನ್ನು 'ಸಾಕಾರ ವಿಶ್ವಹರಿ ಬಾಬಾ' (ಭೋಲೆ ಬಾಬಾ) ಎಂದು ಬದಲಿಸಿಕೊಂಡು 'ಕಥಾವಾಚಕ'ರಾಗಿರುವ ಅವರು, 'ಸತ್ಸಂಗ'ಗಳನ್ನು ಆಯೋಜಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

'ಭೋಲೆ ಬಾಬಾ' ವಿರುದ್ಧ ಲೈಂಗಿಕ ದೌರ್ಜನ್ಯ ಸೇರಿ ಹಲವು ಆರೋಪಗಳಿವೆ. ಆಗ್ರಾ, ಎಟಾ, ಕಾಸ್‌ಗಂಜ್, ಫರುಖಾಬಾದ್ ನಗರಗಳಲ್ಲದೇ, ರಾಜಸ್ಥಾನದ ವಿವಿಧ ಠಾಣೆಗಳಲ್ಲಿ ಇವರ ವಿರುದ್ಧ ಪ್ರಕರಣಗಳು ದಾಖಲಾಗಿವೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಮೊದಲ ಮಂಗಳವಾರ 'ಸತ್ಸಂಗ': ಭೋಲೆ ಬಾಬಾ 'ಸತ್ಸಂಗ'ಗಳನ್ನು ಆಯೋಜಿಸುವ ಮೂಲಕ ಪ್ರಸಿದ್ಧಿಗೆ ಬಂದವರು. ಅಪಾರ ಸಂಖ್ಯೆಯ ಅನುಯಾಯಿಗಳನ್ನು ಹೊಂದಿದ್ದಾರೆ. ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ ಸೇರಿದಂತೆ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಪ್ರವಾಸ ಕೈಗೊಳ್ಳುವ ಅವರು, ಪ್ರತಿ ತಿಂಗಳು ಮೊದಲ ಮಂಗಳವಾರ 'ಸತ್ಸಂಗ'ಗಳನ್ನು ಆಯೋಜಿಸುತ್ತಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕಾಲ್ತುಳಿತ ದುರ್ಘಟನೆ ನಂತರ ಅವರು ತಲೆ ಮರೆಸಿಕೊಂಡಿದ್ದಾರೆ. ಆಯೋಜಕರಲ್ಲಿ ಒಬ್ಬರಾದ ದೇವಪ್ರಕಾಶ ಮಧುಕರ ಎಂಬುವವರು ಸಹ ತಲೆ ಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಡಿವೈಎಸ್‌ಪಿ ಸುನೀಲ್‌ಕುಮಾರ್ ಸಿಂಗ್ ಚೌಹಾಣ್ ನೇತೃತ್ವದ ಪೊಲೀಸರ ತಂಡವು ಬಾಬಾ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಿದೆ. ಮೈನ್‌ಪುರಿಯಲ್ಲಿರುವ ಆಶ್ರಮದ ಮೇಲೂ ದಾಳಿ ನಡೆಸಲಾಗಿದ್ದು, ಬಾಬಾ ಪತ್ತೆಯಾಗಿಲ್ಲ ಎಂದು ಮೂಲಗಳು ಹೇಳಿವೆ.

ಮತ್ತು ಪ್ರಾವಿಕರ ಗ್ರಾಮದಲ್ಲಿ 'ಭೋಲೆ ಬಾಬಾ' ಸ್ಥಾಪಿಸಿರುವ ಆಶ್ರಮಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಾರೆ. ಅವರ ಆಶೀರ್ವಾದ ಪಡೆಯುವುದಕ್ಕೆ ಹಾತೊರೆಯುತ್ತಾರೆ.

ಪ್ರಮುಖ ರಾಜಕಾರಣಿಗಳೊಂದಿಗೆ ಬಾಬಾ ಸಂಪರ್ಕ ಹೊಂದಿದ್ದು, ಹಿರಿಯ ರಾಜಕಾರಣಿಗಳೊಂದಿಗೆ ಅವರು ಇರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ತನಿಖೆಗೆ ಸುಪ್ರೀಂ ಕೋರ್ಟ್‌ಗೆ ಅರ್ಜಿ: ಉತ್ತರ ಪ್ರದೇಶದ ಹಾಥರಸ್ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ ಐವರು ತಜ್ಞ ಸದಸ್ಯರ ಸಮಿತಿ ರಚಿಸುವಂತೆ ಕೋರಿ ಬುಧವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ.

ಕಾಲ್ತುಳಿತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಮನೆಯಲ್ಲಿ 'ಭೋಲೆ ಬಾಬಾ' ಚಿತ್ರ —ಎಎಫ್‌ಪಿ ಚಿತ್ರ

ಭೋಲೆ ಬಾಬಾ ಚಿತ್ರವಿರುವ ಲಾಕೆಟ್ —ಪಿಟಿಐ ಚಿತ್ರ

ಮೌಢ್ಯರಹಿತ ಸಮಾಜದ ಕನಸಿನ 'ಬಾಬಾ'

- ಭೋಲೆ ಬಾಬಾ ಅವರು ದಲಿತ ಸಮುದಾಯಕ್ಕೆ ಸೇರಿದವರು. ಮೌಢ್ಯವಿಲ್ಲದ, ಸಹಾನುಭೂತಿಯಿಂದ ಕೂಡಿದ 'ಆದರ್ಶ ಸಮಾಜ' ನಿರ್ಮಿಸುವ ಗುರಿ ಹೊಂದಿದ್ದಾರೆ ಎಂಬುದಾಗಿ 'ಸತ್ಸಂಗ' ನಡೆದ ಕಾರ್ಯಕ್ರಮದಲ್ಲಿ ಹಾಕಿದ್ದ ಹೋರ್ಡಿಂಗ್‌ಗಳಲ್ಲಿ ಹೇಳಲಾಗಿದೆ
- ಭೋಲೆ ಬಾಬಾ ಅವರ ಯುಟ್ಯೂಬ್ ಚಾನೆಲ್ ಇದ್ದು, ಅವರ ಕಾರ್ಯಕ್ರಮಗಳ ಪೋಸ್ಟರ್ ಹಾಗೂ ವಿಡಿಯೊಗಳನ್ನು ಈ ಚಾನೆಲ್‌ನಲ್ಲಿ ಪೋಸ್ಟ್ ಮಾಡಲಾಗುತ್ತದೆ. ಲಕ್ಷಾಂತರ ಜನರು ಈ ಚಾನೆಲ್ ವೀಕ್ಷಿಸುತ್ತಾರೆ.
- ತಮ್ಮ ಆಶೀರ್ವಾದ ಪಡೆಯಲು ಭಕ್ತರು ಬಂದ ವೇಳೆ ಉಂಟಾಗುವ ನೂಕು ನುಗ್ಗಲು ತಡೆಯುವುದಕ್ಕಾಗಿ ಭೋಲೆ ಬಾಬಾ, 'ನಾರಾಯಣಿ ಸೇನಾ' ಎಂಬ ಭದ್ರತಾ ತಂಡ ರಚಿಸಿದ್ದಾರೆ. ಪುರುಷರು ಹಾಗೂ ಮಹಿಳೆಯರನ್ನು ಒಳಗೊಂಡಿರುವ ಈ ತಂಡ 'ಸತ್ಸಂಗ'ದಂತಹ ಕಾರ್ಯಕ್ರಮಗಳ ಸಂದರ್ಭದಲ್ಲಿ ಭೋಲೆ ಬಾಬಾ ಅವರಿಗೆ ಭದ್ರತೆ ಒದಗಿಸುತ್ತದೆ
- ಮೃತ ಬಾಲಕನನ್ನು ಬದುಕಿಸುವುದಾಗಿ ಹೇಳಿಕೊಂಡಿದ್ದಕ್ಕೆ ಸಂಬಂಧಿಸಿ ಬಾಬಾ ವಿರುದ್ಧ ಕೆಲ ವರ್ಷಗಳ ಹಿಂದೆ ಆಗ್ರಾ ಪೊಲೀಸ್ ಠಾಣೆಯೊಂದರಲ್ಲಿ ಪ್ರಕರಣ ದಾಖಲಾಗಿದೆ.

ಸಿಗದವರಿಗಾಗಿ ಹುಡುಕಾಟ, ರೋದನೆ

ಹಾಥರಸ್(ಉತ್ತರ ಪ್ರದೇಶ) (ಪಿಟಿಐ): ಜಿಲ್ಲೆಯ ಫುಲರಾಯ್ ಗ್ರಾಮದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಪ್ರಾಣ ಕಳೆದುಕೊಂಡವರ ರೋದನೆ ಒಂದೆಡೆಯಾದರೆ, ತಮ್ಮವರ ಮೃತದೇಹಗಳನ್ನು ಹುಡುಕುವಲ್ಲಿ ಹಲವರು ಪಡುತ್ತಿರುವ ಯಾತನೆ ಭೀಕರವಾಗಿದೆ.

'ಇಂತಹ ದುರ್ಘಟನೆಗಳಲ್ಲಿ ತೊಂದರೆ ಅನುಭವಿಸುವುದು ಬಡವರೇ. ಹೊರತು ಶ್ರೀಮಂತರಲ್ಲ' ಎಂದು ಹೇಳುವ ಉನ್ನಾವೊ ಜಿಲ್ಲೆಯ ರಾಜಕುಮಾರಿ ದೇವಿ ಅವರ ಮಾತು, ಕಾಲ್ತುಳಿತದಲ್ಲಿ ಜೀವ ಕಳೆದುಕೊಂಡವರ, ಗಾಯಗೊಂಡಿರುವವರ ಕುಟುಂಬಗಳ ಕಥೆ–ವ್ಯಥೆಯನ್ನು ಹೇಳುವಂತಿದೆ.

ರಾಜಕುಮಾರಿ ದೇವಿ ಅವರು ಆಂಬುಲೆನ್ಸ್‌ನಲ್ಲಿರುವ ತನ್ನ ನಾದಿನಿಯ ಶವದ ಬಳಿ ರೋದಿಸುತ್ತಾ ಈ ಮಾತು ಹೇಳುತ್ತಿದ್ದರೂ, ಅವರ ಕಣ್ಣುಗಳು ಮಾತ್ರ ನಾಪತ್ತೆಯಾಗಿರುವ ನಾದಿನಿಯ ಐದು ವರ್ಷದ ಮಗನನ್ನು ಹುಡುಕುತ್ತಿದ್ದ ದೃಶ್ಯ ಮನ ಕಲುಕುವಂತಿತ್ತು.

ಸರ್ಕಾರದ ಬಳಿ ನಿಮ್ಮ ಬೇಡಿಕೆಗಳೇನಾದರೂ ಇವೆಯೇ? ಎಂಬ ಪತ್ರಕರ್ತರ ಪ್ರಶ್ನೆಗೆ,'ಈಗ ನಾವು ಏನು ಹೇಳುವುದು. ಕೇಳಲು ಏನೂ ಉಳಿದಿಲ್ಲ. ಬಡವರೇ ತೊಂದರೆಗೆ ಸಿಲುಕುತ್ತಾರೆ, ಶ್ರೀಮಂತರಲ್ಲ' ಎಂದು ರಾಜಕುಮಾರಿ ದೇವಿ ಪ್ರತಿಕ್ರಿಯಿಸಿದರು.

ಶವಪರೀಕ್ಷೆ– ನಾಲ್ಕುಪಟ್ಟು ಹೆಚ್ಚು: 'ಇಲ್ಲಿನ ಸರ್ಕಾರಿ ಆಸ್ಪತ್ರೆಯ ವೈದ್ಯರು, ಸಾಮಾನ್ಯ ದಿನಗಳಲ್ಲಿ ನಡೆಸುವುದಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿನ ವೈದ್ಯರು ಶವಪರೀಕ್ಷೆಗಳನ್ನು ನಡೆಸಿದ್ದಾರೆ. ಇದು, ಕಾಲ್ತುಳಿತದಿಂದಾಗಿ ಸಂಭವಿಸಿದ ಪ್ರಾಣ ಹಾನಿ ಪ್ರಮಾಣವನ್ನು ತೋರಿಸುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಒತ್ತಡ ಹೆಚ್ಚಾಗಿ ಉಸಿರುಗಟ್ಟಿದ ಪರಿಣಾಮ ಬಹಳಷ್ಟು ಜನರು ಮೃತಪಟ್ಟಿರುವುದು ಶವಪರೀಕ್ಷೆಯಿಂದ ಗೊತ್ತಾಗಿದೆ ಎಂದು ಇಲ್ಲಿನ ಆಸ್ಪತ್ರೆಯ ಹೆಚ್ಚುವರಿ ಮುಖ್ಯ ವೈದ್ಯಾಧಿಕಾರಿ ಡಾ.ರಾಮ ಮೋಹನ್ ತಿವಾರಿ ಹೇಳಿದ್ದಾರೆ.

'ಮಂಗಳವಾರ ಫುಲರಾಯ್ ಗ್ರಾಮದಿಂದ 27 ಮೃತದೇಹಗಳನ್ನು ಆಸ್ಪತ್ರೆಗೆ ತರಲಾಗಿತ್ತು. ಮಧ್ಯರಾತ್ರಿ ಹೊತ್ತಿಗೆ 19 ದೇಹಗಳ ಮರಣೋತ್ತರ ಪರೀಕ್ಷೆ ಮುಗಿಸಿದ್ದೆವು. ಉಳಿದ 20ಕ್ಕೂ ಶವಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೆವು' ಎಂದು ಹೇಳುವ ಮೂಲಕ ಅವರು ಅವಘಡದ ಭೀಕರತೆಯನ್ನು ಬಿಚ್ಚಿಟ್ಟರು.

ಹರತಾಳ

2024ರ ನೀಟ್-ಯುಜಿ ಪರೀಕ್ಷೆಯಲ್ಲಿನ ಅಕ್ರಮಗಳ ಕುರಿತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ವಿರುದ್ಧ ವಿವಿಧ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಬುಧವಾರ ನವದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಸಿಸಿಇಎ ಸದಸ್ಯರಾಗಿ ಎಚ್‌ಡಿಕೆ ನೇಮಕ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ನವದೆಹಲಿ: ಆರ್ಥಿಕ ವ್ಯವಹಾರಗಳ ಮತ್ತರ ಸಂಪುಟ ಸಮಿತಿಯ (ಸಿಸಿಇಎ) ಸದಸ್ಯರಾಗಿ ಭಾರಿ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆ ಚುನಾವಣೆಯ ನಂತರ ತಮ್ಮ ಬದಲಾದ ರಾಜಕೀಯ ನಡೆ ಪ್ರತಿಬಿಂಬಿಸುವಂತೆ ಮಿತ್ರಪಕ್ಷಗಳ ಸಚಿವರನ್ನು ಒಳಗೊಂಡಂತೆ ಉನ್ನತ ಮಟ್ಟದ ಎಂಟು ಸಂಪುಟ ಸಮಿತಿಗಳನ್ನು ಬುಧವಾರ ಪುನರ್ ರಚಿಸಿದ್ದಾರೆ.

ಭದ್ರತೆ, ನೇಮಕಾತಿಗಳು ಮತ್ತು ವಸತಿ ಸಂಪುಟ ಸಮಿತಿಗಳನ್ನು ಹೊರತುಪಡಿಸಿ, ಆರ್ಥಿಕ ವ್ಯವಹಾರಗಳು, ಸಂಸದೀಯ ವ್ಯವಹಾರಗಳು, ರಾಜಕೀಯ ವ್ಯವಹಾರಗಳು, ಹೂಡಿಕೆ ಮತ್ತು ಬೆಳವಣಿಗೆ ಮತ್ತು ಕೌಶಲ, ಉದ್ಯೋಗ ಮತ್ತು ಜೀವನೋಪಾಯದ ಐದು ಸಂಪುಟ ಸಮಿತಿಗಳಲ್ಲಿ ಮಿತ್ರಪಕ್ಷಗಳ ಸದಸ್ಯರಿಗೆ ಅವಕಾಶ ಕಲ್ಪಿಸಿದ್ದಾರೆ.

ಜೆಡಿಯು, ಜೆಡಿಎಸ್, ಟಿಡಿಪಿ, ಆರ್‌ಎಲ್‌ಡಿ ಮತ್ತು ಎಚ್‌ಎಎಂ ಪಕ್ಷಗಳ ಸಚಿವರು ವಿವಿಧ ಸಮಿತಿಗಳ ಸದಸ್ಯರಾಗಿದ್ದಾರೆ. ಪ್ರಧಾನಿ ನೇತೃತ್ವದ 11 ಸದಸ್ಯರ ಸಮಿತಿಯಲ್ಲಿ ಕುಮಾರಸ್ವಾಮಿಯೂ ಭಾಗವಾಗಿದ್ದಾರೆ. ಹಿರಿಯ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ನಿರ್ಮಲಾ ಸೀತಾರಾಮನ್, ನಿತಿನ್ ಗಡ್ಕರಿ, ಶಿವರಾಜ್ ಚೌಹಾಣ್, ಎಸ್. ಜೈಶಂಕರ್, ಪೀಯೂಷ್ ಗೋಯಲ್ ಮತ್ತು ಧರ್ಮೇಂದ್ರ ಪ್ರಧಾನ್, ಜೆಡಿಯುನ ರಾಜೀವ್ ರಂಜನ್ ಲಲನ್ ಸಿಂಗ್ ಕೂಡ ಸಮಿತಿಯಲ್ಲಿದ್ದಾರೆ.

ಪ್ರಧಾನಿ ನೇತೃತ್ವದ ಭದ್ರತೆಯ ಸಂಪುಟ ಸಮಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ. ಪ್ರಧಾನಮಂತ್ರಿ ಮತ್ತು ಗೃಹ ಸಚಿವರು ಸಂಪುಟದ ನೇಮಕಾತಿ ಸಮಿತಿಯಲ್ಲಿ ಮುಂದುವರಿದಿದ್ದಾರೆ.

ರಾಜನಾಥ್ ಸಂಸದೀಯ ವ್ಯವಹಾರಗಳ ಸಂಪುಟ ಸಮಿತಿಯ ಮುಖ್ಯಸ್ಥರಾಗಿ ಮುಂದುವರಿದಿದ್ದಾರೆ. ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಗೆ ಮೋದಿ ಮುಖ್ಯಸ್ಥರಾಗಿದ್ದಾರೆ. ಸಂಪುಟ ದರ್ಜೆ ಹೊಂದಿರದ ಕೌಶಲಾಭಿವೃದ್ಧಿ ರಾಜ್ಯ ಸಚಿವ ಜಯಂತ್ ಚೌಧರಿ ಅವರನ್ನು ಕೌಶಲ, ಉದ್ಯೋಗ ಮತ್ತು ಜೀವನೋಪಾಯದ ಸಂಪುಟ ಸಮಿತಿಯಲ್ಲಿ ವಿಶೇಷ ಆಹ್ವಾನಿತರನ್ನಾಗಿ ಸೇರಿಸಲಾಗಿದೆ. 12 ಸದಸ್ಯರ ಸಮಿತಿಯಲ್ಲಿ ಗಡ್ಕರಿ, ಮಾಂಡವಿಯಾ ಮತ್ತು ಗಜೇಂದ್ರ ಶೇಖಾವತ್ ಹೊಸದಾಗಿ ಸೇರ್ಪಡೆಗೊಂಡಿದ್ದಾರೆ.

ಎಲ್‌ಜೆಪಿಯ (ಆರ್‌ವಿ) ಚಿರಾಗ್ ಪಾಸ್ವಾನ್ ಹೂಡಿಕೆ ಮತ್ತು ಬೆಳವಣಿಗೆಯ ಸಂಪುಟ ಸಮಿತಿಯ ಸದಸ್ಯರಾಗಿದ್ದಾರೆ. ಮೋದಿ ಅವರ ನೇತೃತ್ವದ ಆರು ಸದಸ್ಯರ ವಸತಿ ಎಂ.ಎಲ್. ಖಟ್ಟರ್, ಅಮಿತ್ ಶಾ, ಗಡ್ಕರಿ, ನಿರ್ಮಲಾ ಮತ್ತು ಗೋಯಲ್ ಸದಸ್ಯರಾಗಿದ್ದಾರೆ.

ನ್ಯಾಯಾಂಗ ತನಿಖೆಗೆ ಆದೇಶ

ಒಂದನೇ ಪುಟದಿಂದ...

ಗ್ರಾಮಕ್ಕೆ ಬುಧವಾರ ಭೇಟಿ ನೀಡಿದ ನಂತರ ಹಾಥರಸ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಪ್ಪಿತಸ್ಥರು ಯಾರೇ ಆಗಿರಲಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಕಾರ್ಯಕ್ರಮದ ಆಯೋಜಕರು ಹಾಗೂ 'ಸೇವಾದಾರ'ರನ್ನು ವಿಚಾರಣೆಗೆ ಒಳಪಡಿಸಲಾಗುವುದು. ಸಾಮಾನ್ಯವಾಗಿ, ಅಧಿಕಾರಿಗಳು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ತೆರಳುವುದಕ್ಕೆ ಸೇವಾದಾರರು ಅವಕಾಶ ನೀಡುವುದಿಲ್ಲ. ಈ ದುರ್ಘಟನೆ ಕುರಿತಂತೆ ಸೇವಾದಾರರು ಮಾಹಿತಿ ಮುಚ್ಚಿಟ್ಟಿದ್ದು, ಪೊಲೀಸರು ಸ್ಥಳಕ್ಕೆ ತೆರಳಿದಾಗ ಓಡಿ ಹೋಗಿದ್ದಾರೆ' ಎಂದು ತಿಳಿಸಿದ್ದಾರೆ.

ಗಾಯಾಳುಗಳ ಭೇಟಿ: 'ಸತ್ಸಂಗ'ದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಗಾಯಗೊಂಡವರನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಭೇಟಿ ಮಾಡಿ, ಸಾಂತ್ವನ ಹೇಳಿದರು.

ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿ, ಅವರ ಆರೋಗ್ಯ ವಿಚಾರಿಸಿದರು. ನಂತರ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಹಾಥರಸ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಬುಧವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು —ಪಿಟಿಐ ಚಿತ್ರ

'ಡಿಸಿಡಬ್ಲ್ಯು ದುರ್ಬಲಗೊಳ್ಳುತ್ತಿದೆ ಆರೋಪ ಸುಳ್ಳು'

ನವದೆಹಲಿ (ಪಿಟಿಐ): ದೆಹಲಿ ಮಹಿಳಾ ಆಯೋಗವನ್ನು (ಡಿಸಿಡಬ್ಲ್ಯು) ಎಎಪಿ ಸರ್ಕಾರವು ವ್ಯವಸ್ಥಿತವಾಗಿ ದುರ್ಬಲಗೊಳಿಸುತ್ತಿದೆ ಎಂಬ ರಾಜ್ಯಸಭೆ ಸದಸ್ಯೆ ಸ್ವಾತಿ ಮಾಲಿವಾಲ್ ಆರೋಪವು ದುರುದ್ದೇಶ ಮತ್ತು ಕಪೋಲಕಲ್ಪಿತವಾದದ್ದು ಎಂದು ಇಬ್ಬರು ಸದಸ್ಯರ ಸಮಿತಿಯು ಹೇಳಿದೆ.

ಈ ಸಂಬಂಧ ಮಾಲಿವಾಲ್ ಅವರಿಗೆ ದೆಹಲಿ ಮಹಿಳಾ ಆಯೋಗದ ಇಬ್ಬರು ಸದಸ್ಯರಾದ ಫಿರ್ದೋಸ್ ಖಾನ್ ಮತ್ತು ಕಿರಣ್ ನೇಗಿ ಪತ್ರ ಬರೆದಿದ್ದಾರೆ.

ಬಿಎನ್‌ಎಸ್ ಸೆಕ್ಷನ್ 69 ದುರ್ಬಳಕೆ ಸಾಧ್ಯತೆ: ಆತಂಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಮದುವೆಯಾಗುವುದಾಗಿ ಇಲ್ಲವೇ ಉದ್ಯೋಗ ನೀಡುವುದಾಗಿ ಭರವಸೆ ನೀಡುವುದು ಸೇರಿದಂತೆ ವಂಚಿಸುವ ಮೂಲಕ ಸಂಭೋಗ ನಡೆಸುವುದನ್ನು ಅಪರಾಧೀಕರಣಗೊಳಿಸುವ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 69 ಅನ್ನು ದುರ್ಬಳಕೆ ಮಾಡಿಕೊಳ್ಳುವ ಅವಕಾಶಗಳು ಹೆಚ್ಚು ಎಂದು ಕಾನೂನು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಎನ್‌ಎಸ್‌ನ ಈ ಸೆಕ್ಷನ್, ಭಾರಿ ಸಂಖ್ಯೆಯಲ್ಲಿ ಪ್ರಕರಣಗಳನ್ನು ದಾಖಲಿಸಲು ಸಹ ದಾರಿ ಮಾಡಿಕೊಡುವ ಸಾಧ್ಯತೆ ಇದೆ ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.

ಇದು, ಈ ಹಿಂದಿನ ಐಪಿಸಿ ಸೆಕ್ಷನ್ 498(ಎ) ಆಗಿತ್ತು. ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದ ಸಾವಿರಾರು ಮಹಿಳೆಯರಿಗೆ ಈ ಇದು ನೆರವಾಗಿದ್ದ ಕಾರಣ, ಈ ಸೆಕ್ಷನ್‌ಅನ್ನು ಪ್ರಗತಿಪರ ನಡೆ ಎಂದೇ ಪರಿಗಣಿಸಲಾಗುತ್ತಿತ್ತು. ಆದರೆ, ಈಗ ಈ ಸೆಕ್ಷನ್‌ಅಡಿ ದಾಖಲಾಗುವ ಪ್ರಕರಣದಲ್ಲಿ, ತಾನು ನಿರಪರಾಧಿ ಎಂಬುದಾಗಿ ಸಾಬೀತುಪಡಿಸುವುದು ಆರೋಪಿಗೆ ಕಷ್ಟವಾಗಲಿದೆ ಎಂಬುದು ಕಾನೂನುತಜ್ಞರ ವಾದ.

'ಈ ಸೆಕ್ಷನ್‌ನ ವ್ಯಾಖ್ಯಾನ ವಿಶಾಲವಾಗಿರುವ ಕಾರಣ ದುರ್ಬಳಕೆ ಮಾಡಲಾಗುತ್ತದೆ ಎಂಬುದನ್ನು ಒಪ್ಪಲಾಗದು' ಎಂದು ಹಿರಿಯ ವಕೀಲ ವಿವೇಕ್ ಟಂಕಾ ಹೇಳುತ್ತಾರೆ.

ಈ ಮಾತನ್ನು ಒಪ್ಪದ ಮತ್ತೊಬ್ಬ ಹಿರಿಯ ವಕೀಲೆ ಮಹಾಲಕ್ಷ್ಮಿ ಪಾವನಿ, 'ಮಹಿಳೆಯನ್ನು ಹಕ್ಕುಗಳನ್ನು ಮೊಟಕುಗೊಳಿಸುವ ವಿಪರೀತವಾದ ಸೆಕ್ಷನ್ ಇದಾಗಿದೆ' ಎನ್ನುತ್ತಾರೆ.

'ಉದ್ಯೋಗ ಅಥವಾ ಬಡ್ತಿ ಇಲ್ಲವೇ ಮದುವೆಯಾಗುವ ಭರವಸೆ ಸಿಕ್ಕಾಗ ಮಹಿಳೆಯರು ಹಾಸಿಗೆ ಹಂಚಿಕೊಳ್ಳಲು ತಕ್ಷಣವೇ ಮುಂದಾಗುತ್ತಾರೆ ಎಂಬ ಅರ್ಥವ್ಯಾಪ್ತಿಯನ್ನು ಈ ಸೆಕ್ಷನ್ ಹೊಂದಿದೆ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಬಿ.ಎನ್.ಗಂಗಾಧರ್ ವೈದ್ಯಕೀಯ ಆಯೋಗದ ಅಧ್ಯಕ್ಷ

ನವದೆಹಲಿ- (ಪಿಟಿಐ): ನಿಮ್ಹಾನ್ಸ್‌ನ ಮಾಜಿ ನಿರ್ದೇಶಕರಾದ ಡಾ.ಬಿ.ಎನ್. ಗಂಗಾಧರ್ ಅವರನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಅಧ್ಯಕ್ಷರನ್ನಾಗಿ ಕೇಂದ್ರ ಸರ್ಕಾರ ನೇಮಿಸಿದೆ.

ಪ್ರಸ್ತುತ, ಡಾ.ಗಂಗಾಧರ್ ಅವರು ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಮಂಡಳಿ ಅಧ್ಯಕ್ಷರಾಗಿದ್ದಾರೆ.

ನೇಮಕಾತಿ ಕುರಿತ ಸಂಪುಟ ಸಮಿತಿಯು (ಎಸಿಸಿ) ಎನ್‌ಎಂಸಿ ಸೇರಿದಂತೆ ಇತರ ಸ್ವಾಯತ್ತ ಸಂಸ್ಥೆಗಳ ವಿವಿಧ ಹುದ್ದೆಗಳಿಗೆ ನೇಮಕ ಮಾಡಿದೆ.

ಆಯೋಗದ ಅಧ್ಯಕ್ಷರಾಗಿದ್ದ ಡಾ.ಎಸ್.ಸಿ.ಶರ್ಮಾ ಅವರ ಅಧಿಕಾರಾವಧಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮುಕ್ತಾಯಗೊಂಡಿತ್ತು. ಗಂಗಾಧರ್ ಅವರ ಅಧಿಕಾರಾವಧಿಯು ನಾಲ್ಕು ವರ್ಷ ಅಥವಾ ಅವರಿಗೆ 70 ವರ್ಷ ತುಂಬುವವರೆಗೆ, ಈ ಪೈಕಿ ಯಾವುದು ಮೊದಲೋ ಅಲ್ಲಿಯವರೆಗೆ ಇರಲಿದೆ.

'ಭದ್ರತಾ ಸಿಬ್ಬಂದಿಯ ಲೋಪ'

ಕಾಲ್ತುಳಿತ ಘಟನೆ ಕುರಿತಂತೆ ಸ್ಥಳೀಯ ಆಡಳಿತವೂ ಪ್ರಾಥಮಿಕ ವರದಿಯೊಂದನ್ನು ಸಿದ್ಧಪಡಿಸಿದ್ದು, ಭೋಲೆ ಬಾಬಾ ಭದ್ರತೆ ಉಸ್ತುವಾರಿ ಹೊಣೆ ಹೊತ್ತ 'ಕಮಾಂಡೊ'ಗಳ ವಿರುದ್ಧ ಆರೋಪ ಹೊರಿಸಲಾಗಿದೆ.

'ಮಧ್ಯಾಹ್ನ 2 ಗಂಟೆ ಹೊತ್ತಿಗೆ ಭೋಲೆ ಬಾಬಾ ಕಾರ್ಯಕ್ರಮ ನಡೆದ ಸ್ಥಳದಿಂದ ಹೊರಡಲು ಮುಂದಾದಾಗ, ಅವರ ಪಾದಗಳನ್ನು ಸ್ಪರ್ಶಿಸಲು ಭಾರಿ ಸಂಖ್ಯೆಯಲ್ಲಿ ಭಕ್ತರು ಮುಂದಾದಾಗ ನೂಕು ನುಗ್ಗಲು ಉಂಟಾಯಿತು. 'ಕಮಾಂಡೊ'ಗಳು ಭಕ್ತರನ್ನು ಬಲವಂತದಿಂದ ಚದುರಿಸಲು ಮುಂದಾದರು. 'ಸೇವಾದಾರ'ರು ಸಹ ಜನರನ್ನು ತಳ್ಳಲು ಆರಂಭಿಸಿದ್ದರಿಂದ ಕಾಲ್ತುಳಿತ ಉಂಟಾಯಿತು' ಎಂದು ವರದಿಯಲ್ಲಿ ವಿವರಿಸಲಾಗಿದೆ.

'ಕಮಾಂಡೊಗಳು ದೂರ ಸರಿಸಿದ ನಂತರ ಕೆಲ ಭಕ್ತರು ಕಾರ್ಯಕ್ರಮದ ಸ್ಥಳದ ಬಳಿಯ ಜಮೀನುಗಳತ್ತ ಓಡಲು ಆರಂಭಿಸಿದರು. ಆ ಜಾಗ ಇಳಿಜಾರಿನಿಂದ ಕೂಡಿರುವ ಕಾರಣ ಹಲವರು ಕೆಳಗೆ ಬಿದ್ದರು. ಹೊರಗೆ ಓಡಿ ಬರುತ್ತಿದ್ದವರ ಸಂಖ್ಯೆ ಹೆಚ್ಚಿತಲ್ಲದೇ, ಹೀಗೆ ಓಡಿ ಬಂದವರು ಕೆಳಗೆ ಬಿದ್ದವರನ್ನು ತುಳಿಯುತ್ತಾ ಸಾಗಿದರು' ಎಂದೂ ವರದಿಯಲ್ಲಿ ಹೇಳಲಾಗಿದೆ.

ಎಫ್‌ಐಆರ್‌ನಲ್ಲಿ ಬಾಬಾ ಹೆಸರಿಲ್ಲ

ಒಂದನೇ ಪುಟದಿಂದ...

'ಮುಖ್ಯ ಸೇವಾದಾರ' ದೇವಪ್ರಕಾಶ ಮಧುಕರ ಹಾಗೂ ಇತರ ಆಯೋಜಕರ ಹೆಸರುಗಳನ್ನು ಸಿಕಂದ್ರಾರಾವ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸರು ಮತ್ತು ಸ್ಥಳೀಯ ಆಡಳಿತಕ್ಕೆ ಎಫ್‌ಐಆರ್‌ನಲ್ಲಿ ಕ್ಲೀನ್‌ಚಿಟ್ ನೀಡಲಾಗಿದೆ. ಪೊಲೀಸರು ಹಾಗೂ ಸ್ಥಳೀಯ ಆಡಳಿತವು ತಮ್ಮಲ್ಲಿನ ಸಂಪನ್ಮೂಲ ಬಳಸಿಕೊಂಡರು ಅಹಿತಕರ ಘಟನೆ ತಡೆಯಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ ಎಂದು ಹೇಳಲಾಗಿದೆ.

80 ಸಾವಿರ ಜನರು ಪಾಲ್ಗೊಳ್ಳಲು ಅವಕಾಶ ನೀಡಲಾಗಿದ್ದ ಅಂದಿನ ಕಾರ್ಯಕ್ರಮದಲ್ಲಿ 2.5 ಲಕ್ಷ ಜನರು ಪಾಲ್ಗೊಂಡಿದ್ದರು. ಪಾಲ್ಗೊಳ್ಳಲಿದ್ದ ಜನರ ಕುರಿತ ಮಾಹಿತಿಯನ್ನು ಪರವಾನಗಿ ಪಡೆಯುವ ವೇಳೆ ಆಯೋಜಕರು ಮುಚ್ಚಿಟ್ಟಿದ್ದರು ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ. ಕಾರ್ಯಕ್ರಮ ಮುಗಿದ ನಂತರ ಜನ ಮತ್ತು ವಾಹನ ದಟ್ಟಣೆ ನಿಯಂತ್ರಿಸಲು ಆಯೋಜಕರು ಸಹಕಾರ ನೀಡಲಿಲ್ಲ. ದುರ್ಘಟನೆ ನಡೆದ ನಂತರ, ಸಾಕ್ಷ್ಯಗಳನ್ನು ಮರೆಮಾಚಲು ಯತ್ನಿಸಿದ್ದಾರೆ ಎಂದೂ ಹೇಳಲಾಗಿದೆ.

ಸುಧಾಮೂರ್ತಿಗೆ ಶ್ಲಾಘನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ ಚೊಚ್ಚಲ ಭಾಷಣದಲ್ಲೇ ಮಹಿಳೆಯರ ಆರೋಗ್ಯದ ಬಗ್ಗೆ ಮಾತನಾಡಿದ್ದ ನಾಮನಿರ್ದೇಶಿತ ಸದಸ್ಯೆ ಸುಧಾಮೂರ್ತಿ ಅವರನ್ನು ನರೇಂದ್ರ ಮೋದಿ ಶ್ಲಾಘಿಸಿದರು.

ಸುಧಾ ಮೂರ್ತಿ

ಗರ್ಭಕಂಠದ ಕ್ಯಾನ್ಸರ್ ವಿರುದ್ಧ ಹೋರಾಡಲು ಸರ್ಕಾರಿ ಪ್ರಾಯೋಜಿತ ಲಸಿಕೆ ಕಾರ್ಯಕ್ರಮದ ಅಗತ್ಯವಿದೆ ಎಂದು ಸುಧಾಮೂರ್ತಿ ಸಲಹೆ ನೀಡಿದರು. ದೇಶೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದರು.

ಒಂಬತ್ತು ಮತ್ತು 14 ವರ್ಷದೊಳಗಿನ ಹುಡುಗಿಯರಿಗೆ ನೀಡಲು ಲಸಿಕೆ ಇದೆ. ಇದನ್ನು ಗರ್ಭಕಂಠದ ಲಸಿಕೆ ಎಂದು ಕರೆಯಲಾಗುತ್ತದೆ. ಹುಡುಗಿಯರು ಅದನ್ನು ತೆಗೆದುಕೊಂಡರೆ, ಕ್ಯಾನ್ಸರ್ ತಪ್ಪಿಸಬಹುದು ... ನಮ್ಮ ಹೆಣ್ಣುಮಕ್ಕಳ ಅನುಕೂಲಕ್ಕಾಗಿ ನಾವು ಲಸಿಕೆಯನ್ನು ಉತ್ತೇಜಿಸಬೇಕು. ಏಕೆಂದರೆ, ಚಿಕಿತ್ಸೆಗಿಂತ ತಡೆಗಟ್ಟುವಿಕೆಯ ಉಪಕ್ರಮಗಳು ಮುಖ್ಯ' ಎಂದು ಸುಧಾಮೂರ್ತಿ ಪ್ರತಿಪಾದಿಸಿದರು.

'ಸರ್ಕಾರವು ಕೋವಿಡ್ ಸಮಯದಲ್ಲಿ ದೊಡ್ಡ ಲಸಿಕಾ ಅಭಿಯಾನ ನಡೆಸಿದೆ. ಆದ್ದರಿಂದ 9-14 ವಯಸ್ಸಿನ ಹುಡುಗಿಯರಿಗೆ ಗರ್ಭಕಂಠದ ಲಸಿಕೆ ನೀಡುವುದು ತುಂಬಾ ಕಷ್ಟಕರವಾಗುವುದಿಲ್ಲ. ಗರ್ಭಕಂಠದ ಲಸಿಕೆಯನ್ನು ಪಶ್ಚಿಮದಲ್ಲಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಇದನ್ನು ಕಳೆದ 20 ವರ್ಷಗಳಿಂದ ಬಳಸಲಾಗುತ್ತಿದೆ' ಎಂದರು.

ದೇಶೀಯ ಪ್ರವಾಸೋದ್ಯಮ ಕುರಿತು ಮಾತನಾಡಿದ ಸುಧಾ ಮೂರ್ತಿ, 57 ದೇಶೀಯ ಪ್ರವಾಸಿ ತಾಣಗಳನ್ನು ವಿಶ್ವ ಪಾರಂಪರಿಕ ತಾಣಗಳೆಂದು ಪರಿಗಣಿಸಬೇಕು. ಇವುಗಳಲ್ಲಿ ಕರ್ನಾಟಕದ ಶ್ರವಣಬೆಳಗೊಳದ ಬಾಹುಬಲಿ ಪ್ರತಿಮೆ, ಲಿಂಗರಾಜ ದೇವಾಲಯ ಸೇರಿವೆ ಎಂದರು.

'ಮಹಿಳೆಯರ ಆರೋಗ್ಯದ ಕುರಿತು ವಿವರವಾಗಿ ಮಾತನಾಡಿದ ಸುಧಾ ಮೂರ್ತಿ ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ' ಎಂದು ಮೋದಿ ಹೇಳಿದರು. ಆಗ ಸುಧಾಮೂರ್ತಿ ಎದ್ದು ನಿಂತು ಕೃತಜ್ಞತೆ ಸಲ್ಲಿಸಿದರು.

ಸುಧಾ ಮೂರ್ತಿ ಅವರು ತಾಯಂದಿರ ಕುರಿತು ಭಾವನಾತ್ಮಕವಾಗಿ ಆಡಿದ ಮಾತುಗಳನ್ನು ಪ್ರಸ್ತಾಪಿಸಿದ ಮೋದಿ, 'ಬಿಜೆಪಿ ಸರ್ಕಾರವು ಕಳೆದ ಹತ್ತು ವರ್ಷಗಳಲ್ಲಿ ಆದ್ಯತಾ ವಲಯವಾಗಿ ಮಹಿಳಾ ಆರೋಗ್ಯ ಮತ್ತು ನೈರ್ಮಲ್ಯದ ಮೇಲೆ ಗಮನ ಹರಿಸಿದೆ' ಎಂದು ತಿಳಿಸಿದರು.

ಮೌನ ಮುರಿದ ಮೋದಿ

ಒಂದನೇ ಪುಟದಿಂದ...

ಮಣಿಪುರವು ಪ್ರವಾಹ ಪರಿಸ್ಥಿತಿಯನ್ನು ಎದುರಿಸುತ್ತಿದೆ ಮತ್ತು ಕೇಂದ್ರವು ಎನ್‌ಡಿಆರ್‌ಎಫ್ ಎರಡು ತಂಡಗಳನ್ನು ರಾಜ್ಯಕ್ಕೆ ಕಳುಹಿಸಿದೆ ಎಂದು ವಿವರಿಸಿದರು.

ರಾಜ್ಯಸಭೆಯ ಹಿಂದಿನ ಅಧಿವೇಶನದಲ್ಲಿ ಮಣಿಪುರಕ್ಕೆ ಸಂಬಂಧಿಸಿದ ತಮ್ಮ ವಿಸ್ತೃತ ಭಾಷಣವನ್ನು ನೆನಪಿಸಿಕೊಂಡ ಅವರು, 'ಮಣಿಪುರದಲ್ಲಿ ಶಾಂತಿನೆಲೆಸುವಂತೆ ಮಾಡಲು ಸರ್ಕಾರವು ನಿರಂತರವಾಗಿ ಪ್ರಯತ್ನಗಳನ್ನು ಮಾಡುತ್ತಿದೆ' ಎಂದು ಅವರು ಪುನರುಚ್ಚರಿಸಿದರು.

ಮಣಿಪುರದ ಸಾಮಾಜಿಕ ಸಂಘರ್ಷಕ್ಕೆ ಸುದೀರ್ಘ ಇತಿಹಾಸವಿದೆ. ಜತೆಗೆ ಅದು ಆಳವಾಗಿ ಬೇರೂರಿದೆ. ಸಂಘರ್ಷಮಯ ವಾತಾವರಣದ ಕಾರಣಕ್ಕೆ ಮಣಿಪುರದಲ್ಲಿ ಸ್ವಾತಂತ್ರ್ಯ ನಂತರದಲ್ಲಿ 10 ಬಾರಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿತ್ತು ಎಂದು ಸ್ಮರಿಸಿದರು. 1993ರಿಂದ ಮಣಿಪುರದಲ್ಲಿ ಐದು ವರ್ಷಗಳ ಸುದೀರ್ಘ ಸಾಮಾಜಿಕ ಸಂಘರ್ಷ ನಡೆದ ಬಗ್ಗೆಯೂ ಪ್ರಸ್ತಾಪಿಸಿದರು.

ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ರಾಜ್ಯಸಭೆಯಲ್ಲಿ ಪ್ರಧಾನಿ ಉತ್ತರ

'ಕೈ'ಗೆ ಸಿಕ್ಕಿ ದಲಿತರು ಬಲಿಪಶು: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭ್ರಷ್ಟಾಚಾರದ ವಿಷಯದಲ್ಲಿ ವಿಪಕ್ಷಗಳು ದ್ವಿಮುಖ ನೀತಿ ತಳೆದಿವೆ ಎಂದು ಕಿಡಿಕಾರಿದ ಪ್ರಧಾನಿ ನರೇಂದ್ರ ಮೋದಿ, 'ಒಂದು ಕುಟುಂಬವನ್ನು ರಕ್ಷಿಸುವ ಸಲುವಾಗಿ ಕಾಂಗ್ರೆಸ್ ಪಕ್ಷವು ದಲಿತರು ಹಾಗೂ ಹಿಂದುಳಿದ ವರ್ಗಗಳ ನಾಯಕರನ್ನು ಬಲಿಪಶು ಮಾಡುತ್ತಿದೆ' ಎಂದು ಆರೋಪಿಸಿದರು.

ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ರಾಜ್ಯಸಭೆಯಲ್ಲಿ ಬುಧವಾರ ಉತ್ತರ ನೀಡಿದ ಅವರು, 'ಇಂತಹ ಪರಿಸ್ಥಿತಿ ಎದುರಾದಾಗ ದಲಿತರು ಹಾಗೂ ಹಿಂದುಳಿದ ನಾಯಕರು ಎಲ್ಲ ಹೊರೆಯನ್ನು ಹೊರಬೇಕು ಹಾಗೂ ಆ ಕುಟುಂಬ (ಗಾಂಧಿ ಕುಟುಂಬ) ಸುರಕ್ಷಿತವಾಗಿ ಉಳಿಯುತ್ತಿತ್ತು' ಎಂದು ವ್ಯಂಗ್ಯವಾಡಿದರು.

'ಲೋಕಸಭಾಧ್ಯಕ್ಷರ ಚುನಾವಣೆಯ ಸಂದರ್ಭದಲ್ಲಿ ಅದೇ ರೀತಿಯ ಸನ್ನಿವೇಶ ಮರುಕಳಿಸಿತು. ತಮ್ಮ ಸೋಲು ಖಚಿತ ಎಂದು ತಿಳಿದಿದ್ದರೂ ಅವರು ಮುಂದುವರಿಯಲಿಲ್ಲವೇ. ಅವರು ಒಬ್ಬ ದಲಿತ ಸಂಸದನನ್ನು ಕಣಕ್ಕೆ ಇಳಿಸಿದರು' ಎಂದು ಅವರು ಕುಟುಕಿದರು. ಪ್ರಧಾನಿ ಭಾಷಣದ ಸಂದರ್ಭದಲ್ಲಿ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮಧ್ಯಪ್ರವೇಶಿಸಲು ಪ್ರಯತ್ನಿಸಿದಾಗ ಸಭಾಪತಿ ಜಗದೀಪ್ ಧನಕರ್ ಅವಕಾಶ ನೀಡಲಿಲ್ಲ. ಈ ನಡೆಯನ್ನು ಖಂಡಿಸಿ ಕಾಂಗ್ರೆಸ್ ನೇತೃತ್ವದ ವಿಪಕ್ಷ ಪ್ರತಿಭಟನೆ ನಡೆಸಿ ಸಭಾತ್ಯಾಗ ನಡೆಸಿತು.

'ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿ ಚುನಾವಣೆಗಳಲ್ಲಿ ಸುಶೀಲ್ ಕುಮಾರ್ ಶಿಂಧೆ ಅವರನ್ನು ಕಾಂಗ್ರೆಸ್‌ನವರು ಕಣಕ್ಕೆ ಇಳಿಸಿದರು. ದಲಿತ ನಾಯಕರು ಸೋತರೆ ಕಾಂಗ್ರೆಸ್ ಕಳೆದುಕೊಳ್ಳುವುದು ಏನಿಲ್ಲ. 2017ರಲ್ಲಿ ಸೋಲು ಖಚಿತವೆಂದು ತಿಳಿದಿದ್ದರೂ ಮೀರಾ ಕುಮಾರ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರು. ಕಾಂಗ್ರೆಸ್ ಪಕ್ಷವು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿರೋಧಿ ಮನಸ್ಥಿತಿಯನ್ನು ಹೊಂದಿದೆ. ಅದಕ್ಕೆ ಅವರು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಪದೇ ಪದೇ ಅವಮಾನ ಮಾಡುತ್ತಿದ್ದರು' ಎಂದು ಅವರು ಹೇಳಿದರು.

ಈ ಮನಸ್ಥಿತಿಯೊಂದಿಗೆ ಅವರು ಮೊದಲ ಆದಿವಾಸಿ ರಾಷ್ಟ್ರಪತಿಯನ್ನು ಕೂಡಾ ಅವಮಾನಿಸುತ್ತಿದ್ದಾರೆ ಹಾಗೂ ಬೇರೆ ಯಾರೂ ಬಳಸದ ಪದಗಳನ್ನು ಬಳಸುತ್ತಿದ್ದಾರೆ ಎಂದರು.

ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯು ಕಾಂಗ್ರೆಸ್ ಜತೆಗೆ ಕೈಜೋಡಿಸಿದ್ದನ್ನು ಪ್ರಸ್ತಾಪಿಸಿದ ಪ್ರಧಾನಿ, 'ಛತ್ತೀಸಗಢದಲ್ಲಿ ಕಾಂಗ್ರೆಸ್‌ನ ಮುಖ್ಯಮಂತ್ರಿ ಹೆಸರು ಅಬಕಾರಿ ಹಗರಣದಲ್ಲಿ ಕೇಳಿಬಂದಿತ್ತು. ಮುಖ್ಯಮಂತ್ರಿಯನ್ನು ಜೈಲಿಗೆ ಹಾಕಬೇಕು ಎಂದು ಎಎಪಿ ಒತ್ತಾಯಿಸಿತ್ತು. ಅಂತಹ ಪಕ್ಷದೊಂದಿಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ' ಎಂದರು.

ಕಾಂಗ್ರೆಸ್ ಪಕ್ಷವು ದ್ವಂದ್ವ ನಿಲುವುಗಳನ್ನು ಹೊಂದಿದೆ ಎಂದು ವಾಗ್ದಾಳಿ ನಡೆಸಿದ ಮೋದಿ, 'ಅಕ್ರಮಗಳಲ್ಲಿ ಭಾಗಿಯಾದ ನಾಯಕರ ಜತೆಗೆ ಕಾಂಗ್ರೆಸ್ ನಾಯಕರು ನವದೆಹಲಿಯಲ್ಲಿ ವೇದಿಕೆ ಹಂಚಿಕೊಳ್ಳುತ್ತಾರೆ. ಆದರೆ, ಕೇರಳದ ಮುಖ್ಯಮಂತ್ರಿಯನ್ನು ಜೈಲಿಗೆ ಅಟ್ಟಬೇಕು ಎಂದು 'ಯುವರಾಜ' (ರಾಹುಲ್ ಗಾಂಧಿ) ಒತ್ತಾಯಿಸುತ್ತಾರೆ. ಆದರೆ, ದೆಹಲಿಯಲ್ಲಿ ಸಿಬಿಐ–ಇಡಿಗೆ ಎಚ್ಚರಿಕೆ ನೀಡುತ್ತಾರೆ' ಎಂದರು.

'ಹ್ಯಾಟ್ರಿಕ್ ಸೋಲಿಗೆ ಸಂಭ್ರಮವೇ?'

ಬಿಜೆಪಿ ಬಹುಮತ ಪಡೆಯದಿದ್ದರೂ ಮೈತ್ರಿ ಪಕ್ಷಗಳ ನೆರವಿನಿಂದ ಸರ್ಕಾರ ರಚಿಸಿದೆ ಎಂಬ ಕಾಂಗ್ರೆಸ್ ಟೀಕೆಗೆ ಉತ್ತರಿಸಿದ ಮೋದಿ, 'ಕೇವಲ 99 ಸ್ಥಾನಗಳನ್ನು ಗಳಿಸಿದ ಕಾಂಗ್ರೆಸ್ ಪಕ್ಷವು ಯಾವ ವಿಷಯಕ್ಕೆ ಸಂಭ್ರಮಿಸುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಕಾಂಗ್ರೆಸಿಗರು ಸಂತಸದಿಂದ ಇದ್ದಾರೆ. ಅವರ ಸಂತಸಕ್ಕೆ ಕಾರಣವೇನು ಎಂಬುದು ಗೊತ್ತಾಗುತ್ತಿಲ್ಲ. ಈ ಸಂಭ್ರಮ ಸತತ ಮೂರನೇ ಬಾರಿ (ಹ್ಯಾಟ್ರಿಕ್) ಸೋತಿದ್ದಕ್ಕೆಯೇ? 99ಕ್ಕೆ ಕುಸಿದಿದ್ದಕ್ಕೆ ಈ ಖುಷಿಯೇ? ದಲಿತ ನಾಯಕ ಖರ್ಗೆ ಅವರು ತುಂಬಾ ಉತ್ಸಾಹದಿಂದ ಇರುವುದನ್ನು ಕಂಡಿದ್ದೇನೆ. ಪಕ್ಷದ ಸೋಲಿಗೆ ಹೊಣೆಗಾರಿಕೆಯನ್ನು ಖರ್ಗೆ ಅವರಿಗೆ ವಹಿಸಲಾಗುತ್ತಿದೆ. ಇತರರಿಂದ ಪತನವಾಗುತ್ತಿದ್ದ ಪಕ್ಷವನ್ನು ಅವರು ಉಳಿಸಿದ್ದಾರೆ. ಅವರು ಗೋಡೆಯಂತೆ ನಿಂತಿದ್ದಾರೆ' ಎಂದರು.

ವಿಂಬಲ್ಡನ್ ಟೆನಿಸ್ • ಕೊಕೊ ಗಾಫ್‌ಗೆ ಮುನ್ನಡೆ • ರೂಡ್‌ಗೆ ಆಘಾತ

ಮೂರನೇ ಸುತ್ತಿಗೆ ಅಲ್ಕರಾಜ್

ಫೋರ್‌ಹ್ಯಾಂಡ್ ಹೊಡೆತದಲ್ಲಿ ಚೆಂಡನ್ನು ಹಿಂತಿರುಗಿಸಿದ ಕಾರ್ಲೋಸ್ ಅಲ್ಕರಾಜ್ ಎಪಿ/ಪಿಟಿಐ ಚಿತ್ರ

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಆರಂಭದಲ್ಲಿ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಕ್ ಎದುರು ಪರದಾಡಿದರೂ, ಚೇತರಿಸಿಕೊಂಡ ಮೇಲೆ 'ಟಾಪ್ ಗೇರ್'ನಲ್ಲಿ ಸಾಗಿದರು. ಮೂರನೇ ಶ್ರೇಯಾಕದ ಅಲ್ಕರಾಜ್ ಅಂತಿಮವಾಗಿ 7-6 (7-5), 6-2, 6-2 ರಿಂದ ಜಯಗಳಿಸಿ ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಮೂರನೇ ಸುತ್ತಿಗೆ ಮುನ್ನಡೆದರು.

ಸ್ಪೇನ್‌ನ ಆಟಗಾರ ಮೊದಲ ಸೆಟ್‌ನಲ್ಲಿ 5-2 ರಿಂದ ಮುಂದಿದ್ದರು. ಆದರೆ ಚೇತರಿಸಿಕೊಂಡ ಶ್ರೇಯಾಂಕರಹಿತ ವುಕಿಕ್ ಎರಡು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರಲ್ಲದೇ, 6-5ರಲ್ಲಿ ಸೆಟ್‌ಗಾಗಿ ಸರ್ವ್ ಮಾಡುವ ಹಂತಕ್ಕೆ ತಲುಪಿದರು. ಛಲಬಿಡದ ಅಲ್ಕರಾಜ್ ಸಕಾಲದಲ್ಲಿ ಪುಟಿದೆದ್ದು ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದರು.

ಆದರೆ ಎರಡು ಮತ್ತು ಮೂರನೇ ಸೆಟ್‌ನಲ್ಲಿ ಲಯಕ್ಕೆ ಮರಳಿದ ಅಲ್ಕರಾಜ್ ಎದುರಾಳಿಗೆ ಕೇವಲ ನಾಲ್ಕು ಗೇಮ್‌ಗಳನ್ನು ಬಿಟ್ಟುಕೊಟ್ಟು ಒಂದು ಗಂಟೆ 48 ನಿಮಿಷಗಳವರೆ ನಡೆದ ಪಂದ್ಯ ಗೆದ್ದುಕೊಂಡರು. ಪ್ರಸ್ತುತ ವಿಶ್ವಕ್ರಮಾಂಕದಲ್ಲಿ 69ನೇ ಸ್ಥಾನದಲ್ಲಿರುವ ವುಕಿಕ್, ಕೆಲ ವರ್ಷಗಳ ಹಿಂದೆ ಫ್ರೆಂಚ್ ಓಪನ್ ಅರ್ಹತಾ ಸುತ್ತಿನಲ್ಲಿ, ಆಗ 17 ವರ್ಷ ವಯಸ್ಸಿನವರಾಗಿದ್ದ ಅಲ್ಕರಾಜ್ ಅವರನ್ನು ಮಣಿಸಿದ್ದರು.

ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿಗಳನ್ನು ಸತತ ಎರಡು ಬಾರಿ ಗೆದ್ದುಕೊಂಡ ಆರನೇ ಆಟಗಾರನಾಗುವ ಪ್ರಯತ್ನದಲ್ಲಿ ಅಲ್ಕರಾಜ್ ಇದ್ದಾರೆ. ಈ ಹಿಂದೆ ರಾಡ್ ಲೇವರ್, ಬ್ಯೋನ್ ಬೋರ್ಗ್, ರೋಜರ್ ಫೆಡರರ್, ರಫೆಲ್ ನಡಾಲ್ ಮತ್ತು ನೊವಾಕ್ ಜೊಕೊವಿಚ್ ಈ ಸಾಧನೆಗೆ ಪಾತ್ರರಾಗಿದ್ದರು. ಸ್ಪೇನ್ ಆಟಗಾರನ ಮುಂದಿನ ಎದುರಾಳಿ ಅಮೆರಿಕದ ಫ್ರಾನ್ಸಿಸ್ ಟಿಯಾಫೊ.

ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ ಮೂರನೇ ಸುತ್ತಿಗೆ ಮುನ್ನಡೆದರು. ರಷ್ಯಾದ ಆಟಗಾರ 6-7(3) 7-6(4) 6-4 7-5ರಿಂದ ಅಲೆಕ್ಸಾಂಡ್ರೆ ಮುಲ್ಲರ್ (ಫ್ರಾನ್ಸ್) ಅವರನ್ನು ಹಿಮ್ಮೆಟ್ಟಿಸಿದರು.

ರೂಡ್‌ಗೆ ಆಘಾತ: ಇಟಲಿಯ ಫ್ಯಾಬಿಯೊ ಫೋಗ್ನಿನಿ, ಎಂಟನೇ ಶ್ರೇಯಾಂಕದ ಕ್ಯಾಸ್ಪರ್ ರೂಡ್ ಅವರಿಗೆ ಆಘಾತ ನೀಡಿದರು. ಎರಡನೇ ಸುತ್ತಿನ ಪಂದ್ಯದಲ್ಲಿ 91ನೇ ಕ್ರಮಾಂಕದ ಫ್ಯಾಬಿಯೊ 6-4, 7-5, 6-7(1), 6-3ರಿಂದ ನಾರ್ವೆಯ ಆಟಗಾರನನ್ನು ಮಣಿಸಿದರು.

ಗಾಫ್ ಮುನ್ನಡೆ: ಅಮೆರಿಕದ ಕೊಕೊ ಗಾಫ್ ಒಂದನೇ ನಂಬರ್ ಕೋರ್ಟ್‌ನಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಪಂದ್ಯದಲ್ಲಿ, ಅರ್ಹತಾ ಸುತ್ತಿನಿಂದ ಬಂದ ಆಟಗಾರ್ತಿ ಅಂಕಾ ತೊಡೊನಿ (ರೊಮೇನಿಯಾ) ಅವರನ್ನು 6-2, 6-1ರಿಂದ ಹಿಮ್ಮೆಟ್ಟಿಸಿ ಮೂರನೇ ಸುತ್ತಿಗೆ ಲಗ್ಗೆಯಿಟ್ಟರು.

ಗಾಫ್, ಐದು ವರ್ಷಗಳ ಹಿಂದೆ ವಿಂಬಲ್ಡನ್ ಮೂಲಕ ಗ್ರ್ಯಾನ್‌ಸ್ಲಾಮ್ ಟೂರ್ನಿಗೆ ಪದಾರ್ಪಣೆ ಮಾಡಿದಾಗ ಐದು ಬಾರಿಯ ವಿಂಬಲ್ಡನ್ ಚಾಂಪಿಯನ್ ಸೆರೆನಾ ವಿಲಿಯಮ್ಸ್ ಅವರನ್ನು ಮೊದಲ ಸುತ್ತಿನಲ್ಲೇ ನೇರ ಸೆಟ್‌ಗಳಿಂದ ಸೋಲಿಸಿದ್ದರು. ಆದರೆ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದ್ದರು.

ಎರಡನೇ ಶ್ರೇಯಾಂಕ ಪಡೆದಿರುವ ಗಾಫ್ ಮೂರನೇ ಸುತ್ತಿನಲ್ಲಿ ಕ್ವಾಲಿಫೈಯರ್ ಸೋನೆ ಕರ್ತಾಲ್ ಅವರನ್ನು ಎದುರಿಸಲಿದ್ದಾರೆ. ಇಂಗ್ಲೆಂಡ್‌ನ ಆಟಗಾರ್ತಿ ಕರ್ತಾಲ್ 6-3, 5-7, 6-3 ರಿಂದ ಫ್ರಾನ್ಸ್‌ನ ಕ್ಲಾರಾ ಬುರೆಲ್ ಅವರನ್ನು ಪರಾಭವಗೊಳಿಸಿದರು.

ಕರ್ತಾಲ್ ಮೊದಲ ಸುತ್ತಿನಲ್ಲಿ 29ನೇ ಶ್ರೇಯಾಂಕದ ಸೊರಾನ ಸಿರ್ಸ್ಟಿಯಾ ಅವರನ್ನು ಸೋಲಿಸಿದ್ದರು.

ಒಸಾಕಾಗೆ ನಿರಾಸೆ: ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಜಪಾನ್ ನವೋಮಿ ಒಸಾಕಾ ಮಹಿಳಾ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. ಅವರು 4-6, 1-6 ಸೆಟ್‌ಗಳಿಂದ ಅಮೆರಿಕದ ಎಮ್ಮಾ ನವಾರೊ ಅವರಿಗೆ ಶರಣಾದರು.

ಡಬಲ್ಸ್: ನಗಾಲ್‌ಗೆ ಸೋಲು

ಲಂಡನ್ (ಪಿಟಿಐ): ಭಾರತದ ಸುಮಿತ್ ನಗಾಲ್ ಪುರುಷರ ಡಬಲ್ಸ್‌ನಲ್ಲೂ ಮೊದಲ ಸುತ್ತಿನಲ್ಲಿ ನಿರ್ಗಮಿಸಿದರು. ಸರ್ಬಿಯಾದ ದುಸಾನ್ ಲಾಯೊವಿಚ್ ಜೊತೆಗೂಡಿ ಆಡಿದ ಅವರು ಸ್ಪೇನ್‌ನ ಎದುರಾಳಿಗಳಿಗೆ ನೇರ ಸೆಟ್‌ಗಳಿಂದ ಸೋತರು.

ಜಾಮೆ ಮುನರ್ ಮತ್ತು ಪೆಡ್ರೊ ಮಾರ್ಟಿನೆಝ್ ಜೋಡಿ ಬುಧವಾರ 6-2, 6-2 ರಿಂದ ನಗಾಲ್- ಲಾಯೊವಿಚ್ ಜೋಡಿಯನ್ನು ಮಣಿಸಿತು. ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ನಗಾಲ್ ಮಂಗಳವಾರ ನಡೆದ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಮಿಯೊಮಿರ್ ಕೆಕ್ಮಾನೊವಿಕ್ (ಸರ್ಬಿಯಾ) ಅವರಿಗೆ ನಾಲ್ಕು ಸೆಟ್‌ಗಳ ಸೆಣಸಾಟದಲ್ಲಿ ಮಣಿದಿದ್ದರು.

ಸಂಕ್ಷಿಪ್ತ ಸುದ್ದಿ

ಬ್ರೆಜಿಲ್ ವಿರುದ್ಧ 'ಡ್ರಾ' ಸಾಧಿಸಿದ ಕೊಲಂಬಿಯಾ

ಸಾಂಟಾ ಕ್ಲಾರಾ (ಅಮೆರಿಕ), (ಎಎಫ್‌ಪಿ): ಹಿನ್ನಡೆಯಿಂದ ಚೇತರಿಸಿಕೊಂಡ ಕೊಲಂಬಿಯಾ, ಪ್ರಬಲ ಬ್ರೆಜಿಲ್ ತಂಡದ ಜೊತೆ 1-1 ಡ್ರಾ ಮಾಡಿಕೊಂಡಿತು. ಆ ಮೂಲಕ ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯ 'ಡಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಮುನ್ನಡೆಯಿತು.

ಲೆವಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದ ಮೊದಲಾರ್ಧದ ಕೊನೆಯ ಕ್ಷಣದಲ್ಲಿ ಡೇನಿಯಲ್ ಮುನೋಝ್ ಗಳಿಸಿದ ಗೋಲು ಕೊಲಂಬಿಯಾ ಸೋಲಿನಿಂದ ಪಾರಾಗಲು ನೆರವಾಯಿತು. ಇದಕ್ಕೆ ಮೊದಲು ಪಂದ್ಯದ 12ನೇ ನಿಮಿಷ ರಾಫಿನಾ ಅವರು ಬ್ರೆಜಿಲ್‌ಗೆ ಮುನ್ನಡೆ ಒದಗಿಸಿದ್ದರು. ಕೊಲಂಬಿಯಾ ಶನಿವಾರ ಅರಿಜೋನಾದ ಗ್ಲೆಂಡೆಲ್‌ನಲ್ಲಿ ನಡೆಯುವ ಎಂಟರ ಘಟ್ಟದ ಪಂದ್ಯದಲ್ಲಿ 'ಸಿ' ಗುಂಪಿನ ರನ್ನರ್ ಅಪ್ ಪನಾಮಾ ತಂಡವನ್ನು ಎದುರಿಸಲಿದೆ.

'ಡ್ರಾ'ದ ಪರಿಣಾಮ ಬ್ರೆಜಿಲ್, ಲಾಸ್ ವೇಗಸ್‌ನಲ್ಲಿ ಶನಿವಾರ ನಡೆಯುವ ಪಂದ್ಯದಲ್ಲಿ 'ಸಿ' ಗುಂಪಿನ ವಿಜೇತ ಹಾಗೂ ತನ್ನ ಬದ್ಧ ಎದುರಾಳಿ ಉರುಗ್ವೆ ವಿರುದ್ಧ ಆಡಬೇಕಾಗಿದೆ. ಉರುಗ್ವೆ ಗುಂಪಿನಲ್ಲಿ ಆಡಿದ ಎಲ್ಲ ಪಂದ್ಯಗಳಲ್ಲಿ ಜಯಗಳಿಸಿದೆ.

ಬ್ಯಾಟರಾಯನಪುರಕ್ಕೆ ಸುಲಭ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ತಂಡವು ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ 'ಬಿ' ಗುಂಪಿನ ಪಂದ್ಯದಲ್ಲಿ 10-0ಯಿಂದ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರ ತಂಡವು 2-1ರಿಂದ ಪುಲಿಕೇಶಿನಗರ ಕ್ಷೇತ್ರ ತಂಡವನ್ನು ಸೋಲಿಸಿತು.

ಯುರೋ ಕಪ್ ಫುಟ್‌ಬಾಲ್: ಆಸ್ಟ್ರಿಯಾಕ್ಕೆ ನಿರಾಸೆ

ಕ್ವಾರ್ಟರ್ ಫೈನಲ್‌ಗೆ ಟರ್ಕಿ ಲಗ್ಗೆ

ಲೀಪ್‌ಜಿಗ್, ಜರ್ಮನಿ (ಎಎಫ್‌ಪಿ): ಮೆರಿಹ್ ಡೆಮಿರಾಲ್ ದಾಖಲಿಸಿದ ಅವಳಿ ಗೋಲುಗಳ ನೆರವಿನಿಂದ ಟರ್ಕಿ ತಂಡವು ಮಂಗಳವಾರ ಯುರೋ ಕಪ್ ಫುಟ್‌ಬಾಲ್ ಟೂರ್ನಿಯ 16ರ ಘಟ್ಟದ ಕೊನೆಯ ರೋಚಕ ಪಂದ್ಯದಲ್ಲಿ 2-1ರಿಂದ ಆಸ್ಟ್ರಿಯಾ ತಂಡವನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಟರ್ಕಿಯು ಎಂಟರ ಘಟ್ಟದ ಪಂದ್ಯದಲ್ಲಿ ಭಾನುವಾರ (ಜುಲೈ 7) ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ. ಈ ಎರಡೂ ತಂಡಗಳು 2008ರ ಬಳಿಕ ಮೊದಲ ಬಾರಿಗೆ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ. ನೆದರ್ಲೆಂಡ್ಸ್ 3-0 ಯಿಂದ ರೊಮೇನಿಯಾ ತಂಡವನ್ನು ಮಣಿಸಿತ್ತು.

ಪಂದ್ಯ ಆರಂಭವಾದ 57 ಸೆಕೆಂಡ್‌ನಲ್ಲೇ ಡೆಮಿರಾಲ್ ಅವರು ಚೆಂಡನ್ನು ಗುರಿ ಸೇರಿಸಿ ಟರ್ಕಿ ತಂಡಕ್ಕೆ ಮುನ್ನಡೆಯನ್ನು ಒದಗಿಸಿದ್ದರು. 59ನೇ ನಿಮಿಷದಲ್ಲಿ ಮತ್ತೊಂದು ಬಾರಿ ಡೆಮಿರಾಲ್ ಗೋಲು ದಾಖಲಿಸಿ ಗೆಲುವಿನ ರೂವಾರಿಯಾದರು. ಫಾರ್ವರ್ಡ್ ಆಟಗಾರ ಮೈಕೆಲ್ ಗ್ರೆಗೊರಿಟ್ಸ್ (66ನೇ ನಿಮಿಷ) ಆಸ್ಟ್ರಿಯಾ ಪರ ಏಕೈಕ ಗೋಲನ್ನು ತಂದಿತ್ತರು.

'ಕೊನೆಯ ಕ್ಷಣದವರೆಗೂ ನಮ್ಮ ತಂಡದ ಸ್ಫೂರ್ತಿಯುತ ಪ್ರದರ್ಶನ ನೀಡಿದ್ದರಿಂದ ಗೆಲುವು ಸಾಧ್ಯವಾಯಿತು' ಎಂದು ಟರ್ಕಿ ಕೋಚ್ ವಿನ್ಸೆಂಜೊ ಮೊಂಟೆಲಾ ಪ್ರತಿಕ್ರಿಯಿಸಿದರು.

ಕ್ವಾರ್ಟರ್ ಫೈನಲ್ ಮುಖಾಮುಖಿ

ತಂಡಗಳು	ಪಂದ್ಯದ ದಿನಾಂಕ, ಸಮಯ
ಸ್ಪೇನ್–ಜರ್ಮನಿ	ಜುಲೈ 5, ರಾತ್ರಿ 9.30
ಪೋರ್ಚುಗಲ್–ಫ್ರಾನ್ಸ್	ಜುಲೈ 6, ರಾತ್ರಿ 12.30
ಇಂಗ್ಲೆಂಡ್–ಸ್ವಿಟ್ಜರ್ಲೆಂಡ್	ಜುಲೈ 6, ರಾತ್ರಿ 9.30
ನೆದರ್ಲೆಂಡ್ಸ್–ಟರ್ಕಿ	ಜುಲೈ 7, ರಾತ್ರಿ 12.30

ಹರ್ಡಲ್ಸ್: ಒಲಿಂಪಿಕ್ಸ್‌ಗೆ ಜ್ಯೋತಿ

ಜ್ಯೋತಿ ಯರ್ರಾಜಿ

ನವದೆಹಲಿ (ಪಿಟಿಐ): ಸ್ಪ್ರಿಂಟ್ ತಾರೆ ಜ್ಯೋತಿ ಯರ್ರಾಜಿ ಅವರು ವಿಶ್ವ ರ‍್ಯಾಂಕಿಂಗ್ ಆಧಾರದಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ. ಈ ಮೂಲಕ ಒಲಿಂಪಿಕ್ಸ್ ನಲ್ಲಿ ಸ್ಪರ್ಧಿಸುವ ಭಾರತದ ಮೊದಲ 100 ಮೀಟರ್ ಹರ್ಡಲ್ಸ್ ಓಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಅಚ್ಚರಿ ಎಂಬಂತೆ ಭಾರತದ ಷಾಟ್‌ಪಟ್ ಸ್ಪರ್ಧಿ ಅಭಾ ಖತುವಾ ಅವರೂ ರ‍್ಯಾಂಕಿಂಗ್ ಆಧಾರದಲ್ಲಿ ಪ್ಯಾರಿಸ್ ಟಿಕೆಟ್ ಪಡೆದಿದ್ದಾರೆ. ಒಲಿಂಪಿಕ್ಸ್‌ಗೆ ನೇರ ಅರ್ಹತೆ ಗಳಿಸಿರುವ ಮತ್ತು ವಿಶ್ವ ಕ್ರಮಾಂಕದ ಕೋಟಾದ ಮೂಲಕ ಪ್ರವೇಶ ಪಡೆದ ಅಥ್ಲೀಟ್‌ಗಳ ಪಟ್ಟಿಯನ್ನು ವಿಶ್ವ ಅಥ್ಲೆಟಿಕ್ಸ್ ಪ್ರಕಟಿಸಿದೆ.

ಯರ್ರಾಜಿ ಅವರು ಮೇ ತಿಂಗಳಿನಲ್ಲಿ ಫಿನ್ಲೆಂಡ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 12.78 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ್ದರು. ಅಲ್ಲಿ ಕೇವಲ ಒಂದು ಸೆಕೆಂಡ್ ಅಂತರದಲ್ಲಿ (12.77 ಸೆಕೆಂಡ್) ಪ್ಯಾರಿಸ್‌ಗೆ ನೇರ ಅರ್ಹತೆ ಪಡೆಯುವ ಅವಕಾಶ ತಪ್ಪಿಸಿಕೊಂಡಿದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅವರು 34ನೇ ಸ್ಥಾನವನ್ನು ಹೊಂದಿದ್ದಾರೆ. ಪ್ಯಾರಿಸ್ ಕೂಟದ 100 ಮೀಟರ್ ಹರ್ಡಲ್ಸ್‌ನಲ್ಲಿ ಒಟ್ಟು 40 ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ.

ಫೆಡರೇಷನ್ ಕಪ್‌ನಲ್ಲಿ ರಾಷ್ಟ್ರೀಯ ದಾಖಲೆ (18.41 ಮೀ) ನಿರ್ಮಿಸಿದ್ದ ಖತುವಾ, ವಿಶ್ವ ರ‍್ಯಾಂಕಿಂಗ್ ಕೋಟಾದಿಂದ ಹೊರಗಿದ್ದರು. ಆದರೆ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಅಂತರ ರಾಜ್ಯ ಚಾಂಪಿಯನ್ ಷಿಪ್‌ನ ಷಾಟ್‌ಪಟ್ ಸ್ಪರ್ಧೆಯಲ್ಲಿ 17.63 ಮೀಟರ್ ಸಾಧನೆಯೊಂದಿಗೆ ಚಿನ್ನ ಗೆದ್ದ ಅವರು, ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನಕ್ಕೆ ಏರಿದ್ದರು.

ಚೆಸ್: 'ಡ್ರಾ' ಪಂದ್ಯದಲ್ಲಿ ಪ್ರಜ್ಞಾನಂದ

ಬುಖಾರೆಸ್ಟ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ, ಗ್ರ್ಯಾಂಡ್ ಚೆಸ್ ಟೂರ್ನಿಯ ಭಾಗವಾಗಿರುವ ಸೂಪರ್‌ಬಿಟ್ ಕ್ಲಾಸಿಕ್ ಚೆಸ್ ಟೂರ್ನಿಯ ಆರನೇ ಸುತ್ತಿನಲ್ಲಿ ತಮಗಿಂತ ಕೆಳ ಕ್ರಮಾಂಕದ ಡಿಯಾಕ್ ಬೊಗ್ಡಾನ್ ಡೇನಿಯಲ್ ಜೊತೆ 38 ನಡೆಗಳ ನಂತರ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ಇರಾನ್ ಮೂಲದ ಫ್ರಾನ್ಸ್ ಆಟಗಾರ ಅಲಿರೇಜಾ ಫಿರೋಜ್ (3.5) ಅವರು ಉತ್ತಮ ಲಯದಲ್ಲಿದ್ದು, ಮಂಗಳವಾರ ನಡೆದ ಪಂದ್ಯದಲ್ಲಿ ಅಮೆರಿಕದ ವೆಸ್ಲಿ ಸೊ (2) ಅವರನ್ನು ಮಣಿಸಿ ಗಮನ ಸೆಳೆದರು. ಈ ವರ್ಷದ ಕೊನೆಗೆ ಸಿಂಗಪುರದಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಆಡಲಿರುವ ಭಾರತದ ಯುವ ಆಟಗಾರ ಡಿ.ಗುಕೇಶ್ (3.5), ಹೆಚ್ಚಿನ ಸಾಹಸಕ್ಕೆ ಹೋಗದೇ ಫ್ರಾನ್ಸ್‌ನ ಮ್ಯಾಕ್ಸಿಮ್ ವೇಷಿಯರ್ ಲಗ್ರಾವ್ (3) ಜೊತೆ 'ಡ್ರಾ' ಮಾಡಿಕೊಂಡರು.

ಪ್ರಜ್ಞಾನಂದ ಅವರ ಪ್ರತಿಯೊಂದು ನಡೆಗೂ, ರೊಮೇನಿಯಾದ ಬೊಗ್ಡಾನ್ ಅವರು ಅದಕ್ಕೆ ಸೂಕ್ತವಾದ ನಡೆಯನ್ನಿರಿಸಿದರು. ಪಂದ್ಯ ಯಾವೊಂದು ತಿರುವು ಪಡೆಯದೇ 'ನಡೆಗಳ ಪುನರಾವರ್ತನೆ'ಯಿಂದ 'ಡ್ರಾ' ಆಯಿತು.

ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಮೂರು ಸುತ್ತುಗಳು ಉಳಿದಿದ್ದು, ಅಮೆರಿಕದ ಫ್ಯಾಬಿಯಾನೊ ಕರುವಾನಾ (4) ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅವರು 'ಫಿಡೆ'ಯನ್ನು ಪ್ರತಿನಿಧಿಸುತ್ತಿರುವ ರಷ್ಯನ್ ಆಟಗಾರ ಇಯಾನ್ ನಿಪೊಮ್‌ನಿಷಿ (3) ಜೊತೆ 'ಡ್ರಾ' ಮಾಡಿಕೊಂಡರು.

ಅಲಿರೇಜಾ, ಗುಕೇಶ್, ಪ್ರಜ್ಞಾನಂದ ತಲಾ 3.5 ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದ್ದಾರೆ. ಲಗ್ರಾವ್ ಮತ್ತು ನಿಪೊಮ್‌ನಿಷಿ (ತಲಾ 3) ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಸೊ ಮತ್ತು ಡಿಯಾಕ್ ಬೊಗ್ಡಾನ್ ತಲಾ ಎರಡು ಪಾಯಿಂಟ್ಸ್ ಗಳಿಸಿದ್ದಾರೆ.

ಲಿಖಿತ್, ಐಲಿನ್ ಚಾಂಪಿಯನ್

ಪ್ರಶಸ್ತಿಯೊಂದಿಗೆ ಲಿಖಿತ್ ಎಸ್. ಗೌಡ ಮತ್ತು ಐಲಿನ್ ಎಂ. ಕರ್ನೆಲಿಯೊ

ಬೆಂಗಳೂರು: ಅಗ್ರ ಶ್ರೇಯಾಂಕದ ಲಿಖಿತ್ ಎಸ್. ಗೌಡ ಮತ್ತು ಆರನೇ ಶ್ರೇಯಾಂಕದ ಐಲಿನ್ ಎಂ. ಕರ್ನೆಲಿಯೊ ಅವರು ಎಸ್‌ಎಟಿ-ಎಐಟಿಎ ಆಶ್ರಯದಲ್ಲಿ ನಡೆಯುತ್ತಿರುವ 16 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇಲ್ಲಿನ ಎಸ್‌ಎಟಿ ಕೋರ್ಟ್‌ನಲ್ಲಿ ಬುಧವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಲಿಖಿತ್ 3-6, 6-2, 6-0 ಸೆಟ್‌ಗಳಿಂದ ಎರಡನೇ ಶ್ರೇಯಾಂಕದ ಅಯಾನ್ ಎಂ.ಕೆ. ತರೀನ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಲಿಖಿತ್ 9-3ರಿಂದ ಹೃಷಿಕೇಶ್ ಅಯ್ಯರ್ ವಿರುದ್ಧ; ಅಯಾನ್ 9-8 (5)ರಿಂದ ಅರ್ಜುನ್ ಸೂರಿ ವಿರುದ್ಧ ಗೆಲುವು ಸಾಧಿಸಿದ್ದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಐಲಿನ್ 6-1, 6-1 ಸೆಟ್‌ಗಳಿಂದ ಲಾವಣ್ಯಾ ತಿವಾರಿ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಐಲಿನ್ 9-1ರಿಂದ ಪೂಜ್ಯಾ ಪಿ. ಕುಮಾರ್ ವಿರುದ್ಧ; ಲಾವಣ್ಯಾ 9-0ಯಿಂದ ವಿಧಿ ಗುಪ್ತಾ ವಿರುದ್ಧ ಜಯ ಗಳಿಸಿದ್ದರು.

ಜೆಫ್ರಿ ಬಾಯ್ಕಾಟ್‌ಗೆ ಶಸ್ತ್ರಚಿಕಿತ್ಸೆ

ಲಂಡನ್ (ಪಿಟಿಐ): ಇಂಗ್ಲೆಂಡ್ ಕ್ರಿಕೆಟ್ ದಿಗ್ಗಜ ಜೆಫ್ರಿ ಬಾಯ್ಕಾಟ್ ಅವರಿಗೆ ಗಂಟಲು ಕ್ಯಾನ್ಸರ್ ಇರುವುದು ಎರಡನೇ ಬಾರಿಗೆ ಪತ್ತೆಯಾಗಿದೆ. ಅದಕ್ಕಾಗಿ ಮುಂದಿನ ಎರಡು ವಾರಗಳೊಳಗೆ ಅವರು ಶಸ್ತ್ರಚಿಕಿತ್ಸೆಗೊಳಗಾಗುವ ನಿರೀಕ್ಷೆ ಇದೆ.

'ಕಳೆದ ಕೆಲವು ವಾರಗಳಿಂದ ನಾನು ಎಂ.ಆರ್.ಐ ಸ್ಕ್ಯಾನ್, ಸಿ.ಟಿ. ಸ್ಕ್ಯಾನ್, ಪಿ.ಇ.ಟಿ ಸ್ಕ್ಯಾನ್ ಮತ್ತು ಎರಡು ಬಾರಿ ಬಯಾಪ್ಸಿ ಪರೀಕ್ಷೆ ನೀಡಿದ್ದೇನೆ. ಅದರಲ್ಲಿ ನನಗೆ ಗಂಟಲು ಕ್ಯಾನ್ಸರ್ ಇರುವುದು ಖಚಿತವಾಗಿದೆ. ಅದಕ್ಕಾಗಿ ಶಸ್ತ್ರಚಿಕಿತ್ಸೆಯ ಅಗತ್ಯವಿದೆ' ಎಂದು 83 ವರ್ಷದ ಬಾಯ್ಕಾಟ್ ಅವರು 'ದ ಟೆಲಿಗ್ರಾಫ್'ಗೆ ಹೇಳಿಕೆ ನೀಡಿದ್ದಾರೆ.

2002ರಲ್ಲಿಯೂ ಬಾಯ್ಕಾಟ್ ಅವರಿಗೆ ಗಂಟಲು ಕ್ಯಾನ್ಸರ್ ಕಾಡಿತ್ತು. ಆಗ 35 ಕೀಮೊಥೆರಪಿಗಳಿಂದ ಗುಣವಾಗಿದ್ದರು. ಬಾಯ್ಕಾಟ್ ಅವರು 108 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಒಟ್ಟು 8114 ರನ್ ಗಳಿಸಿದ್ದಾರೆ.

ಇಂದಿನಿಂದ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿ

ಆಕಾಶ್, ಖುಷಿ ಪ್ರಮುಖ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಆಕಾಶ್ ಕೆ.ಜೆ.

ಖುಷಿ ವಿ.

ಮಂಗಳೂರು: ಬೆಂಗಳೂರಿನ ಆಕಾಶ್ ಕೆ.ಜೆ. ಮತ್ತು ಖುಷಿ ವಿ. ಅವರು ಇಲ್ಲಿ ಗುರುವಾರದಿಂದ ನಡೆಯಲಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಮುಖ ಆಕರ್ಷಣೆ.

ಆಕಾಶ್ ಮತ್ತು ಖುಷಿ ಕಳೆದ ತಿಂಗಳಾಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆದ ಈ ಋತುವಿನ ಮೊದಲ ರಾಜ್ಯ ರ‍್ಯಾಂಕಿಂಗ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದರು. ಮಂಗಳೂರಿನ ಕಂಕನಾಡಿಯಲ್ಲಿರುವ ಫಾದರ್ ಮುಲ್ಲರ್ ಒಳಾಂಗಣ ಕ್ರೀಡಾಂಗಣದಲ್ಲಿ ಇದೇ 7ರ ವರೆಗೆ ಈ ಋತುವಿನ ಎರಡನೇ ರಾಜ್ಯ ರ‍್ಯಾಂಕಿಂಗ್ ಟೂರ್ನಿ ನಡೆಯಲಿದೆ.

ಆಕಾಶ್ ಮತ್ತು ಖುಷಿ ಅವರಿಗೆ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಮೂರನೇ ಶ್ರೇಯಾಂಕ ನೀಡಲಾಗಿದೆ. ಅನಿರ್ಬನ್ ರಾಯ್ ಚೌಧರಿ ಮತ್ತು ದೇಶ್ನಾ ಎಂ.ವಂಶಿಕಾ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದ ಮೊದಲ ಶ್ರೇಯಾಂಕ ಗಳಿಸಿದ್ದಾರೆ. 19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ರೋಹಿತ್ ಕೆ ಮತ್ತು ವರುಣ್ ಕಶ್ಯಪ್ ಅವರಿಗೆ ಮೊದಲ ಮತ್ತು ಎರಡನೇ ಶ್ರೇಯಾಂಕ, ಇದೇ ವಯೋಮಾನದ ಬಾಲಕಿಯರ ವಿಭಾಗದಲ್ಲಿ ತೃಪ್ತಿ ಪುರೋಹಿತ್ ಮತ್ತು ಸಹನಾ ಮೂರ್ತಿ ಮೊದಲ ಎರಡು ಶ್ರೇಯಾಂಕ ಹೊಂದಿದ್ದಾರೆ. ತೇಶುಬ್ ದಿನೇಶ್ ಮತ್ತು ವಿಭಾಸ್ ವಿ.ಜಿ 17 ವರ್ಷದೊಳಗಿನ ಬಾಲಕರ ವಿಭಾಗ, ನೀತಿ ಅಗರವಾಲ್ ಮತ್ತು ತನಿಷ್ಕಾ ಕಾಲಭೈರವ್ ಬಾಲಕಿಯರ ವಿಭಾಗದಲ್ಲಿ ಕ್ರಮವಾಗಿ ಮೊದಲ ಎರಡು ಶ್ರೇಯಾಂಕದಲ್ಲಿದ್ದಾರೆ.

ಅಂತರರಾಷ್ಟ್ರೀಯ ಆಟಗಾರ ಆಕಾಶ್ 17 ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ ನಂತರ ಈಗ ಪುರುಷರ ವಿಭಾಗದಲ್ಲೂ ಮಿಂಚುತ್ತಿದ್ದರೆ. ಮೊದಲ ರ‍್ಯಾಂಕಿಂಗ್ ಟೂರ್ನಿಯ ಫೈನಲ್‌ನಲ್ಲಿ ಅವರ ವಿರುದ್ಧ ಹೋರಾಡಿ ಸೋತಿದ್ದ ಯಶವಂತ ಪಿ ಕೂಡ ಟೂರ್ನಿಯಲ್ಲಿ ಆಡುತ್ತಿದ್ದಾರೆ. ಕಲೈವಣ್ಣನ್ ಅವರೂ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ದೇಶ್ನಾ, ತೃಪ್ತಿ ಸವಾಲೊಡ್ಡುವ ನಿರೀಕ್ಷೆ: ಅಂತರ ರಾಷ್ಟ್ರೀಯ ಆಟಗಾರ್ತಿಯರಾದ ಖುಷಿ ಮತ್ತು ಅನರ್ಘ್ಯ ಮಂಜುನಾಥ್ ಮಹಿಳಾ ವಿಭಾಗದ ಪ್ರಮುಖರು. ದೇಶ್ನಾ ವಂಶಿಕಾ ಮತ್ತು ತೃಪ್ತಿ ಪುರೋಹಿತ್ ಈ ವಿಭಾಗದಲ್ಲಿದ್ದಾರೆ. ಪುರುಷ ಮತ್ತು ಮಹಿಳೆಯರ ವಿಭಾಗ, 11, 13, 15, 17, 19 ವರ್ಷದೊಳಗಿನವರ ವಿಭಾಗ, ನಾನ್ ಮೆಡಲಿಸ್ಟ್ ಮತ್ತು ಕೆಡೆಟ್ ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ.

ರೋಹಿತ್ ಪಡೆ ರೋಡ್ ಶೋಗೆ ಮುಂಬೈ ಸಿದ್ಧ

ನವದೆಹಲಿಯಲ್ಲಿ ಪ್ರಧಾನಿಯಿಂದ ಸನ್ಮಾನ • ಸಂಜೆ ವಾಂಖೆಡೆಯಲ್ಲಿ ಗೌರವ

ಬಾರ್ಬಡೋಸ್‌ನಿಂದ ನವದೆಹಲಿಗೆ ತೆರಳಿದ ವಿಶೇಷ ವಿಮಾನದಲ್ಲಿ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ಭಾರತ ತಂಡದ ಸೂರ್ಯಕುಮಾರ್ ಯಾದವ್ ಮತ್ತು ರೋಹಿತ್ ಶರ್ಮಾ –ಪಿಟಿಐ ಚಿತ್ರ

ಮುಂಬೈ (ಪಿಟಿಐ): ನಾಲ್ಕು ದಿನಗಳ ಹಿಂದೆ ಬಾರ್ಬಡೋಸ್‌ನಲ್ಲಿ ಟಿ20 ವಿಶ್ವಕಪ್ ಜಯಿಸಿದ್ದ ಭಾರತ ತಂಡವನ್ನು ಅಭಿನಂದಿಸಲು ದೇಶದ ವಾಣಿಜ್ಯ ರಾಜಧಾನಿ ಮುಂಬೈನಲ್ಲಿ ಭರದ ಸಿದ್ಧತೆ ನಡೆಯುತ್ತಿದೆ.

ಗುರುವಾರ ಇಲ್ಲಿಗೆ ಬಂದಿಳಿಯಲಿರುವ ತಂಡದ ಆಟಗಾರರನ್ನು ತೆರೆದ ಬಸ್‌ನಲ್ಲಿ ಮೆರವಣಿಗೆ ಮಾಡಲಾಗುವುದು. ವಾಂಖೆಡೆ ಕ್ರೀಡಾಂಗಣದಲ್ಲಿ ಸನ್ಮಾನಿಸಲಾಗುವುದು. ಅದಕ್ಕಾಗಿ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಿವೆ.

ಬುಧವಾರ ಬೆಳಗಿನ ಜಾವ (4.50ಕ್ಕೆ) ಬಾರ್ಬಡೋಸ್‌ನ ಗ್ರ್ಯಾಂಟ್ಲಿ ಆ್ಯಡಮ್ಸ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಭಾರತ ತಂಡವು ಪ್ರಯಾಣ ಮಾಡಿತು. ಗುರುವಾರ ಬೆಳಿಗ್ಗೆ (6.20) ದೆಹಲಿಗೆ ಬಂದಿಳಿಯಲಿದೆ.

ಜೂನ್ 29ರಂದು ಫೈನಲ್ ಪಂದ್ಯವು ಮುಗಿದಿತ್ತು. ಆದರೆ, ಕೆರೀಬಿಯನ್ ದ್ವೀಪಗಳಲ್ಲಿ ಬೆರಿಲ್ ಚಂಡಮಾರುತದಿಂದಾಗಿ ಭಾರತ ತಂಡದ ಪ್ರಯಾಣವು ವಿಳಂಬವಾಗಿತ್ತು. ಆಟಗಾರರು, ನೆರವು ಸಿಬ್ಬಂದಿ, ಬಿಸಿಸಿಐ ಅಧಿಕಾರಿಗಳು ಮತ್ತು ಭಾರತದಿಂದ ಟೂರ್ನಿಯ ವರದಿಗೆ ತೆರಳಿದ್ದ ಮಾಧ್ಯಮ ಪ್ರತಿನಿಧಿಗಳು ಅಲ್ಲಿಯೇ ಉಳಿಯಬೇಕಾಯಿತು. ಚಂಡಮಾರುತದಿಂದಾಗಿ ಬಾರ್ಬಡೋಸ್ ವಿಮಾನ ನಿಲ್ದಾಣವನ್ನು ಮುಚ್ಚಲಾಗಿತ್ತು. ಹವಾಮಾನ ಸುಧಾರಿಸಿದ ನಂತರ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಚಾರ್ಟರ್ ವಿಮಾನ ವ್ಯವಸ್ಥೆ ಮಾಡಿತು.

'ಏರ್ ಇಂಡಿಯಾದ ವಿಶೇಷ ವಿಮಾನವನ್ನು ಬಿಸಿಸಿಐ ಬಾಡಿಗೆಗೆ ಪಡೆದಿದೆ. ಬಾರ್ಬಡೋಸ್‌ನಲ್ಲಿದ್ದ ಭಾರತ ತಂಡ, ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಈ ವಿಮಾನದ ಮೂಲಕ ಭಾರತಕ್ಕೆ ಕರೆತರಲಾಗುತ್ತಿದೆ. ಗುರುವಾರ ಬೆಳಿಗ್ಗೆ 6 ಗಂಟೆಗೆ ದೆಹಲಿಗೆ ವಿಮಾನ ತಲುಪುವುದು. 11 ಗಂಟೆಗೆ ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಕಪ್ ವಿಜೇತ ತಂಡದ ಆಟಗಾರರನ್ನು ಸತ್ಕರಿಸುವರು. ಅದರ ನಂತರ ತಂಡವು ಮುಂಬೈಗೆ ವಿಮಾನ ಮೂಲಕ ಪ್ರಯಾಣಿಸಲಿದೆ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದ್ದಾರೆ.

'ಮುಂಬೈನ ನರೀಮನ್ ಪಾಯಿಂಟ್‌ನಿಂದ ರೋಡ್ ಶೋ ಆರಂಭವಾಗಲಿದೆ. ಅದಾದ ಮೇಲೆ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಆಟಗಾರರನ್ನು ಸನ್ಮಾನಿಸಿ, ₹125 ಕೋಟಿ ಬಹುಮಾನ ಕೂಡ ಪ್ರದಾನ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

'ವಿಜಯವನ್ನು ಸಂಭ್ರಮಿಸೋಣ'

ಈ ವಿಶೇಷ ಸಂದರ್ಭವನ್ನು ಸಂಭ್ರಮಿಸೋಣ. ಮರೀನ್ ಡ್ರೈವ್ ಮತ್ತು ವಾಂಖೆಡೆ ಕ್ರೀಡಾಂಗಣದಲ್ಲಿ ಸಂಭ್ರಮದ ಪರೇಡ್ ಮೂಲಕ ವಿಜಯೋತ್ಸವ ಆಚರಿಸೋಣ. ಜುಲೈ 4ರ ಸಂಜೆ 5ರಿಂದ ತವರಿಗೆ ಬರುತ್ತೇವೆ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

'ದಿನಾಂಕ ನೆನಪಿಟ್ಟುಕೊಳ್ಳಿ. ಭಾರತ ತಂಡದ ವಿಜಯದ ಮೆರವಣಿಗೆಯು ಮರೀನ್ ಡ್ರೈವ್ ಹಾಗೂ ವಾಂಖೆಡೆಯಲ್ಲಿ ನಡೆಯಲಿದೆ. ನಮ್ಮೊಂದಿಗೆ ಸೇರಿ ಸಂಭ್ರಮಿಸಿ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಕೂಡ ಸಂದೇಶ ಹಾಕಿದ್ದಾರೆ.

ಆರ್ಜೆಂಟೀನಾ ತಂಡದಲ್ಲಿ ಮೆಸ್ಸಿಗಿಲ್ಲ ಸ್ಥಾನ

ಬ್ಯೂನೊ ಏರ್ಸ್ (ಎಪಿ): ಈ ತಿಂಗಳ 26ರಿಂದ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ ಕ್ರೀಡೆಗಳಿಗೆ ಆಯ್ಕೆ ಮಾಡಿರುವ ಅರ್ಜೆಂಟೀನಾ ಫುಟ್‌ಬಾಲ್ ತಂಡದಲ್ಲಿ ಲಯೊನೆಲ್ ಮೆಸ್ಸಿ ಅವರಿಗೆ ಸ್ಥಾನ ನೀಡಿಲ್ಲ.

ಕೋಚ್ ಜೇವಿಯರ್ ಮಷೆರಾನೊ ಅವರು ವಿಶ್ವಕಪ್ ಗೆದ್ದ ತಂಡದಲ್ಲಿದ್ದ ನಾಲ್ವರಿಗೆ ಅವಕಾಶ ಕಲ್ಪಿಸಿದ್ದಾರೆ. ಇವರಲ್ಲಿ ಫಾರ್ವರ್ಡ್ ಆಟಗಾರ ಜೂಲಿಯನ್ ಅಲ್ವಾರೆಝ್ ಮತ್ತು ಡಿಫೆಂಡರ್ ನಿಕೋಲಸ್ ಒಟಾಮೆಂಡಿ ಒಳಗೊಂಡಿದ್ದಾರೆ.

37 ವರ್ಷದ ಮೆಸ್ಸಿ ಅವರು ಸದ್ಯ ಕೊಪಾ ಅಮೆರಿಕ ಟೂರ್ನಿಯಲ್ಲಿ ಆಡುತ್ತಿದ್ದಾರೆ. 2021ರಲ್ಲಿ ಈ ಟೂರ್ನಿಯಲ್ಲಿ ಗೆದ್ದ ಮೆಸ್ಸಿ ಅಲ್ಲಿ ತೋರಿದ ಸಾಧನೆಯು ಅರ್ಜೆಂಟೀನಾಕ್ಕೆ 2022ರ ವಿಶ್ವಕಪ್ ಗೆಲ್ಲಲು ಚಿಮ್ಮುಹಲಗೆಯಾಯಿತು.

ಒಲಿಂಪಿಕ್ಸ್‌ನಲ್ಲಿ ಅವರು ಒಮ್ಮೆ ಮಾತ್ರ (2008ರ ಬೀಜಿಂಗ್ ಕ್ರೀಡೆಗಳಲ್ಲಿ) ಭಾಗವಹಿಸಿದ್ದು ಆ ಸಲ ಅರ್ಜೆಂಟೀನಾ ಚಿನ್ನದ ಪದಕ ಗೆದ್ದುಕೊಂಡಿತ್ತು.

ಆರ್ಜೆಂಟೀನಾ ತಂಡ ಒಲಿಂಪಿಕ್ಸ್ ನಲ್ಲಿ 'ಬಿ' ಗುಂಪಿನಲ್ಲಿದೆ.

ಜಿಂಬಾಬ್ವೆ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಗಾಗಿ ಭಾರತ ಕ್ರಿಕೆಟ್ ತಂಡದ ಸದಸ್ಯರು ಬುಧವಾರ ಹರಾರೆಗೆ ತಲುಪಿದರು –ಎಕ್ಸ್ ಚಿತ್ರ

ರ‍್ಯಾಂಕಿಂಗ್: ಆಲ್‌ರೌಂಡರ್ ಅಗ್ರಸ್ಥಾನಕ್ಕೆ ಹಾರ್ದಿಕ್

ಹಾರ್ದಿಕ್ ಪಾಂಡ್ಯ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಹಾರ್ದಿಕ್ ಪಾಂಡ್ಯ ಅವರು ಐಸಿಸಿ ಟಿ20 ಕ್ರಿಕೆಟ್ ಆಲ್‌ರೌಂಡರ್ಸ್ ವಿಭಾಗದ ರ‍್ಯಾಂಕಿಂಗ್‌ನಲ್ಲಿ ಜಂಟಿ ಅಗ್ರಸ್ಥಾನಕ್ಕೇರಿದರು.

ಶ್ರೀಲಂಕಾದ ವನಿಂದು ಹಸರಂಗಾ ಮತ್ತು ಹಾರ್ದಿಕ್ ಅವರು ತಲಾ 222 ಅಂಕಗಳನ್ನು ಗಳಿಸಿದ್ದು ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಉತ್ತಮ ಸಾಧನೆ ಮಾಡಿದ್ದ ಹಾರ್ದಿಕ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೂರು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಪಾಂಡ್ಯ 150ರ ಸ್ಟ್ರೈಕ್‌ರೇಟ್‌ನಲ್ಲಿ 144 ರನ್ ಗಳಿಸಿದ್ದರು. ಅಲ್ಲದೇ 11 ವಿಕೆಟ್‌ಗಳನ್ನೂ ಪಡೆದಿದ್ದರು.

ಫೈನಲ್ ಪಂದ್ಯದ ನಿರ್ಣಾಯಕ ಹಂತದಲ್ಲಿ ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ ವಿಕೆಟ್‌ಗಳನ್ನು ಗಳಿಸಿದ್ದ ಹಾರ್ದಿಕ್ ಪಂದ್ಯದ ಜಯಕ್ಕೆ ಕಾರಣರಾಗಿದ್ದರು. ಭಾರತದ ಎಡಗೈ ಆಲ್‌ರೌಂಡರ್ ಅಕ್ಷರ್ ಪಟೇಲ್ ಏಳು ಸ್ಥಾನಗಳ ಬಡ್ತಿಯೊಂದಿಗೆ 12ನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಜಸಪ್ರೀತ್ ಬೂಮ್ರಾ ಅವರು 12ನೇ ಸ್ಥಾನಕ್ಕೆ ಏರಿದ್ದಾರೆ. ಅವರು 2020ರ ನಂತರ ಮಾಡಿದ ಉತ್ತಮ ಸಾಧನೆ ಇದಾಗಿದೆ. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅವರು 15 ವಿಕೆಟ್‌ಗಳನ್ನು ಗಳಿಸಿದ್ದರು.

ಇಂಗ್ಲೆಂಡ್ ತಂಡದ ಆದಿಲ್ ರಶೀದ್ ಅಗ್ರಸ್ಥಾನದಲ್ಲಿದ್ದಾರೆ. ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಕ್ರಮವಾಗಿ 7 ಮತ್ತು 8ನೇ ಸ್ಥಾನದಲ್ಲಿದ್ದಾರೆ.